UNIVERSAL LIBRARY
OU_200068
UNIVERSAL LIBRARY

# ‘ಇನ್ನಿ’

ಬರೆದವರು :

ಮೃತ್ಯುಂಜಯ ಬಸವಾರ್ಯ ಬೂದಿಹಾಳಮಠ

“No blazoned banner we unfold—
One charge alone we give to youth,
Against the Sceptred myth to hold
The golden heresy of Truth.”—AE.

ಆದರ್ಶ ಜೀವನ ಗ್ರಂಥಮಾಲಾ ರಾಣೆಬೆನ್ನೂರು

ಆಗಸ್ಟ ೧೯೪೬ ರೂ. ೧-೧೨-೦

ಆ. ಜೀ. ಗ್ರಂಥಮಾಲೆಯ ಸಲಹೆಗಾರರು:

ಶ್ರೀ । ರಾ। ಬಿ. ಬಿ. ಬೂದಿಹಾಳಮಠ
( ಗಣ್ಯ ಗ್ರಂಥಕರ್ತರು )

ಶ್ರೀ । ಸ್ವ । ಎನ್. ಕೆ. ಸಂಗನಾಳಮಠ
B. A. (Hons) B. T.

---

ಸರ್ವಾಧಿಕಾರ ಗ್ರಂಥಕರ್ತರದು

ಮುದ್ರಕರು ಹಾಗು ಪ್ರಕಾಶಕರು :

ಆಸ್ಥಾನ ವಿದ್ವಾನ್ ಕೀರ್ತನ ಕೇಸರಿ ವೇ॥ ಬಿ. ಶಿವಮೂರ್ತಿ ಶ

ಸ್ವತಂತ್ರ ಕರ್ಣಾಟಕ ಮುದ್ರಣಾಲಯ ಬೆಂಗಳೂರು ನಗರ

ಜನಗಣಮನ ಅಧಿನಾಯಕ ವಂದೇ !

ಜಯ ಹೇ ! ಭಾರತ ಭಾಗ್ಯವಿಧಾತಾ !



‘ ಹುಬ್ಬಳ್ಳಿ ’ ಯ ಹೂಬಳ್ಳಿ ‘ ಗುರುದೇವ ಸಾಹಿತ್ಯ ಸಮಿತಿ ’ ಯ

ಸವಿ ಪಲ್ಲವಿ

# ಇನ್ನಿ

## ೧

"ಚಾ ! ಮುಕ್ಕಣ್ಣ........ಚೆಲುವ."

ಮುಂಬೆಳಗಿನ ತಂಗಾಳಿಯಲ್ಲಿ ಎತ್ತು ಬಂಡಿ ಹುರುಪಿನಿಂದ ಕಣದ ಅಂಗಳದಿಂದ ಹೊರಗೆ ನೆಗೆದು ದಾರಿಗೆ ಹತ್ತಿದವು.

"ನಿದ್ದೆ ನಿಚ್ಚಳಾಗಿದೆಯಿಲ್ಲೋ, ಮುದ್ದಾ?" ಎಂದು ಬಂಡಿಯ ಬದಿಯಿಂದ ಬರುತ್ತಿರುವ ಹಣ್ಣು ದನಿಯ ವ್ಯಕ್ತಿ ನಗೆಮಾತಿನ ಸಂಪ್ರದಾಯವನ್ನು ನುಡಿಯಿತು.

"ಸಾರಿಗೆ ಬಂಡಿಯ ಮೇಲೆ ಕುಳಿತಿಲ್ಲ, ಅಪ್ಪಯ್ಯ, ನಾನು ತೂಕಡಿಸಲಿಕ್ಕೆ. ನಮ್ಮ ಚಿಕ್ಕಯ್ಯನವರು ಈ ನಾಡಿನಿಂದ ಆ ನಾಡಿಗೆ ಹೊರಟಿದ್ದಾರೆ ಅನ್ನುವದು ನನಗೆ ಅರಿಯದ್ದೇನು?" ಎಂದು ಉದ್ದಿಗೆಯ ಮೇಲೆ ಕುಳಿತ ವ್ಯಕ್ತಿ ತೂಕದಿಂದ ಹೇಳಿತು.

"ಇರಲಿ ಬಿಡು. ನಾನು ಬಲ್ಲೆ. ಕೇಳುವಂತೆ ಕೇಳಿದೆನು." ಹಣ್ಣು ದನಿಯವರು ಬಂಡಿಯನ್ನು ಹಿಂಬಾಲಿಸಿದರು. ಚಿಕ್ಕಯ್ಯ ಸ್ಥಳವನ್ನು ಸರಿಪಡಿಸಿಕೊಳ್ಳುತ್ತಿದ್ದನು. ಹಣ್ಣು ದನಿಯವರು ಬೀಳ್ಕೊಡುವ ಮಾತೆತ್ತಿದರು: "ಅಂಬಾರ ದಂಡಿಗಗೆ ಒರಗಿ ಕೂತುಕೊಳ್ಳಪ್ಪ. ನೋಡು, ಈ ಹೊತ್ತು ಆಗಸ್ಟ ಮೂರನೆಯ ದಿನ ಮುಗಿದು ನಾಲ್ಕನೆಯದರಲ್ಲಿದೆ. ಮುಂದಿನ ೩೭ ನೆಯ ಫೆಬ್ರುವಾರಿ ತಿಂಗಳಲ್ಲಿ ನಿನ್ನ ಪ್ರೀವ್ಹಿಯಸ್ ಪರೀಕ್ಷೆ ಅದೆ ಅನ್ನುತ್ತೀ. ಕ್ರಮದಿಂದ ನಿತ್ಯ ಅಭ್ಯಾಸಮಾಡು. ಇಂದಿನದನ್ನು ನಾಳೆಗೆ ಮುಂದೂಡಿ ಪರೀಕ್ಷೆಯ ಕಾಲಕ್ಕೆ ಒಂದು ಗುಡ್ಡ ಎದುರಿಟ್ಟುಕೊಂಡು ತತ್ತರಿಸುವದು ಬೇಡ.

# ನಿವೇದನೆ

ಈ ಪ್ರಕಟನೆಗಾಗಿ ಉತ್ಸುಕರಾಗಿರುವ ನಮ್ಮ ಗ್ರಂಥಮಾಲೆಯ ಓದುಗರ ತಾಳ್ಮೆಗೆ ತಕ್ಕ ಪ್ರತಿಫಲವಾಗಿ ನಮ್ಮ ಈ ಗ್ರಂಥವು ಅವರಿಗೆ ಸಂತಸವನ್ನು ನೀಡಿದರೆ, ನಾವು ಕೃತಾರ್ಥರು. ಈ ಮೊದಲು ನೆರವಿತ್ತಂತೆ ಇನ್ನು ಮುಂದೆಯಾದರೂ ಸಕಾಲದಲ್ಲಿ ನೆರವಾಗಿ ಗ್ರಂಥಮಾಲೆಯ ಉತ್ತರೋತ್ತರ ಅಭಿವೃದ್ಧಿಯ ಚಿಂತನೆಯನ್ನು ಕನ್ನಡಿಗರು ಮಾಡುವರೆಂದು ನಂಬಿರುವೆವು. ಈ ಕಾದಂಬರಿಯನ್ನು ಮುದ್ದಾಗಿ ಮುದ್ರಿಸಿಕೊಟ್ಟಿರುವ ಆಸ್ಥಾನ ವಿದ್ವಾನ್ ಕೀರ್ತನಕೇಸರಿ ವೇ|| ಬಿ. ಶಿವಮೂರ್ತಿಶಾಸ್ತ್ರಿಗಳವರಿಗೆ ನಮ್ಮ ಮನಃಪೂರ್ವಕ ವಂದನೆಗಳು.

ಗಣೇಶ ಚತುರ್ಥಿ
೩೦-೮-೧೯೫೭

**ಎಮ್. ಬಿ. ಬೂದಿಹಾಳಮಠ**
ರಾಣಿಬೆನ್ನೂರು

# ಇನ್ನಿ

## ೧

"ಚಾ ! ಮುಕ್ಕಣ್ಣ........ಚೆಲುವ."

ಮುಂಬೆಳಗಿನ ತಂಗಾಳಿಯಲ್ಲಿ ಎತ್ತು ಬಂಡಿ ಹುರುಪಿನಿಂದ ಕಣದ ಅಂಗಳದಿಂದ ಹೊರಗೆ ನೆಗೆದು ದಾರಿಗೆ ಹತ್ತಿದವು.

"ನಿದ್ದೆ ನಿಚ್ಚಳಾಗಿದೆಯಿಲ್ಲೋ, ಮುದ್ದಾ?" ಎಂದು ಬಂಡಿಯ ಬದಿಯಿಂದ ಬರುತ್ತಿರುವ ಹಣ್ಣು ದನಿಯ ವ್ಯಕ್ತಿ ನಗೆಮಾತಿನ ಸಂಪ್ರದಾಯವನ್ನು ನುಡಿಯಿತು.

"ಸಾರಿಗೆ ಬಂಡಿಯ ಮೇಲೆ ಕುಳಿತಿಲ್ಲ, ಅಪ್ಪಯ್ಯ, ನಾನು ತೂಕಡಿಸಲಿಕ್ಕೆ. ನಮ್ಮ ಚಿಕ್ಕಯ್ಯನವರು ಈ ನಾಡಿನಿಂದ ಆ ನಾಡಿಗೆ ಹೊರಟದ್ದಾರೆ ಅನ್ನುವದು ನನಗೆ ಅರಿಯದ್ದೇನು?" ಎಂದು ಉದ್ದಿಗೆಯ ಮೇಲೆ ಕುಳಿತ ವ್ಯಕ್ತಿ ತೂಕದಿಂದ ಹೇಳಿತು.

"ಇರಲಿ ಬಿಡು. ನಾನು ಬಲ್ಲೆ. ಕೇಳುವಂತೆ ಕೇಳಿದೆನು." ಹಣ್ಣು ದನಿಯವರು ಬಂಡಿಯನ್ನು ಹಿಂಬಾಲಿಸಿದರು. ಚಿಕ್ಕಯ್ಯ ಸ್ಥಳವನ್ನು ಸರಿಪಡಿಸಿಕೊಳ್ಳುತ್ತಿದ್ದನು. ಹಣ್ಣು ದನಿಯವರು ಬೀಳ್ಕೊಡುವ ಮಾತೆತ್ತಿದರು: "ಅಂಬಾರ ದಂಡಿಗೆಗೆ ಒರಗಿ ಕೂತುಕೊಳ್ಳಪ್ಪ. ನೋಡು, ಈ ಹೊತ್ತು ಆಗಸ್ಟ ಮೂರನೆಯ ದಿನ ಮುಗಿದು ನಾಲ್ಕನೆಯದರಲ್ಲಿದೆ. ಮುಂದಿನ ೩೭ ನೆಯ ಫೆಬ್ರುವಾರಿ ತಿಂಗಳಲ್ಲಿ ನಿನ್ನ ಪ್ರೀವ್ಹಿಯಸ್ ಪರೀಕ್ಷೆ ಅದೆ ಅನ್ನುತ್ತೀ. ಕ್ರಮದಿಂದ ನಿತ್ಯ ಅಭ್ಯಾಸಮಾಡು. ಇಂದಿನದನ್ನು ನಾಳಿಗೆ ಮುಂದೂಡಿ ಪರೀಕ್ಷೆಯ ಕಾಲಕ್ಕೆ ಒಂದು ಗುಡ್ಡ ಎದುರಿಟ್ಟುಕೊಂಡು ತತ್ತರಿಸುವದು ಬೇಡ.

ನೀನೇನು ಇಲ್ಲಿಯವರೆಗೆ ಹಾಗೆ ಮಾಡಿದ್ದೀ ಎಂದಲ್ಲ. ಮ್ಯಾಟ್ರಿಕ್ ಪರೀಕ್ಷೆ ಗೆದ್ದಿರುವಿ. ಇಲ್ಲಿಯವರೆಗೆ ನಡೆದುದು ಚಿಕ್ಕವಯಸ್ಸಿನಲ್ಲಿ. ಅದೂ ಒಬ್ಬರ ಕಣ್ಣಳವಿನಲ್ಲಿ. ಇನ್ನು ಮೇಲಿನ ಮಾತು ಬೇರೆ. ವಿದ್ಯಾಲಯ. ನೀನೇ ನೀನು. ಇದು ನನ್ನ ಉಪದೇಶವೆಂದು ತಿಳಿಯಬೇಡ. ಪ್ರಬುದ್ಧನಾಗಿರುವಿ. ಆದರೂ ಕರುಳಿನ ಮಿಡುಕಿಗಾಗಿ ಇವೆಲ್ಲ ಮಾತುಗಳು. ಒಳ್ಳೇದು, ಬರುತ್ತೀಯಾ ತಮ್ಮಾ."

"ಹೂಂ. ಹೋಗಿ ಬರುತ್ತೇನೆ, ಅಜ್ಜಾ. ಹಾಗೆ ಅಗಸೆಯ ವರೆಗೂ ಬಂದು ಬಿಟ್ಟಿದ್ದೀಯಲ್ಲ ಮಾತಿನ ಭರದಲ್ಲಿ. ಅಕ್ಕನಿಗೆ ಬರುತ್ತೇನೆಂದು ಹೇಳು. ಬರುವೆನು." ಉಕ್ಕಿಬಂದುದನ್ನು ಬಿಗಿಹಿಡಿದರು ಚಿಕ್ಕಯ್ಯನವರು. ಹಿಂಬಾಲಿಸಿ ದವರು ಅಗಸೆಯ ಬೇವಿನಕಟ್ಟಿಯ ಹತ್ತಿರ ನಿಂತು ಮಂಜುಮಂಜಾದರು ಮುಂದಾದವರಿಗೆ.

ಕೀಲುಗಳ ಸಪ್ಪಳದಲ್ಲಿ ಕೊರಳ ಗೆಜ್ಜೆಯ ಗಿಲ್ ಗಿಲ್ ಗುಂಗಿನಲ್ಲಿ ಬಂಡಿ ಸರಸರನೆ ಕಣಗಳ ಸಾಲುಗಳನ್ನು ದಾಟಿ ಉಪ್ಪಿನ ಮಾಳದ ಉಸುಕಿನ ದಾರಿಗೆ ಹತ್ತಿತು. ಬಂಡಿಯ ಹೊಯ್ದಾಟವು ನಿಂತು ಸಳಸಳ ಸಾಗಿದಂತೆ ಮನಸ್ಸಿನ ಉದ್ವೇಗವೂ ಸರಳ ದಾರಿಗೆ ಬಂದಿತು. ಮಾಮರಗಳೊಳಗಿಂದ ಸುಯ್ಯನೆ ಸುಳಿಗಾಳಿ ಬೀಸಿತು. ಉದ್ದಿಗೆಯ ಮೇಲೆ ಕುಳಿತ ಮುದ್ದಣ್ಣ ಬಂಡಿಗೆ ಮುಸುಕಿದ ಮೌನವನ್ನು ಮಾತಿನ ಮೆರುಗಿನಿಂದ ಮುರಿದನು: "ಅಯ್ಯನವರು ನಿನ್ನ ಮಾತಿಗೆ 'ಹೂಂ' ಇಲ್ಲ ಉಪ್ಪಿನಕಾಯಿಯೂ ಇಲ್ಲ."

"ಬಿಟ್ಟುಬರುವಾಗ ನೀನೇನು ಮಾಡುತ್ತೀಯೋ ನಾನೂ ನೋಡುವೆ. ಹಿಂದೆ ಬಾ. ಬಂಡಿ ಹೊಡೆಯುವೆನು. ಸುಮ್ಮನೆ ಒರಗಿರುವದು ನನಗಾಗದ ಮಾತು. ನಿನಗೇನು? ನಿತ್ಯ ಇದೇ ಕತೆಯಲ್ಲಿಯೋ ತಲೆ ಹಂಚೀ ಬುಟ್ಟಿಯಾಗಿದೆ."

ಎತ್ತುಗಳ ಮೇಲೆ ಚಿಕ್ಕಯ್ಯನಿಗಿರುವ ಲವಲವಿಕೆಯ ಪರಿಚಯ ಮುದ್ದಣ್ಣನಿಗಿತ್ತು. ಪಿಟ್ಟೆನ್ನದೆ ಸ್ಥಾನ ಬದಲಾಯಿಸಿದನು. ಅತ್ತಿತ್ತ ಕಣ್ಣರಳಿಸಿ, "ಎತ್ತಿಗೆ ಬಾಯಿಮಾಡು. ಹಾಲುಚಲ್ಲಿದಂತೆ ಬೆಳದಿಂಗಳು ಬಿದ್ದಿದೆ. ದಾರಿ ನಿಚ್ಚಳ ಕಾಣುತ್ತದೆ. ಒಮ್ಮೆ ನಡಿಗೆಗೆ ಹತ್ತಿದರೆ ಮುಕ್ಕಣ್ಣ ಭರದಿಂದ ಸಾಗುವನು. ಚೆಲುವ ತನ್ನ ಒನಪಿನಲ್ಲಿ ಮುಗ್ಗರಿಸುವನೊಮ್ಮೊಮ್ಮೆ. ಅವನ

ಬೆನ್ನ ಮೇಲೆ ಆಗಾಗ ಸ್ವಲ್ಪ ಕೈ ಹಾಕಬೇಕು. ಉದ್ದಿಗೆಗೆ ಸರಿಯಬೇಡಪ್ಪ. ತುದಿಯಲ್ಲಿ ಕಣಗಕ್ಕೆ ಒರಗಿದರೆ ಸಾಕು. ಕೈ ನಿಲುಕುತ್ತದೆ." ಅವಶ್ಯ ಸೂಚನೆ ಸಲಹೆಗಳನ್ನು ಮುಗಿಸಿ ಎಲೆ ಅಡಿಕೆಯ ಚಂಚಿ ಉಚ್ಚಿದನು. ಬಂಡಿ ಮಾಮರಗಳ ನೆಳಲು ದಾಟಿ ಬಯಲ ದಾರಿಯನ್ನು ಏರಹತ್ತಿತು. ಎಲೆ ಅಡಿಕೆಯ ಶಾಸ್ತ್ರವನ್ನು ಮುಗಿಸಿ ಮುಗಿಲು ನೋಡಿ, "ಆಸಲಿ ಮಳೆ ಮೊನ್ನೆ ಬುಧವಾರ ಕೂಡಿ ಆರು ದಿನ ಆಯಿತು. ಒಂದು ಪಾದ ಒಳ್ಳೇದು ಆಯಿತು. ನಿನ್ನೆ ರಾತ್ರಿ ಹೊಳವು ಆಯಿತು. ನಮ್ಮ ಚಿಕ್ಕಯ್ಯನವರು ಸುಸೂತ್ರ ಉಗಿ ಬಂಡಿ ಹತ್ತಲೆಂದು ಹೊಳವು ಆಯಿತೆಂದು ಕಾಣುವದು. ಮೋಡಗಳ ಸುಳಿವೇ ಇಲ್ಲ. ಚದರಿ ಹೋಗಿವೆ. ಚಂದಪ್ಪ ಚಕ್ಕಂದ ಚಲ್ಲಾಟ ನಡೆಸಿದ್ದಾನೆ" ಎಂದು ಮುದ್ದಣ್ಣ ದಾರಿಸಾಗುವ ಹಂಚಿಕೆ ಹೂಡಿದನು.

ಶ್ರಾವಣ ಪೂರ್ಣಿಮೆಯ ದಿನ. ಮಳೆಯ ದಿನಗಳಲ್ಲಿ ಇಂದಿನ ಮಧುರ ರಾತ್ರಿ ಅಕಾಲಿಕವಾಗಿ ಒದಗಿತ್ತು. ಪ್ರಯಾಣಿಕರಿಗೆ ಮುಂಜಾವಿನ ಕೊನೆಯ ಪ್ರಹರದ ಶೋಭೆಯನ್ನು ನೀಡಿತ್ತು. ಬಂಡಿ ದಿನ್ನೆಯನ್ನೇರಿದಂತೆ ಸುತ್ತಲಿನ ರಮಣೀಯತೆ ಸಾರಥಿಯ ಹೃದಯವನ್ನು ಸೂರೆಗೊಳ್ಳಹತ್ತಿತು. ಇಳಕಲಿನಲ್ಲಿ ಬಂಡಿ ವೇಗದಿಂದ ಮುಂದರಿದಾಗಲೇ ಪುನಃ ಸಾರಥಿ ಸೂತ್ರಗಳ ಸಡಿಲನ್ನು ಚೇತರಿಸಿಕೊಂಡು ಬಿಗಿ ಮಾಡಿದುದು. ಮುಂದೆ ಗಿಡಗಂಟೆ, ಏರಿಳಿವು, ಹಳ್ಳ, ಹುದಿಲು ಇವು ಬಂಡಿಯ ವೇಗವನ್ನು ತಡೆದವು. ಬಂಡಿ ಬದಿಯ ಆಲದ ಮರದ ನೆಳಲಿನಲ್ಲಿ ಸಾಗ ವಾಗ ಯಾವುದೋ ಒಂದು ಅರೆ ನಿದ್ದೆಯಲ್ಲಿದ್ದ ಹಕ್ಕಿ ಪಟಪಟನೆ ರೆಕ್ಕೆ ಬಡಿದು ಬಂಡಿಗೆ ಎರಗುವದೋ ಏನೋ ಎನ್ನುವಂತೆ ಸಮೀಪದಲ್ಲಿ ಹಾರಿಹೋಗಲು ಬಲದ ಹೋರಿ 'ಚೆಲುವ' ಬೆಚ್ಚಿಬಿದ್ದಿತು. ಹೋರಿಗೆ ತನ್ಮಯತೆಯೊಂದಿಗೆ ಪ್ರಸಂಗಾವಧಾನವಿಲ್ಲದ್ದನ್ನು ಸಾರಥಿ ಮನದಟ್ಟಾಗಿ ಕಂಡು ಹೊರಳಿ ಮುದ್ದಣ್ಣನೊಡನೆ ಮನದಣಿ ನಕ್ಕನು.

"ಅದೇನಪ್ಪಾ, ಅಷ್ಟು ನಗುತ್ತೀ! ಹೋರಿ ಬೆದರುವದೇನು ದೊಡ್ಡದು. ಬೆದರಿದರೂ ಆಗಿನ ಮಟ್ಟಿಗಷ್ಟೇ. ಪಟ್ಟಣದಲ್ಲಿ ಹುಟ್ಟಿ ಬೆಳೆದ ಆಳ್ವಿದೆಯವರು ಯಾರಾದರೂ ಆಗಿದ್ದರೆ -ಚಿಟ್ಟನೇ ಚೀರಿ ಮೂರುದಿನ ಮುಲುಕುತ್ತಿದ್ದರು. ಆ ಹೋರಿ ರಾತ್ರಿ ತನ್ನ ಜಂಬದೊಳಗೆ ಅತ್ತಿತ್ತ ನೋಡುತ್ತಿದ್ದರೂ ನಿರ್ಣಯ ಅನ್ನುವದೇ ಅದಕ್ಕೆ ರೂಢಿಯಾಗಿಲ್ಲ. ಆದರೂ ಬಹಳ

ವಿಶ್ವಾಸಿಕ ಹೋರಿ. ಎಳಬು ಆದರೂ ಮುಕ್ಕಣ್ಣನ ಜೊತೆಯಲ್ಲಿ ಹೆಣಗುತ್ತದೆ. ಹಾಂ! ಹಳ್ಳಿ ಬಂತು. ಊರ ಮುಂದಿನ ಕೊರಕಲು ದಾಟಿ ಅಡವಿಯ ಬಯಲು ಬೀಳುವವರೆಗೂ ಕಣ್ಣಲ್ಲಿ ಕಣ್ಣಿಟ್ಟು ಹೊಡೆಯಬೇಕಪ್ಪ ಬಂಡಿಯನ್ನು. ಇಲ್ಲದಿದ್ದರೆ ನಾನೇ ಮುಂದೆ ಕುಳಿತುಕೊಳ್ಳುತ್ತೇನೆ, ಬಾ."

"ಅದೇಕೆ, ರಾಜಮಾರ್ಗದ ಮೇಲೆ ಬಂಡಿ ಹೊಡೆದರೆ ಏನು ಬಂತು ಮಣ್ಣು. ನಮ್ಮ ಜಾಣತನಕ್ಕೆ ಒರೆಗಲ್ಲು ಈ ಎಡವಟ್ಟು ದಾರಿ. ಯಾವದೇ ಸುಖ ಕಂಡುಬರುವದಾದರೆ ಈ ತೂಕದ ಸಾರಥಿತನದಲ್ಲಿ, ಅಲ್ಲವೆ?"

"ಹೌದು, ಮಹಾರಾಯಾ, ಹೌದು. ಮುಂದಿನ ಸಾರೆ ಬಂದಾಗ ನೀನು ಬೆಟ್ಟದಯ್ಯನ ಗುಡ್ಡಕ್ಕೆ ಬಂಡಿಯನ್ನು ಕಟ್ಟು" ಎಂದನು ಮುದ್ದಣ್ಣ. ಅಡವಿಯ ಬಯಲುದಾರಿಯು ದಿನ್ನೆಯನ್ನೇರಹತ್ತಿತು ಬಂಡಿ. ಒಂದು ಗೋಟು ಹೊರಳಿ ಮತ್ತೊಂದನ್ನು ಏರಹತ್ತಿತು. ಹಿಡಿ ಹಗ್ಗಗಳನ್ನು ಜೋಡಿಸಿ ಕಣಗಕ್ಕೆ ಹಾಕಿದ ಚಿಕ್ಕಯ್ಯ. ಮುದ್ದಣ್ಣನನ್ನು ಎಚ್ಚರಿಸಿದನು: "ಅದೇನೋ ರಾತ್ರಿ ನಾಲ್ಕು ತಾಸಾದರೂ ಮಾತಾಡುತ್ತಿದ್ದಿರಿ ಅಜ್ಜ ನೀನು?"

"ಮತ್ತಿನ್ನೇನು ಬಂತು. ನಿಮ್ಮ ಮಾವ ಸಾವಳಿಗಯ್ಯ ನಿನ್ನೆ ಇಳಿಹೊತ್ತಿನಲ್ಲಿ ಶ್ರಾವಣ ಸೋಮವಾರದ ಊಟ ತೀರಿಸಿಕೊಂಡು ರಾಣಿಬಿದನೂರಿಗೆ ಹೋಗಲಿಲ್ಲವೆ? ಆತನಿಗೆ ದಲಾಲರ ಅಂಗಡಿಗೆ ಹೋಗಿ ಹಣ ಪಡೆದು ನಿಲ್ದಾಣದಲ್ಲಿ ನಿನ್ನನ್ನು ಕಂಡು ಕೊಡಲಿಕ್ಕೆ ಹೇಳಿದ್ದಾರಂತೆ. ನಿನ್ನನ್ನು ಕಳಿಸಿ ಹಾಗೆ ಬಂಡಿಯಲ್ಲಿ ಆತನಿಗೂ ಊಟದ ಹೊತ್ತಿಗೆ ಊರಿಗೆ ಬರಲಿಕ್ಕೆ ಹೇಳಿಂದರು. ಚಿಕ್ಕಯ್ಯ, ಇನ್ನೊಂದು ಮಾತು. ಮಾದಕ್ಕ ನಿನಗೆ ಏನನ್ನೋ ತಿಳಿಸಿದ್ದಾಳಂತೆ. ನೆನಪು ಮಾಡೆಂದಳು." ಮುದ್ದಣ್ಣನ ಉತ್ತರ.

ಬಂಡಿ ಹಳ್ಳದ ಮುರಿವನ್ನು ದಾಟಿ ಹೊಲದ ಹುದಿಲು ದಾರಿಗೆ ಹತ್ತಿತು. ಹೋರಿಗಳು ಕಾಲುಕಿತ್ತು ಹಾಕತೊಡಗಿದವು. ಮುದ್ದಣ್ಣ ಮುಗಿಲು ನೋಡಿ, "ಮುಂದಿನ ಹಳ್ಳವನ್ನು ದಾಟುವವರೆಗೆ ಹೋರಿಗಳು ಹೋಗುವಂತೆ ಹೋಗಲಿ. ಅದು ನೋಡು ಬೆಳ್ಳಿ ಮೂಡಿತು. ಬೆಳಗಾಗಲಿಕ್ಕೆ ಇನ್ನು ಒಂದೂವರೆ ತಾಸು ಉಳಿಯಿತು. ಮುಂದೆ ಕೆಸರು ದಾರಿ ಇಲ್ಲ. ಅನುಮಾನ ಮಾಡದೆ ಬಾಯಿ ಮಾಡು. ಆಯತ ವೇಳೆಯಲ್ಲಿ ಅವಸರಿಸಿದರೇನು?" ಎಂದನು.

ಹಳ್ಳ ಸಮೀಪಿಸಿತು. ಬಂಡಿ ಕೊರಕಲು ದಾರಿಗೆ ಇಳಿಯಿತು. ಸಾರಥಿ ಸೂತ್ರವಿಡಿದನು. ಈಚಲು ಗಿಡಗಳೊಳಗಿಂದ ಸುಳ್ಳನೆ ಗಾಳಿ ಸಿಳ್ಳು ಹಾಕಿತು. ಆನತಿ ದೂರದಲ್ಲಿ ಉಲಿವಾಯಿತು. ಚೆಲುವ ಚಂಗನೆ ನಿಮಿರಿ ಮುಂದರಿಯಿತು. ಮುಂದೆ ಏನನ್ನೂ ಕಾಣದ ಚಿಕ್ಕಯ್ಯ ಸುಳಿವಿಗಾಗಿ ಹೊರಳಿ ಬಲ್ಲಿದನನ್ನು ಕುರಿತು, "ಅದೇನು?" ಎಂದನು. ಬಲ್ಲಿದ ಹುಸಿ ನಗುತ್ತ, "ಈಚಲು ಮರದವ್ವ ಎದುರಾದಳು ನಡೆ, ಚಿಕ್ಕಯ್ಯ" ಎಂದನು. ಮಾತು ಮುಗಿಯುವದರಲ್ಲಿಯೇ ಯಾರೋ ಒಂದು ಗಡಿಗೆಯನ್ನು ಹೆಗಲಿಗೇರಿಸಿ ಎದುರಾದರು. ಬಂಡಿ ಹಳ್ಳದ ಇಕ್ಕಟ್ಟಾದ ಇಳುಕಲಿಗೆ ಬರಲು ಅವ್ವನ ಉಪಾಸಕ ಬದಿಗೆ ನಿಂತನು. "ಚೆಲುವ" ಎಂದು ನೆವಮಾತ್ರವಾಗಿ ಅನ್ನುತ್ತ ಸಾರಥಿ ಬಾಗಿದನು. ಮಂಜಿನಲ್ಲಿ ದಿಟ್ಟಿಸುತ್ತ ನಿಂತ ಕಣ್ಣುಗಳು ಬಾಗಿದ ನೇರ ನೋಟದೆದುರು ನೆಲನೋಡಹತ್ತಿದವು. ಹಳ್ಳದ ನೀರು ಚಲ್ಲನೆ ಸಾರಥಿಯ ಮುಖಕ್ಕೆ ಸಿಡಿದಾಗ ಬಾಗಿದ ಮುಖ ಎತ್ತಿ ಸುತ್ತು ನೋಡಿದ. ಮಂಜುಳ ಶೀತಲ ಪ್ರವಾಹವು ಈಚಲದೆಲೆಗಳ ಅಲೆಗಳೊಂದಿಗೆ ಜುಳುಜುಳು ಮುಂದರಿಯುತ್ತಿದೆ.

"ರಾವುತನ ಕಟ್ಟೆಹಳ್ಳ. ಬಂಡಿ ತರುಬಲೇನು? ಎತ್ತು ನೀರಡಿಸಿರಬಹುದು." "ಏನೂ ಬೇಡ. ಹಗ್ಗ ಸಡಿಲು ಬಿಟ್ಟರೆ ಸಾಕು. ನೀರಡಿಸಿದ್ದರೆ ನಿಂತು ಕುಡಿಯುವವು." ಸೂತ್ರ ಸಡಿಲಿತು. ಮುಂಜಾವಿನ ತಂಪಿನಲ್ಲಿ ೪—೫ ಮೈಲು ಬಂದ ಎತ್ತುಗಳು ಪ್ರವಾಹದ ತೆರೆಗಳ ಮೇಲೆ "ಮುಸ್-ಮುಸ್" ಎಂದು, ಮುಖವೆತ್ತಿ ಮುಂದರಿದವು. ಹಳ್ಳದ ದಂಡೆಯ ಕೊಲ್ಲಿಯಲ್ಲಿ ಹೋರಿಗಳ ಹುರುಪು ಬಯಲಿಗೆ ಬಂತು. ನಾಲ್ಕು ನೆಗತಕ್ಕೆ ಹತ್ತಿದವು. ಸರಸರನೆ ಮುಂದುಳಿದ ಬಯಲು ದಿನ್ನೆಯನ್ನು ಚಂಡುಹಾಕುತ್ತ ತುಳಿದವು. ಗುಂಡುಕಲ್ಲಿನ ನಾಲ್ಕಂಗುಲದ ಮಳಲು ದಾರಿಯನ್ನು ಮುಗಿಸಿ ಊರಮುಂದಿನ ಹೊಲದ ದಾರಿಗೆ ಹತ್ತಿದವು. ಬೆಳಗಿನ ಜಾವದ ಮುಂ—ಗೋಳಿ ಗೆಲುವಿನ ಸ್ವರವನ್ನೆತ್ತಿ ಮುಗಿಸಿತು.

"ಬಾಯಿಮಾಡು, ಚಿಕ್ಕಯ್ಯ. ಸಮನೆಲ ಅದೆ ಹುಲ್ಲೇಣಿ ಬರುವವರೆಗೆ. ಹುಲ್ಲೇಣಿಗೆ ಬೆಳಗಾದರೆ ಹೊತ್ತಿಗೆ ಸರಿಯಾಗಿ ಮುಟ್ಟುತ್ತದೆ ಬಂಡಿ."

ಚಿಕ್ಕಯ್ಯ ಒಂದು ಬಾರಿ 'ಲಕ್' ಹಾಕಿ, ಹೋರಿಗಳ ಬೆನ್ನು ಚಪ್ಪರಿಸಿ "ಹೂಂ" ಎಂದನು. ಮುಕ್ಕಣ್ಣ-ಚೆಲುವರಿಬ್ಬರೂ ಕುಪ್ಪಳಿಸಿ ಕುಕ್ಕೋಟ ವನ್ನು ಆರಂಭಿಸಿದರು. ಊರ ಮುಂದಿನ ದಾರಿಯಲ್ಲಿ ಮಾತ್ರ ವೇಗವನ್ನು ತಡೆಹಿಡಿದು ಹುಲ್ಲೇಣಿಯ ಕೂಗಳತೆಯ ದಾರಿಯನ್ನು ಕಣ್ಣು ಮುಚ್ಚಿ ಕಣ್ಣು ತೆರೆಯುವದರಲ್ಲಿ ಮುಗಿಸಿದವು. ಕಣ್ಣಿಗೆ ಹುಲ್ಲೇಣಿ ಅನ್ವರ್ಥಕ. ಹುಲ್ಲಿನ ತೆರೆ ತೆರೆ ತಂಗಾಳಿಗೆ ತೂಗಿ ಪ್ರಯಾಣಿಕರಿಗೆ ಹುಲ್ಲಿನ ಏಣಿಯನ್ನು ಏರುವ ಭಾಸವಾಗುವಂತೆ ಮೆಟ್ಟಿಲು ದೆಟ್ಟಿಲು. ಬದಿಯ ಕುರಿಯ ದಡ್ಡಿ ಯ ಬಿಸಿಯುಸಿರಿಗೆ ಮಂಜು ಉಗಿಯಾಗಿ ಸುಳಿಗಾಳಿಯೊಡನೆ ಲಾಸ್ಯ ವಾಡುತ್ತಿತ್ತು. ದಡ್ಡಿಯ ಕುರಿಮರಿಯ "ವ್ಯಾ....ಆ....ಆ" ಎಂಬ ಕಿರಿ ತೆರೆಯೊಂದು ತೇಲಿ ಸುತ್ತಲಿನ ಪ್ರಶಾಂತ ನಿರ್ಜನ ಪ್ರದೇಶಕ್ಕೆ ಜೀವಕಳೆಯನ್ನು ತುಂಬಿತು.

"ಕುರುಬರ ಜೀವನವೇ ಜೀವನ. ಹಂಗಿಲ್ಲದ ಬಾಳು ಅಲ್ಲವೆ ಮುದ್ದಣ್ಣ ಅವರದು? ಗುಡ್ಡದ ಓರೆಯಲ್ಲಿ ಮಂದಗಾಳಿಗೆ ಮೈಯೊಡ್ಡಿ, ನಕ್ಷತ್ರಗಳ ನಲಿವಿನುಲಿಯನು ಆಲಿಸುತ ನಿರಾಯಾಸವಾಗಿ ನಿದ್ದೆಗೆ ಒಲಿಯುವದು ಆಳ ವಾದ ಅನುಭವದ ಬಾಳುವೆ." ಚಿಕ್ಕಯ್ಯನವರು ಭಾವನಾಲಹರಿಯಲ್ಲಿ ತೇಲು ತ್ತಿದ್ದರು. "ಚಿಕ್ಕಯ್ಯನವರೇ, ಒಗ್ಗಾಲಿ ಬಂತು. ಆಗುಹೋಗದ ಮಾತೆತ್ತಿ ಮೈಮರೆಯಬೇಡಿರಿ."

ಹೋರಿಗಳು ಸಾವಧಾನವಾಗಿ ಒಗ್ಗಾಲಿಯ ಮುರಿವನ್ನು ಹಿಂದೆ ಹಾಕಿ ದವು. ಹುಲ್ಲೇಣಿಯ ಇನ್ನೊಂದು ಮೆಟ್ಟಿಲನ್ನು ಬಂಡಿಯು ಏರಹತ್ತಿತು. ಸೂತ್ರಧಾರಿಯ ಅವಶ್ಯಕತೆ ಇರಲಿಲ್ಲ. ಸುತ್ತು ಕಣ್ಣಿಟ್ಟರು ಚಿಕ್ಕಯ್ಯನವರು. ನಿಸರ್ಗಸುಂದರಿ ಕೈಮಾಡಿ ಕರೆವಂತಿತ್ತು. ಮೂಡಣ ದಿಶೆಯು ಬೆಳ್ದಿಂಗಳಿನ ಬಿಳಿಯ ಮೇಲುಡುವನ್ನು ಕಳಚುವಂತಿತ್ತು. ಚಿಕ್ಕಯ್ಯ ಬಂಡಿಯಿಂದ ಇಳಿ ಯಲು ಹವಣಿಸಿದನು. "ಮುದ್ದಣ್ಣ, ಬಂಡಿಯಲ್ಲಿ ಕುಳಿತು ನರಗಳು ಗಂಟು ಹಾಕಿವೆ. ಸ್ವಲ್ಪ ಹಗುರು ಮಾಡಿಕೊಳ್ಳುವೆನು. ಹಗ್ಗ ಹಿಡಿ."

ಬಂಡಿ ಹುಲ್ಲೇಣಿಯ ನೆತ್ತಿಯನ್ನೇರುವ ಮುನ್ನವೇ ಇಳಿದ ಚಿಕ್ಕಯ್ಯ. ಝುಮು ಝುಮು ಬೆಳಕು ಹರಿಯುತ್ತಿತ್ತು. ಮೂಡಣ ದೆಸೆಯಲ್ಲಿ ಬೆಳಗೆಂಪು ಹಸರಿಸಿತು. ರಜೆಯ ಅವಧಿಯನ್ನು ಮುಗಿಸಿ ಅಧ್ಯಕ್ಷನು ಮುಗುಳು ನಗೆ

ಯಿಂದ ಪುನಃ ಅಧಿಕಾರಾರೂಢನಾಗುವಾಗ ಆ ಅವಧಿಯಲ್ಲಿ ಅಧಿಕಾರಕ್ಕೆ ಬಂದು ಅರೆಸಪ್ಪೆ ಮುಖದಿಂದ ಕುಳಿತ ಉಪಾಧ್ಯಕ್ಷನಂತೆ ಚಂದಿರ ಸಪ್ಪಗೆ ತೆಪ್ಪಗಾಗಿದ್ದ. ಇತ್ತ ಸೂರ್ಯ ಗಿರಿಶೃಂಗದಿಂದ ಉದಯಿಸುತ್ತಿದ್ದ.

ಹದಿನಾರು ಹದಿನೇಳು ವರ್ಷದ ತರುಣ ಕಣ್ಣರಳಿಸಿ ತುಂಬುನೋಟಕ್ಕೆ ತಕ್ಕುದಾದ ಉನ್ನತ ಸ್ಥಳವನ್ನರಸಿದನು. ಕಮ್ಮರಿಯೊಂದರ ಅಂಚಿನ ಮೇಲೆ ನಿಂತು ಪೂರ್ವದಿಂದ ಮಂಜು ಹರಿದು ಹರಿದು ನಿಚ್ಚಳವಾದಂತೆ ನಿಸರ್ಗದ ರಮಣೀಯತೆಯನ್ನು ಒಮ್ಮೆ ಮನದಣಿ ಸವಿದು ಚಂಗನೆ ಹಿಂದಿರುಗಿದನು. ಮೆಲ್ಲನೆ ಮುಂದರಿದ ಬಂಡಿಯನ್ನು ಬೆನ್ನಟ್ಟಿ ಏರಿದನು. ಬಂಡಿಯ ಮುಂಬದಿಯಲ್ಲಿ ಮುದ್ದಣ್ಣ ಇವನ ಬರುವಿಗಾಗಿ ತಡೆಹಿಡಿದ ಹಗ್ಗಗಳನ್ನು ಹರಿಬಿಟ್ಟು ಹೋರಿಗಳನ್ನು ಮುಟ್ಟಿದನು. ಬಂಡಿಯ ವೇಗವೂ ಹೆಚ್ಚಾದಂತೆ ಮುದ್ದಣ್ಣನ ಮಾತಿನ ಲಹರಿಯೂ ಬೆಳೆಯಿತು: "ಅಲ್ಲಿಂದ ಮಡಿಲೇರಿ ಕೆರೆ ಉತ್ತರಕ್ಕೆ ಕಂಡಂತೆ, ನಮ್ಮ ಆರೇಮಲ್ಲಾಪುರ ಕಾಣುವದಿಲ್ಲ. ತುಂಗಭದ್ರಾ ನದಿ ಗುಡ್ಡದ ಓರೆಯಲ್ಲಿ ಕಾಣದೆ ಹರಿವಂತೆ ನಮ್ಮ ಊರಿನ ಬಾಳೂ ತೆಗ್ಗಿನಲ್ಲಿ ಸಾಗಿದೆ. ಇತ್ತ ನೋಡು, ಇದೊಂದು ಇಳುಕಲು ಇಳಿದು ಆ ಹೊಸ ದಾರಿಯ ಮೈಲುಗಲ್ಲಿಗೆ ಹೋದರೆ ರಾಣಿಬಿದನೂರು ಬಂದಂತೆಯೆ. ಅಲ್ಲಿ ನೋಡು. ರಾಣಿಬಿದನೂರಿನ ಮನೆ, ಮಠ, ಮಾರು ಎಲ್ಲವೂ ಕಾಣಿಸುತ್ತವೆ. ಊರ ಮುಂದಿನ ಮುಳುವಳ್ಳಿಯವರ ತೋಟ ಎರಡು ಮೈಲು. ಒಂದು ತಾಸು ಹೊತ್ತು ಏರುವದರೊಳಗಾಗಿಯೇ ನಾವು ತೋಟದಲ್ಲಿರುವೆವು."

ಮುದ್ದಣ್ಣನ ಮಾತುಗಳನ್ನಾಲಿಸುತ್ತ ಕೈಚೀಲದಲ್ಲಿದ್ದ ಕೋಟಿನ ಒಳಕಿಸೆಯಿಂದ ಗಡಿಯಾರವನ್ನು ತೆಗೆದು ನೋಡಿದನು. "ಆರು ಆಗಿದೆ. ಹೋರಿ ತುಸು ದಣಿದರೂ ನಡೆದೀತು. ಬಾಯಿ ಮಾಡು" ಎಂದು ಕೋಟು ಗಡಿಯಾರಗಳನ್ನು ಚೀಲದಲ್ಲಿರಿಸಿದನು. ಮುದ್ದಣ್ಣನ ಮನಸ್ಸೂ ಪ್ರಕೃತಿಯಂತೆ ಮಂಜುಗಳೆಯುವದನ್ನು ಬಗೆಯಿತು: "ನಾನೊಂದು ವಿಚಾರದಲ್ಲಿ ಕೇಳುತ್ತೇನೆ. ಹಳ್ಳಿ ಮುಕ್ಕ, ಇದಕ್ಕೇಕೆ ಎನ್ನಬೇಡ. 'ನಾವು ಚಳವಳಿ ಮಾಡುವವರು' ಎಂದು ಮಾಡೇ ಮಾಡುತ್ತಾರಲ್ಲಾ. ಇದಕ್ಕೆ ಅಂತು ಪಾರು ಹತ್ತಲೇ ಒಲ್ಲದಲ್ಲಾ. ಇನ್ನು ಮೇಲೆ ನಮ್ಮ ರಾಜ್ಯ ನಮಗೆ ಬರುತ್ತದೆ ಅನ್ನುವರಲ್ಲ. ಬರುವದೇನು?"

"ಹಳ್ಳಿಯ ಮುಕ್ಕನೆಂದುಕೊಂಡು ನೀನು ಮುಂದೆ ಬರಲು ಅಳುಕುತ್ತೀ. ನಿನ್ನ ಹತ್ತರ ಬರಲಿಕ್ಕೆ ಅವರು ನಾಚಿ ಹಿಂಜರಿಯುತ್ತಾರೆ. ಎರಡು ಅಂಗೈಗಳು ಕೂಡಿದರೆ ಅಲ್ಲವೆ ಚಪ್ಪಾಳೆ? ಇದಲ್ಲದೆ ಮಳೆ ಬಂದರೆ ಬೆಳೆ ಬರುತ್ತದೇನು?" ಎಂದನು ಚಿಕ್ಕಯ್ಯ. "ಹೂಂ" ಎಂದನು ಮುದ್ದಣ್ಣ. "ಹಾಂ! ಇಲ್ಲಿಯೇ ನೋಡು ನಾವೆಲ್ಲರೂ ತಪ್ಪುವದು." "ಅಂದರೆ." ಬಂಡಿಯ ನಾಗಾಲೋಟವು ಮಾತಿಗೆ ತಡೆಹಾಕಿತು ಕೆಲಹೊತ್ತು. "ಮಳೆಯು ಬರುವ ಮುನ್ನವಾಗಲಿ ಬಂದ ನಂತರವಾಗಲಿ ನೀವು ಹೊಲಕ್ಕೆ ಹೆಜ್ಜೆಯಿಡುವದಿಲ್ಲ. ಬೆಟ್ಟದಯ್ಯನೆದುರು ನಗಾರಿ ಬಾರಿಸುತ್ತಾ ಕುಳಿತಿರುವಿರಿ ವರ್ಷವೆಲ್ಲಾ! ಆಕಾಶದೊಳಗಿನ ಜೋಳ ನೆಲಕ್ಕೆ ಉದುರಿ ಭೂಮಿಯಲ್ಲಿ ಹುಟ್ಟಿ ಹಗೆಗಳೊಳಗೆ ತುಂಬಿ ತುಳುಕುವವು ತಮ್ಮಷ್ಟಕ್ಕೆ ತಾವೆ. ನಿಮ್ಮ ರಟ್ಟೆ ರಂಟೆ ಮಾತ್ರ ಮನೆಯಲ್ಲಿ ನಿದ್ದೆ ಮಾಡುತ್ತವೆ. ಅಲ್ಲವೇನು?"

"ಇದೇನಪ್ಪಾ? ಬಿತ್ತುವೆವು ಉತ್ತುವೆವು, ಎಡೆಕುಂಟೆ ಬೆಳಸಾಲಕುಂಟೆ ಹೆಗ್ಗುಂಟೆ ಮಾಗಿ ಹೊಡೆಯುವೆವು, ಕಳೆ ತೆಗೆಯುವೆವು. ಒಂದೇ ಎರಡೇ ಕೆಲಸ ನಮಗೆ? ಬೆಳ್ಳಿ ಮೂಡಿದಾಗಿನಿಂದ ಹಿಡಿದು ಮೂರು ತಾಸಿನ ಚಿಕ್ಕೆ ಮುಳುಗುವ ವರೆಗೂ ಬಾಗಿದ ಬೆನ್ನು ಎತ್ತುವಂತಿಲ್ಲ."

"ಅದೇ ದಾರಿಯಲ್ಲಿ ದುಡಿದರೆ ಅಲ್ಲವೆ ನಾವೂ ನಾಲ್ವರನ್ನು ಕೂಡಿಕೊಳ್ಳುವದು. ಊರಿಗೆ ಒಬ್ಬನನ್ನೋ ಈರ್ವರನ್ನೋ ಬಕಾಸುರನಿಗೆ ಬಲಿ ಕೊಟ್ಟಂತೆ ಕೊಟ್ಟು ಉಳಿದವರು ಒಳ್ಳೆಯದಕ್ಕೂ ಕೆಟ್ಟುದಕ್ಕೂ ಅವರನ್ನೇ ಬೆರಳುಮಾಡಿ ತೋರಿಸಿ 'ಗೆದ್ದೆವು' ಎಂದು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡರೆ ನಮಗೆ 'ಬರುವದೇನು' ಎಂದರೆ ತಿರುಬೋಕಿ ಅಲ್ಲದೆ ಮತ್ತಿನ್ನೇನು? ನಮ್ಮಲ್ಲಿ ಎಲ್ಲರಿಗೂ ಸ್ವರಾಜ್ಯ ಬೇಕಿಲ್ಲ. ಕೈಯೊಳಗಿನ ತುತ್ತು ಬಾಯಿಗೆ ಬಾರದಂತೆ ಆದರೆ ಸ್ವರಾಜ್ಯ ಅಂದರೆ ಏನು ಎಂದು ಅರ್ಥವಾಗುತ್ತದೆ ಎಲ್ಲರಿಗೆ. 'ಉಂಡವರು ಬಲ್ಲರೇ ಹಸಿದವರ ಸುದ್ದಿಯ?' ಎನ್ನುವಂತೆ ಉಂಡವರ ಜಲ್ಲಾಟದಲ್ಲಿ ಹಸಿದವರ ಕೊರಗು ಅವಿತುಕೊಂಡಿದೆ. ಆದರೇನು? ಹಸಿವಿನ ಕಸುವಿನ ಮುಂದೆ ಯಾವ ಆಟವೂ ನಡೆಯುವದಿಲ್ಲ. ನಮ್ಮ ಇಂದಿನ ಮುಖಂಡರೂ ಇನ್ನೂ ತಮ್ಮ ತಮ್ಮ ಮುಂದಾಳುತನದ ಭದ್ರತೆಯಲ್ಲಿ ಹೋರಾಟದ ಪರಿಹಾಸ್ಯ ನಡಿಸಿದ್ದಾರೆ. ಸ್ವರಾಜ್ಯವಂತೂ ಸವಿಗನಸು."

ಗಂಗಾಜಲ ತಾಂಡೆಯ ಲಮಾಣಿಯರ ಗುಡಿಸಲುಗಳು ಜೀವದುಂಬಿದ್ದವು. ವಿಶಾಲವಾದ ಕೆಂದಾರಿಯ ಮೇಲೆ ಬಂಡಿ ವೇಗದಿಂದ ಉರುಳುತ್ತಿತ್ತು. ಆಗಲೇ ಸೂರ್ಯ ಹಿಂದೆ ಹೊಂಬಣ್ಣದಿಂದ ದಿಗಂತವನ್ನು ಸೂರೆಗೊಂಡಿದ್ದನು. ತರುಣನಿಗೆ ಆವರಿಸಿದ್ದ ವಿಚಾರಪರತೆ ಇನ್ನೂ ಮೌನವಾಗಿ ಅಂತರಂಗದಲ್ಲಿಯೇ ಮುಂದುವರಿಯುತ್ತಿತ್ತು. ಆಲಿಸುವವನಿಗೆ ಅವಕಾಶವಿಲ್ಲುದನ್ನು ಕಂಡು ವಿಚಾರಗಳು ತೊಡಕಾಗಿಯೂ ಆಳವಾಗಿಯೂ ಸತ್ಯವರಸಿದವು: "ಗಾಂಧಿಯುವರು ನಮ್ಮ ಜನತೆಗೆ ಕಲಿಸಿದ್ದೇನು? ತಾನು, ತನ್ನ ಸುತ್ತುಮುತ್ತು ಇವುಗಳನ್ನು ಕಂಡುಕೊಳ್ಳಲಿಕ್ಕೆ ಅಲ್ಲವೆ? ಆ ಮೊದಲು ನಮ್ಮ ಜನತೆಗೆ ಏನೋ ಒಂದು ಕಳಕೊಂಡಂತೆ ಭಾಸವಾಗುತ್ತಿತ್ತು. ಎಲ್ಲಿಯೋ ಸೂತ್ರ ತಪ್ಪಿದೆ ಎಂದು ಅನಿಸುತ್ತಿತ್ತು. ಅದಾವುದು ಎಂದು ಹುಡುಕಲಿಕ್ಕೆ ಹಚ್ಚಿದರು ಗಾಂಧಿಜಿಯುವರು. ಕರ್ನಾಟಕದ ಜನತೆಗೆ ಆ ಸಂದೇಶ ಪೂರ್ಣವಾಗಿ ಮುಟ್ಟಲಿಲ್ಲ. ಅರ್ಧಮರ್ಧ ಎಲ್ಲಿಯೋ ಒಂದು ಎಳೆ ದೊರೆಯಿತು. ಎಳೆ ದೊರೆತರೆ ಹಚ್ಚಡವನ್ನೇ ಎಳಕೊಳ್ಳುವಷ್ಟು ಜನತೆಗೆ ವ್ಯಾವಹಾರಿಕ ಬುದ್ಧಿ ಬರಲಿಲ್ಲ: ಅದಕ್ಕೆ ಬೇಕಾದ ಅವಕಾಶ ತ್ಯಾಗಬುದ್ಧಿ ಅವರಿಗೆ ಅನುಕೂಲಿಸಲಿಲ್ಲ. ಗಾಂಧಿಯವರ 'ಮೂರ್ತಿ ಪೂಜೆ'ಯಿಂದ ಗಾಂಧಿಯವರನ್ನು ಅನುಕರಿಸುವದೂ ಅನುಸರಿಸುವುದೂ ಸಾಧ್ಯವೆಂದು ಜನತೆ ಮೂಢಭಾವನೆ ತಳೆಯಿತು. ಅದಕ್ಕೆ ಕೀರ್ತನೆ-ಸಂಕೀರ್ತನೆಗಳು ಬಹಳೇ ಸಹಕಾರಿಯಾದವು. ಸ್ವಾತಂತ್ರ್ಯದ ಜಯಕಾರ, ಸ್ವಾತಂತ್ರ್ಯವೀರರ ಜಯಘೋಷ, 'ಸತ್ಯಾಗ್ರಹ' 'ಅಹಿಂಸೆ' 'ಅಸಹಕಾರ' 'ಸ್ವಾರ್ಥತ್ಯಾಗ' 'ಒಕ್ಕಟ್ಟು' 'ಮುನ್ನಡೆ' ಇವೇ ಮುಂತಾದ ಬರಿಯ ಮಂತ್ರದ ಮಾತುಗಳು, ಇವೆಲ್ಲ ಜೊಳ್ಳು ವಿಶ್ವಾಸವನ್ನು ಆರಂಭ ಶೂರತನವನ್ನು ತಂದುಕೊಟ್ಟವು. ಜೀವನದಲ್ಲಿ ತತ್ವಗಳನ್ನು ಅಳವಡಿಸಿಕೊಳ್ಳುವ ಸಾಧನೆಯ ರೀತಿ-ನೀತಿಗಳನ್ನು ನಮ್ಮ ಮುಂದಾಳುಗಳೇ ಕಂಡರಿತು ಯತ್ನಿಸದಿರುವಾಗ, ಹಾಸ್ಯಾಸ್ಪದವಾದ ದಾಸ್ಯದ ಅಂಧಕಾರದಲ್ಲಿ ಸಿಲುಕಿದ ಜನತೆಗೆ ಆ ದಾರಿಯನ್ನು ತಿಳಿಯುವದಂತೂ ಕನಸಿನ ಮಾತು. ಗಾಂಧಿಯವರು ಸಾಧಿಸಿದ ಈ ಮಹಾ ಸಿದ್ಧಾಂತಗಳು ನಮ್ಮ ಮುಂದಾಳುಗಳ ಉಪನ್ಯಾಸಗಳಲ್ಲಿ ಕಳೆದುಂಬುವ ಪವಾಡಗಳು. ಜನತೆಯು ಅರಿತುಕೊಳ್ಳುವಂತೆ ಬಿಚ್ಚಿ ಬಿಚ್ಚಿ ಮನವರಿಯುವ ಬಳಕೆಯು

ಮಾತುಗಳಲ್ಲಿ ಹೇಳುವ ಒಬ್ಬ ಮುಖಂಡನೂ ಜನತೆಗೆ ದೊರೆಯದಿರುವಾಗ ಪ್ರಯೋಗಿಸಿ ಸಾಧ್ಯಾಸಾಧ್ಯಗಳನ್ನು ಬಿಂಬಿಸದಿರುವಾಗ, ಮಹಾತ್ಮರ ತತ್ವಗಳು ಗಾಂಧೀ ಸೇವಾಸಂಘದ ಬಿಳಿಯ ಹಾಳೆಯ ಬಳಕೆಗೆ ಮೀಸಲು. ಇದು ನಮ್ಮೊಳಗಿನ ಮಾತು.

ಇಂದು ನಾವು ಜಂಬು ದ್ವೀಪದ ಜಂಬದ ವಾನರರಲ್ಲ: ರಾಕ್ಷಸರಲ್ಲ: ಸುರರಲ್ಲ: ಅಸುರರಲ್ಲ: ಕಿನ್ನರರಲ್ಲ; ಭೂಮಂಡಲದ ಬಿಳಿ, ಕರಿ, ಹಳದಿ, ಕೆಂಪು ಜನಸಮೂಹದಲ್ಲಿ ಹೋರಾಡುತ್ತಿರುವ ಕೆಂಚರು. ಹಳೆಯದನ್ನು ಮರೆತ ಹೊಸಬರು: ಹೊಸದನ್ನು ಅರಿಯದ ಹಳಬರು. ನಮ್ಮ ಹಿರಿಯರ ಬಂಧುರಬಾಳಿನ ಒಳತಿರುಳನ್ನು ಕಾಣದ, ಸವಿಯದ ಮಕ್ಕಳು: ಎಡಬಿಡದೆ, ಹೊಸ ಹೊಸ ದಾರಿಗಳಿಂದ ತಮ್ಮ ಬಾಳುವೆಗೆ ಹೆಚ್ಚು ಹೆಚ್ಚು ಸೌಕರ್ಯಗಳನ್ನು ಪಡೆಯುವದಕ್ಕಾಗಿ ಹೋರಾಡಿ, ತಮ್ಮವರು ತಮ್ಮ ಹೋರಾಟದ ಪ್ರತಿಫಲವಾಗಿ, ಸುಖ ಪಡೆಯಲೆಂದು ತಮ್ಮನ್ನು ಮುಡುಪಾಗಿರಿಸಿ, ಮಿಂಚಿನ ಬಳ್ಳಿಯಂತೆ ಮಾಯವಾಗುವ ಮಹಿಮರನ್ನು ಪ್ರಪಂಚದ ಮುಂದರಿದ ರಾಷ್ಟ್ರಗಳು ಪಡೆದಿವೆ. ನಮ್ಮಲ್ಲಿ ಸಾಹಸಕ್ಕೆ ಎಡೆಯಿಲ್ಲ. ಉತ್ತೇಜನವಿಲ್ಲ: ಹುರಿದುಂಬಿಸುವ ಬೆಲೆಯಿಲ್ಲ: ಕಮರುವ ಚಿಗುರೇ ಹೆಚ್ಚು.

ನಮ್ಮ ಇಂದಿನ ಜೀವನವು ಉಳಿದ ಸುತ್ತುಮುತ್ತಿನ ಜೀವನದಲ್ಲಿ ಸುಗಮವಾಗಿ ಸಾಗಬೇಕಾದರೆ ನಮ್ಮ ದಾಸ್ಯದ ಪರಿಚಯವನ್ನು ಅನೇಕಬಾರಿ ಕಂಡುಕೊಂಡಾಗ್ಯೂ, ಅದನ್ನು ಹಲವು ಕೋನಗಳಿಂದ ತಿರುತಿರುಗಿ ರಾವು ಗನ್ನಡಿಗೆ ಹಿಡಿದು ಹೊತ್ತುಗಳೆದು ಮುಂದಡಿಯಿಡಲು ಹಿಂಜರಿಯುವ ನಮ್ಮ ಹೇಡಿತನಕ್ಕೆ ಹೊದಿಕೆ ಹಾಕುವದನ್ನು ಬಿಡಬೇಕು. ಸಂಕೋಲೆಗಳು ಬಿಗಿದುದು ನಮ್ಮನ್ನು ಯಾವ ತಪ್ಪುಗಳಿಂದ ಎಂಬುದನ್ನರಿತು ತಿದ್ದಿಕೊಳ್ಳಬೇಕು. ನಂತರ ಹೊಸದಾರಿಯಲ್ಲಿ ಹೆಜ್ಜೆಯಿಡಬೇಕು. ಆಗ ನಮ್ಮ ಹೋರಾಟ ಸರಿಯಾದ ದಾರಿಗೆ ಹತ್ತುವದು. ನಮ್ಮ ರಾಜಕಾರಣವು ಹನ್ನೊಂದು ತಾಸಿಗೆ ಬಂದು ಇನ್ನೊಂದು ತಾಸು ಉಳಿದಾಗ ನಮ್ಮ ಸಾಮಾಜಿಕ ಅವ್ಯವಸ್ಥೆ ಮುಂಜಾವಿನ ಮೊದಲುಗಳಿಗೆಯಲ್ಲಿ ತಲೆಯೆತ್ತುವದು. ಇದೇ ತೆರನಾದ ಭೇದದ ರೀತಿ–ನೀತಿಗಳಿಂದ ಪರಕೀಯರು ನಮ್ಮ ಅಸಮರ್ಥತೆಯ ಪರಿಚಯವನ್ನು ಮಾಡಿಸುವರು.

ನಾವಿನ್ನೂ ಕಾಳರಾತ್ರಿಯಲ್ಲಿದ್ದೇವೆ. ಮುಂಬೆಳಗಿನ ಸವಿಗನಸು ನಮಗೀಗ ಬೇಡ. ಕಾಡಡವಿಯಲ್ಲಿ ನಿಂತು ರಾಜಮಾರ್ಗವನ್ನು ಹಲುಬಿ ಹಂಬಲಿಸುವದನ್ನು ಬಿಡಬೇಕು. ಹುಡುಕುವದರಲ್ಲಿ ತೊಡಗಬೇಕು. ನಮ್ಮ ಇಂದಿನ ಗಾಳಿದುಂಬಿದ ಹೋರಾಟ ಗಾಳಿಯನ್ನು ಗುದ್ದಿದಂತೆಯೇ ಸರಿ, ಎಂದು ತಲೆಕೊಡಹುತ್ತಿರುವಾಗಲೇ ಬಂಡಿ ಗಂಗಾಜಲದ ಹಳ್ಳವನ್ನು ದಾಟಿ ತೋಟದ ಬದಿಯಲ್ಲಿ ಸಾಗಿತ್ತು. ಎದುರಿಗೆ ತೋಟದ ಒಳದಾರಿಯಲ್ಲಿ ಸಾವಳಿಗಯ್ಯನವರು ನಗುಮುಖದಿಂದ ಬಂಡಿಯನ್ನು ಬರಮಾಡಿಕೊಂಡರು: "ಅದೇನಪ್ಪಾ ಮುದ್ದಣ್ಣಾ, ಅಳಿಯದೇವರು ಕನಸಿನಿಂದ ಹೊರಬಿದ್ದಂತೆ ಇಳಿಯುತ್ತಾರಲ್ಲ?"

"ಅದೇನಪ್ಪಾ. ನಾನು ಚೂರುಚಾರು ನಮ್ಮ ಚಳವಳಿಮಾತು ತೆಗೆದೆನು. ನನಗೆ ತುಸು ತಿಳಿಸಿಹೇಳುತ್ತಿದ್ದನು. ತಾಂಡೆ ಬಂತು. ಹೊತ್ತು ಆದೀತೆಂದು ಅವಸರಿಸಿ ಆಲಿಸಲಿಲ್ಲ. ತನಗೆ ತಾನೇ ಒಳಗಣ್ಣು ಮಾಡಿಕೊಂಡು ಕುಳಿತು ಈಗ ಹಳ್ಳ ಹತ್ತಿದ ಮೇಲೆ ಒಮ್ಮೆ ತಲೆಕೊಡಹಿ ಕಣ್ತೆರೆದನು. ಈಗ ನಿಚ್ಚಳಾಗಿದ್ದಾನೆ ನೋಡು. ಈಗಿನ ಮಕ್ಕಳು ಕುಡಿಮೀಸೆ ಚಿಗುರುವಷ್ಟರಲ್ಲಿ 'ಬಾಳುವೆ ಬಾಳುವೆ' ಎಂದು ಬಡಕೊಳ್ಳುತ್ತವೆಯಲ್ಲಪ್ಪಾ" ಎಂದು ಮುದ್ದಣ್ಣಾ ಒಟ್ಟಿನಲ್ಲಿ ನುಡಿದನು.

"ಅಲ್ಲಿಗೆ ತಂದು ನಿಲ್ಲಿಸಿದ್ದೀರಪ್ಪಾ ಅವರನ್ನು "ಎಂದು ಅಂಕು ಮುಗಿಸಿ "ಓ, ಮಾವಾ, ಈಸುಬಿದ್ದು ಎರಡು ಸುತ್ತು ಹೊಡೆದು ಮೈ ಹಗುರು ಮಾಡಿಕೊಂಡು ಬರುತ್ತೇನೆ" ಎಂದು ಚಿಕ್ಕಯ್ಯ ಬಾವಿಯಲ್ಲಿಳಿದನು.

ಡುಮುಕಿಯು ಸಪ್ಪಳವಾಗುತ್ತಲೇ ಮುದ್ದಣ್ಣಾ ಹೋರಿಗಳನ್ನು ನೊಗಕ್ಕೆ ಕಟ್ಟಿ ಮುಖ ತೊಳೆಯಲು ಬಾವಿಗಿಳಿದನು.

"ಹೊತ್ತು ಏರಿದೆ. ಬೇಗ ಮುಗಿಸು. ಬುತ್ತಿಗಂಟು ಬಿಚ್ಚಿ ಊಟದ ಶಾಸ್ತ್ರ ಮುಗಿಸು" ಎನ್ನುತ್ತ ಮುದ್ದಣ್ಣಾ ತಾನೇ ಮೊದಲು ಒಂದು ದಂಡೆಯ ಹಾಸುಗಲ್ಲಿನಮೇಲೆ ಗಂಟು ಬಿಚ್ಚಿದನು. ತಣ್ಣೀರಿನ ಸಹವಾಸದಿಂದ ಹುರಿದುಂಬಿಬಂದ ತರುಣ, ಮಾವನೊಡನೆ ಹಾಸುಗಲ್ಲಿನಮೇಲೆ ಕುಳಿತನು. ಹತ್ತು ನಿಮಿಷಗಳಲ್ಲಿ ಮುಗಿಸಿ ಉಳಿದುದನ್ನು ಹೊಟ್ಟು–ಸೊಪ್ಪೆಗಳಲ್ಲಿ ಮಗ್ನ

ರಾದವರಿಗೆ ಒಪ್ಪಿಸಿದರು. ಬಾವಿಯಲ್ಲಿಳಿದು ಏರಿ ಬಂದರು. ತೋಟಿಗರಿಗೆ ಬಂಡಿಯಮೇಲೆ ಕಣ್ಣಿರಿಸಲು ಮುದ್ದಣ್ಣ ತಿಳಿಸಿಹೋದನು.

ಚಿಕ್ಕಯ್ಯನವರು ಮುಕ್ಕಣ್ಣನ ಮೈಮೇಲೆ ಒರಗಿ ಆಚೆಯ ಭುಜವನ್ನು ಸಲಿಗೆಯಿಂದ ಚಪ್ಪರಿಸುತ್ತ ನಿಂತಿದ್ದರು. ಮುಕ್ಕಣ್ಣ ಮೇವು ಬಿಟ್ಟು ಮೆಲುಕು ಹಾಕುತ್ತ ನಿಂತಿದ್ದನು. ಅಸಾಧಾರಣವಾದ ಕೃತಜ್ಞತೆ ಆತನ ಮೊಗದಲ್ಲಿ ಮೂಡಿ ಅರೆಗಣ್ಣಾಗಿದ್ದನು. "ಚೆಲುವ" ಎಂದು ಅರೆಕರೆದೊಡನೆ, ಅದನ್ನು ಕಾಯುತ್ತಿತ್ತೋ ಎನ್ನುವಂತೆ, ಅದು ಸರ್‍ರನೆ ಮುಂದೆ ಬಂದು ಕತ್ತೆತ್ತಿ ಗಂಗೆದೊಗಲು ತುರಿಸಲೆಂದು ನಿಂತಿತ್ತು. ತುರಿಸುತ್ತ ಅರೆಕ್ಷಣ ಕಳೆಯುವಷ್ಟರಲ್ಲಿಯೇ ಮುದ್ದಣ್ಣ ನಗೆಮಾತಿನಿಂದ, "ಮೇಯುವದನ್ನು ಬಿಟ್ಟು ಧನಿಯೊಡನೆ ಆಟ ಹೂಡಿರುವವಲ್ಲ ಇವು. ನಡಿಯಪ್ಪಾ ನಡಿ. ವಿದ್ಯಾ ಕಲಿಯುವದು ಮುಗಿಸಿ ಬಂದು ಹೆಗಲಿಗೆ ಬಾರಿಕೋಲು ಹಾಕುವಿಯಂತೆ. ಹೊತ್ತು ಆದಂತೆ ಕಾಣುತ್ತದೆ" ಎಂದು ಮಣಿಕಟ್ಟಿನಲ್ಲಿರುವ ಗಡಿಯಾರವನ್ನು ನೋಡಿ, "ಏಳು ಬಡೆದಿದೆ. ಇನ್ನು ಕಾಲು ಗಂಟೆಯಲ್ಲಿ ನಾವು ನಿಲ್ದಾಣಕ್ಕೆ ಮುಟ್ಟಬೇಕು" ಎನ್ನುತ್ತಾ ತರುಣ ಕೈಚೀಲವನ್ನು ಹುಡುಕಿದನು. "ಬಾ. ಚಿಕ್ಕಯ್ಯ" ಎನ್ನುತ್ತಾ ಮುದ್ದಣ್ಣ ಮುಂದಾಗಿದ್ದನು ಚೀಲದೊಡನೆ. ಮಾವನೊಡನೆ ಜೀಪುಹೆಜ್ಜೆ ಹಾಕುತ್ತಾ ಕೂಡಿಕೊಂಡನು. ನಡುದಾರಿಯಲ್ಲಿಯೇ ಅಳಿಯ-ಮಾವಂದಿರು ಹಣದ ವ್ಯವಸ್ಥೆ ಮಾಡಿಕೊಂಡರು. ಮುಗಿಯುವ ವರೆಗೆ ಸುಮ್ಮನಿದ್ದು, "ಇನ್ನು ಐದು ರೂಪಾಯಿ ಹೆಚ್ಚು ಕೊಡು. ಯಾಕೆ ಅನ್ನ ಬೇಡ. ನಾನು ಆಮೇಲೆ ಹೇಳುವೆನು" ಎಂದನು ಮುದ್ದಣ್ಣ. "ಮಾದಕ್ಕನ ನೆನಪು 'ಇರಲಿ, ಮಹಾಪಾದಾ" ಎಂದು ಬೆರಗಾಗಿದ್ದ ಚಿಕ್ಕಯ್ಯನವರಿಗೆ ಕಾರಣ ತಿಳಿಸಿದನು.

ರಪರಪನೆ ಹೆಜ್ಜೆಹಾಕುತ್ತ ಮೂವರೂ ನಿಲ್ದಾಣವನ್ನು ಸೇರುತ್ತಲೇ ಮೊದಲಿನ ಸೂಚನಾಘಂಟೆಯಾಯಿತು. ನಿಲ್ದಾಣದ ಕಾಲಚಕ್ರನ ಮುಳ್ಳುಗಳು ಏಳುಕಾಲು ಘಂಟೆಯನ್ನು ತೋರಿಸಿದವು. ಪ್ರಯಾಣದ ಸಜ್ಜು ಮುಗಿಸಿ ಮೂವರೂ ಒಂದೆಡೆ ಹಾಯವಾಗಿ ಕುಳಿತರು. ಅಷ್ಟೇಯದ ನಾಲ್ಕು ಮಾತು ಮುಗಿವಷ್ಟರಲ್ಲಿ, ಗಟ್ಟಿಮುಟ್ಟಾದ ಎತ್ತರವಾದ ಒಬ್ಬ ಪರಿಚಯಸ್ಥ ವ್ಯಕ್ತಿ ಮುಂದೆ ಬಂದು, "ಏನು, ಮುದ್ದಣ್ಣ, ಅಳಿಯ-ಮಾವಂದಿರು ಹಿತದ

ಮಾತು ಆಡುವಾಗ ನಾವು ಎಲೆ-ಅಡಿಕೆ ಬಳಕೆ ಮಾಡುವಾ ಬಾ. ಬಂಡಿ ತೋಟದಲ್ಲಿದೆಯೋ? ನಿನ್ನೆ ಬಂದಿದ್ದೆನು. ಹೀಗೆಯೆ ಹಾದು ಹಳಿಯ ಗುಂಟ ಹೋಗಿ ದಾರಿಗೆ ಕೂಡಬೇಕು ಎಂದು ಹೊರಟಿದ್ದೆನು. ನೀವು ಕಂಡಿರಲ್ಲ. ನೀವು ಹೊರಟರೆ ನಿಮ್ಮೊಡನೆ ಹೋಗುವದೆಂದು ಬಂದೆನು" ಎಂದು ಬದಿಗೆ ಕುಳಿತನು.

"ಜೊತೆಯಾಯಿತು ಬಾ. ಇಬ್ಬರೇ ಇದ್ದೆವು" ಎಂದು ಮುದ್ದಣ್ಣ ತಾಂಬೂಲವನ್ನಿತ್ತನು.

ಸಾವಳಿಗಯ್ಯನವರು ಅಳಿಯನಿಗೆ ಹಳ್ಳಿಯ ರೀತಿಯಲ್ಲಿ ಬಂದವರ ಪರಿಚಯ ಮಾಡಿಕೊಟ್ಟರು: "ನಮ್ಮ ಊರಿನ ಆರೇರಲ್ಲಿ ಒಂದು ಗಟ್ಟಿಕುಳ. ಉಕ್ಕಡಬಾಗಿಲ ಹನುಮಂತಣ್ಣ, ನಿನಗೆ ಗೊತ್ತು ಇರಬಹುದಲ್ಲ?"

"ಇರದೇನು?" ಎಂದು ಸ್ವಾಭಾವಿಕವಾಗಿ ಅಳಿಯ. "ಇವರ ಮಗ ರಾಮನೂ ನಾನೂ ಕೂಡಿಯೇ ಅಜ್ಜನ ಶಾಲೆಯಲ್ಲಿ ಓದಿರುವೆವು. ಅವನೊಡನೆ ಮೊನ್ನೆ ಇವರ ಊರ ಮುಂದಿನ ಹೊಲಕ್ಕೆ ಹೋಗಿದ್ದೆನು. ಕೈ ಮುಟ್ಟಿ ಮೈಮುರಿದು ದುಡಿದು ಹಸನಾಗಿರಿಸಿದ್ದಾರೆ. ಬಿತ್ತಿಗೆಯೂ ಒಳ್ಳೇದು ಆಗಿದೆ." ಅಭಿಮಾನ ಆದರಗಳು ಉಕ್ಕಿದವು ಹನುಮಣ್ಣನಿಂದ: "ನಮ್ಮ ಕೆಂಗಲಕ್ಕೆ ಹೋಗಿದ್ದಿರೇನು ಹಾಗಾದರೆ? "ಕಲಿತವರಪ್ಪಾ ನೀವು. ಮಾತಾಡಿಸಲಿಕ್ಕೆ ಅಂಜಿಕೆ ಬಂದಂತೆ ಆಗುವದು. ಅದಕ್ಕೆ ಮುಕ್ಕ ಮುಕ್ಕನನ್ನು ಮಾತಾಡಿಸಿದ್ದು."

"ಅಹುದು. ಅದೇನು ಸುಳ್ಳಲ್ಲ. ಕಲಿತವರಿಗೆ ಕೋಡು ಬರುವದುಂಟು. ನಾನು ಅದನ್ನು ಮಾತ್ರ ಎಂದೂ ಬಯಸಿಲ್ಲ, ಬಯಸುವದೂ ಇಲ್ಲ. ನಿಮ್ಮ ನನ್ನ ಪರಿಚಯ ಆದರೆ, ನಾನು ನೀವು ಮನಸ್ಸು ಬಿಚ್ಚಿ ಮಾತನಾಡಿದರೆ, ನಿಮ್ಮ ಪಾತಾಳ ನಮ್ಮ ಕೈಲಾಸ ಎರಡೂ ಕನಸಿನಂತೆ ಕರಗುವವು. ಆಗ ನಾನೂ ನೀವೂ ಒಂದೇ ಮಣ್ಣಿನ ಮಕ್ಕಳು. ನಮ್ಮ ಯೋಗ, ಭೋಗ, ರೋಗ ಎಲ್ಲವೂ ಈ ಮಣ್ಣಿನ ಮಮತೆಯ ಮಿತಿಯಲ್ಲಿದೆ: ನುಣ್ಣನ್ನ ಮಣ್ಣಿಗೆ ಕಣ್ಣು ಮುಚ್ಚುವದೂ ಉಂಟು. ಆಗ "ಕಣ್ಣಾಗ ಮಣ್ಣು ಬೀಳಾ" ಎಂದು ನಮ್ಮ ಹೆಣ್ಣುಮಕ್ಕಳು ದೊಡ್ಡ ಮಾತು ನುಡಿದಂತೆ ಕಲಿತವರ ಕಣ್ಣಲ್ಲಿ ಮಣ್ಣು ಬಿದ್ದಿರುವದು. ಕಣ್ಣಿನಲ್ಲಿ ಮಣ್ಣು ಬೀಳದಂತೆ

ಕಣ್ಣಿನ ಬೆಳಕು ಕಳೆದುಕೊಳ್ಳದಂತೆ ಇದ್ದವನಿಗೆ ನಾನು—ನೀನು ಒಂದು ಹೆಚ್ಚು ಒಂದು ಕಡಿಮೆ ಇದಾವುದೂ ಇಲ್ಲ. ಹುಡುಗ ಬಹಳ ಮಾತು ಆಡಿದ ಅನ್ನಬೇಡಿರಿ. ನೀವು ಕೇಳಿದ ಕಾಲವೂ ಒಳ್ಳೆಯದು. ನನ್ನ ಮನಸ್ಸು ಎದೆಬಿಚ್ಚಿ ಮಾತಾಡಿದ್ದರಿಂದ ಹಗುರಾಯಿತು."

ತಾರುಣ್ಯ ಕಾರುಣ್ಯ ಮೂರ್ತಿಯಾಗಿತ್ತು.

"ದೊರೆಮಾತು ಆಡಿದಿರಿ ನೀವು ಚಿಕ್ಕವರಾದರೂ. ಇಂದು ಕಲಿತವರ ಭೆಟ್ಟಿಗೆ ಹೋಗಬೇಕಾದರೆ, ದೇವರ ಗುಡಿ ಮುಂದೆ ಬಿಟ್ಟಂತೆ, ನಮ್ಮ ಜೋಡು ಹೊರಗೆ ಬಿಟ್ಟು ದೂರದಿಂದಲೇ ಕೈ ಮುಗಿದು ಮೂಲೆಯಲ್ಲಿ ಒಂದು 'ಪ್ರಾಣಿ'ಯಂತೆ ಕಾಯ್ದು ಅವರ ದೇವಲೋಕದ ವಾಣಿಗೆ ಬಾಯ್ಬಿಡಬೇಕು. ಕಲಿತವರು ಮಹಡಿಯ ಮೇಲೆ. ನಾವು ಗುಡಿಸಲುಗಳಲ್ಲಿ. ಅದೇನೋ ಸ್ವರಾಜ್ಯ ಬರುವದು ಅನ್ನುತ್ತಾರೆ. ನಮ್ಮೊಳಗೆ ನೋಡಿದರೆ ನನಗೇನು ಆಶೆ ಯಿಲ್ಲ. ನೀವು ಇನ್ನೊಮ್ಮೆ ಬಂದಾಗ ನನಗೆ ಈ ಒಗಟು ಬಿಡಿಸಿ ಹೇಳುವಿ ರಂತೆ ಏಳಿರಿ. ಆ ಗುಡ್ಡದಲ್ಲಿ ಸುತ್ತಿ ಹೊಗೆಯ ಹಿಂದೆಯೇ ಗಾಡಿ ಬಯಲಿಗೆ ಬಂದಿತು."

ಎರಡನೆಯ ಘಂಟೆ ಬಾರಿಸಿತು. ನಿಲ್ದಾಣದಲ್ಲಿ ಗಡಿಬಿಡಿ ಆರಂಭವಾ ಯಿತು. ಅಲ್ಲಿಯ ಮಂದಬುದ್ಧಿಯ ಕಾಳಗ ಭಾರತೀಯರ ಒಳಪಂಗಡಗಳ ತಿಕ್ಕಾಟದ ಸೂಕ್ಷ್ಮ ಪರಿಚಯವನ್ನು ಕೊಡುವಷ್ಟು ನೈಜವಿತ್ತು. ಈ ಸಂತೆ ಯನ್ನು ಬಿಟ್ಟು, ಕೆಲವೇ ಅನುಭವಿಕರನ್ನು ಆಕರ್ಷಿಸಿದ ಮುಂದಿನ ಡಬ್ಬಿ ಯಲ್ಲಿ ಚಿಕ್ಕಯ್ಯ ನಿಂತುಕೊಳ್ಳಲು ಸ್ಥಳವನ್ನು ಪಡೆದ ಒಳಮುಗ್ಗಲಿನ ಬಾಗಿಲ ತುದಿಯಲ್ಲಿಯೇ ನಿಂತು ಮುದ್ದಣ್ಣನ ಕಿವಿಯಲ್ಲಿ " 'ಹೂಂ'ನು ಇಲ್ಲ. ಉಪ್ಪಿ ನಕಾಯಿಯೂ ಇಲ್ಲ" ಎಂದರು. ಗಾಡಿ ಕೂಗಿತು ಮುದ್ದಣ್ಣ ಮರುಕದಿಂದ ನಗೆಯನ್ನು ಮೂಡಿಸಿದನು. ಗಾಡಿ ಮೊದಲನೆ ಅಡಿಯಿಟ್ಟಿತು. ಚಿಕ್ಕಯ್ಯನ ನಮಸ್ಕಾರಗಳನ್ನು ಸ್ವೀಕರಿಸಿ ಕಳಿಸ ಬಂದವರು ಹಿಂದಾದರು. ಸದೃಢಕಾ ಯದ ಪ್ರಯಾಣಿಕರೊಬ್ಬರು ಗಾಡಿಯಲ್ಲಿ ನುಗ್ಗಿದರು. ಆಳೊಂದು ಸಾಮಾ ನುಗಳನ್ನು ಎತ್ತಿ ಕೊಟ್ಟಿತು. ಗಾಡಿ ಮೆಲ್ಲನೆ ಮುಂದರಿದಿತ್ತು. ಕೊನೆಗೆ ಬಾಲಿಕೆಯೊಬ್ಬಳು ಸರ್ರನೆ ಏರಿದಳು. ತೆನೆಯಲ್ಲಿ ಅರೆ ಅರಳಿದ ಅವಳ ಮೂಗಿನ ಹೊರಳೆಗಳು ಕಂಪಿಸುತ್ತಿದ್ದವು. ಆದರಲ್ಲಿಯೇ ತನ್ನ ಪರಿಕಾರ

ವನ್ನು ತೀಡಿ ಸಿಂಗರಿಸುವದರಲ್ಲಿದ್ದಳು. ಗಾಡಿ ಒಮ್ಮೆ ಕೂಗಿ ಹಳಿಗಳನ್ನು ಬದಲಿಸಿತು. ಒಮ್ಮೆಲೆ ಬಾಲೆ ಮುಂದೆ ತೂಗಿ ಚಿಟ್ಟನೆ ಚೀರಿದಳು. ಪ್ರಸಂ–ಗಾವಧಾನಿಯಾದ ಚಿಕ್ಕಯ್ಯ ಕೈಯಳವಿನಲ್ಲಿದ್ದ ಬಾಲಿಕೆಯ ತೋಳನ್ನು ಹಿಡಿದು ಬಂದುದನ್ನು ದೂರಮಾಡಿದನು. ಆಗಲೇ ನಿರಾಶರಾಗಿ ನುಗ್ಗಿದ ದೃಢಕಾಯರು ಕೃತಜ್ಞತೆಯಿಂದ ನೋಡಿ ದೀರ್ಘವಾಗಿ ಉಸಿರು ಬಿಟ್ಟರು.

ಇಷ್ಟರಲ್ಲಿ ತನ್ನ ತಪ್ಪು ತಿಳಿದು ತಾನು ಪಾರಾದ ರೀತಿಯನ್ನು ಕಾಣಲು ಹೊರಳಿದಳು ಬಾಲಿಕೆ. ಇನ್ನೂ ತೋಳು ಚಿಕ್ಕಯ್ಯನವರ ವಜ್ರಮುಷ್ಟಿಯ ಲ್ಲಿತ್ತು. ದೃಢಕಾಯರು ಸ್ಥಳವನ್ನು ಸರಿಪಡಿಸುವದರ ಕಡೆಗೆ ನೆಟ್ಟ ಲಕ್ಷ್ಯ ದಲ್ಲಿ ಈ ಹಿಡಿತದ ವಿಚಾರವಿರಲಿಲ್ಲ. ತನ್ನ ಎಡದ ತೋಳಿನ ಅಪ್ಪುಗೆಯಲ್ಲಿ ದ್ದ ಸಣ್ಣ ಕೊಡೆ ಒಂದು ಚರ್ಮದ ಕೈಚೀಲ ಇವುಗಳನ್ನು ಒಂದೆಡೆ ಇರಿಸಿ, ಅದೇ ಕೈಯಿಂದ ಒಂದು ಆಸರವನ್ನು ಹಿಡಿದು, ಕೊಸರಿಕೊಂಡು ತನ್ನ ಬಲ ತೋಳನ್ನು ಬಿಡಿಸಿಕೊಂಡಳು. ಆಗ ಇಲ್ಲಿ ನಡೆದ ನಾಟಕದ ಪರಿಚಯ ಚಿಕ್ಕ ಯ್ಯನಿಗೆ. ಸಿಟ್ಟಿನಿಂದ ಆ ಬಾಲಿಕೆ ಪಾದದಿಂದ ನೆತ್ತಿಯವರೆಗೆ ನೋಡಿದಳು ಅವನನ್ನು. "ನೀನು ಎಷ್ಟರವನೋ" ಎನ್ನುವ ಭಾವನೆಯನ್ನು ಸೂಚಿಸು ವಷ್ಟು ಸಾಗಿತ್ತು ಸಿಟ್ಟು. ಇವನಿಗೆ ಭ್ರಮೆಯಿಂದ ಅವಮಾನದೊಡಗೂಡಿದ ಅವಳ ಕಣ್ಣಿನಲ್ಲಿ ಕಣ್ಣಿಡಗೊಡಲಿಲ್ಲ. ನಿದಾನಿಸಿ, ತನ್ನ ತನವನ್ನೆಲ್ಲವನ್ನು ಒಂದೆಡೆ ಕೂಡಿಹಾಕಿ ಸಹಜವಾಣಿಯಿಂದ, "ನೀವು ಈ ಬದಿಗೆ ಬನ್ನಿ. ಬಾಗಿಲು ಮುಚ್ಚಿದರೆ ಯಾವ ಭಯವೂ ತೊಂದರೆಯೂ ಇಲ್ಲ"ವೆಂದು ಅವ ಳಿಗೆ ಸ್ಥಳವಿತ್ತನು. ಹಾಗೂ ಹೀಗೂ ಮಾಡಿ ಬಾಗಿಲು ಹಾಕಿ ಕಿಡಿಕಿಯೊಳ ಗಿಂದ ಹೊಲ–ಹಳ್ಳಗಳೊಡನೆ ಮನಸ್ಸು ಓಡಿಸಹತ್ತಿದನು. ತನ್ನ ಹಿಂದೆ ದೃಢಕಾಯದವರ ಸಂಗಡ ಆ ಬಾಲಿಕೆ ನಡಿಸಿದ ಮುನಿಸಿನ ಸಂಭಾಷಣೆ ಈತ ನನ್ನು ಯಾವ ನಿರ್ಧಾರಕ್ಕೂ ಬರಗೊಡಲಿಲ್ಲ. ಅವಳ ಮಾತಿನಲ್ಲಿ ತನ್ನ ಸಿರಿ ವಂತಿಕೆಯ ಪ್ರದರ್ಶನವಿತ್ತೊ ಅಥವಾ ತೊಂದರೆಯ ನಿಜಸ್ಥಿತಿಯ ಬಣ್ಣನೆ ಯಿತ್ತೋ ಅವನು ತಿಳಿಯಲು ಆತುರಪಡಲಿಲ್ಲ. ಅವರು 'ಇಂಟರ'ಕ್ಕೆ ಹಣ ತೆತ್ತು ಇಲ್ಲಿಗೆ ನುಗ್ಗಿದ್ದು ಮಾತ್ರ ತಿಳಿಯಲು ಬಯಸದಿದ್ದರೂ ಕೇಳಬಂತು. ಅಂತು ಮುಂದಿನ ಒಂದು ನಿಲ್ದಾಣದಲ್ಲಿ ತಮ್ಮ ತರಗತಿಗೆ ಇಳಿದು ಹೋಗುವ ನಿರ್ಣಯದಿಂದ ಅವರ ಸಂಭಾಷಣೆ ಕೊನೆಗಂಡಿತು.

ಕಣ್ಣಿನ ಬೆಳಕು ಕಳೆದುಕೊಳ್ಳದಂತೆ ಇದ್ದವನಿಗೆ ನಾನು—ನೀನು ಒಂದು ಹೆಚ್ಚು ಒಂದು ಕಡಿಮೆ ಇದಾವುದೂ ಇಲ್ಲ. ಹುಡುಗ ಬಹಳ ಮಾತು ಆಡಿದ ಅನ್ನಬೇಡಿರಿ. ನೀವು ಕೇಳಿದ ಕಾಲವೂ ಒಳ್ಳೆಯದು. ನನ್ನ ಮನಸ್ಸು ಎದೆಬಿಚ್ಚಿ ಮಾತಾಡಿದ್ದರಿಂದ ಹಗುರಾಯಿತು."

ತಾರುಣ್ಯ ಕಾರುಣ್ಯ ಮೂರ್ತಿಯಾಗಿತ್ತು.

"ದೊರೆಮಾತು ಆಡಿದಿರಿ ನೀವು ಚಿಕ್ಕವರಾದರೂ. ಇಂದು ಕಲಿತವರ ಭೆಟ್ಟಿಗೆ ಹೋಗಬೇಕಾದರೆ, ದೇವರ ಗುಡಿ ಮುಂದೆ ಬಿಟ್ಟಂತೆ, ನಮ್ಮ ಜೋಡು ಹೊರಗೆ ಬಿಟ್ಟು ದೂರದಿಂದಲೇ ಕೈ ಮುಗಿದು ಮೂಲೆಯಲ್ಲಿ ಒಂದು 'ಪ್ರಾಣಿ'ಯಂತೆ ಕಾಯ್ದು ಅವರ ದೇವಲೋಕದ ವಾಣಿಗೆ ಬಾಯ್ಬಿಡಬೇಕು. ಕಲಿತವರು ಮಹಡಿಯ ಮೇಲೆ. ನಾವು ಗುಡಿಸಲುಗಳಲ್ಲಿ. ಅದೇನೋ ಸ್ವರಾಜ್ಯ ಬರುವದು ಅನ್ನುತ್ತಾರೆ. ನಮ್ಮೊಳಗೆ ನೋಡಿದರೆ ನನಗೇನು ಆಶೆ ಯಿಲ್ಲ. ನೀವು ಇನ್ನೊಮ್ಮೆ ಬಂದಾಗ ನನಗೆ ಈ ಒಗಟು ಬಿಡಿಸಿ ಹೇಳುವಿ ರಂತೆ ಏಳಿರಿ. ಆ ಗುಡ್ಡದಲ್ಲಿ ಸುತ್ತಿ ಹೊಗೆಯ ಹಿಂದೆಯೇ ಗಾಡಿ ಬಯಲಿಗೆ ಬಂದಿತು."

ಎರಡನೆಯ ಘಂಟೆ ಬಾರಿಸಿತು. ನಿಲ್ದಾಣದಲ್ಲಿ ಗಡಿಬಿಡಿ ಆರಂಭವಾ ಯಿತು. ಅಲ್ಲಿಯ ಮಂದಬುದ್ಧಿಯ ಕಾಳಗ ಭಾರತೀಯರ ಒಳಪಂಗಡಗಳ ತಿಕ್ಕಾಟದ ಸೂಕ್ಷ್ಮ ಪರಿಚಯವನ್ನು ಕೊಡುವಷ್ಟು ನೈಜವಿತ್ತು. ಈ ಸಂತೆ ಯನ್ನು ಬಿಟ್ಟು, ಕೆಲವೇ ಅನುಭವಿಕರನ್ನು ಆಕರ್ಷಿಸಿದ ಮುಂದಿನ ಡಬ್ಬಿ ಯಲ್ಲಿ ಚಿಕ್ಕಯ್ಯ ನಿಂತುಕೊಳ್ಳಲು ಸ್ಥಳವನ್ನು ಪಡೆದ ಒಳಮಗ್ಗಲಿನ ಬಾಗಿಲ ತುದಿಯಲ್ಲಿಯೇ ನಿಂತು ಮುದ್ದಣ್ಣನ ಕಿವಿಯಲ್ಲಿ " 'ಹೂಂ'ನು ಇಲ್ಲ. ಉಪ್ಪಿ ನಕಾಯಿಯೂ ಇಲ್ಲ" ಎಂದರು. ಗಾಡಿ ಕೂಗಿತು ಮುದ್ದಣ್ಣ ಮರುಕದಿಂದ ನಗೆಯನ್ನು ಮೂಡಿಸಿದನು. ಗಾಡಿ ಮೊದಲನೆ ಅಡಿಯಿಟ್ಟಿತು. ಚಿಕ್ಕಯ್ಯನ ನಮಸ್ಕಾರಗಳನ್ನು ಸ್ವೀಕರಿಸಿ ಕಳಿಸ ಬಂದವರು ಹಿಂದಾದರು. ಸದೃಢಕಾ ಯದ ಪ್ರಯಾಣಿಕರೊಬ್ಬರು ಗಾಡಿಯಲ್ಲಿ ನುಗ್ಗಿದರು. ಆಳೊಂದು ಸಾಮಾ ನುಗಳನ್ನು ಎತ್ತಿ ಕೊಟ್ಟಿತು. ಗಾಡಿ ಮೆಲ್ಲನೆ ಮುಂದರಿದಿತ್ತು. ಕೊನೆಗೆ ಬಾಲಿಕೆಯೊಬ್ಬಳು ಸರ್ರನೆ ಏರಿದಳು. ತೆನೆಯಲ್ಲಿ ಅರೆ ಅರಳಿದ ಅವಳ ಮೂಗಿನ ಹೊರಳೆಗಳು ಕಂಪಿಸುತ್ತಿದ್ದವು. ಆದರಲ್ಲಿಯೇ ತನ್ನ ಪರಿಕಾರ

ವನ್ನು ತೀಡಿ ಸಿಂಗರಿಸುವದರಲ್ಲಿದ್ದಳು. ಗಾಡಿ ಒಮ್ಮೆ ಕೂಗಿ ಹಳಿಗಳನ್ನು ಬದಲಿಸಿತು. ಒಮ್ಮೆಲೆ ಬಾಲೆ ಮುಂದೆ ತೂಗಿ ಚಿಟ್ಟನೆ ಚೀರಿದಳು. ಪ್ರಸಂಗಾವಧಾನಿಯಾದ ಚಿಕ್ಕಯ್ಯ ಕೈಯಳವಿನಲ್ಲಿದ್ದ ಬಾಲಿಕೆಯ ತೋಳನ್ನು ಹಿಡಿದು ಬಂದುದನ್ನು ದೂರಮಾಡಿದನು. ಆಗಲೇ ನಿರಾಶರಾಗಿ ನುಗ್ಗಿದ ವೃಢಕಾಯರು ಕೃತಜ್ಞತೆಯಿಂದ ನೋಡಿ ದೀರ್ಘವಾಗಿ ಉಸಿರು ಬಿಟ್ಟರು.

ಇಷ್ಟರಲ್ಲಿ ತನ್ನ ತಪ್ಪು ತಿಳಿದು ತಾನು ಪಾರಾದ ರೀತಿಯನ್ನು ಕಾಣಲು ಹೊರಳಿದಳು ಬಾಲಿಕೆ. ಇನ್ನೂ ತೋಳು ಚಿಕ್ಕಯ್ಯನವರ ವಜ್ರಮುಷ್ಟಿಯಲ್ಲಿತ್ತು. ದೃಢಕಾಯರು ಸ್ಥಳವನ್ನು ಸರಿಪಡಿಸುವದರ ಕಡೆಗೆ ನೆಟ್ಟ ಲಕ್ಷ್ಯದಲ್ಲಿ ಈ ಹಿಡಿತದ ವಿಚಾರವಿರಲಿಲ್ಲ. ತನ್ನ ಎಡದ ತೋಳಿನ ಅಪ್ಪುಗೆಯಲ್ಲಿದ್ದ ಸಣ್ಣ ಕೊಡೆ ಒಂದು ಚರ್ಮದ ಕೈಚೀಲ ಇವುಗಳನ್ನು ಒಂದೆಡೆ ಇರಿಸಿ, ಅದೇ ಕೈಯಿಂದ ಒಂದು ಆಸರವನ್ನು ಹಿಡಿದು, ಕೊಸರಿಕೊಂಡು ತನ್ನ ಬಲ ತೋಳನ್ನು ಬಿಡಿಸಿಕೊಂಡಳು. ಆಗ ಇಲ್ಲಿ ನಡೆದ ನಾಟಕದ ಪರಿಚಯ ಚಿಕ್ಕಯ್ಯನಿಗೆ. ಸಿಟ್ಟಿನಿಂದ ಆ ಬಾಲಿಕೆ ಪಾದದಿಂದ ನೆತ್ತಿಯವರೆಗೆ ನೋಡಿದಳು ಅವನನ್ನು. "ನೀನು ಎಷ್ಟರವನೋ" ಎನ್ನುವ ಭಾವನೆಯನ್ನು ಸೂಚಿಸುವಷ್ಟು ಸಾಗಿತ್ತು ಸಿಟ್ಟು. ಇವನಿಗೆ ಭ್ರಮೆಯಿಂದ ಅವಮಾನದೊಡಗೂಡಿದ ಅವಳ ಕಣ್ಣಿನಲ್ಲಿ ಕಣ್ಣಿಡಗೊಡಲಿಲ್ಲ. ಸಿದಾನಿಸಿ, ತನ್ನ ತನವನ್ನೆಲ್ಲವನ್ನು ಒಂದೆಡೆ ಕೂಡಿಹಾಕಿ ಸಹಜವಾಣಿಯಿಂದ, "ನೀವು ಈ ಬದಿಗೆ ಬನ್ನಿ. ಬಾಗಿಲು ಮುಚ್ಚಿದರೆ ಯಾವ ಭಯವೂ ತೊಂದರೆಯೂ ಇಲ್ಲ"ವೆಂದು ಅವಳಿಗೆ ಸ್ಥಳವಿತ್ತನು. ಹಾಗೂ ಹೀಗೂ ಮಾಡಿ ಬಾಗಿಲು ಹಾಕಿ ಕಿಡಿಕಿಯೊಳಗಿಂದ ಹೊಲ–ಹಳ್ಳಗಳೊಡನೆ ಮನಸ್ಸು ಓಡಿಸಹತ್ತಿದನು. ತನ್ನ ಹಿಂದೆ ದೃಢಕಾಯದವರ ಸಂಗಡ ಆ ಬಾಲಿಕೆ ನಡಿಸಿದ ಮುನಿಸಿನ ಸಂಭಾಷಣೆ ಈತನನ್ನು ಯಾವ ನಿರ್ಧಾರಕ್ಕೂ ಬರಗೊಡಲಿಲ್ಲ. ಅವಳ ಮಾತಿನಲ್ಲಿ ತನ್ನ ಸಿರಿವಂತಿಕೆಯ ಪ್ರದರ್ಶನವಿತ್ತೋ ಅಥವಾ ತೊಂದರೆಯ ನಿಜಸ್ಥಿತಿಯ ಬಣ್ಣನೆಯಿತ್ತೋ ಅವನು ತಿಳಿಯಲು ಆತುರಪಡಲಿಲ್ಲ. ಅವರು 'ಇಂಟರ'ಕ್ಕೆ ಹಣ ತೆತ್ತು ಇಲ್ಲಿಗೆ ನುಗ್ಗಿದ್ದು ಮಾತ್ರ ತಿಳಿಯಲು ಬಯಸದಿದ್ದರೂ ಕೇಳಬಂತು. ಅಂತು ಮುಂದಿನ ಒಂದು ನಿಲ್ದಾಣದಲ್ಲಿ ತಮ್ಮ ತರಗತಿಗೆ ಇಳಿದು ಹೋಗುವ ನಿರ್ಣಯದಿಂದ ಅವರ ಸಂಭಾಷಣೆ ಕೊನೆಗಂಡಿತು.

ತರುಣ ಓರೆಗಣ್ಣಿನಿಂದ ಅವಳಿಗೆ ಕಾಣದಂತೆ ಹಿಂದೆ ನೋಡಿದನು. ಅವಳಿನ್ನು ಹುಳುಹುಳು ನೋಡುವದನ್ನು ಕಂಡು ಪ್ರಪಂಚದಲ್ಲಿ ವಿವೇಕವು ತಲೆಯೆತ್ತದಂತೆ ದುರಭಿಮಾನವೂ ಶೀಘ್ರ ಮನವರಿಕೆಗಳೂ ತುಳಿಯುವ ದನ್ನು ಕಣ್ಣಾರೆ ಕಂಡನು. ವಿಷಾದಪೂರ್ಣವಾದ ವಿಚಾರಮಗ್ನತೆಯಿಂದ ಪುನಃ ಹೊರಗೆ ಮುಖಪಿಟ್ಟು ಹಿಂದೆ ಹಿಂದೆ ಸಾಗುತ್ತಿರುವ ಹಳಿಗಳನ್ನು ಮರೆ ಯಾಗುವ ವರೆಗೆ ನೋಡುತ್ತ ನಿಂತನು. ತಲೆಯ ಕೂದಲು ಗಾಳಿಗೆ ತೂರಿ ಕೆದರಿ ಮುಖಕ್ಕೆ ಒಂದು ತೆರನಾದ ಉದ್ವಿಗ್ನತೆಯನ್ನು ತಂದಿರಿಸಿದರೂ ಪರಿವೆ ಇಲ್ಲದೆ ಹಳಿಗಳಂತೆ ಹಿಂದೆ ಹಿಂದೆ ಸಾಗಿದ ವಿಚಾರ ತನ್ನ ಮಾವ, ಮುದ್ದಣ್ಣ ಎತ್ತು ಬಂಡಿಗಳ ಕಡೆಗೆ ಹರಿಯಿತು. ಆ ಸೌಹಾರ್ದ ಇವನ ಮುಖವನ್ನ ರಳಿಸಿತು.

ಬಳಿಯಲ್ಲಿ ನಿಂತವನಿಗೆ ಇವನ ಮುಖ ಒಂದು ಸಮಸ್ಯೆಯಾಯಿತು. ಹಲವು ಭಾವನೆಗಳ ಆಗರವಾದ ಆ ಮುಖ ಇವಳ ಕುತೂಹಲವನ್ನು ಕೆರ ಳಿತು. ಅವನನ್ನು ತುಸು ತಟ್ಟಿ, “ಎಲ್ಲಿಗೆ?” ಎಂದು ಮಕ್ಕಳ ತಿಳಿಪ್ರಶ್ನೆಯ ನ್ನಿರಿಸಿದಳು. “ಹಾಂ” ಎಂದು ಚೇತರಿಸಿಕೊಂಡು, “ಹುಬ್ಬಳ್ಳಿಗೆ!” ಎಂದು ಪುನಃ ತನ್ನಿಂದ ಆಗಬಾರದದು ಏನಾದರೂ ಸಂಭವಿಸಿತೋ ಏನೋ ಎಂದು ಅರಸುವ ನೋಟವನ್ನು ಸುತ್ತು ಚೆಲ್ಲಿದನು. ಈ ಸಂಶೋಧನೆ ಅವಳಿಗೆ ಹಳಿಯ ನೆನಪು ತಂದಿರಿಸಿತು. ಪುನಃ ಬಿಂಕದೋರಿ ಬಿರುವಾದಳು ಬಾಲಿಕೆ.

ಬ್ಯಾಡಿಗಿಯ ನಿಲ್ದಾಣದಲ್ಲಿ ಬಾಲಿಕೆಯೊಂದಿಗೆ ತರಗತಿಯನ್ನು ಬದಲಿಸಿ ದರು ದೃಢಕಾಯದವರು. ಇಳಿದು ಹೋಗುವಾಗ ಕೃತಜ್ಞತೆಯ ಮುಗುಳು ನಗೆ ಹೊರಸೂಸಿ ಉಪಶಮಿಸಿತು ನೊಂದವನನ್ನು. ತೆರವಾದ ಸ್ಥಳವೊಂ ದನ್ನು ಹುಡುಕಿ ತನ್ನ ಇಲ್ಲಿಯವರೆಗೆ ನಡೆದ ತಪಸ್ಸಿನ ಪ್ರತಿಫಲವನ್ನು ಪಡೆ ದನು ತರುಣ. ಮುಂಬೆಳಗಿನ ಬಂಡಿಯ ಪ್ರವಾಸ, ಬಾವಿಯು ಸ್ನಾನ, ಹುರುಪಿನ ವನಭೋಜನ, ಗಾಡಿಯೊಳಗಿನ ಏಕಾಂಕ ನಾಟಕ ಇವೆಲ್ಲ ಮೂಲೆ ಯಲ್ಲಿ ಒರಗಿದ ಚಿಕ್ಕಯ್ಯನನ್ನು ಹಗಲು ನಿದ್ದೆಗೆಳೆದವು. ಹೃದಯವನ್ನೇ ಸೂರೆಗೊಂಡ ತನ್ನೂರಿನ ಚಿತ್ರಗಳು ಮನಸ್ಸಿನಲ್ಲಿ ಮೂಡಿ ಸುಳಿದವು. ಈ ಸವಿನಿದ್ರೆಗೆ ಭಂಗ ಬಂದುದು ಕರ್ಜಗಿಯ ನೀರುಣಿಸುವ ನಿಲ್ದಾಣದಲ್ಲಿ. ಇಳಿದು ಮುಖ ತೊಳೆದು ಹಿಂದಿನ ಕೊನೆಯ ಡಬ್ಬಿಯ ಪ್ರಶಸ್ತ ಏಕಾಂತಕ್ಕೆ

ಹೋದನು. ಸಣ್ಣ ಡಬ್ಬಿ ತಾನೊಬ್ಬನೆ. ಕೈಚೀಲದಿಂದ ಒಂದು ಕಾದಂಬರಿಯನ್ನು ತೆಗೆದುಕೊಂಡನು.

ಇತ್ತ ಬಂಡಿಯಲ್ಲಿ ಮುದ್ದಣ್ಣ ಚಿಕ್ಕಯ್ಯನ ಗುಣಗಾನದಿಂದ ತನ್ನ ಹಾಗೂ ಹಣ್ಣುದನಿಯ ಅಜ್ಜಂದಿರ ಸಂಬಂಧಕ್ಕೆ ಹಾರಿ ತಮ್ಮ ಪೂರ್ಣ ಪೂರ್ವ ಬಾಳಿನ ಕತೆಗೆ ಕೈಹಾಕಿದನು. ಕೇಳುವವರಲ್ಲಿಯೂ ಆದರಪೂರ್ಣವಾದ ಉತ್ಸುಕತೆಯಿತ್ತು. ಕೆಲವು ಗ್ರಾಮ್ಯ ಶಬ್ದಗಳನ್ನೂ ಪೂರ್ಣ ವಿವರಿಸಲಾಗದ ಭಾವನೆಗಳನ್ನೂ ಸ್ವಲ್ಪ ಸುಧಾರಿಸಿ ಅರಳಿಸಿದರೆ ಮುಂದಿನಂತೆ ಆ ಕತೆ ಸಾಂಗವಾಗಿ ಸಾಗಿತೆನ್ನಬಹುದು.

ಇತ್ತ ಗಾಡಿಯಲ್ಲಿ ಚಿಕ್ಕಯ್ಯ 'Nocturne' (ರಾತ್ರಿ) ಎಂಬ ಕಾದಂಬರಿಯನ್ನು ತೆರೆದನು. ಅತ್ತ ಮುದ್ದಣ್ಣ ತನ್ನ ರಾತ್ರಿಯ ಕತೆಯಿಂದಲೇ ಆರಂಭಿಸಿದನು.

## ೨

"ಭಾರತ ಹುಣ್ಣಿಮೆಯ ಮರುದಿನ ಮುಚ್ಚಂಜೆ. ನಡುಹರೆಯದವನೊಬ್ಬ ಕಾಲುದಾರಿಯನ್ನು ಹಿಡಿದಿದ್ದನು. ಹೆಗಲಮೇಲೆ ಒಂದು ಹಸಿಬೆ, ಬಗಲಿನಲ್ಲಿ ಒಂದು ಕಾವಿಯ ಚೀಲ. ೩೦—೩೨ ವರ್ಷಗಳ ಹಿಂದಿನ ಮಾತು. ಸಾವಳಿಗಯ್ಯನವರೇ, ನಿಮಗೆ ೩೨ ವರ್ಷ ಅಲ್ಲವೆ?"

"ಹೌದು. ನಾನು ಹುಟ್ಟಿದ್ದು ಹಾನಗಲ್ಲ ಕುಮಾರಸ್ವಾಮಿಗಳು ಧಾರವಾಡದಲ್ಲಿ ಮೊದಲನೆಯ ವೀರಶೈವ ಮಹಾಸಭೆಯನ್ನು ಕರೆದ ವರ್ಷ. ೧೯೦೪ರಲ್ಲಿ."

"ಹಾಂ! ೩೨ ವರ್ಷಗಳ ಹಿಂದಿನ ಮಾತು ನಿಜ. ಅಂದು ನನ್ನ ಕೈ ಚಳಕಿಗೆ ಮೈ ಕಸುವಿಗೆ ಒಂದು ಒರೆಗಲ್ಲು. ಅರ್ಧಮರ್ಧ ಹಿಗ್ಗು. ಅವನ ಮುಖ ಕಾಣುವವರೆಗೆ ನೆಮ್ಮದಿಯಿಲ್ಲ. ನಾನು ಕುಳಿತ ಜಾಲಿಯ ನೆರಳನ್ನು ಬಿಟ್ಟು ಸುತ್ತು ನೋಡಿ ಹೊಲದಲ್ಲಿ ಅಡ್ಡಬಿದ್ದು ಅವನನ್ನು ಕೂಡಿಕೊಂಡೆನು. ಅವನು ಯೋಚನೆಯಲ್ಲಿ ನಡೆದವನೋ ನಡೆದೇಬಿಟ್ಟನು. ತನ್ನ ಪರಿವೆಯೇ ಅವನಿಗಿರಲಿಲ್ಲ. ಆಳು ಮಾತ್ರ ಬೀಸಲ್ಲ. ಮುಖವನ್ನು ನೋಡಿದೆನು.

ನನ್ನ ಕೈಮೀರಿದುದು ಆಗದೆಂದು ಮನಗಂಡು ಹಿಂಬಾಲಿಸಿ ಹುಸಿ ಕೆಮ್ಮಿದೆನು. ಮಿಸುಕಲಿಲ್ಲ. ನನಗೆ ತಡೆಯುವುದಾಗಲಿಲ್ಲ. "ನಿನ್ನದು ಯಾವ ಊರು?" ಎಂದೆನು ಗಡುಸಾಗಿ. 'ಆಂ!' ಎಂದು ಆಗ ತಿರುಗಿ, ನಿದ್ದೆಯಿಂದೆಚ್ಚತ್ತವನಂತೆ ಹೇಳಿದನು: 'ಲಿಂಗದಹಳ್ಳಿ.'

"ಯಾವ ಊರಿಗೆ?"

"ಅಬಲೂರಿಗೆ!" ಮೊದಲಿನಂತೆ ಹೆಜ್ಜೆ ಹಾಕಿದನು. ಮತ್ತೊಮ್ಮೆ ಸುತ್ತು ನೋಡಿದೆನು. ಬೆಳದಿಂಗಳಿನ ಹುಚ್ಚುಕಳೆ ಕಣ್ಣಿಗೆ ತುಂಬಿತು.

"ಸುಣ್ಣ ಇದೆಯೊ?" ಎಂದೆನು. 'ನನ್ನಲ್ಲಿ ಇಲ್ಲವಪ್ಪಾ.' ಅವನ ಮಾತಿನಲ್ಲಿ ನಮ್ಮ ಸಂಭಾಷಣೆ ಅನವಶ್ಯವೆಂದು ಬೇಸರ ಕೈಯೆತ್ತಿ ಹೇಳುತ್ತಿತ್ತು. ಅಂದಿಗೆ ನಾನು ಹುಟ್ಟಿ ಇಪ್ಪತ್ತುನಾಲ್ಕು ವರ್ಷ. 'ಕಲಿವೀರಪ್ಪ' ಎಂದರೆ ಸುತ್ತು ನಾಡು ಹೆದರಿ ಹಿಕ್ಕೆ ಹಾಕುತ್ತಿತ್ತು. ನನ್ನವಳು ತೀರಿಕೊಂಡು ಎರಡು ವರ್ಷ ಆಗಿತ್ತು. ಆ ಎರಡು ವರ್ಷ ನನ್ನ ಆಳವಿಗೆ ಬಂದವನ ನಾಲಿಗೆ ಅಂಗಳಕ್ಕೆ ಅಂಟಿಕೊಂಡು ಗಂಟಲು ಆರಿ 'ಆ' ಅನ್ನಲಿಕ್ಕೆ ಬರುತ್ತಿದ್ದಿಲ್ಲ. ಅಂದು ಅವನು ಬಾಯ್ಬಿಡುವದಂತಿರಲಿ, ಹೊರಳಿ ಕಣ್ಣೆತ್ತಿ ನೋಡಲಿಲ್ಲ. ಇರಲಿ. ಒಂದು ಕೈತೋರಿಸಿಬಿಡುವಾ ಎಂದೆನು. ಹಸಿಬೆಯನ್ನೆಳೆದು, 'ಏನಿದು?' ಎಂದಾಗ ಅವನಿಗೆ ಅರಿವು.

'ತಾವೇನು? ತೆಗೆದುಕೋ ಅಪ್ಪಯ್ಯ. ಹಸಿಬೆಯಲ್ಲಿ ಕೊಬ್ಬರಿ, ಉತ್ತತ್ತಿ, ಹೊಸ ಅಂಗಿ ಅರಿವೆ ಮತ್ತಿನ್ನೇನೋ ಇವೆ. ಈ ಕಾವಿಚೀಲದಲ್ಲಿ ಈ ಪಿಟೀಲು ಈ ಪುರಾಣ.' ಎಲ್ಲವನ್ನು ಮುಂದಿಟ್ಟನು. ಏನೋ ಯೋಚಿಸಿ ಬಗಲಕಸಿ ಅಂಗಿಯೊಳಗಿಂದ ಐದು ರೂಪಾಯಿಗಳನ್ನು ತೆಗೆದು ಪುರಾಣದ ಕಟ್ಟಿನ ಮೇಲೆ ಇಟ್ಟನು. ಆಯಿತು. ನೋಡುವದಿದ್ದರೆ ನೋಡಿಕೋ. ಬೆಳಗಾಗುವದರಲ್ಲಿ ಊರು ಮುಟ್ಟಬೇಕು. ನಾನು ಬರುತ್ತೇನೆ' ಎಂದು ಭರಭರನೆ ಹೊರಟುಬಿಟ್ಟನು. ನಾನು ಅವಾಕ್ಕಾದೆ. ಇದೊಂದು ಹೊಸ ಅನುಭವ. ಅವನ ನಡಿಗೆಯಲ್ಲಿ ನನ್ನ ಅಂಜಿಕೆಯ ಅವಸರವಿದ್ದಿಲ್ಲ. ತನ್ನ ಒಡವೆಯ ಹಂಗಿನ ಹಿಡಿಬಿಡಿತವಿದ್ದಿಲ್ಲ. ಅವನು ಹೊರಟಂದಿನಿಂದ ಯಾವ ಹೆಚ್ಚುಕಡಿಮೆಯೂ ಆಗಿಲ್ಲವೋ ಏನೋ ಎಂಬಂತೆ ಸರಳ ಮುನ್ನಡೆಯಿತ್ತು. ಆಶ್ಚರ್ಯದಿಂದ ಮೂಕನಾದೆನು. ಕುತೂಹಲದಿಂದ ಕೆರಳಿದೆನು. ಅನಂತರ

ದುಃಖ ಉಮ್ಮಳಿಸಿತು. ಹಸಿಬೆ ಬಾಣಂತಿಯ ಶುಶ್ರೂಷೆಗೆ ಹೊರಟಿತ್ತು. ನನ್ನವಳ ನೆನಪು ಬಾರದೆ? ಅವಳ ತಾಯ್ತನಕ್ಕೆ ನೆಮ್ಮದಿ ಪೋಷಣೆಯ ನ್ನೀಯದ್ದರಿಂದಲೆ ಅಲ್ಲವೆ ಅವಳ ಸಾವು? ಮೈ ಜುಮ್ಮೆಂದಿತು. ದಿಕ್ಕೆಟ್ಟು ಓಡಿದೆನು. ಹಿಡಿದು ನಿಲ್ಲಿಸಿದೆನು. ಮೈಯಲುಗಿಸಿ, 'ನೀನಾರು? ಅಬ ಲೂರಲ್ಲಿ ಯಾರು ನಿನ್ನವರು? ಇಂಥ ಅಪರಾತ್ರಿಯಲ್ಲಿ ಹೊರಟಿರುವದೇಕೆ? ನಾನು ಕಳ್ಳ ನಿಜ. ಆದರೆ ಸೊಕ್ಕಿದವರನ್ನು ಸುಲಿಯುವೆನು. ನಿನ್ನಂಥ ದುಡಿದುಣ್ಣುವ ಸಾತ್ವಿಕರನ್ನಲ್ಲ.'

ಒತ್ತಾಯದಿಂದ ಅವನ ಸೊತ್ತಿನೆಡೆ ಹಿಡಿತಂದೆನು. ನನ್ನ ಒರಟು ತನಕ್ಕೆ ಅವನು ಅಳಾಗಲಿಲ್ಲ. ಅವನ ಕಣ್ಣುಗಳಲ್ಲಿ ನೋವಿತ್ತು: ಮರುಕವಿತ್ತು. ಹೊಸ ಅಭಿಮಾನ ಹೊರಸೂಸಲಿತ್ತು. 'ತಮ್ಮಾ' ಎಂದನು. ನನಗೆ ಈ ಯಾವ ಕರುಳಿನ ಸಂಬಂಧ ಬೇಡವಾಗಿತ್ತು. ಸುಮ್ಮನಿದ್ದೆನು. ನನ್ನೆದುರು ಆಡಿನ ಮರಿಯಂತಿದ್ದ ಅವನು ಮುಂದೆ ಬಂದು "ಕುಳಿತುಕೋ" ಎಂದು ಅಲ್ಲಿಯವರೆಗೆ ಇಲ್ಲದ ಅಧಿಕಾರದಿಂದ ಕೈಹಿಡಿದನು. ಆಗ ಮಾತ್ರ ನನ್ನಲ್ಲಿ ಎರಡು ವರ್ಷದಿಂದ ತಡೆಹಿಡಿದ ನನ್ನ ಮನುಷ್ಯತ್ವ ರಕ್ಕಸ ಸೀಮೆಯನ್ನು ದಾಟಿತು: ಮುಗ್ಗಿತು: ಬಾಗಿತು.

ಅವರು ಮಾತು ಮೊದಲು ಮಾಡಿದರು: 'ನಾನು ಲಿಂಗದಹಳ್ಳಿಯಲ್ಲಿ ಓದಿಸುತ್ತಿದ್ದೇನೆ. ನನ್ನ ಹೆಂಡತಿ ಅಬಲೂರಿನಲ್ಲಿ ಮೂರು ದಿನಗಳ ಹಿಂದೆ ಒಂದು ಗಂಡು ಮಗುವನ್ನು ಹೆತ್ತಿರುವಳು. ನಾಳೆ ಸಂತೆ ಬಿಡುವು ಇರು ವದು. ನಾಡದು ಮುಂಜಾನೆ ತಿರುಗಿ ಬರಬೇಕು. ನನಗೆ ಒಂದು ಸರಕಾರಿ ಶಾಲೆಯಲ್ಲಿ ಕೆಲಸ ಬರುವದಿದೆ. ಅವಸರ. ಇನ್ನು, ಈ ಪುರಾಣ, ಈ ಪಿಟೀಲು, ಇವು ನನ್ನ ಗುರುಗಳು ನನಗೆ ಹಾಕಿಕೊಟ್ಟ ಉಂಬಳಿ. ಧಾತು ನಾಮ ಸಂವತ್ಸರದಲ್ಲಿ ನಾನು ಹುಟ್ಟಿದ್ದು. ಮೂರು—ನಾಲ್ಕು ತಿಂಗಳಲ್ಲಿಯೇ ಬರ ಬಂದಿತು. ವರ್ಷ ಎರಡು ವರ್ಷಗಳಲ್ಲಿಯೇ ನವೆದು ನವೆದು ನನ್ನ ತಾಯಿ-ತಂದೆಗಳು ನನ್ನನ್ನು ಒಬ್ಬ ವಿರಕ್ತರ ಕೈಯಲ್ಲಿಟ್ಟು ಕಣ್ಣುಮುಚ್ಚಿದರು. ವಿರಕ್ತರೇ ನನ್ನ ಗುರುಗಳು. ಜೋಪಾನ ಜತನಮಾಡಿ ವಿದ್ಯಾಬುದ್ಧಿ ಕಲಿಸಿ ದವರು. ನನ್ನ ತಾಯಿಯ ಮಾತಿನಂತೆ, ನನ್ನ ಇಪ್ಪತ್ತು ನಾಲ್ಕನೆಯ ವಯಸ್ಸಿನಲ್ಲಿ ಮದುವೆ ಮಾಡಿದರು. ತಿಂಗಳು ತುಂಬುವದರೊಳಗಾಗಿ

ಲಿಂಗೈಕ್ಯರಾದರು. ಇಂದಿಗೆ ನಾಲ್ಕು ವರ್ಷಗಳಾದವು. ಅಂದೇ ನನ್ನ ಆ ಮಠದ ಸಂಬಂಧ ತಪ್ಪಿತು. ನನಗೂ ದೇವರು ಬೇರೆ ದಾರಿ ತೋರಿಸ ಬಹುದೆಂದು ಅಲ್ಲಿಂದ ಹೊರಬಿದ್ದೆನು. ಇಲ್ಲಿ ಶಾಲೆಮಾಡಿದೆನು. ನನಗೀಗ ಒಬ್ಬ ಚೊಚ್ಚಲ ಮಗಳು ನಾಲ್ಕು ವರ್ಷದವಳು ಇರುವಳು. ಈಗ ಒಂದು ಗಂಡು ಆಗಿದೆ. ನನ್ನ ಹೆಂಡತಿಯು ತನ್ನ ತಾಯಿ ಹಾಗು ಅವಳ ಹದಿನಾರು ವರ್ಷದ ತಮ್ಮನ ಸಂಗಡ ಈ ಮೂರು ತಿಂಗಳು • ಇರಹತ್ತಿದ್ದಾಳೆ. ನಮ್ಮ ಮಾವಂದಿರು ಇದೇ ವರುಷ ವಿಷಮುಜ್ವರದಿಂದ ಕಣ್ಮರೆಯಾದರು. ನನ್ನ ಹೆಂಡತಿಗೆ ಈಗ ಇಪ್ಪತ್ತು ವಯಸ್ಸು. ನನಗೆ ಇಪ್ಪತ್ತೆಂಟು. ನನ್ನ ಹೆಸರು ಮಧುವಯ್ಯ. ವಿರಕ್ತರು ಇಟ್ಟ ಹೆಸರು. ಇದು ನನ್ನ ಬಾಳುವೆಯ ಕಥೆ.

ನಿನ್ನ ಮನಸ್ಸು ಕರಗಿಸಿ ಈಗಿನ ಕಾರ್ಯ ಸಾಧಿಸಿಕೊಂಡು ಸಾಗ ಬೇಕೆಂದು ಹೇಳಿದ್ದಲ್ಲ. ಅದೇಕೋ ನನ್ನದನ್ನು ಒಬ್ಬರಲ್ಲಿ ಹೇಳಿ ಮನಸ್ಸು ಹಗುರು ಮಾಡಿಕೊಂಡು ಹೋಗಬೇಕೆಂದೆನಿಸಿತು. ನಿನ್ನದನ್ನು ಕೇಳಿ ನನ್ನ ಮನಸ್ಸಿನ ಸಂಶಯ ಪರಿಹಾರಮಾಡಿಕೊಳ್ಳಬೇಕೆಂದು ಅನಿಸಿದೆ. ನಿನ್ನ ರೀತಿ-ನೀತಿಗಳನ್ನು ನೋಡಿದರೆ ನಿನಗೆ ಬಾಳುವೆಯಲ್ಲಿ ಎಲ್ಲಿಯೋ ಒಂದು ತೀವ್ರವಾದ ಪೆಟ್ಟು ಬಿದ್ದಿದೆ: ಪರಿಸ್ಥಿತಿ ಬರೆ ಎಳೆದಿದೆ ಎಂದು ನನಗೆ ಹೊಳೆ ದಿದೆ. ಅಂತೆಯೇ ಮುಂದಿನದನ್ನೆಲ್ಲ ಬದಿಗಿರಿಸಿ ತಳವೂರಿದ್ದೇನೆ. ಇದೇನು ಉಪಾಧ್ಯಾಯಪತನ ಎನ್ನಬೇಡ ನನ್ನ ಪ್ರಶ್ನೆಗಳಿಗೆ. ಮನುಷ್ಯ ಮನುಷ್ಯನಿಗೆ ಕೇಳದೆ ಗಿಡಮರಗಳನ್ನು ಮಾತಾಡಿಸಬಹುದೆ?'

ಈ ಮಧುವಯ್ಯ ಆಗಳೆ ನನ್ನ ಅಂತರಂಗದಲ್ಲಿ ತಂತಿಗಳನ್ನು ಮೀಟಿ ಮನಸ್ಸು ಒಂದೆಡೆ ನೆಡುವಂತೆ ಒಂದೇಸವನೆ ಸುವ್ವಿ ಹಾಡಲಿಕ್ಕೆ ಹತ್ತಿದ. ಬೆಳದಿಂಗಳಿನ ಹುಚ್ಚು ಹರಿದು ನಿಚ್ಚಳವಾಗಿ, ಸುಗ್ಗಿ ಮುಗಿದ ಹೊಲಗಳ ಹಾಳಿಗಳ ಮೇಲೆ ಹಾಸಿತ್ತು. ಎದುರುಬದುರಾಗಿ ಹಳೆಯ ಸ್ನೇಹಿತರಂತೆ ಮೈಚಾಳಿಬಿಟ್ಟು ಮನೆಯ ಅಂಗಳದಲ್ಲಿ ಕುಳಿತಂತೆ ಕುಳಿತಿದ್ದೆವು: ನನ್ನ ಅಂದಿನ ಮಾತುಗಳಲ್ಲಿ ಒಪ್ಪಿಗೆಯ ಓರಣವಿತ್ತು:

'ನನ್ನ ಊರು ಗುತ್ತೂರು. ನನ್ನ ಹಿರಿಯರು ಒಕ್ಕಲಿಗರು. ನನ್ನ ಮದುವೆಯಾದುದು ನನ್ನ ಹದಿನೆಂಟನೆಯ ವಯಸ್ಸಿನಲ್ಲಿ. ಆರು ವರ್ಷ

ಗಳ ಹಿಂದೆ. ನನ್ನವಳ ಊರು ಅಮರಾವತಿ. ನಾನು ಆಕೆಯನ್ನು ಮೆಚ್ಚಿ ಮದುವೆಯಾದೆನು. ಅವಳ ತವರಿನವರು ಬಡವರು. ಎರಡು ವರ್ಷ ಅತಿ ಪ್ರೇಮದಿಂದ ಬಾಳುವೆ ಸಾಗಿಸಿದೆವು. ಮೆಚ್ಚಿನ ಭರದಲ್ಲಿ ಎಷ್ಟೋ ಹೊಲ ಗೆಲಸ ಮುಪ್ಪಿನ ತಂದೆ–ತಾಯಿಗಳ ಮೇಲೆ ಬಿತ್ತು. ಅವರು ಒಳಗೆಯೇ ಕೊರಗಿ ನನ್ನ ಮದುವೆಯಾದ ಮೂರನೆಯ ವರ್ಷಕ್ಕೆ ತೀರಿಕೊಂಡರು. ನನ್ನ ಮನಸ್ಸು ನೊಂದಿತು. ನೊಂದ ಮನಸ್ಸು ಮೇಟಿಗೆ ತಿರುಗಲಿಲ್ಲ. ಮೂರೆಲೆ ಆಟಕ್ಕೆ ತಿರುಗಿತು. ಆಗ ನನ್ನ ಹೆಂಡತಿ ತಾಯಿಯಾಗುವವಳಿದ್ದಳು. ನನ್ನ ಆಟ ಇದ್ದುಬಿದ್ದ ಗೇಣು ಹೊಲಕ್ಕೆ ಕಾಣೆ ತಂದಿತ್ತು. ನನ್ನ ಹೊಲವನ್ನು ಬರೆಯಿಸಿಕೊಂಡ ಶ್ರೀಮಂತನಿಗೆ ನನ್ನ ಹೊಲ ನನಗೆ ಬಿಟ್ಟು ಕೊಡಲು ಬಿದ್ದು ಬೇಡಿಕೊಂಡೆನು. ನಾನು ದುಡಿದು ಹಣವನ್ನು ಒಂದು ವರ್ಷದೊಳಗಾಗಿ ಮುಟ್ಟಿಸುವ ಭರವಸೆಯನ್ನಿತ್ತರೂ ಜುಪ್ಪೆನ್ನಲಿಲ್ಲ. ಕೈಯಲ್ಲಿ ಕಾಸಿರಲಿಲ್ಲ. ತುಂಬಾ ಬಸುರಿಯಾದ ನನ್ನವಳು ನನಗೆ ತಿಳಿಯದಂತೆ ನಸುಕಿನಲ್ಲೆದ್ದು ಮನೆಗೆಲಸಗಳನ್ನು ತೀರಿಸಿ ಹೊತ್ತೇರುವದರೊಳಗಾಗಿ ನನಗೆ ಉಣಬಡಿಸುತ್ತಿದ್ದಳು. ಆಲಸ್ಯ ನನ್ನನ್ನು ಆವರಿಸಿ ಹಗಲು ಬೇಗೆ ಎನ್ನದೆ ನಿದ್ದೆಯೊಳಗೆ ನೂಕುತ್ತಿತ್ತು. ಸಂಜೆಗೆ ಕಸ ತೆಗೆಯುವಾಗ ಆಕೆ ಬಂದು ಎಬ್ಬಿಸಿದರೆ ಎದ್ದು ಕಣ್ಣು ಕೆಂಪಗೆ ಮಾಡಿಕೊಂಡು ಕಟ್ಟೆ ಹಿಡಿದು ಕುಳಿತು ಬಿಡುತ್ತಿದ್ದೆನು. ನೆರೆಹೊರೆಯವರ ಸಂಗಡ ಹೊಲಗೆಲಸಗಳಿಗೆ ಹೋಗಿ ಬಿಸಿಲಿನಲಿ ಬೆಂದು ಮುಂಜಾನೆಯ ಬೆಲೆಗಾಳಿಗೆ ಅವಳು ಅಣಿಮಾಡುತ್ತಿದ್ದಳು. ನಮ್ಮೂರಿನ ಆ ಶ್ರೀಮಂತನ ಮೇಲಿನ ಸೇಡು ನನ್ನ ತಪ್ಪಿನ ಬೇಲಿಯನ್ನು ದಾಟದೆ ಹಾಗೆಯೆ ದಾರಿ ಕಾಯುತ್ತಿತ್ತು.

ಕೊನೆಗೆ ಒಂದು ದಿನ ಹಾಸಿಗೆ ಹಿಡಿದಳು. ಊಟದ ಹೊತ್ತಿಗೆ ಅವಳ ನೆನಪಾಯಿತು. ಒಳಹೊಕ್ಕೆನು. ಪಡಸಾಲೆಯಲ್ಲಿ ಬಿಚ್ಚಿದ ಹಾಸಿಗೆ ಸುತ್ತಿರಲಿಲ್ಲ. ಬಾಗಿ ನೋಡಿದಾಗ ನನ್ನ ಕಣ್ಣಿನ ಪರೆ ಕಳಚಿತು. ಮುಗಿಬಿದ್ದು ಎತ್ತಿಕೊಂಡೆನು. ತೊಡೆಯಮೇಲೆ ಹಾಕಿಕೊಂಡೆನು. ಕಣ್ತೆರೆದು ನನ್ನ ಹೆಗಲಿನ ಮೇಲೆ ಕೈಯಿಟ್ಟು ಕೆನ್ನೆಯನ್ನೊಮ್ಮೆ ಮುಟ್ಟಿ ನಿತ್ರಾಣದಿಂದ ಹಾಗೆಯೇ ಹಿಂದಕ್ಕೆ ಒರಗಿದಳು. ಬಳಬಳನೆ ದುಃಖ ಅವಳ ಗಲ್ಲಗಳಮೇಲೆ ಉದುರಿತು. ಬರಸೆಳೆದು ಒಮ್ಮೆ ಎದೆಗೆ ಅವಚಿಕೊಂಡೆನು. ಅವಳು

ಮಿಸುಕಲಿಲ್ಲ. ಅವಳ ಹಣೆ ನನ್ನ ಎದೆಗೆ ಸೋಂಕಿದಾಗ ಬರೆ ಇಟ್ಟಂತಾಯಿತು. ಯಾರನ್ನಾದರೂ ನೆರವಿಗೆ ಕರೆಯಲು ಬಯಸಿ ಕೆಳಗಿರಿಸಲು ಹೋದೆನು. ಕಣ್ತೆರೆದು ತೆಕ್ಕೆಬಿದ್ದು ಬಿಡಲಿಲ್ಲ. ಇಂಗಿತವನ್ನರಿತೆನು. ಕೊನೆಯ ಗಳಿಗೆಯನ್ನು ಏಕಾಂತದಲ್ಲಿ ಕಳೆಯಲು ಬಯಸುವಳೆಂದು. ಹಸುಗೂಸಿನಂತೆ ನಿದ್ದೆಹೋದಳು ನಾನೂ ಹಾಗೆಯೇ ಗೋಡೆಗೆ ಒರಗಿದೆ. ಜೊಂಪು ಹತ್ತಿತು. ನಾಲ್ಕು ನಿಮಿಷ ಕಳೆದಿರಲಿಕ್ಕಿಲ್ಲ. ಫಕ್ಕನೆ ಹೊಡೆದೆಬ್ಬಿಸಿದಂತಾಯಿತು. ಜಲಜಲನೆ ಬೆವತುದರಿಂದ ನನ್ನ ತೊಡೆಗೂ ತಂಪು ಏರಿತ್ತು. ಶೀತವನ್ನು ಒರೆಯಿಸಲು ಎದೆಗೆ ಕೈಯಿಟ್ಟೆನು. ಎದೆಯ ಗೂಡು ಬರಿದೋ ಬರಿದು. ಪ್ರಾಣಪಕ್ಷಿ ಹಾರಿತ್ತು. ಅವಳನ್ನು ನಿಟ್ಟಿಸಿ ನೋಡಿದೆನು. ಕಣ್ಣಿಗೆ ಮಂಕು ಬರುವನಕ ನೋಡಿದೆನು. ಮಿಂಚಿನಂತೆ ಮುಂದಿನ ದಾರಿ ಹೊಳೆಯಿತು. ತಲೆ ಕೊಡಹಿ ಮೇಲಕ್ಕೆದ್ದೆನು. ಯಾರು ಬಂದರು, ಯಾರು ಬರಲಿಲ್ಲ. ಎಲ್ಲವನ್ನು ನುಂಗಿಕೊಂಡು ಅವಳನ್ನು ಮಣ್ಣಿಗಿಟ್ಟು ಬಂದೆನು. ಅಂದಿನಿಂದ ಎರಡು ವರ್ಷ ಕಳೆದಿದ್ದೇನೆ. ಭಾರತಹುಣ್ಣಿಮೆಯ ಮರುದಿನವಲ್ಲವೆ ಇಂದು? ಇದೇ ಅವಳ ಮಣ್ಣಿನ ದಿನ. 'ಒಂಟಿಬಡಕ ಸುಂಟರಗಾಳಿ' ನಾನು. ಆ ಸಾವುಕಾರನಿಗೆ ಒಮ್ಮೆ 'ಚಳ್ಳಹಣ್ಣು ತಿನಿಸಿ'ದ್ದೇನೆ. ಮೂರು ನಾಲ್ಕು ಹೇಳಿಕೊಳ್ಳುವಂಥ ಕೈಚಳಕು ಮಾಡಿದ್ದೇನೆ. ಗೊತ್ತುಗುರಿಯಿಲ್ಲದೆ ತಿಂದುಟ್ಟು ತೇಗಿದ್ದೇನೆ. ಇಲ್ಲಿಯವರೆಗೆ ಏನೂ ತಟ್ಟಿಲ್ಲ. ಒಮ್ಮೆ ಕಣ್ನೀರು ಕಾಣುವದು ತಪ್ಪಿದ್ದಲ್ಲ.

ಈ ಹೊತ್ತು ಆಕೆಯ ನೆನಪು ಬಾರದಿದ್ದರೆ ನಾನು ನಿಮ್ಮ ಸಂಗಡ ಸಣ್ಣ ಹುಡುಗನಂತೆ ಬೆಳದಿಂಗಳಲ್ಲಿ ಕಥೆ ಕೇಳುವದಕ್ಕೆ ಹೇಳುವದಕ್ಕೆ ಕುಳಿತುಕೊಳ್ಳುವದು ತಿಳಿಯುತ್ತಿತ್ತು. ಇಂದು ಅದೇನೋ ಮನಸ್ಸು ತಿಳಿ ಆಗಿದೆ. ಅದು ಯಾವ ಪುರಾಣ ಅಯ್ಯನವರೆ? ನಿಮ್ಮ ಪಿಟೀಲು ಸ್ವಲ್ಪ ನುಡಿಸುತ್ತೀರಾ? ಹೊತ್ತಾದರೆ ನಿಮ್ಮನ್ನು ಮಸುಕು ಹರಿಯುವದರೊಳಗಾಗಿ ಊರು ಮುಟ್ಟಿಸಿ ಬರುತ್ತೇನೆ,' ಎಂದೆನು.

'ಆಗಲಪ್ಪಾ. ನಿನ್ನ ಮನಸ್ಸಿನ ದುಗುಡ ಕಳೆದು ಶಾಂತಿ ದೊರೆಯುವದೆಂದರೆ ನಾನು ಒಂದು ಗಳಿಗೆ ಕೈತೀಡುವದು ಏನೂ ದೊಡ್ಡದಲ್ಲ. ಇದು

ಬಸವಪುರಾಣ. ಶಿವನು ಒದಗಿಸಿಕೊಟ್ಟರೆ ಒಮ್ಮೆ ನಿನ್ನೆದುರು ಅದನ್ನು ಹಾಡುವೆನು. ಈಗ ನೀನು ಒಬ್ಬೊಂಟಿಗ. ಆದರೆ ಸಂಸಾರದಲ್ಲಿ ಬೆಂದು ಬಳಲಿದವನು. ಸಂಸಾರದ ದಂದುಗವ ಮುನ್ನ ತಿಳಿದು ಒಬ್ಬೊಂಟಿಗರಾದ ನಮ್ಮ ಶರಣರ ನುಡಿಗಳನ್ನು ನುಡಿಸುವೆನು, ನುಡಿಯುವೆನು,' ಎಂದು ನಾನು ಬಿಚ್ಚಿಕೊಟ್ಟ ಪಿಟೀಲನ್ನು ಎತ್ತಿ ತಂತಿಗಳನ್ನು ಸರಿಪಡಿಸಿದರು. ಎರಡು-ಮೂರು ಸಾರೆ ತಿಕ್ಕಿ ತೀಡಿದರು. ಮೆಲ್ಲನೆ ದನಿಯನೆತ್ತಿದರು. ಹಾಡು ಉಕ್ಕಿ ರಂಗಿಗೆ ಬಂತು.

"ಆಡುತೈದಳೆ ಮಾಯೆಯೆಂಬ ಕಾಮಿನಿ ಬಿಡದೆ । ನೋಡಿ ಬಲ್ಲವರು ಸಂಸಾರ ನಾಟಕವ" ಎಂಬ ಪಲ್ಲವಿ. ನಾನರಿಯದಂತೆ ನನ್ನ ಮುಂಗೈ ನನ್ನ ತೊಡೆಯಮೇಲೆ ತಾಳ ಹಾಕುತ್ತಿತ್ತು. ನಾನು ತೂಗಿ ತೂಗಿ ಕಣ್ಣು ಮುಚ್ಚಿದ್ದೆನು. ಮೆಲ್ಲನೆ ಹಾಡು ಕೊನೆಗಂಡಿತು. ಕಣ್ತೆರೆದೆನು. 'ಸುಖವಾಯಿತೆ?' ಎಂದರು. 'ಶರಣರು ನೀವು' ಎಂದೆನು. 'ನಾನಾವ ಗಿಡದ ತೊಪ್ಪಲು' ಎಂದು ಪುನಃ ತೀಡಿದರು, ಹಾಡಿದರು, ನನ್ನನ್ನು ಗೆದ್ದರು. 'ಕಾಡಲೇಕೆ ನರರುಗಳನು' ಎಂಬ ಹಾಡು ಅವರು ಅಂದು ಹಾಡಿರದಿದ್ದರೆ ನನ್ನ ಬಾಳು ಇಂದಿನ ಅಂದವನ್ನು ಹೊಂದುತ್ತಿರಲಿಲ್ಲ. ಅವರ ನಿಚ್ಚಳ ಬಾಳಿಗೆ ನಾನು ಸಂಪೂರ್ಣ ಮನಸೋತೆ. ಹಾಡು ಮುಗಿಯುತ್ತಲೇ ಅವರ ಪಿಟೀಲು ಹೊದಿಕೆಯಲ್ಲಿ ಹಾಕಿ ಬಗಲಿನಲ್ಲಿರಿಸಿಕೊಂಡು ಅವರ ಹಸಿಬೆಯನ್ನು ಹೆಗಲಿಗೇರಿಸಿ ನಿಂತೆನು. ಅಂದೇ ನಾನು ಅವರ ಕಿಂಕರ. ಅವರ ಪಾದಸೇವೆ ನನಗೆ ಮೀಸಲೆಂದು ನಾನು ಅವರಿಗೆ ಕಂಡತುಂಡಾಗಿ ಹೇಳಿದೆನು. ಹಾಲಿನಲ್ಲಿ ಹಾಕಲಿ, ನೀರಿನಲ್ಲಿ ಹಾಕಲಿ. 'ಬಸವನ ಮಾತು ನಿನ್ನ ನಡೆನುಡಿಯಲ್ಲಿ ನಡೆಸಿಕೊಟ್ಟರೆ ಸಾಕು. ಶಿವಕೊಟ್ಟದ್ದನ್ನು ಹಂಚಿ ಉಣ್ಣುವಾ. ಬಾ, ನನಗೊಬ್ಬ ತಮ್ಮನಾಗಿ ಇರುವಿಯಂತೆ,' ಎಂದು ಆ ರಾತ್ರಿ ನನ್ನ ಕೈ ಹಿಡಿದವರು ಇಂದಿಗೂ ಕಾಪಾಡಿದ್ದಾರೆ. ಅಂದೇ ರಾತ್ರಿ ನಾನು ಅವರ 'ಮುದ್ದ'ನಾದೆ.

ಆ ರಾತ್ರಿ ಆಭಲೂರಿಗೆ ಹೋಗಿ ಬಂದು ಹಗಲಿದ್ದು ಪುನಃ ರಾತ್ರಿ ಊಟ ತೀರಿಸಿಕೊಂಡು ಬೆಳದಿಂಗಳಿಗೆ ಹೊರಹೊರಟೆವು. ದಾರಿಯಲ್ಲಿ ನಾನು ಅಲ್ಲಿಯವರೆಗೆ ಭಾವಿಸಿದ ಮೂಕ ಬಸವಣ್ಣ ಕಲ್ಯಾಣದ ಬಸವಣ್ಣನಾಗಿ ಎಲ್ಲರಿ

ಗಾಗಿ ಹೇಗೆ ಪ್ರಾಣಬಿಟ್ಟನೆಂಬುದನ್ನು ವಿಸ್ತಾರವಾಗಿ ಹೇಳಿದರು. ತಾವು ವಿರಕ್ತರ ಸೇವೆಯನ್ನು ಮಾಡಿ ಗಳಿಸಿದ ವಿದ್ಯಾಸಂಪತ್ತು ತಮ್ಮ ಚಿರ ಸೊತ್ತು ಎಂದು ಹೇಳಿದರು. ವಿರಕ್ತರು ತಮ್ಮ ನೆನಪಿಗಾಗಿ ಕರಡಿಗೆಯಲ್ಲಿ ಹಾಕಿಕೊಟ್ಟ ಒಂದು ಪಚ್ಚಲಿಂಗ, ಒಂದು ವಜ್ರದ ಉಂಗುರ, ಒಂದು ಆಣಿ ಮುತ್ತಿನ ಜಪಮಾಲೆ, ಇವೆಲ್ಲವೂ ಒಂದು ದಿನ ಕಳವಾಗಿ ಹೋದ ಪ್ರಸ್ತಾಪ ವನ್ನೆತ್ತಿ, ತಮ್ಮ ಗುರುವಿನ ಕುರುಹು ತಮ್ಮ ಅಲಕ್ಷ್ಯಕ್ಕೆ ತುತ್ತಾಯಿತೆಂದು ವ್ಯಥೆಪಟ್ಟರು. ಅವರ ಹಳಹಳಿ ಅವುಗಳ ಬೆಲೆಗೆ ಇರಲಿಲ್ಲ, ಹಿಂದಿನ ನೆನಪಿಗೆ ಮಾತ್ರ.

ನಾವು ಲಿಂಗದಹಳ್ಳಿಗೆ ಮುಟ್ಟಿದ ದಿನವೇ ಸಾಯಂಕಾಲ ಅಯ್ಯನವ ರನ್ನು ಆರೇಮಲ್ಲಾಪುರದ ಸರಕಾರಿ ಶಾಲೆಗೆ ನಿಯಮಿಸಿದ್ದು ತಿಳಿಯಿತು. ಒಂದು ವಾರದೊಳಗಾಗಿ ಅಲ್ಲಿರಬೇಕಾಗಿತ್ತು. ಎರಡು ದಿನ ಲಿಂಗದಹಳ್ಳಿ ಯಲ್ಲಿದ್ದು, ನಾನು ೨-೩ ದಿನಗಳಲ್ಲಿ ಬರುವದಾಗಿ ತಿಳಿಸಿ ಗುತ್ತೂರಿಗೆ ಹೋದೆನು. ಇದ್ದ ಒಂದು ಮನೆಯನ್ನು ಮಾರಿ, ಮನೆಬಳಕೆಯ ಎಲ್ಲ ಸಾಮಾನುಗಳನ್ನು ಭಾಡಿಗೆ ಬಂಡಿಯಲ್ಲಿ ಹೇರಿಕೊಂಡು ಅವರು ಹೊರಡುವ ಮುನ್ನದಿನವೇ ಲಿಂಗದಹಳ್ಳಿಗೆ ಬಂದೆನು. ಮರುದಿನ ಬಂಡಿಯನ್ನು ಗೊತ್ತುಮಾಡಿಕೊಂಡು ಎಲ್ಲ ಸಾಮಾನುಗಳೊಂದಿಗೆ ಸಾಯಂಕಾಲ ಆರೇ ಮಲ್ಲಾಪುರವನ್ನು ಸೇರಿದೆವು.

ಲಿಂಗದಹಳ್ಳಿಯ ಯಜಮಾನರೊಬ್ಬರು ತಮ್ಮ ಪರಿಚಯಸ್ಥರ ಹೆಸರು ಹೇಳಿದ್ದರು. ಬಂಡಿಯನ್ನು ಊರಮುಂದೆ ನಿಲ್ಲಿಸಿದೆವು. ಅಯ್ಯನವರು ಅವರನ್ನು ಹುಡುಕಿಕೊಂಡು ಬಂದರು. ಎರಡು ದಿನಗಳ ಮಟ್ಟಿಗೆ ಬೆಟ್ಟ ದಯ್ಯನ ಗುಡಿಯಲ್ಲಿ ಬಿಡಾರವಿಳಿದೆವು. ಕೋಟೆಯಲ್ಲಿರುವ ಆ ಸಾವುಕಾರರ ಮನೆಯಲ್ಲಿ ಊಟ, ಗುಡಿಯ ನಿದ್ದೆ. ಅಯ್ಯನವರು ಶಾಲೆಗೆ ಹುಡುಗರನ್ನು ಕೂಡಿಸುವ ಕೆಲಸದಲ್ಲಿದ್ದಾಗ ನನಗೆ ಬೇಸರ. ಹಾಗೆ ಊರಲ್ಲಿ ಅಡ್ಡಾಡಿದೆನು. ಊರಹೊರಗೆ ದಕ್ಷಿಣ ದಿಕ್ಕಿಗೆ ಒಂದು ದಿನ್ನೆಯ ಮೇಲೆ ಒಂದು ಕಣ ಮಾರು ವದಿದೆಯೆಂದು ತಿಳಿದು ಬಂದಿತು. ನನ್ನಲ್ಲಿದ್ದ ದುಡ್ಡಿನೊಳಗಿಂದ ಕಣವನ್ನು ಕೊಂಡುಕೊಂಡೆನು. ಎರಡು ಆಳುಗಳನ್ನು ಕರೆದುಕೊಂಡು ಮುಳ್ಳು ಹಚ್ಚಿ ದೆನು. ಒಂದು ಸಣ್ಣ ನೆರಕೆ ಕಟ್ಟಿ ಅಣಿಮಾಡಿದೆನು. ನಂತರ ಒಂದು ದಿನ

ಅಯ್ಯನವರನ್ನು ಅಲ್ಲಿಗೆ ತಿರುಗಾಡುವ ನೆವದಿಂದ ಕರೆತಂದು, ಕಣದ ಮನೆಯನ್ನು ತೋರಿಸಿ, 'ಇದು ನಿಮಗೆ ಒಗ್ಗಬಹುದೋ?' ಎಂದೆನು.

'ನನಗೆ ಅರಮನೆ ಬೇಕೇನು?' ಎಂದು, ಸ್ವಲ್ಪ ನಿದಾನಿಸಿ, 'ಇದು ಯಾರದು? ಹೊಸದಾಗಿ ಇರಲಿಕ್ಕೆ ಕಟ್ಟಿಕೊಂಡಂತೆ ಕಾಣುತ್ತದೆ,' ಎಂದರು.

'ಒಪ್ಪಿಗೆ ಇದ್ದರೆ, ಅದು ನಿಮ್ಮದೇ' ಎಂದೆನು. 'ಹಾಂ!' ಎಂದು ಕಣ್ಣರಳಿಸಿದರು. ನಂತರ, ನಡೆದುದೆಲ್ಲವನ್ನು ಹೇಳಿದೆನು. ಮರುಮಾತಾಡದೆ ನನ್ನ ಮುಂಗೈ ಅದುಮಿ ಸರಸರನೆ ಊರೊಳಗೆ ಹೋದರು. ಆ ಒಂದು ಸ್ಪರ್ಶದಲ್ಲಿ ಸಾವಿರ ಮಾತುಗಳ ಕೋಲಾಹಲವಿತ್ತು."

ಎಲ್ಲವನ್ನು ನನ್ನ ಒಲವಿಗೆ ಬಿಟ್ಟರು. ಮರುದಿನ ಶಿವರಾತ್ರಿ. ನಾನೊಬ್ಬನೆ ಎಲ್ಲವನ್ನು ಗುಡಿಯಿಂದ ತಂದು ಹೊಂದಿಸಿದೆನು. ಹೆಚ್ಚಿನದೇನೂ ಇದ್ದಿಲ್ಲ. ಒಂದು ಜಗುಲಿ ಮಾತ್ರ ತುಂಬಿತು. ಕಣವನ್ನೆಲ್ಲ ಸಾರಿಸಿದ್ದೆನು. ಒಂದು ಗುಡಾರವನ್ನೂ ನಾಲ್ಕಾರು ಎರವು ತಂದ ಕಂಬಳಿಗಳನ್ನೂ ಹಾಸಿ ಸಾಯಂಕಾಲ ಸಾವುಕಾರರಿಗೆ ಸೂಚನೆ ಕೊಟ್ಟೆನು. ಅವರು ಅಯ್ಯನವರಿಗೆ ಬಿನ್ನವಿಸಿಕೊಂಡರು. ನನ್ನ ಕಡೆಗೆ ಒಮ್ಮೆ ಮುನಿಸಿನಿಂದ ನೋಡಿ ನಕ್ಕು ಒಪ್ಪಿಕೊಂಡರು. ಸಾವುಕಾರರೇ ನಿಂತು ಎರಡು ಮೂರು ದೀವಟಿಗೆಗಳನ್ನು ಕೊಡಿಸಿದರು. ಆಳುಗಳು ಊರೊಳಗಿನ ಜನಗಳಿಗೆ ಪುರಾಣಕ್ಕೆ ಬರ ಹೇಳಿದರು.

ರಾತ್ರಿ ಎರಡು ತಾಸಿಗೆ ಆರಂಭಿಸಿದ ಪುರಾಣ ಸರಿ ರಾತ್ರಿಯವರೆಗೆ ನಡೆಯಿತು. ಪುರಾಣ ಪಿಟೀಲು ಊರಿಗೆ ಊರನ್ನು ತಲೆದೂಗಿಸಿತು. 'ಗೆದ್ದೆನು' ಎಂದುಕೊಂಡೆನು. ಅಲ್ಲಿಯವರೆಗೆ ಶಾಲೆ ಅಂದರೆ ಮೂಗು ಮುರಿಯುತ್ತಿದ್ದ ಜನರು ಮರುದಿನ ತೆರಪಿಲ್ಲದೆ ಓದಿಸಲಿಕ್ಕೆ ಮಕ್ಕಳನ್ನು ತಂದರು.

ನಾನು ಗುಡಿಸಿಲಿನಲ್ಲಿ ಒಲೆ ಹೂಡಿದೆನು. ಸಾವುಕಾರರು ತಮಗೆ ಇತ್ತ ಮನ್ನಣೆಯನ್ನು ಮುಟ್ಟಿಸುವ ಬಗೆಗಾಣದೆ ಅಯ್ಯನವರು ಮಿಡುಕುತ್ತಿದ್ದರು. ಸೀಳುದಾರಿಯನ್ನು ಅರಸುತ್ತಿದ್ದವರಿಗೆ ಹೆದ್ದಾರಿ ದೊರೆತಂತಾಯಿತು. ಸಾವುಕಾರರು ಎಷ್ಟೇ ಆಗ್ರಹ ಪಡಿಸಿದರೂ ಒಳಗಾಗದೆ, ತಾವೂ ಸಾಯಂಕಾಲದ ಒಲೆಯನ್ನು ಉಪಚರಿಸುತ್ತಿದ್ದರು. ಒಂದು ತಿಂಗಳು ಕಳೆದು ಯುಗಾದಿ

ಬಂದಿತು. ಸುಗ್ಗಿಯ ಕಾಳುಗಳನ್ನು ಯುಗಾದಿಯ ದಿನ ಕೊಡುವುದಾಗಿ ಊರಿನವರು ಶಿವರಾತ್ರಿಯ ದಿನ ಹೇಳಿದ್ದರು. ನಾನು ಸುಮ್ಮನೆ ಕೂಡದೆ ನೆರೆಹೊರೆಯವರ ಹೊಲಗೆಲಸಗಳಿಗೂ ಸುಗ್ಗಿಯ ಉಳಿಗೆಲಸಗಳಿಗೂ ಹೋಗಿದ್ದೆನು. ಆ ರೀತಿಯಲ್ಲಿಯೂ ನಮಗೆ ಕಾಳು ಬರುವದಿತ್ತು. ವಾರಕ್ಕೆ ಒಂದಾವರ್ತಿ ಹೋಗಿ ಅಡವಿಯಿಂದ ಉರುವಲು ತಂದಿರಿಸಿದ್ದೆನು.

ಅಯ್ಯನವರು ಯುಗಾದಿಯ ಹಿಂದಿನ ದಿನವೇ ಸಾವುಕಾರರ ಬಂಡಿಯಲ್ಲಿ ಅಬಲೂರಿಗೆ ಹೊರಟರು. ಎರಡುದಿನ ತಡೆದು ಬರುವವಾಗಿ ಹೇಳಿದರು. ಅವರು ಹೋದಂದಿನಿಂದ ತಲೆಯಲ್ಲಿ ಒಂದು ವಿಚಾರ ಗುಂಯಿಗುಡುತ್ತಿತ್ತು. ಆಯುದ ಜೋಳವನ್ನೆಲ್ಲ ಎತ್ತಿದೆನು. ಕುಳಿತರೂ ನಿಂತರೂ ಸಮಾಧಾನವಿಲ್ಲ. ಗುತ್ತೂರಿನ ನನ್ನ ಮೂರು ಕೂರಿಗೆ ಹೊಲವನ್ನು ಎರಡುನೂರು ರೂಪಾಯಿಗಳಿಗೆ ಬರೆಯಿಸಿಕೊಂಡು ಅಲ್ಲಿಯ ಶ್ರೀಮಂತನು ಅದರ ಇತಿಶ್ರೀ ಮಾಡಿದ್ದ. ಆ ಹೂಟಿ ಹಾರಿಸಿದ್ದೆನು. ಅರ್ಧ ಸೇರಿನ ಮೇಲೆ ಬಂಗಾರ ದಕ್ಕಿಸಿದ್ದೆನು. ಅಯ್ಯನವರು ಬರುವದರಲ್ಲಿ ಅದನ್ನು ಮಾರಿ ಅವರ ಕೈಯಲ್ಲಿ ಇಡಿಗಂಟು ಕೊಟ್ಟರೆ ನಾನು ಪಾರಾದೆನು ಎಂದು ಗುಂಗೀಹುಳ ಅನ್ನುತ್ತಿತ್ತು. ನಿರ್ಧಾರ ಮಾಡಿದೆನು. ಒಂದು ಸಣ್ಣ ಹಿತ್ತಾಳಿಯ ಪಾತ್ರೆಯಲ್ಲಿಟ್ಟಿದ್ದ ಬಂಗಾರದ ಸಾಮಾನುಗಳನ್ನು ಹಮ್ಮೀಣಿಯಲ್ಲಿರಿಸಿಕೊಂಡು ಸೊಂಟಕ್ಕೆ ಸುತ್ತಿದೆನು. ಪಾತ್ರೆಯನ್ನು ಮೊದಲಿದ್ದಲ್ಲಿ ಹೂಳಿಟ್ಟೆನು. ಒಂದು ಬೆತ್ತದ ಪೆಟ್ಟಿಗೆಯೊಳಗಿಂದ ಒಂದು ರೇಶ್ಮೆ ರುಮಾಲು, ಒಂದು ಬಿಳಿ ಅಂಗಿ, ಒಂದು ಧಡಿ ಧೋತರ ತೆಗೆದು ಮಡಿಚಿ ಬಗಲಿನಲ್ಲಿರಿಸಿದೆನು.

ಅಷ್ಟರಲ್ಲಿಯೇ ಎದ್ದು ಅಂಬಲಿ ಮಾಡಿ ಊಟ ಮುಗಿಸಿದ್ದೆನು. ನಾಯಿಯನ್ನು ಕರೆತಂದು ಉಳಿದುದನ್ನು ಹಾಕಿದೆನು. ದಿನದಂತೆ ಚಿಲಕ ಹಾಕಿ ನಾಯಿಯನ್ನು ಬಿಚ್ಚಿ ಅಂಗಳಕ್ಕೆ ಬಿಟ್ಟೆನು. ಕಣದ ಬಾಗಿಲು ಹಾಕಿ ಹರಿಹರದ ದಾರಿ ಹಿಡಿದೆನು. ಬಿಸಿಲೇರುವದೊರಳಗಾಗಿಯೇ ಹೊಳೆಯಲ್ಲಿದ್ದೆನು. ನದೀಹರಳಹಳ್ಳಿಯ ಹತ್ತರ ಆಚೆಗೆ ದಾಟಿ ವೇಷ ಬದಲಾಯಿಸಿ ಹರಿಹರಕ್ಕೆ ಹೋದೆನು. ನನ್ನ ಮೂರೆಲೆಯ ಮಿತ್ರರಲೊಬ್ಬನಾದ ಚಿನಿವಾಲನಲ್ಲಿ ಸಾವಿರಸುಳ್ಳು ಹೇಳಿ ನನ್ನ ಒಂದು ಕಾರ್ಯವನ್ನು ಮುಗಿಸಿದೆನು. ಸಾಯಂಕಾಲ ಆಟಕ್ಕೆ ಔತಣವಿತ್ತು ಅವನೊಡನೆ ಫಲಾಹಾರವನ್ನು ತೀರಿಸಿದೆನು. ಸಂಕೇತಸ್ಥಾನ

ದಲ್ಲಿ ಕೂಡುವ ನೆವ ಹೇಳಿ ಇಳಿಹೊತ್ತಿನ ದಾರಿಯನ್ನು ಕಾಯದೆ ಊರಹಾದಿ ಯನ್ನು ಹಿಡಿದು ಜಂಗುಳಿ ದನಗಳ ಕೂಡ ಊರನ್ನು ಸೇರಿದೆನು.

ಗುಡಿಸಲಿನ ಬಾಗಿಲು ತೆರೆಯದೆ ಹೊರಗೆಯೇ ಒರಗಿಕೊಂಡೆನು. ಹಸಿದ ನಾಯಿ ಹರಿಹಾಯುತ್ತಿತ್ತು. ಅರೆಗಣ್ಣಿನಲ್ಲಿ ಎದ್ದು, ಪಣತೆ ಹಚ್ಚಿ ಅಡಿಗೆಯ ಶಾಸ್ತ್ರವನ್ನು ಮುಗಿಸಿದೆನು. ನಾಯಿಯ ಹೊಟ್ಟೆಗೆ ಹಾಕಿದೆನು. ಹಮ್ಮಿಣಿ ಯನ್ನು ಪಾತ್ರೆಯಲ್ಲಿ ಬರಿದು ಮಾಡಿದೆನು. ಅಂಗಳದಲ್ಲಿ ಒಂದು ಚಾಪೆಯ ನ್ನುರುಳಿಸಿಕೊಂಡು ಮಲಗಿದೆನು. ಮುಂಬೆಳಗಿನ ತಂಗಾಳಿಗೆ ಎಚ್ಚರ.ಅಡಿಯಲ್ಲಿ ನಾಯಿ ಮುದುಡಿಕೊಂಡಿದೆ. ಅಂತು ಯುಗಾದಿಯ ಮರುದಿನ ಕಳೆದಾಗ ನಾನು ಪೂರ್ಣ ಹಳೆಯದನ್ನು ಮರೆತುಬಿಟ್ಟೆನು. ನನ್ನವಳು ಅಂದಿನಿಂದ ಕನಸಿನಲ್ಲಿ ಎಂದೂ ಬಾರದಿದ್ದರೂ ಬಾಗಿ ಹೊಲದಲ್ಲಿ ದುಡಿಯುವ ಸತಿಯರನ್ನು ಕಂಡಾಗ ಮಾತ್ರ ತದ್ರೂಪವಾಗಿ ಎದುರು ನಿಲ್ಲುತ್ತಿದ್ದಳು. ಅದೊಂದು ಕ್ಷಣ ಮಾತ್ರ ನಾನು ಈ ಲೋಕದಲ್ಲಿರುತ್ತಿರಲಿಲ್ಲ.

ಮೂರನೆಯ ದಿನ ಮುಂಜಾನೆ ಅಯ್ಯನವರು ಬಂದರು. ಭತ್ತ, ಮೆಣಸಿ ನಕಾಯಿ, ಬಳ್ಳೊಳ್ಳಿ, ಬೆಲ್ಲ, (ನನಗಾಗಿ) ಯುಗಾದಿಯ ಬೇವು ಇಷ್ಟು ಅವ ರನ್ನು ಹಿಂಬಾಲಿಸಿದ್ದವು. ಊಟದ ನಂತರ ಪ್ರಸ್ತಾಪವನ್ನೆತ್ತಿ ನನ್ನ ಸೊತ್ತನ್ನು ಅವರೆದುರು ಇಟ್ಟೆನು. 'ಇದೆಲ್ಲಿಯದು?' ಎಂದರು. 'ನನ್ನ ಎರಡು ವರ್ಷದ ಗಳಿಕೆ' ಎಂದೆನು. 'ಅನ್ಯಾಯದಿಂದ ಬಂದುದನ್ನು ಸ್ವಾರ್ಥಕ್ಕೆ ಮುಟ್ಟಿ ಸುವದು ತಪ್ಪು' ಎಂದರು. ನನ್ನ ಹೊಲದ ಕತೆಯನ್ನು ಹೇಳಿದೆನು. 'ನಿನಗೆ ತಿಳಿದಂತೆ ಮಾಡು' ಎಂದರು. 'ನಿಮಗೆ ಕಾಣಿಕೆ' ಎಂದೆ. 'ನನ್ನ ಭಾಂಡಾರಿ ನೀನೇ ಅಲ್ಲವೆ?' ಅಂದರು. ತೆಪ್ಪಗಾದೆನು. ಕೆಲವುಕಾಲ ಸುಮ್ಮನೆ ಸಾಗಿತು. ನಂತರ, 'ನೀನು ನೊಂದುಕೊಳ್ಳಬೇಡ. ನೀನು ಮಾಡಿದ್ದಕ್ಕೆಲ್ಲ ನನ್ನ ಒಪ್ಪಿಗೆ' ಎಂದರು. ಮುಗಿಯಿತಲ್ಲ ಅವರ ಮಾತು. ನನ್ನ ಕಾರ್ಯ ಆರಂಭಿಸಬೇಕ ಲ್ಲವೆ? 'ವೈಶಾಖ ಮಾಸಕ್ಕೆ ಅಬಲೂರಿನಿಂದ ಕರೆತರುವಿರಾ?' ಎಂದೆನು. 'ನೀನು ಹೇಳಿದಂತೆ' ಎಂದರು. ಇಲ್ಲಿಯೂ ಅದೇ ಸೂತ್ರ.

ಒಂದು ವಾರ ತಡೆದು, ಮುದೇನೂರಿನಿಂದ ಬಿದಿರು,ಗಳ,ಬಂಬುಗಳನ್ನು ಹೇರಿಸಿಕೊಂಡು ಬಂದೆನು. ನಾಲ್ವರ ನೆರವಿನಿಂದ ಕಣದಲ್ಲಿಯೇ ಬದಿಗೊಂದು ಇಂಬಾಗಿ ಗಟ್ಟಿಮುಟ್ಟಾಗಿ ಚಪ್ಪರ ಹಾಕಿದೆನು. ವೈಶಾಖ ಮಾಸಕ್ಕೆ ಎಲ್ಲವೂ

ಸಜ್ಜು. ಅಬಲೂರಿನ ಸರತಿ ನನಗೆ ಬಂದಿತು. ಅಯ್ಯನವರ ಅತ್ತೆ, ಕುಟುಂಬ, ಅಳಿಯ, ಎರಡು ಮಕ್ಕಳು ಒಂದು ಬಂಡಿಯಲ್ಲಿ. ಹಿಂದೆ ಒಂದು ಆಕಳು ಅದರ ಕರು. ಇನ್ನೊಂದು ಬಂಡಿಯಲ್ಲಿ ಅವರ ಪ್ರಪಂಚದ ಬಳಕೆ ಸಾಮಾನು, ಕಾಳುಕಡಿ, ಅರಿವೆ ಅಂಚಡಿ ಮೊದಲಾದವು. ಈ ಒಂದು ಬಂಡಿ ಎರಡು ಎತ್ತುಗಳು, ಎರಡು ಎಕರೆಭತ್ತದ ಗದ್ದೆ ಇವು ಅಲ್ಲಿಯ ಆಸ್ತಿ. ಮೊನ್ನೆ ಅಯ್ಯನವರು ಬಂದಾಗ ಭತ್ತದ ಗದ್ದೆಯನ್ನು ಕೋರು ಕೊಟ್ಟಿದ್ದರು. ಆದ್ದರಿಂದ ಎರಡಂಕಣದ ಮನೆಯನ್ನು ಅಲ್ಲಿಯೇ ಒಬ್ಬರಿಗೆ ವೇಳೆಗೆ ಸರಿಯಾಗಿ ಸುಣ್ಣ—ಸಾರಣೆ ಕಾಣಿಸಲೆಂದು ವಾಸಕ್ಕೆ ಒಪ್ಪಿಸಿದ್ದರು.

ಬಸವಣ್ಣನ ಹಬ್ಬದ ಹಿಂದಿನ ಸಾಯಂಕಾಲ ನಾವು ಆರೇಮಲ್ಲಾಪುರವನ್ನು ಸೇರಿದೆವು. ಅಯ್ಯನವರು ಬಿಸಿನೀರು ಕಾಸಿ, ಅನ್ನಕ್ಕೆ ಇಟ್ಟಿದ್ದರು. ಬಂಡಿಯ ಕೊರಳು ಹರಿದೆವು. ಆಕಳು ಎತ್ತುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿದೆವು. ಅಯ್ಯನವರ ಅಳಿಯ ಅವುಗಳಿಗೆ ಮೇವು ನೀರು ಕಾಣಿಸಿದ. ಸಾಮಾನು ಇಳಿಸಿ ಊಟ ಮಾಡುವದರೊಳಗಾಗಿ ಸರಿರಾತ್ರಿಯಾಗಿತ್ತು. ದಾರಿಯ ಆಯಾಸದಿಂದ ಎಲ್ಲರೂ ಪಿಟ್ಟಿನ್ನದೆ ನಿದ್ದೆ ಹೋದರು. ಅಯ್ಯನವರು ಅಂಗಳದಲ್ಲಿ ಇಳಿದನಿಯ, ಗುಂಗಿನಲ್ಲಿದ್ದರು. ಆದರೂ ಮರುದಿನ ಅವರೇ ಮೊದಲು ಎಚ್ಚತ್ತವರು. ಊರಲ್ಲಿ ಬಸವಣ್ಣನ ಉತ್ಸವ. ಅಳಿಯರು ತಮ್ಮ ಜವಾರಿ ಗಿಡ್ಡಗಳನ್ನು ಮೈದೊಳೆಯಲು ತಮ್ಮ ವಯಸ್ಸಿನವರ ಕೂಡ ತೋಟದ ಕೆರೆಗೆ ಹೋದರು.

ಅಂದು ಸಾವುಕಾರರು ತಮ್ಮ ತೋಟದ ಮಾವಿನ ಹಣ್ಣುಗಳನ್ನು ಕಳಿಸಿದ್ದರು. ಆ ದಿನ ಹೋಳಿಗೆ ಸೀಕರಣೆ ಹೊಡೆದು ಊಟದಿಂದ ಹೊಸಮನೆ ಪ್ರಸ್ತ ಮಾಡಿದಂತಾಯಿತು. ಅಂದು ಕಲ್ಲೇಶ್ವರ ದೇವಸ್ಥಾನದಲ್ಲಿ ಅಯ್ಯನವರ ಬಸವ ಪುರಾಣ. ಯಾವ ಹೊಯ್ದಾಟವೂ ಇಲ್ಲದೆ ಅವರ ಕಂಠ ಕುಳಿತವರ ಹೃದಯವನ್ನು ಸೂರೆಗೊಂಡಿತು.

ಅಂದಿನಿಂದ ಹದಿನೈದು ವರ್ಷಗಳವರೆಗ ಅಳಿಯ ಕೇದಾರಯ್ಯನೂ ನಾನೂ ಕೂಡಿ ಮಾಡಿದುದು ಮೂರು ಕೆಲಸ: ಅಯ್ಯನವರು ಆರೇಮಲ್ಲಾಪುರಕ್ಕೆ ಬಂದು ಐದು ವರ್ಷಗಳು ಮುಗಿಯುವದರೊಳಗಾಗಿ ಅವರು ನಾಲ್ಕು ಎಕರೆ ಭೂಮಿಯನ್ನು ಕೊಳ್ಳಲು ಹುರಿದುಂಬಿಸಿದ್ದು: ಬಂದ ಹತ್ತನೆಯ

ವರ್ಷಕ್ಕೆ ವೈಶಾಖ ಮಾಸದಲ್ಲಿ ನಮ್ಮ ಅಯ್ಯನವರ ಮಗಳು ಶಾಂಭವಿಯನ್ನು ಅವರ ಅಳಿಯ ಕೇದಾರಯ್ಯನಿಗೆ ಮದುವೆ ಮಾಡಿದ್ದು: ಹದಿನೈದನೆಯ ವರ್ಷದ ಬಸವ ಜಯಂತಿಗೆ ಒಂದು ಜತೆ ಮೂಡಲ ಹೋರಿಗಳನ್ನು ಕೊಂಡದ್ದಲ್ಲದೆ ನಾಲ್ಕು ಎಕರೆ ಭೂಮಿಯನ್ನು ಎರಡು ಕೂರಿಗೆಗೆ ಬೆಳಸಿದ್ದು.

ಮದುವೆಯಾದ ಎರಡು ವರ್ಷಕ್ಕೆ ಶಾಂಬಕ್ಕನ ಹೊಟ್ಟೆಯಲ್ಲಿ ಮಹಾದೇವಕ್ಕನು ಹುಟ್ಟಿದಳು. ನಾವು ಮೂಡಲ ಹೋರಿಗಳನ್ನು ಕೊಂಡ ವರ್ಷವೇ ಕೇದಾರಯ್ಯನವರಿಗೆ ಒಂದು ಗಂಡು ಮಗುವಾಯಿತು. ಆದರೆ ಅವನು ಹುಟ್ಟಿದ್ದು ಮೂಲಾನಕ್ಷತ್ರದಲ್ಲಿ. ಹುಟ್ಟಿದ ಮಗು ನಕ್ಷತ್ರವಾಗಿತ್ತು. ನಮ್ಮ ಸಾವಳಿಗಯ್ಯನವರು ಆಗ ಹದಿನೈದು ವರ್ಷದವರಾಗಿದ್ದರು. ಕೇದಾರಯ್ಯನಿಗೆ ಮೂವತ್ತೊಂದು. ಅಯ್ಯನವರಿಗೆ ನಾಲ್ವತ್ತುಮೂರು. ನನಗೆ ಮೂವತ್ತೊಂಬತ್ತು. ಐದು ವರ್ಷ ಮನೆಯಲ್ಲಿ ಉತ್ಸಾಹವೇ ಉತ್ಸಾಹ.

ಇಂದಿಗೆ ಹನ್ನೆರಡು ವರ್ಷದ ಹಿಂದಿನ ಮಾತು. ಅಂದರೆ ಯಾವ ವರ್ಷವಾಯಿತು, ಸಾವಳಿಗಯ್ಯನವರೇ, ಇಂಗ್ರೇಜಿಯಲ್ಲಿ!' ಎಂದು ಮುದ್ದಣ್ಣ ಎತ್ತುಗಳನ್ನು ಮುಟ್ಟಿದನು.

'೧೯೩೪ ಆಯಿತು. ನನಗೆ ಗೊತ್ತು. ನೀನು ಅಕ್ಕ-ಮಾವನ ಮಾತು ಹೇಳುವಿಯಲ್ಲವೆ?' ಎಂದ ಸಾವಳಿಗಯ್ಯ.

'ಹಾಂ! ಎರಡನೆಯ ಶ್ರಾವಣ ಸೋಮವಾರ ನಮ್ಮ ಕೇದಾರಯ್ಯನ ಹೆಂಡತಿ ತನ್ನ ಇಪ್ಪತ್ತುನಾಲ್ಕನೆಯ ವಯಸ್ಸಿನಲ್ಲಿ, ಹಿಂದಿನ ದಿನ ರಾತ್ರಿ ಹೆದರಿದ ನೆವಮಾತ್ರದಿಂದ ಜ್ವರಬಂದು ಸಣ್ಣ ಮಕ್ಕಳನ್ನು ಬಿಟ್ಟುಹೋದಳು.

ತನ್ನ ಗಂಡುಮಗು ಹುಟ್ಟಿದ ಮೂರು ವರ್ಷಕ್ಕೆ ಕೇದಾರಯ್ಯ ಬೆಟ್ಟದಯ್ಯನ ಗುಡ್ಡದ ಓರೆಯಲ್ಲಿ ಎರಡು ಕೂರಿಗೆ ಹಳ್ಳ ಹಾಯುವ ಕೆಂಗಲು ಭೂಮಿಯನ್ನು ಕೊಂಡುಕೊಂಡು, ಮೂರು ಎಕರೆಗೆ ಬೇಲಿ ಹಚ್ಚಿ ಅಣಿಮಾಡಿದ್ದನು. ಹದಿನೆಂಟು ವರ್ಷದ ಸಾವಳಿಗಯ್ಯ ಓದು ಮುಗಿಸಿ ಆಗಲೇ ತೋಟದ ಕೆಲಸದಲ್ಲಿ ಹುರುಪುಗೊಂಡಿದ್ದನು. ನಾಲ್ಕು ಎತ್ತಿನ ಬೇಸಾಯ. ನಾವು ಮೂವರು ಮನೆಯವರು ದುಡಿಯುವವರು, ಒಂದು ಸಂಬಳದ ಆಳು. ಇಷ್ಟು ಜನಕ್ಕೆ ಶಾಂಬಕ್ಕ, ಅವರ ತಾಯಿ ಗುರುಲಿಂಗಮ್ಮ (ನಮ್ಮ ಅಯ್ಯನವರ

ಕುಟುಂಬ) ಅಡಿಗೆ ಮಾಡಿಹಾಕಿ ಮಕ್ಕಳ ಜೋಪಾನಮಾಡಿಕೊಂಡು ಸುಖ ದಿಂದಿದ್ದರು. ತೋಟವೂ ಹದಕ್ಕೆ ಬಂತು. ಕೇದಾರಯ್ಯನೂ ಹುರುಪು ಗೊಂಡಿದ್ದನು. ಶಾಂಭವಿ ಕೈಬಿಟ್ಟಳು.

ಮನೆಯಲ್ಲಿ ಗೆಲುವು ಕಡಿಮೆಯಾಯಿತು. ಕೇದಾರಯ್ಯನಿಗೆ ಯಾವ ಕೆಲಸದಲ್ಲಿಯೂ ಕಳಕಳಿ ಇಲ್ಲ. ಮೊದಲಿನ ಮಾತುಕತೆ, ಮೊದಲಿನ ಉತ್ಸಾಹ, ಮೊದಲಿನ ಮುಖದ ಮೇಲಿನ ಕಳೆ ಎಲ್ಲವೂ ಒಂದೊಂದೇ ಹಿಂದಾದವು. ಅಯ್ಯನವರಿಗೆ ಆಡಲು ಬಾಯಿಲ್ಲ. ನಾನು ಮಾತೆತ್ತಿದರೆ ಕೇದಾರಯ್ಯನ ಕಣ್ಣೀರು ತುಳುಕುವ ಮುಖ ಎದುರಾಗುತ್ತಿತ್ತು. ಮೂರು ತಿಂಗಳು ಹೇಗೋ ಸಾಗಿದವು. ಕಾರ್ತಿಕಮಾಸದಲ್ಲಿ ಸ್ವಾತಿ ಮಳೆ ಹಿಡಿದಿತ್ತು. ಹಿಂಗಾರಿಯನ್ನು ಬಿತ್ತುವದು ಮುಗಿಯಬಂದಿತ್ತು. ಕೇದಾರಯ್ಯನು ಹಾಸಿಗೆ ಹಿಡಿದನು. ವಿಷಮಜ್ವರ. ನಿರಾಶೆಗೆ ಮದ್ದೆಂದರೆ ಮಕ್ಕಳು ಎಂದು ಕೇಳಿದ್ದೆನು.

ಐದು ವರ್ಷದ ಅವನ ಮಗನನ್ನು ಎತ್ತಿಕೊಂಡು ಅವನ ಬಳಿ ಹೋಗಿ ಅವನ ಕೈಯಲ್ಲಿತ್ತೆನು. ಆಯಾಸದಿಂದ ಎತ್ತಿಕೊಂಡು ಒಮ್ಮೆ ನನ್ನೆಡೆ ನೋಡಿ, ಉಮ್ಮಳಿಸಿ ಬಂದ ದುಃಖವನ್ನು ತಡೆಹಿಡಿದನು. ಆವೇಶದಿಂದ ನನ್ನ ಮಡಿಲಿನಲ್ಲಿ ಮಗುವನ್ನು ಹಾಕಿ ಆಚೆಗೆ ಹೊರಳಿ ಬಿಕ್ಕಿದನು. ಮಗುವು ಅತ್ತೊಮ್ಮೆ ಇತ್ತೊಮ್ಮೆ ನೋಡಿ ಅಚ್ಚರಿಯಿಂದ ಕಣ್ಣುಬಿಟ್ಟಿತು. ನದೀಹರಳಹಳ್ಳಿಗೆ ಅಂದೇ ಮಧ್ಯಾಹ್ನ ಪಂಡಿತ ಹಾಲಯ್ಯನವರನ್ನು ಕರೆತರಲು ಹೋದೆನು. ಅವರು ಊರಲ್ಲಿರಲಿಲ್ಲ. ಸಂಜೆಗೆ ಬರುವದರೊಳಗಾಗಿ ಸನ್ನಿಪಾತಕ್ಕೆ ಬಂದಿತ್ತು. ಆಗೊಂದು ಈಗೊಂದು ಮಾತಾಡಿ ತನ್ನ ಮಗಳು ಮಾದಕ್ಕನನ್ನೂ ಅಳಿಯ ಸಾವಳಿಗಯ್ಯನನ್ನೂ ಕರೆಯಿಸಿ, ಅವರೀರ್ವರ ಕೈಗೂಡಿಸಿ, ಮೇಲೆ ಅಯ್ಯನವರ ಹಸ್ತಮುದ್ರೆಯನ್ನಿರಿಸಿದನು.

ಮಗನನ್ನು ಕರೆಯಿಸಿ ಕಣ್ತುಂಬ ನೋಡಿ ಅಯ್ಯನವರನ್ನು ನೋಡಿ, 'ವಿದ್ಯಾ........' ಎನ್ನುತ್ತಲೇ ಬಾಯಿ ಹೋಯಿತು. ಅವನ ತಾಯಿಯನ್ನೊಮ್ಮೆ ಅಕ್ಕ ಗುರುಲಿಂಗಮ್ಮನನ್ನೊಮ್ಮೆ ನೋಡಿ ನನ್ನೆಡೆಗೆ ಹೊರಳಿ ನನ್ನ ಅಂಗೈಗಳನ್ನು ನಿಟ್ಟಿಸಿದನು. ಅಲ್ಲೇನಿದೆ? ಅಂಗೈ ಮುಂದೆ ಮಾಡಿದೆನು. ದಡ್ಡುಗಳ ಮೇಲೆ ಕೈಯಾಡಿಸಿದನು. ತನ್ನ ಐವತ್ತಾರು ವರ್ಷದ ತಾಯಿ

ಗೌರಮ್ಮನವರ ಮಡಿಲಿನಲ್ಲಿದ್ದ ತನ್ನ ಮಗುವನ್ನು ನಾನು ಎತ್ತಿಕೊಳ್ಳುವ ವರೆಗೆ ನನ್ನನ್ನೊಮ್ಮೆ ಆ ಮಗುವನ್ನೊಮ್ಮೆ ನೋಡಿದನು. ಎತ್ತಿಕೊಂಡೆನು. ಅಯ್ಯನವರನ್ನು ನೋಡಿ 'ಮಾ....ವಾ' ಎಂದು ತುಟಿಯನ್ನು ಅಲುಗಿಸಿದನು. ತಡೆಯಲಾರದೆ ಅಯ್ಯನವರು ಎದ್ದು ಹೋಗಿ ಗೋಡೆಗೆ ಒರಗಿ ಬಿಕ್ಕಿ ಬಿಕ್ಕಿ ಸಣ್ಣ ಮಕ್ಕಳಂತೆ ಅಳಹತ್ತಿದರು. ಮನೆಯಲ್ಲಿ ಮುದುಕಿಯೊಂದು ಮಾತ್ರ ಕಲ್ಲಾಗಿ ಮಗನ ತಲೆಯ ಹತ್ತರ ಕುಳಿತಿತ್ತು. ಸಾವುಕಾರರೊಬ್ಬರು ಅಲ್ಲಿರದಿದ್ದರೆ ಮನೆಯ ಗೋಳಾಟದ ಹರಿಗೋಲಿಗೆ ಮುಟ್ಟುಗೋಲು ಹಾಕುವವರೇ ಇಲ್ಲದಂತಾಗುತ್ತಿತ್ತು. ಊರೊಳಗಿನ ಯಾವ ಉಪಚಾರವೂ ಕೇದಾರಯ್ಯನನ್ನು ಸನ್ನಿಪಾತದಿಂದ ಉಳಿಸುವದಾಗಲಿಲ್ಲ.

ಸ್ವಾತಿಯಮಳೆಯ ಕೊನೆಯ ದಿನ ಕೇದಾರಯ್ಯ ತನ್ನ ತೋಟದ ಒಂದು ಬಿಲ್ವಪತ್ರಿಯ ಗಿಡದಡಿಯಲ್ಲಿ ತನ್ನವಳ ಸಮಾಧಿಯ ಬಳಿಯಲ್ಲಿ ಶಾಂತಿಯನ್ನು ಹೊಂದಿದನು. ನನ್ನೊಳಗಿನ ಅರ್ಧ ಕಸುವು ಹೀರಿ ಹೋಯಿತು. ಇಂಗ್ರೇಜಿ ಶಾಲೆಯ ಮೆಟ್ಟಿಲು ಹತ್ತಿದ ಸಾವಳಿಗಯ್ಯ ಮೈ ಉಳಿಸಿಕೊಳ್ಳುವ ಬದುಕುಮಾಡಿ ನನಗೆ ಕೆಲಸದಲ್ಲಿ ಅಷ್ಟಕ್ಕಷ್ಟೇ ನೆರವಾಗುತ್ತಿದ್ದನು.' ಸಾವಳಿಗಯ್ಯ ನಗುತ್ತಿದ್ದುದನ್ನು ಕಂಡು ಮುದ್ದಣ್ಣ ಮುಂದರಿದನು: 'ತೋಟದಲ್ಲಿ ಕಪ್ಪಲಿ ಹೊಡೆಯುವದು, ರಾಣಿಬಿದನೂರಿನ ವಾರದ ಸಂತೆಗೆ ಬಂಡಿಯನ್ನು ಹೂಡುವದು ಇಷ್ಟು ಮಾತ್ರ ಇವನ ಹುರುಪಿನ ಕೆಲಸ. ಮಾದಕ್ಕ ಶಾಲೆಯನ್ನು ಮುಗಿಸಿ ಊಟಮಾಡಿ ಕಣದ ಮನೆಯಿಂದ ತೋಟಕ್ಕೆ ನಮಗೆ ಊಟಕ್ಕೆ ತರುತ್ತಿದ್ದಳು. ಹೀಗೆ ನಾಲ್ಕು ವರ್ಷ ಕಳೆದವು. ಸಾವಳಿಗಯ್ಯನವರು ಇಪ್ಪತ್ತುನಾಲ್ಕು ವರ್ಷದವರಾಗಿದ್ದರು. ಮಾದಕ್ಕ ಹನ್ನೆರಡು ವರ್ಷದವಳು,' ಎಂದು ಹಳ್ಳಿಯ ಮಗ್ಗುಲಿನ ಕಣದ ದಾರಿ ಬಂದುದನ್ನು ಕಂಡು ಮುದ್ದಣ್ಣ ಹಗ್ಗ ಹಿಡಿದು ಕುಳಿತನು. ಸಾವಳಿಗಯ್ಯ ಮುಗುಳು ನಗೆ ಸೂಸುತ್ತಲಿದ್ದನು. ಬಂಡಿ ಬಲಕ್ಕೆ ಹೊರಳಿ ಸಮುದಾರಿಗೆ ಬಂದಿತು. ಬಡಿಗನ ಹಕ್ಕಿ ಆಲದ ಮರದ ಮೇಲೆ ಕುಳಿತು ಸೀಸದ ಕಟ್ಟಿಗೆಯ ದನಿಯಿಂದ ಕೂಗುತ್ತಿತ್ತು. ಪುನಃ ಹಳೆಯ ನೆನಪಿನ ಸರಪಣಿ ಹಿಡಿದ ಮುದ್ದಣ್ಣ: 'ಮುಪ್ಪಿನ ಮುದುಕಿ ಅಬಲೂರು ಅರ್ಪಣ ಮಠದ ಗೌರಮ್ಮ ಮೊಮ್ಮಕ್ಕಳ ಮದಿವೆ ಮಾಡಲೆಂದು ಐವತ್ತೆರಡು ವಯಸ್ಸಿನ ಪುರಾಣಮಠದ ಮಧುವಯ್ಯನವರಿಗೆ

ದುಂಬಾಳ ಬಿದ್ದಿತು. ಮಾದಕ್ಕ ಚಿಕ್ಕವಳೆಂದು ಮಧುವಯ್ಯನವರು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ."

'ಇದೇನು ಮುದ್ದಣ್ಣ. ಹೇಳುವದು ಹೇಳುತ್ತೀ. ನಡುವೆ ಹಾರಿಸಿ ಬಿಡುತ್ತೀಯಲ್ಲ. ನನ್ನ ಮದುವೆಗೆ ಆರು ತಿಂಗಳು ಮೊದಲು ಅಪ್ಪಯ್ಯ ಸಾವುಕಾರರ ಜೊತೆಗೆ ಬೆಂಗಳೂರಿಗೆ ಹೋಗಿದ್ದಿಲ್ಲವೇನು? ೧೯೨೭ ನೆಯ ಡಿಸೆಂಬರದಲ್ಲಿ ವೀರಶೈವ ಮಹಾಸಭೆ ಕೂಡಿತ್ತು. ಅವರು ತಿರುಗಿ ಬರುವಾಗ ಗಾಡಿಯಲ್ಲಿ ಹುಬ್ಬಳ್ಳಿಯ ಒಬ್ಬ ಇಂಗ್ರೇಜಿ ಶಾಲಾ ಗುರುಗಳು ಭೆಟ್ಟಿಯಾಗಿದ್ದರಂತೆ. ಅವರು 'ನಿಮ್ಮ ಮೊಮ್ಮಗನನ್ನು ನನ್ನಲ್ಲಿಗೆ ಕಳಿಸಿರಿ' ಎಂದು ಹೇಳಿದ್ದರಂತೆ. ಊರಿಗೆ ಬಂದಮೇಲೆ ಅಲ್ಲವೇನು ಅಮ್ಮ ಆತನಿಗೆ ಕೇಳಿದ್ದು ಮದುವೆಯ ಸಲುವಾಗಿ' ಎಂದು ಸಾವಳಗಯ್ಯನವರು ಎಳೆ ಎತ್ತಿಕೊಟ್ಟರು.

"ಅಹುದಲ್ಲವೆ! ಮದುವೆ ನೆನಪು ಪೂರ್ಣ ಅದೆ ಗಣಂಗಳಿಗೆ," ಎಂದು ಹಾಸ್ಯಮಾಡಿ ಮುಂದರಿದನು ಮುದ್ದಣ್ಣ: "ತೋಟದಲ್ಲಿ ಮಾಮರಗಳು ಹೂವು ಹೀಚು ಮುಗಿಸಿ ಪಾಡುಗಾಯಿಗೆ ಬಂದಿದ್ದವು. ವೈಶಾಖಮಾಸ ಒಂದು ತಿಂಗಳ ಉಳಿದಿತ್ತು. ಯುಗಾದಿಯ ದಿನ ಬೇವು ಮುಗಿಸಿ ಸಾವಳಗಯ್ಯ ತೋಟಕ್ಕೆ ಬಂದಿದ್ದನು. ಮುಂಜಾನೆ ನೀರು ಅಷ್ಟಕ್ಕೆ ಅಷ್ಟೆ ತಂದಿದ್ದನು. ಇಳಿಹೊತ್ತಾದರೂ ಮೊಮ್ಮಗನು ನೀರಿಗೆ ಬರಲಿಲ್ಲವೆಂದು ಗೌರಮ್ಮ ಮೊಮ್ಮಗಳೊಂದಿಗೆ ಸೀನೀರಿಗೆ ಹೋದಳು. ಗುರುಲಿಂಗಮ್ಮನವರು ಸಾವುಕಾರರ ಹೆಣ್ಣುಮಕ್ಕಳನ್ನು ಕಾಣಲು ಹೋಗಿದ್ದರು. ಸಾವುಕಾರರಿಂದ ಅಯ್ಯನವರಿಗೆ ಮದುವೆಯ ವಿಚಾರದಲ್ಲಿ ಆಗ್ರಹಪಡಿಸಲೆಂದು.

ಹೊಕ್ಕು ತುಂಬುವ ಬಾವಿ. ತುಂಬಿ ತರುವಾಗ ಪಾವಟಿಗೆಯನ್ನು ಎಡವಿ ಮುದುಕಿ ನೆಲಕ್ಕಿಳಿಯಿತು. ಹಾಗೂ ಹೀಗೂ ಮಾಡಿ, ಬೆದರಿದ ಹುಡುಗೆಯ ಕೈಕಾಲು ಬಿಡಿಸಬಾರದೆಂದು, ಮೊಮ್ಮಗಳ ನೆರವಿನಿಂದ ಮನೆಮುಟ್ಟಿತು. ನೆಲ ಹಿಡಿಯಿತು. ಮಧುವಯ್ಯನವರಿಗೆ ಇತರರು ಒತ್ತಾಯಪಡಿಸುವದೇ ಬೇಡವಾಯಿತು. ವೈಶಾಖಮಾಸಕ್ಕೆ ಮದುವೆಗೆ ಅಣಿಮಾಡಹತ್ತಿದರು. ಮುದುಕಿ ಗೆಲುವಾಯಿತು. ಮದುವೆ ನಡೆದೇ ಹೋಯಿತು. ಮೊಮ್ಮಕ್ಕಳನ್ನು ಹರಸಿ ಹರುಷಗಡಲಿನಲ್ಲಿ ತೇಲಿತು ಮುದುಕಿ.

ಶ್ರಾವಣ ಸೋಮವಾರ ದಿನ ಅಯ್ಯನವರು ಒಂಬತ್ತು ವರ್ಷದ ಮೊಮ್ಮಗನೆದುರು ತಾವೇತಾವಾಗಿ, "ಜ್ಯೋತಿ ಬೆಳಗುತಿದೆ, ಪರಂಜ್ಯೋತಿ ಬೆಳಗುತಿದೆ" ಎಂದು, ನಾಲ್ಕು ವರ್ಷದ ನಂತರ ಪಿಟೀಲು ಹೊರತೆಗೆದು, ನುಡಿಸಿ ಹಾಡುತ್ತಿದ್ದರು. ಅಂದು ನಿನ್ನೆಯ ರಾತ್ರಿಯಂತೆ ಬೆಳದಿಂಗಳು ಹಾಲು ಚೆಲ್ಲಿದಂತಿತ್ತು. ಅಲ್ಲಲ್ಲಿಗೆ ಕಣದ ಅಂಗಳದಲ್ಲಿ ನಾವು ಮನೆಯವರೆಲ್ಲರೂ ಅವರೀರ್ವರ ಆಟವನ್ನು ನೋಡುತ್ತ ಕುಳಿತಿದ್ದೆವು. ಎಲ್ಲರ ಊಟವೂ ಮುಗಿದಿತ್ತು. ಅವರ ಹಾಡು ಮುಗಿಯುತ್ತಲೇ ತೋಟಕ್ಕೆ ಹೋಗಲು ನಾನೆದ್ದೆನು. ಸಾವಳಿಗಯ್ಯನೂ ಹಿಂಬಾಲಿಸಿದನು. ಗುರುಲಿಂಗಮ್ಮನು ಒಳಗೆ ಮಲಗುವುದಕ್ಕೆ ಕರೆದೊಯ್ಯಲು ತಾಯಿಯನ್ನು ಎಬ್ಬಿಸಿದಳು. ಗೌರಮ್ಮ ಮಿಸುಕಲಿಲ್ಲ. 'ಅವ್ವಾ' ಎಂದು ಗುರುಲಿಂಗಮ್ಮ ಕೂಗಿದಾಗಲೇ ಕಣದ ಬಾಗಿಲಿನಿಂದ ಧಾವಿಸಿದೆವು. ಮಧುವಯ್ಯನವರು ಆದುದನ್ನು ಆಗಳೆ ಅರಿತು ಮೇಲಕ್ಕೇಳಲಿಲ್ಲ. ಮಾತನಾಡಲಿಲ್ಲ.

ಗುರುಲಿಂಗಮ್ಮನಿಗೆ ತನ್ನ ಅಬಲೂರಿನ ಸೊತ್ತು ಕಳಚಿದುದನ್ನು ಕಂಡು ಸಹಿಸದಾಯಿತು. ಯಾರ ಉಪಶಾಂತಿಯ ಮಾತುಗಳೂ ಅವಳ ದುಃಖವನ್ನು ತಡೆಹಿಡಿಯದಾದವು. ಸಾವುಕಾರರು ಬಂದು ಮಧುವಯ್ಯನವರನ್ನು ಕೈ ಹಿಡಿದು ಮುಂದಿನ ಕಾರ್ಯಕ್ಕೆ ಹಚ್ಚಿದರು. ಅಯ್ಯನವರ ಕುಟುಂಬ ದನಿಯೊಡೆದು ಕುಗ್ಗುವ ವರೆಗೆ ಹಾಡಿ ಹಾಡಿ ಅಳುವದನ್ನು ಬಿಡಲಿಲ್ಲ. ದನಿ ಕುಗ್ಗಿದಾಗ, ಎದೆಯೊಡೆಯುವಂತೆ ಬಿಕ್ಕುತ್ತಿದ್ದರು. ನನಗೆ ತಡೆಯುವದಾಗಲಿಲ್ಲ. ದುಃಖ ಹಿಂದಾಗಿ ಸಿಟ್ಟು ಮುಂದಾಯಿತು: 'ಅಕ್ಕ, ನಿನಗೆ ತಾಯಿ ನಮಗೆ ಅಲ್ಲವೇನು? ನಿನ್ನೀ ದುಃಖ ಅಮ್ಮನನ್ನು ಮರಳಿ ಪಡೆಯಬಲ್ಲದೇ? ಸಣ್ಣ ಮಕ್ಕಳು ಎದೆಯೊಡೆಯಲಿಕ್ಕಿಲ್ಲವೇ? ಅಯ್ಯನವರ ಗತಿ ಏನಾದೀತು ತಿಳಿದು ನೋಡು!' ಎಂದೆನು.

"ನಿನ್ನ ಮುಂದೆ ನನ್ನದೇನು ಮುದ್ದಣ್ಣ. ಹಡೆದ ತಾಯಿ. ಕರುಳು ಕಿವುಚಿತು. ಮನವಾರೆ ಅತ್ತು ದುಃಖವನ್ನು ಹಿಂಗಿಸಿದೆನು. ಎಷ್ಟೆಂದು ನುಂಗಿಕೊಳ್ಳುವದು ಅಣ್ಣ. ಹರೆಯದ ತಮ್ಮ ಮಗಳು ನಡೆನುಡಿಯುವ ಭರದಲ್ಲಿ ನನ್ನೆದುರಿಗೆ ಹೋದರು. ತಾಯಿಯ ದುಃಖವನ್ನು ನೋಡಿ ನುಂಗಿಕೊಂಡಿದ್ದೆನು. ಇನ್ನೇನು. ನಿನ್ನಂತೆ ಆಗಲಪ್ಪಾ. ಅತ್ತು ನಾನು ಮಾಡುವ

ದೇನು ?" ಎಂದು ಸುಮ್ಮನಾದಳು. ಸರಿರಾತ್ರಿಯಲ್ಲಿ ಶವವನ್ನೆತ್ತಿದೆವು. ತೋಟದಲ್ಲಿ ತನ್ನವರೊಂದಿಗೆ ಗೌರಮ್ಮ ಮಣ್ಣಾದಳು. ಉಳಿದವರು ಸ್ನಾನ ಮಾಡಿ ಊರಿಗೆ ತಿರುಗಿದರು. ನಾನು ಸಂಬಳದ ಆಳು ನಾಯಿ ತೋಟದಲ್ಲಿ ತಂಗಿದೆವು.

ಮರುದಿನ ಮುಂಜಾನೆ ಕಣದ ಬಾಗಿಲಿನಲ್ಲಿ ಅಯ್ಯನವರು ಇದಿರಾದರು. ನಿಸ್ಸಾರವಾದ ನಡಿಗೆಯಿಂದ ಶಾಲೆಗೆ ಹೊರಟಿದ್ದರು. ನನ್ನನ್ನು ಕಂಡು, 'ಇದೇನು ಬಂತು ಮುದ್ದಣ್ಣಾ' ಎಂದು ಕಲ್ಲಿಗೆ ಒರಗುವವರಿದ್ದರು. ನನ್ನ ಮಾತು ಅವರನ್ನು ಕೆಣಕಿ ಕಠಿಣ ಮನಸ್ಕರಾದರು : 'ಬಸವಣ್ಣನ ಬಳಗದವರ್ರು ನಾವು ಎದೆಗುಂದುವದು ಎಂಥದು' ಎಂಬ ಅವರ ಮಾತನ್ನೇ ಎತ್ತಿದ್ದೆನು. 'ಅಹುದು ಅಹುದು' ಎನ್ನುತ್ತ ಬಿರುಸಾಗಿ ಸಾಗಿದರು. ಹತ್ತು ಹೆಜ್ಜೆಯಲ್ಲಿ ಅವರದೇ ನಯ ಬಂದಿತ್ತು. ಊರಿನ ಜನರು ಸಂತೈಸುವದನ್ನು ತಾಳ್ಮೆಯಿಂದ ಸ್ವೀಕರಿಸಿ ಶಾಲೆಯನ್ನು ಸೇರಿದರು.

ಶಾಲೆಯಲ್ಲಿ ಕಾದಿದ್ದ ಮೊಮ್ಮಗ ತನ್ನ ಬಾಲ್ಯದ ಸವಿನುಡಿಗಳಿಂದ ಅಯ್ಯನವರನ್ನು ಸಾಂತ್ವನಗೊಳಿಸಿದನು. ಮೊಮ್ಮಗನು ಅಜ್ಜನ ಶಾಲೆಯ ಓದು ಮುಗಿಸುವ ವರೆಗೆ ಹುರುಪಿಗೇನು ಕಡಿಮೆ? ಅಮ್ಮನ ಅಡಿಗೆಯ ಮನೆಯಲ್ಲಿ ಗಡಿಬಿಡಿ. ಅಜ್ಜನಿಗೆ ತೆರಪಿಲ್ಲದ ಪ್ರಶ್ನೆ : ಅಮ್ಮನಿಗೆ ತೆರಪಿಲ್ಲದೆ ತಿನಿಸಿನ ಬೇಡಿಕೆ. ಅವರ ಬೇಸರ ಅಲ್ಲಿಯ ವರೆಗೆ ಇಣಿಕಿದ್ದಿಲ್ಲ. ಅದರಂತೆ ನನ್ನ ತೋಟ ಹಗಲು ನಾಲ್ಕು ತಾಸಿನಿಂದ ಏಳು ತಾಸಿನ ವರೆಗೆ ಭೂಕೈಲಾಸ. ಅವನಿಗೆ ಕಾಣದಂತೆ ಯಾವ ಗಿಡವೂ ಹೂ ಬಿಡಲಿಕ್ಕಾಗದು. ಹಣ್ಣಾಗಲಿಕ್ಕಾಗದು. ಯಾವ ಹೋರಿಯೂ ಅವನ ಧೈರ್ಯಕ್ಕೆ ಎದುರಾಗಲಿಕ್ಕಾಗದು. ಅವನನ್ನು ಕಂಡರೆ ಬಾಗಿ ತುರಿಸಿಕೊಳ್ಳಲೇ ಬೇಕು. ಸುತ್ತುಮುತ್ತಿನ ಗುಡ್ಡ, ಹಳ್ಳ, ಹೊಲ, ಈ ಎಲ್ಲ ವಿಚಾರಗಳಲ್ಲಿ ನಾನು ಅವನಿಗೆ ಪಂಡಿತನಾಗಿರಬೇಕು. ಅವನ ಅಜ್ಜನ ಹಾಡುಗಳು ನಾಲಿಗೆಯ ಮೇಲೆ ಕುಣಿಯುವಾಗ ನಾನು ತಾಳ ಹಾಕಿ ಸೈ ಅನ್ನಬೇಕು. ನಂತರ ಬಾವಿಯ ದಂಡೆಯ ಮೇಲೆ ನನ್ನೊಡನೆ ನಾಲ್ಕು ತುತ್ತು ತಿಂದು, ನನ್ನ ಪೂರ್ಣ ಊಟ ಮುಗಿಯುವ ವರೆಗೆ ಇದ್ದು, ಮನೆಗೆ ಹಿಂದಿರುಗಿ ಅಜ್ಜನೊಡನೆ ಶಾಲೆಗೆ ಹೋಗುವದು. ಇವು ಅವನ ಬಾಲ್ಯದ ಆಟಗಳು. ಅವು ನಮ್ಮೆಲ್ಲರ ಬಾಳಿನಲ್ಲಿ ಕಳೆ ತುಂಬಿ ದೋಣಿ

ಸಾಗುವಂತೆ ಮಾಡಿದ್ದವು. ನಮ್ಮೆಲ್ಲರ ಮನಸ್ಸುಗಳು ಅವನ ಆಟ–ನೋಟ ಅವನ ಬೆಳವಣಿಗೆಯಲ್ಲಿಯೇ ನೆಟ್ಟು ಒಂದಾಗಿದ್ದವು. ವಯಸ್ಸಿಗೆ ಮೀರಿ ನಿಲುವು ಮೈಕಟ್ಟು ಬೆಳೆದಿತ್ತು. ಮನಸ್ಸು ಮಾತ್ರ ಶಾಲೆಯಲ್ಲಿ ಶಾಲೆಯಂತೆ–ಬಯಲಿನಲ್ಲಿ ಬಯಲಿನಂತೆ. ಶಾಲೆಯಲ್ಲಿ ಗುರುಗಳ ಗುರು. ತೋಟದಲ್ಲಿ ತೋಟಿಗನಪ್ಪ.

ಇದೀಗ ನಮ್ಮ ದುಃಖವನ್ನು ಮರೆಯಿಸಿದ ವಿಷಯ ಅವನ ಮುಂದಿನ ವಿದ್ಯಾಭ್ಯಾಸದ ಯೋಜನೆ. ಅವನಿಗೆ ಒಂಬತ್ತನೆಯ ವಯಸ್ಸು ಇನ್ನೂ ತುಂಬಿಲ್ಲ. ಮೊನ್ನೆಯ ಬಸವ ಜಯಂತಿಗೆ ಅಜ್ಜನ ಓದು ಮುಗಿಸಿದ್ದನು. ಇಂಗ್ರೇಜಿ ಶಾಲೆಗೆ ಕಳಿಸಲು ವಯಸ್ಸು ಚಿಕ್ಕದು. ಪರಸ್ಥಳ. ಸಾವಳಿ ಗಯ್ಯನ ಮಾತಿನಂತೆ ಮಡಿಲೇರಿಯ ದೊಡ್ಡ ಶಾಲೆಗೆ ಕಳಿಸಿದೆವು. ಹೋಗಿ ಬರುವದೆಂದರೆ ದಿನಾಲು ನಾಲ್ಕೈದು ಮೈಲು ಕಾಲುನಡಿಗೆ. ಸಾವುಕಾರರ ಸೋದರಳಿಯ ಜೊತೆಯಾಗಿದ್ದನು. ಬಿಡುವಿನ ದಿನಗಳಲ್ಲಿ ಮುದ್ದಣ್ಣನ ಸಂಗಡ ಕೆಳ್ಳಿ ತಪ್ಪಿದ್ದಲ್ಲ. ಐದನೆಯ ಆರನೆಯ ವರ್ಗಗಳ ಜೊತೆಗೆ ಎರಡು ವರ್ಷಗಳಲ್ಲಿ ಇಂಗ್ರೇಜಿ ಕಲಿತನು. ಸಾವಳಿಗಯ್ಯನವರು ಗುರುಗಳು," ಎಂದು ಬಂಡಿಯಲ್ಲಿ ಹಿಂದೆ ಕುಳಿತವರೆಡೆ ನೋಡಿದನು ಮುದ್ದಣ್ಣ. "ಏನು ? ನಾನು ಅವನಿಗೆ ಚಿಕ್ಕ ವಯಸ್ಸಿನಲ್ಲಿ ಇಂಗ್ರೇಜಿ ಶಬ್ದಗಳ ಉಚ್ಚಾರಣೆ ಕಲಿಸಿರದಿದ್ದರೆ ನಿಮ್ಮ ಚಿಕ್ಕಯ್ಯನವರು ವಿದ್ಯಾಲಯದ ಮೆಟ್ಟಿಲು ಹತ್ತುವದು ತಿಳಿಯುತ್ತಿತ್ತು. ಮುಲ್ಕೀ ಪರೀಕ್ಷೆ ಆದ ಹುಡುಗರ ಬಾಯಿಯಲ್ಲಿ ಇಂಗ್ರೇಜಿ ಮಾತು ಕೇಳಬೇಕು. ಆಗ ನಿಮಗೆ ನಿಮ್ಮ ಚಿಕ್ಕಯ್ಯನವರ ಮೇಲೆ ನನ್ನ ಉಪಕಾರ ಎಷ್ಟಾಗಿದೆಯೆಂದು ತಿಳಿಯುವದು" ಎಂದರು ಸಾವಳಿಗಯ್ಯ ನವರು.

"ಏನು ಆದರೂ ನಿಮ್ಮ ಅಳಿಯನಿಗಲ್ಲವೆ ? ಮಗಳು ಕೊಟ್ಟು ಮುಟ್ಟಿಸಿ ಕೊಂಡರಾಯಿತು" ಹನುಮಂತಣ್ಣನೆಂದನು. "ಈಗಿನ ಸೋದರ ಅಳಿಯರು ಹಿರಿಯರು ಮಾಡಿದ್ದಕ್ಕೆ ಸೈ ಅನ್ನಲು ಹುಚ್ಚರಲ್ಲ" ಸಾವಳಿಗಯ್ಯ ನವರು ಎಂದರು.

"ಅದಿರಲಿ ಬಿಡಪ್ಪಾ. ಮುಂದಿನದನ್ನು ಯಾರು ಕಂಡಿದ್ದಾರೆ. ಊರೂ ಬಂದಿತು. ನಮ್ಮ ಕತೆಯೂ ಮುಗಿಯ ಬಂದಿದೆ. ಕೇಳಿರಿ ಹನುಮಂತಣ್ಣ.

ನಮ್ಮ ಚಿಕ್ಕಯ್ಯನಿಗೆ ಹನ್ನೆರಡನೆಯ ವರ್ಷ ನಡೆಯುತ್ತಿತ್ತು. ಅಯ್ಯನವರು ಚಿಕ್ಕಯ್ಯನನ್ನು ಧಾರವಾಡಕ್ಕೆ ಮುಲ್ಕೀ ಪರೀಕ್ಷೆಗೆ ಕರೆದೊಯ್ದರು. ಪರೀಕ್ಷೆ ಯಿಂದ ಬರುವಾಗ ಹುಬ್ಬಳ್ಳಿಗೆ ಇಳಿದು ಇಂಗ್ರೇಜಿ ಶಾಲಾ ಗುರುಗಳನ್ನು ಈರ್ವರೂ ಕಂಡುಬಂದರು. ಆ ವರುಷದ ಬಸವ ಜಯಂತಿಯನ್ನು ಗುರು–ಲಿಂಗಮ್ಮ ಹಾರಾಡಿಸಿಬಿಟ್ಟರು. ನಮ್ಮ ತೋಟದ ಹಣ್ಣಿನ ಸೀಕರಣೆ, ಹೋಳಿಗೆ.

ಹಣ್ಣು ಹಿಂಡುವಾಗ ಅಡಿಗೆಮನೆಯಲ್ಲಿ ಯಾರೂ ಇಲ್ಲದ್ದು ನೋಡಿ ಸಾವಳಿಗಯ್ಯನವರು ಮಾದಕ್ಕನ ಮುಂಬೆರಳಿಗೆ ತಗಲಿದ ಸೀಕರಣೆ ಸೀಪಿದ್ದನ್ನು ಕದ್ದು ನೋಡಿ ಆಗ ಸುಮ್ಮನಿದ್ದನು. ಎಲ್ಲರೂ ಊಟ ಮುಗಿಸಿ ಪಡಸಾಲೆ ಯಲ್ಲಿ ಕುಳಿತಿದ್ದೆವು. ಹಾಂ ! ಅದೇ ವರ್ಷ ನಮ್ಮ ಹೊಸ ಮನೆ ಕಟ್ಟುವದು ಮುಗಿದಿತ್ತು. ಅಂದು ಹೊಸ ಮನೆಯನ್ನು ಪ್ರವೇಶಮಾಡಿದ್ದೆವು. ಊರೊಳ ಗಿನ ನಾಲ್ವರು ಊಟಕ್ಕೆ ಬಂದಿದ್ದರು. ಅಜ್ಜನ ಹತ್ತರ ಹೋದನು ಚಿಕ್ಕಯ್ಯ. ಅವರು ಮಾತಿನಲ್ಲಿದ್ದರು. ನನ್ನ ಕಿವಿಯಲ್ಲಿ ಸುದ್ದಿ ಸೂರಿದನು. ಅಡಿಗೆಯ ಮನೆಯವರೆಲ್ಲ ಕಿವಿಗೊಡುವಂತೆ ಅಯ್ಯನವರನ್ನು ಕರೆದೆನು. ಚಿಕ್ಕಯ್ಯ ಗಟ್ಟಿಯಾಗಿ "ಮುಂಜಾನೆ ಹಣ್ಣು ಹಿಂಡುವಾಗ ಮಾವ ಅಕ್ಕನ ಬಟ್ಟು ಸೀಪಿದ್ದನು. ದೇವರು ನಾವು ನೀವು ಎಲ್ಲರೂ ಎಂಜಲವನ್ನೇ ಉಂಡದ್ದು" ಎಂದು ಕೂಗಿಬಿಟ್ಟನು. ಎಂದೂ ಇಲ್ಲದ ನಗೆ ಅಯ್ಯನವರನ್ನು ಆವರಿಸಿತು. ನಾನಂತೂ ನಗೆಯಲ್ಲಿ ತೇಲುತ್ತಿದ್ದೆನು. ಗುರುಲಿಂಗಮ್ಮನೂ ಊಟ ಮುಗಿಸಿ ಬಂದು ಮೊಮ್ಮಗನಿಂದ ಪುನಃ ಹೇಳಿಸಿ ಸೊಸೆ ಹೊರಗೆ ಬಾರದಂತೆ ಮಾಡಿ ದಳು. ಸಾವಳಿಗಯ್ಯನವರಂತೂ ಎಂದೋ ನುಸುಳಿದ್ದರು" ಎನ್ನುತ್ತಾ ಹಳೆಯ ನೆನಪಿನಿಂದ ನಕ್ಕು ಹೊರಳಿದನು ಮುದ್ದಣ್ಣ.

"ಸೀಕರಣೆ ರುಚಿಯಾಗಿದೆಯೋ ಇಲ್ಲೋ ನೋಡು ಅಂದಳು; ನೋಡಿದೆನು. ಕಳ್ಳ ಅವನೆಲ್ಲಿ ಕಾದು ನಿಂತಿದ್ದನೋ, ನನಗೆ ಕಾಣಲೇ ಇಲ್ಲ ಆಗ" ಎಂದು ಸಾವಳಿಗಯ್ಯನವರು ಮುಗುಳು ನಗೆ ನಕ್ಕರು.

"ನಿನ್ನ ಕಣ್ಣು ಮಾದಕ್ಕನ ಮೇಲಿರುವಾಗ ಅಳಿಯನೆಲ್ಲಿ ಕಾಣಬೇಕು?" ಎಂದು ಹನುಮಂತಣ್ಣ ನಗೆಯಾಡಿದನು.

" ಉಪ್ಪಿನ ಮಾಳ ಬಂತು. ನಮ್ಮ ಚಿಕ್ಕಯ್ಯನವರ ಮಾತು ಎಂದರೆ ನನಗೆ ಬೇಸರವಿಲ್ಲ. ಈಗ ಐದು ವರ್ಷಗಳ ಹಿಂದೆ ಜ್ಯೇಷ್ಠ ಮಾಸದಲ್ಲಿ ಹುಬ್ಬಳ್ಳಿಗೆ ಕಲಿಯಲಿಕ್ಕೆ ಹೋದನು ಚಿಕ್ಕಯ್ಯ. ಆ ವರ್ಷ ಮುಲ್ಕೀ ಪರೀಕ್ಷೆಯಲ್ಲಿ ಮೇಲುಪಂಕ್ತಿಯಲ್ಲಿ ಬಂದಿದ್ದನು ಚಿಕ್ಕಯ್ಯ. ಮೇಲಿನವರ ಒಪ್ಪಿಗೆಯಿಂದ, ಇಂಗ್ರೇಜಿ ಶಾಲೆಯಲ್ಲಿ ಮೂರನೆಯ ತರಗತಿಗೆ ಹೆಸರು ಹಚ್ಚಿಸಿದರಂತೆ ಹುಬ್ಬಳ್ಳಿಯ ಗುರುಗಳು. ಇದೇ ವರ್ಷ ನಮ್ಮ ಚಿಕ್ಕಯ್ಯ ಇಂಗ್ರೇಜಿ ಶಾಲೆ ಮುಗಿಸಿ, ಮುಂದೆ ಕಲಿಯಲಿಕ್ಕೆ ಧಾರವಾಡಕ್ಕೆ ಹೋದನು. ಆಗಸೆ ಬಂದಿತು. ನಮ್ಮ ಕತೆ ಮುಗಿಸುವಾ. ಈ ಮೂವತ್ತೆರಡು ವರ್ಷ ನಮ್ಮ ಅಯ್ಯನವರ ಬಾಳುವೆ ಕತ್ತಲೆ ಬೆಳಕಿನ ಗೊಂಬೆಯಾಟವಪ್ಪಾ........ಎರಡು ವರ್ಷಗಳ ಹಿಂದೆ ಗುರುಲಿಂಗಮ್ಮ ನಮ್ಮೆಲ್ಲರನ್ನೂ ಬಿಟ್ಟು ತೆರಳಿದ ಮೇಲಂತೂ ಅವರು ಈ ಜನ್ಮ ಹಿಡಿದಿರುವದು ನಿಮಿತ್ತ ಮಾತ್ರಕ್ಕೆ.

ಮೊಮ್ಮಗನು ಇಂಗ್ರೇಜಿ ಶಾಲೆಗೆ ಹೋದ ವರ್ಷವೆ ಇವರು ಶಾಲೆಯ ಕೆಲಸದಿಂದ ಬಿಡುಗಡೆ ಹೊಂದಿದ್ದು. ಸರಕಾರದ ಅರ್ಧ ಸಂಬಳ ಮೊಮ್ಮಗನ ಇಂಗ್ರೇಜಿ ಅಭ್ಯಾಸಕ್ಕೆ ಹಿಂದಿರುಗುತ್ತಿತ್ತು. ಸುಗ್ಗಿಗೊಮ್ಮೆ ಧಾನ್ಯ ದವಸಗಳನ್ನೂ ಕಾಳುಕಡಿಗಳನ್ನೂ ಗುರುದಕ್ಷಿಣೆಯೆಂದು ಸಾವಳಗಯ್ಯನವರು ಹುಬ್ಬಳ್ಳಿಗೆ ಮುಟ್ಟಿಸುತ್ತಿದ್ದರು. ಮೊಮ್ಮಗನ ತೊದಲ್ನುಡಿಯ ಪರನಾಡಿನ ಪತ್ರಗಳು ಅಯ್ಯನವರ ದಿನದ ಪಲ್ಲವಿಗೆ ಉಸಿರಾಗಿದ್ದವು. ಗುರುಲಿಂಗಮ್ಮನವರು ಅಬಲೂರಿನ ಸಂತತಿ ಜ್ಯೋತಿಯಾಗುವದನ್ನು ಕಣ್ಣಾರೆ ಪೂರ್ಣ ನೋಡಿ ನಲಿಯಲಿಲ್ಲವಲ್ಲ ಎಂಬ ಮಿಂಚು ವಿಚಾರ ಆಗೊಮ್ಮೆ ಈಗೊಮ್ಮೆ ಅಯ್ಯನವರ ಒಂದಾದ ತುಟಿಗಳನ್ನು ಎರಡು ಮಾಡುತ್ತಿತ್ತು.

ಇಲ್ಲಿಯೇ ಇಳಿಯುತ್ತೀಯಾ ಹನುಮಂತಣ್ಣ. ಮತ್ತೊಮ್ಮೆ ಕೂಡಿದಾಗ ನಮ್ಮ ನಿಮ್ಮ ಸುಖದುಃಖವನ್ನು ಮಾತಾಡುವಾ. ನಮಸ್ಕಾರ." ಮುದ್ದಣ್ಣ ಮಾತು ಮುಗಿಸಿ ಬದುಕಿನ ದುಗುಡಕ್ಕೆ ಒಳಗಾದನು.

ಮಾತಿನ ಸಂಭ್ರಮದಲ್ಲಿ ಎತ್ತು ಇಚ್ಛಾನುಸಾರ ನಡೆದಿದ್ದವು. ಹೊತ್ತು ನೆತ್ತಿಗೇರಿತ್ತು. ಮುದ್ದಣ್ಣನು ಮಾತು ಮುಗಿಸಿದ ಕ್ಷಣದಲ್ಲಿ ಬಂಡಿ ಕಣವನ್ನು ಸೇರಿತು. ಕೊರಳು ಹರಿದುದು ಒಂದೇ ತಡ. ಹೋರಿಗಳು ಕೊಟ್ಟಿಗೆಯಲ್ಲಿ ನುಗ್ಗಿದವು.

ಮಾದಕ್ಕನು ತಂದ ನೀರಿನಿಂದ ಈರ್ವರೂ ಕಾಲು ಮುಖ ತೊಳೆದರು. ಒಳಗೆ ಹೋಗಿ ದಾಹವನ್ನು ಉಪಶಮಿಸಿದರು. ಅಯ್ಯನವರಿಗೆ ಮೊಮ್ಮಗನು ಸುಖರೂಪವಾಗಿ ಉಗಿಬಂಡಿಯನ್ನು ಏರಿದನೆಂದು ತಿಳಿಸಿದರು. ಪ್ರತ್ಯುತ್ತರವಾಗಿ ಮಧುವಯ್ಯನವರು "ಮುದ್ದಣ್ಣ, ಅಂದು ನಿನ್ನ ಅಂಗೈ ದಡ್ಡುಗಳನ್ನು ಸವರಿ ಕೇದಾರಯ್ಯನು ಸೂಚಿಸಿದ ಬಾಳಿನ ಕೊನೆಯ ಗಳಿಗೆಯ ಮಾತು ಮಾರ್ಮಿಕವಾಗಿ ಸತ್ಯ. ನಿನ್ನ ಪರಿಶ್ರಮದ ಪ್ರತಿಫಲವಾಗಿ ಅವನ ಮಗನ ಬೆಳವಣಿಗೆಯ ನಿರೀಕ್ಷಣೆಯಿಂದ ಬರುವ ಆನಂದವನ್ನು ನೀನು ಸವಿಯಲಿ ಎಂದಲ್ಲವೆ?" ಎಂದರು.

"ಹಾಂ! ನನಗೆ ಆನಂದ. ನಿಮ್ಮೆಲ್ಲರಿಗೆ ಅಭಿಮಾನ!"

೩

ಧಾರವಾಡ
೬-೮-'೩೬

ಅಜ್ಜನಿಗೆ ಪ್ರಸಾದನ ಪ್ರಣಿಪಾತಂಗಳು.

ಮೊನ್ನೆ ಸಾಯಂಕಾಲ ಇಲ್ಲಿಗೆ ಮುಟ್ಟಿದೆನು. ಬರುವಾಗ ಹುಬ್ಬಳ್ಳಿಯಲ್ಲಿಳಿದು ಗುರುಗಳನ್ನು ಕಂಡು ಬಂದೆನು. ನಮ್ಮ ಚಳಿಗಾಲದ ಹಾಗೂ ಡಿಸೆಂಬರ ಬಿಡುವಿನ ದಿನಗಳನ್ನು ಅವರೊಡನೆ ಕಳೆಯಬೇಕೆಂದು ಹೇಳಿರುವರು. ಸಂಸ್ಕೃತ, ಕನ್ನಡ ಹಾಗೂ ಇಂಗ್ರೇಜಿ ಸಾಹಿತ್ಯದ ಪರಿಚಯ ಮಾಡಿಸುವದಾಗಿ ಹೇಳಿರುವರು. ನಾನು ಒಪ್ಪಿದ್ದು ಒಳ್ಳೆಯದಷ್ಟೆ?

ಬೀಳ್ಕೊಡುವಾಗ ಒಂದು ರನ್ನಗನ್ನಡಿಯನ್ನೂ ಒಂದು ಹೊತ್ತಿಗೆಯನ್ನೂ ನನ್ನ ಕೈಯಲ್ಲಿರಿಸಿದರು. ಅವರ ಮುಖ ನೋಡಿದೆನು. "ಆ ಕನ್ನಡಿಯೆದುರು, ನನ್ನ ನೆನವು ಇರುವ ವರೆಗೆ, ನಿತ್ಯವೂ ಮುಂಜಾವಿನಲ್ಲಿ ಸ್ನಾಯುಬಲವನ್ನು ಸಂವರ್ಧಿಸು. ಆ ಹೊತ್ತಿಗೆ ರವೀಂದ್ರರದು. ಅವರ ಸಂದೇಶದಂತೆ ರಸಿಕನಾಗಿ ಅರಿತು ಅರ್ಥಪೂರ್ಣವಾಗಿ ಬಾಳು" ಎಂದರು.

'ಹಸ್ತಾಕ್ಷರ'ದ ನನ್ನ ಪುಸ್ತಕದಲ್ಲಿ "One can not always be a hero, but one can always be a man" ಎಂದು ಬರೆದು ಅಂಕಿತವನ್ನಿಟ್ಟರು.

"ಅದು ನನ್ನ ಮಾತಲ್ಲ. ಜರ್ಮನಿಯ ಮಹಾಕವಿ 'ಗಟೆ' ಮಾನವರಿಗಿತ್ತ ಸಂದೇಶ" ಎಂದು ಮೈದಡವಿ ಬೀಳ್ಕೊಟ್ಟರು.

ವಿದ್ಯಾಲಯವು ನನಗಿನ್ನೂ ಪರಕೀಯವಾಗಿ ಕಾಣುತಿದೆ. ಎಲ್ಲಿಯೂ ಹೊಸ ಮುಖಗಳು ಹೊಸ ವಿಚಾರಗಳು. ಹೊಸ ಆವರಣ ಒಗ್ಗುವದು ನಿದಾನವಾಗಿ.

ನಾನು ಇದೀಗ ಅಡಿಯಿಟ್ಟದ್ದೇನೆ. ಸುಯೋಗವನ್ನು ಕಂಡುಕೊಂಡು ಮುಂದುವರಿಯುವೆನು. ಇಲ್ಲಿಯ ತಂಪು ಹವೆಗೆ ಮುಂಜಾನೆಯ ಬೀಸು ವ್ಯಾಯಾಮ ಬಹಳ ಸಹಕಾರಿ ಎಂದು ಕಾಣುತಿದೆ. ನನ್ನ ಕೋಣೆ ಸಾಕಷ್ಟು ವಿಶಾಲವಾಗಿದೆ.

ನಿಲ್ದಾಣದಿಂದ ವಿದ್ಯಾಲಯಕ್ಕೆ ಬರುವಾಗ ಹೆದ್ದಾರಿಯಲ್ಲಿ ಸುಂಕದ ಕಟ್ಟೆಯಿಲ್ಲವೆ? ಅಲ್ಲಿಂದ ಬಲಕ್ಕೆ ತಿರುಗಿದರೆ ಕಲೆಕ್ಟರರ ಕಚೇರಿಯ ದಾರಿ. ದಾರಿಯಲ್ಲಿಯೇ ಬಲಕ್ಕೆ ಕಚೇರಿಗೆ ಮುಖವಾಗಿ ಮೂರನೆಯ ಆವಾರದಲ್ಲಿ ಮುಖ್ಯ ಕಟ್ಟಡದ ಎಡಕ್ಕೆ ಒಂದು ಕೊಠಡಿ ಇದೆ. ಅಲ್ಲಿಯೇ ನಾನಿರುವದು. ಆ ಕಟ್ಟಡದ ಒಡೆಯ ನನ್ನ ಸಹಪಾಠಿ. ನಾನು ಊಟಮಾಡುವ ಮನೆ ಧಾರವಾಡದಲ್ಲಿ ಹೆಸರಾದುದು. ಇದೆಲ್ಲವನ್ನೂ ಬರೆಯದಿದ್ದರೆ ನೀನು ವಿಪರೀತ ಹಚ್ಚಿಕೊಂಡು ಬರೆಯುವಿಯಷ್ಟೆ. ಅಂತೆಯೆ ಈ ವಿವರ.

ನಾನು ಇಲ್ಲಿ ಜತನದಿಂದ ಇದ್ದು ನನ್ನ ಕಾರ್ಯವನ್ನು ಪೂರಯಿಸಿ ನಿಮ್ಮ ಶ್ರಮದ ಪ್ರತಿಫಲಕ್ಕೆ ಪಾತ್ರನಾಗಲು ಹವಣಿಸುವೆನು. ನೀವು ಮಾತ್ರ ಮನೆಯಲ್ಲಿ ಉಲ್ಹಾಸವನ್ನು ಬರಮಾಡಿಕೊಂಡು ಅಕ್ಕ-ಮಾವಂದಿರ ಹೊಸ ಬಾಳನ್ನು ಕಳೆದುಂಬಿಸಬೇಕು.

ನಿಮ್ಮೆಲ್ಲರ ನೆನಹು ನನ್ನೊಡನೆ ನೆರಳಾಗಿ ಹಿಂಬಾಲಿಸಿದೆ, ಮುಂದುವರಿಯುತಿದೆ, ಒಮ್ಮೊಮ್ಮೆ ನಿಂತಲ್ಲಿಯೇ ನಿಲ್ಲಿಸಿಬಿಡುತ್ತಿದೆ.

ನಿಮ್ಮ
ಶಿವಪ್ರಸಾದ.

ಧಾರವಾಡ
೨೬—೯—'೫೫
ವಿಜಯದಶಮಿ

ಅಜ್ಜನಡಿಗೆ ಪ್ರಸಾದನ ಕಡು ಪೊಡಮಡಿಕೆಗಳು.

ಉತ್ತರೆ ಮಳೆಯು ಬಂದುದನ್ನು ನಿಮ್ಮ ಪತ್ರದಲ್ಲಿ ಓದಿ ಆನಂದವಾಗಿದೆ. "ಉತ್ತರೆಯು ಬರೆತಿಹರೆ ಹೆತ್ತ ತಾಯ್ತೊರೆದಿಹರೆ। ಸತ್ಯರು ತಪ್ಪಿ ನಡೆದರೆ ಲೋಕ ತಾ। ನೆತ್ತ ಸೇರುವದು ಸರ್ವಜ್ಞ॥" ಎಂಬ ನಿಮ್ಮ ಪ್ರಿಯ ವಚನ ನೆನಪಿಗೆ ಬಂದಿತು.

ನಮ್ಮ ವಿದ್ಯಾಲಯದಲ್ಲಿ ಅಮೋಘವಾದ ಘಟನೆಗಳು ನಡೆದವು. ಆ ನನ್ನ ಪ್ರಗತಿಪರ ಆನಂದದಲ್ಲಿ ನಿಮ್ಮೆಲ್ಲರನ್ನೂ ಪಾಲುಗಾರರನ್ನಾಗಿ ಮಾಡುವ ವಿಚಾರದಿಂದ ಇಲ್ಲಿಯ ವರೆಗೆ ಪತ್ರ ಬರೆಯಲಿಲ್ಲ.

ಧಾರವಾಡ ಮಲೆನಾಡಿನ ಸೆರಗು. ನಮ್ಮದು ಗಡಿನಾಡು. ಬಯಲು ಸೀಮೆಯ ಸೆಳಕಿನ ಮಳೆಗಳೇ ಹೆಚ್ಚು ನಮ್ಮಲ್ಲಿ. ಇಲ್ಲಿ 'ಜಿಟಿ-ಜಿಟಿ' ಮಳೆ. ಸೋತೆನೆಂದರೂ ಬಿಡದ ಇಂಥ ಸೋನೆಯ ಜಡಿಮಳೆಯಲ್ಲಿ ನಮ್ಮ ವಿದ್ಯಾ-ಲಯವು ತೋರಿಸಿದ ಉತ್ಸಾಹಕ್ಕೆ ಎಣೆಯಿಲ್ಲ. ಈ ಬಾರೆ ಇದೇ ತಿಂಗಳ ೧೭-೧೮ನೆಯ (ಗುರು-ಶುಕ್ರ) ದಿನಾಂಕಗಳಲ್ಲಿ ನಮ್ಮ ವಾರ್ಷಿಕೋತ್ಸವ ಜರುಗಿತು.

ಗುರುವಾರ ಮುಂಜಾನೆ ೮ ಘಂಟೆಗೆ ಸಾಮೂಹಿಕ ಅಲ್ಪಾಹಾರ. ಈ ಸಾಮೂಹಿಕತೆಯಲ್ಲಿ, ನಮ್ಮ ಪೂರ್ವಜರ ಕಿತ್ತೆಯನ್ನು ತೀಡಿದ ನನಗೆ ಏನೂ ಮಹಿಮೆ ಕಾಣಲಿಲ್ಲ. ಪ್ರಮಾದವಂತೂ ಬಳಿ ಸುಳಿಯಲಿಲ್ಲ.

ಬಯಲಿನ ಸ್ಪರ್ಧಾತ್ಮಕ ಆಟಗಳ ಸಮಯದಲ್ಲಿ ಆಕಾಶ ನಿಚ್ಚಳ ವಾಗಿತ್ತು. ಸಾಯಂಕಾಲ ನಾಲ್ಕು ಘಂಟೆಗೆ ನಮ್ಮ ವಾಚನಾ ಮಂದಿರದಲ್ಲಿ ಪ್ರಮುಖ ನಾಗರಿಕರೊಂದಿಗೆ ವಿದ್ಯಾಲಯವು ಕಿಕ್ಕಿರಿದು ನೆರೆದಿತ್ತು.

ಉತ್ತರದ ವಿದ್ಯಾಪೀಠದಲ್ಲಿ ಪ್ರಾಧ್ಯಾಪಕರಾಗಿದ್ದ ಘನ ವಿದ್ವಾಂಸ ರೊಬ್ಬರು ಅಂದಿನ ಮುಖ್ಯ ಅತಿಥಿಗಳಾಗಿದ್ದರು. ಅವರು ನಮ್ಮ ನೆರೆಯ ಗೋವೆಯ ಕ್ರಿಶ್ಚಿಯನ್ ನಾಗರಿಕರು. ಅವರು ತಿಳಿಯಾದ ಭಾಷೆಯಲ್ಲಿ

ಹಾಸ್ಯ ಮಿಶ್ರ ವಾಗ್ಝರಿಯನ್ನು ಹರಿಸಿದರು. "ರಸಿಕನಾಡಿದ ಮಾತು ಶಶಿ ಯುದಿಸಿ ಬಂದಂತೆ" ಎಂದುದರ ಉತ್ತಮ ನಿದರ್ಶನ ಅವರ ಭಾಷಣ. ಅವರ ವಿಷಯವೂ ಅದೇ: "ಮಾತುಗಾರಿಕೆಯ ಮೇಲ್ಮೆ ಮತ್ತು ಬಳಕೆ." ಒಂದು ತಾಸಿನ ವರೆಗೆ ನಮ್ಮ ಭಾವನಾತರಂಗಗಳು ಪ್ರಶಾಂತ ವಾತಾವರಣದಲ್ಲಿ ತೆರೆ ತೆರೆಯಾಗಿ ತೇಲಿದವು.

ಮರುದಿನ ಮುಂಜಾನೆ ೧೦ ಘಂಟೆಗೆ ಪುನಃ ಅದೇ ಸ್ಥಳದಲ್ಲಿ ಒಂದು ಮಹತ್ವದ ಚರ್ಚಾತ್ಮಕ ವಿಷಯದ ಮೇಲೆ ನಾಲ್ವರು ಮಾತಾಡಿದರು. ಮುಖ್ಯ ಸೂಚನೆಯನ್ನು ತಂದವರು ನಿನ್ನೆಯ ಅತಿಥಿಗಳು.

"ವೈಜ್ಞಾನಿಕ ಪ್ರಗತಿ ಮಾನವರ ಜೀವನಕ್ಕೆ ತೊಡರು" ಎಂಬು ದನ್ನು ಪ್ರತಿಪಾದಿಸಿದರು. ಅವರ ಮಾತಿನ ಶೈಲಿ ಬೆಣ್ಣೆಯಂತೆ ಮಿದುವು ಮತ್ತು ಹಿತಕರ. ಅವರ ಎದುರಾಳಿ ಹುಬ್ಬಳ್ಳಿಯ ಕ್ರಿಶ್ಚಿಯನ್ ಪಾದ್ರಿ ಯೊಬ್ಬರು. ಧರ್ಮದ ಪ್ರತಿನಿಧಿ ತಾಮಸ ವಿಜ್ಞಾನಕ್ಕೆ ಬೆಂಬಲವಾಗಿ ನಿಂತಿ ದ್ದನು. ಅದೆಷ್ಟು ಹುರುಪು ಅವರ ಶೈಲಿ. ಸಭಿಕರ ಮಿದುಳಿನಲ್ಲಿ ಮಂಥನದ ಕೋಲಾಹಲವನ್ನೆಬ್ಬಿಸಿದರು ಎದುರಾಳಿ. ಮೂರನೆಯವರು ನಮ್ಮ ವಿದ್ಯಾಲ ಯಕ್ಕೆ ಹೊಸದಾಗಿ ಬಂದ ಪ್ರಾಧ್ಯಾಪಕರು. ಇವರ ಮಾತಿನಲ್ಲಿ ಯಾವ ಆವೇಶ ಒತ್ತಾಯಗಳಿದ್ದಿಲ್ಲ. ಮೆಲ್ಲನೆ ನುಣುಪಾಗಿ ತಮ್ಮ ಪ್ರತಿಪಾದನೆಯನ್ನು ಮುಗಿಸಿದರು. ನಾಲ್ಕನೆಯವರಾಗಿ, ಹಿಂದಿನ ರಾತ್ರಿ ಆಡಿದ ನಾಟಕವನ್ನು ಬರೆದವರು ಬಂದರು. ಮಾತಿನಲ್ಲಿಯೂ ಅದೇ ಕೋಲಾಹಲ. ಕರ್ಕಶ ಧ್ವನಿಯಲ್ಲಿ ಸತ್ಯದ ಸವಿಯನ್ನು ತುಂಬುವ ಎಲ್ಲರಿಗೂ ಪ್ರಿಯವಾದ ಅವರ ಹಾಸ್ಯದ ಬರೆಗಳು ನಮ್ಮೆಲ್ಲರನ್ನು ನಗಿಸಿದಂತೆ, ಅವರ ತೂಕದ ಮಾತುಗಳನ್ನು ಮೆಲುಕುಹಾಕುವಂತೆ ಮಾಡಿದವು.

ಇನ್ನು ನನ್ನ ವಿಷಯ. ಒಂದು ಆನಂದದ ಸಂಗತಿ. ನಾನಿರುವ ಮನೆಯ ನನ್ನ ಸಹಪಾಠಿ ಉತ್ತಮವಾಗಿ ಸಿತಾರಾ ನುಡಿಸುತ್ತಾನೆ. ನಾನು ಹಿಂದೆ ನಿಮಗೆ ಪತ್ರ ಬರೆದ ದಿನವೇ ರಾತ್ರಿ ತನ್ನ ಉಪ್ಪರಿಗೆಗೆ ಕರೆದೊಯ್ದನು. ಆಗ ಅವನ ಈ ವಿಷಯ ನನಗೆ ತಿಳಿಯಿತು. ನನಗೆ ಸಂಗೀತದ ಪರಿಶ್ರಮ ವಿದೆಯೆಂದು ನಾನೇನು ಆಗ ತಿಳಿಸಲಿಲ್ಲ. ಸುಮಾರು ಈಗ ಒಂದು ತಿಂಗಳು ಹಿಂದೆ ಗಣೇಶ ಚತುರ್ಥಿಯ ಬಿಡುವಿತ್ತು. ಮರುದಿನ ಶನಿವಾರ. ಅಭ್ಯಾಸವೂ

ಅಷ್ಟಿರಲಿಲ್ಲ. ನನ್ನ ಕೋಣೆಯೊಳಗೆ ಇಳಿದನಿಯಲ್ಲಿ ಗುಂಯಿಗುಡುತ್ತಿದ್ದೆನು. ಅದರೊಳಗೆ ಆಲಾಪ, ತಾನು, ಗಿರಡಿ ಇವುಗಳ ಕಸರತ್ತು ನಡೆದಿತ್ತು. ಯಾರೋ ಬಾಗಿಲ ಬಡೆದರು. ಗಪ್ಪನೆ ನುಂಗಿ ಮೆಲ್ಲನೆ ಅರಿಯದವನಂತೆ ಬಾಗಿಲು ತೆರೆದೆನು. "ಎಲಾ ಕಳ್ಳ" ಎಂದು ಗಂಟು ಬಿದ್ದ ನನ್ನ ಸಹಪಾಠಿ. ಅಂದಿನಿಂದ ಇಂದಿನ ವಾರ್ಷಿಕೋತ್ಸವದ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಲು ಹುರಿದುಂಬಿಸಿದನು. ಅವನ ನನ್ನ ನಡುವೆ ಆದ ಹಲವಾರು ಒಪ್ಪಂದ ಕರಾರುಗಳ ನಂತರ ಸಿದ್ಧನಾದೆನು. ನಿತ್ಯ 'ತಾಲೀಮು' ನಡೆಯಿತು. ಪ್ರಾರಂಭವಾದ ಮರುರಾತ್ರಿ ಅರ್ಧದಲ್ಲಿಯೇ ಸಿತಾರವನ್ನು ಕೆಳಗಿರಿಸಿ, "ಶರಣು ಮಹಾರಾಯಾ. ಏನು ಬೆಪ್ಪು ತಕ್ಕಡಿಗಳಪ್ಪ ನಮ್ಮ ಜನ. ಇಷ್ಟು ತುಂಬಿ ಕೊಂಡು ಕದಹಾಕಿಕೊಂಡು ಗುಂಯಿಗುಡುತ್ತಿದ್ದಿಯಲ್ಲವೆ? ನಾಲ್ವರು ಕೇಳಿದರೆ ಮೆಚ್ಚಿದರೆ ಕಡಿಮೆಯಾಗುತ್ತದೇನು?" ಎಂದನು. ಅಂದಿನಿಂದ ನನ್ನ ಕೋಣೆಗೆ ಮುಖ್ಯಕಟ್ಟಡದಿಂದ ವಿದ್ಯುದ್ದೀಪಗಳ ಶಾಖೆ ಬಂದಿತು.

೧೮ನೆಯ ಶುಕ್ರವಾರ ೨ ಘಂಟೆಗೆ ಸ್ಪರ್ಧೆ ಪ್ರಾರಂಭ. ತಂತಿ ವಾದ್ಯದ ಸ್ಪರ್ಧೆಯಲ್ಲಿ ನನ್ನ ಸಹಪಾಠಿ ಮೊದಲಿನವನಾದನು. ನನಗಾಗಿ ಒಬ್ಬಿಬ್ಬರು ಗೆಳೆಯರನ್ನು ಮನವೊಲಿಸಿ ತಬಲಾ-ತಂಬೂರಿಗೆ ಅಣಿಮಾಡಿದ್ದನು.

ನಿನ್ನ ಪ್ರೀತಿಯ "ನೆಚ್ಚಿದೆನೆಂದರೆ ಮೆಚ್ಚಿದೆನೆಂದರೆ" ಎಂಬ ಬಸವಣ್ಣನವರ ವಚನವನ್ನು ಸಾರಂಗ ರಾಗದಲ್ಲಿ, ಜನಕ್ಕೆ ತಕ್ಕಂತೆ ಎಲ್ಲವನ್ನೂ ಮಿತಿಯಲ್ಲಿಟ್ಟು, ಹತ್ತು ನಿಮಿಷಗಳಲ್ಲಿ ಹಾಡಿ ಮುಗಿಸಿದೆನು. ಹತ್ತು ನಿಮಿಷಗಳನ್ನು ಹೆಚ್ಚಾಗಿ ಅಧ್ಯಕ್ಷರು ಪ್ರೀತಿಯಿಂದ ನನಗೆ ಒಪ್ಪಿಸಿದರು. ಹೊಸದಾಗಿ ಅರಿಸಿಕೊಂಡ ಕಬೀರದಾಸರ "ನಿಶಿದಿನ ಖೇಲತ ರಹೀ ಸಖಿಯಾ ಸಂಗ" ಎಂಬ ಭಕ್ತಿಪದವನ್ನು ಹಾಡಿದೆನು. ನನಗೆ ಸಂಗೀತದಲ್ಲಿ ಪ್ರಥಮ ಬಹುಮಾನ ದೊರೆಯಿತು. ವಿದ್ಯಾರ್ಥಿಗಳ ಕಣ್ಣುಗಳು ನಮ್ಮ ಮೇಲೆಯೇ ಇದ್ದುದನ್ನು ಗೆಳೆಯನು ಹೊರಬಂದಾಗ ಹೇಳಿದನು. ನನಗೆ ಆನಂದವಾದುದನ್ನು ಅವನ ಕೈವಾಡಕ್ಕೆ ಒಪ್ಪಿಸಿ ಮೊದಲಿನಂತೆ ಬರಿಗೈಯವನಾದೆನು. ನಿನ್ನ ಜ್ಞಾನದ ಅಂಶವು ಇಷ್ಟು ಮಾಯವಾಡುವದೆಂದು ನಾನು ಎಣಿಸಿರಲಿಲ್ಲ. ಈ ಸಾರೆ ಊರಿಗೆ ಬಂದಾಗ ನಾನು ಹಾಡುವೆ ನೀನು ತೀಡಬೇಕು. ತೀಡಿ ತಿದ್ದಬೇಕು. ಒಂದು ಕೈ ನೋಡಿಬಿಡುವಾ.

ನನ್ನ ಪ್ರಗತಿ ಯೋಗ್ಯ ದಾರಿಯಲ್ಲಿರಬಹುದೆಂದು ನಿಮಗೆ ತೋರಿದರೆ ನಾನು ಧನ್ಯ. ನನ್ನ ಒಡನೋದುಗ ನನಗೆ ಅವಶ್ಯವಿದ್ದ ಸಂಗತಿಗಳಲ್ಲಿ ನೆರವಾಗಿ ಪರಿಚಯ ಮಾಡಿಸುತ್ತಾನೆ.

ವಿಜಯ ದಶಮಿಯು ನಿಮ್ಮೆಲ್ಲರ ಶುಭಾಶೀರ್ವಾದಗಳನ್ನು ನನಗೆ ಎರೆದು ದಾರಿದೋರಲಿ.

ನಿಮ್ಮ
ಶಿವಪ್ರಸಾದ.

ಹುಬ್ಬಳ್ಳಿ
೧೦—೧೦—೩೬

ಅಜ್ಜನಿಗೆ ನಲ್ಮೆಯ ತುಳಿಲ್ಗಳು.

ನಾನು ಇಲ್ಲಿಗೆ ಇಂದು ಸಾಯಂಕಾಲ ಬಂದಿರುವೆನು. ನಿಮ್ಮ ೧—೧೦—೩೬ ರ ಪತ್ರ ಮುಟ್ಟಿದೆ. ಮಾದಕ್ಕನು ಗಂಡು ಮಗುವನ್ನು ಹೆತ್ತಳೆಂಬುದನ್ನು ಓದಿ ಸಂತಸವಾಗಿದೆ. ಅಕ್ಕನ ಜೀವನದಲ್ಲಿ ಆಸ್ಥೆ ಚಿಗುರಿತು. ಮಾವನಿಗೆ ಬದುಕಿನಲ್ಲಿ ಗುರಿ ಉದಯಿಸಿತು.

ಸೀಗೆ ಹುಣ್ಣಿಮೆಯನ್ನು ತೀರಿಸಿಕೊಂಡು ಹೊಲದಿಂದ ಬಂದ ನಂತರ ಮಾದಕ್ಕನು ರಾತ್ರಿಯಲ್ಲಿ ಮಗುವನ್ನು ಹೆತ್ತಳೆಂದಮೇಲೆ ಶಿಶುವು ಸಮಾಧಾನ ಮುಖಮುದ್ರೆಯುಳ್ಳದ್ದಿರಬಹುದು. ಅಳಿಯನ ನಾಮಕರಣವು ನನ್ನ ಸೂಚನೆಯಂತೆ ನಡೆಯಬೇಕೆ? ಆಗಲಿ. ನವೀನ ಪದ್ಧತಿಯಂತೆ ಅನ್ವರ್ಥಕ ಹೆಸರನ್ನು ಸೂಚಿಸುವೆನು. ಶರದೃತುವಿನ ಪೂರ್ಣಿಮೆಯ ಪ್ರಶಾಂತ ಸಮಯದಲ್ಲಿ ಅಲ್ಲವೆ ಜನನ?

"ಶರಚ್ಚಂದ್ರ" ನೆನ್ನಿರಿ. ಮುದ್ದಣ್ಣನಿಗೂ ಉಳಿದ ನಮ್ಮ ನೆರೆಯವರಿಗೂ ಗಡುಚಾದರೆ ಅವರು "ಶರದಯ್ಯ" ನೆನ್ನಲಿ.

ನಿಮ್ಮೆಲ್ಲರ ಸಂಭ್ರಮದಲ್ಲಿ ಒಂದಾಗಲು ಮನಸ್ಸು ಹಾತೊರೆಯುತ್ತಿದೆ. ನೀವೆಲ್ಲರೂ ನನ್ನ ಸಂಬಂಧವಾಗಿ ಇಲ್ಲಿಯ ಹಳಹಳಿಯನ್ನು ಬಿಟ್ಟು ಮಗುವಿನ ಪೋಷಣೆಯಲ್ಲಿ ಮಗ್ನರಾದರೆ ನಾನೂ ಅಲ್ಲಿಯೇ ಇದ್ದಂತಾಗುವದಿಲ್ಲವೆ?

ನನ್ನ ಗುರುಗಳು ಇಂದು ಸಾಹಿತ್ಯ ಪರಿಚಯದ ಪೀಠಿಕೆಯಲ್ಲಿಯೇ, ಉಷಾದೇವಿಯನ್ನು ಕುರಿತು ಋಗ್ವೇದದಲ್ಲಿ ಹೇಳಿದ ವಿಚಾರವನ್ನು ಸಂದರ್ಭಕ್ಕನುಸರಿಸಿ ಎತ್ತಿ, ಸಾಹಿತ್ಯದ ಸತ್ಯ–ಸೌಂದರ್ಯಗಳು ಚಿರನೂತನವೆನ್ನುವದಕ್ಕೆ, "ಪುರಾಣೀ ನವಯುವತಿ" ಎಂದು ಆರಂಭಿಸಿದ್ದಾರೆ.

ಊರಿಗೆ ಬಂದಾಗ ಅವರು ತಿಳಿಸುವ ಎಲ್ಲ ವಿಚಾರಗಳನ್ನೂ ನಿನ್ನೆದುರು ಇಡುವೆನು. ಹಿರಿಯರಿಗೆ ವಂದನೆಗಳು. 'ಶರಚ್ಚಂದ್ರ'ನಿಗೆ ನನ್ನ ಮುದ್ದುಗಳು.

ನಿಮ್ಮ
ಶಿವಪ್ರಸಾದ.

## ೪

ವಸಂತ ಋತುವಿನ ಮೊದಲನೆಯ ಭಾನುವಾರ. ಧಾರವಾಡದ ವಿಜಯ ಚಿತ್ರಮಂದಿರದಲ್ಲಿ ಎಮ್. ಜಿ. ಎಮ್. ಕಂಪನಿಯ ಪ್ರಖ್ಯಾತ ಚಿತ್ರ: "ಮ್ಯೂಟನಿ ಆನ್ ದಿ ಬೌಂಟಿ." ಕೊನೆಯ ದಿನದ ಎರಡನೆಯ ಆಟಕ್ಕಾಗಿ ಜನರು ಗುಂಪುಗುಂಪಾಗಿ ಅಲ್ಲಲ್ಲಿ ಕಾದಿರುವರು. ಹಗಲು ಆಟ ಮುಗಿಯ ಬಂದಿದೆ. ಚಿತ್ರದ ವಿವರವನ್ನೊಳಗೊಂಡ ಕರಪತ್ರದ ಮೇಲೆ ವಿಮರ್ಶೆಯೆತ್ತಿ ಈರ್ವರು ತರುಣರು ತಮ್ಮಲ್ಲಿಯೇ ನಗೆಯಾಡುತ್ತಿರುವರು. "Matinee show ಬದಲು Mutiny show ಆಗಿದೆ ಪತ್ರದಲ್ಲಿ, ನೋಡು." "ಬಾಗಿಲು ಕಾಯುವವನ ಕುರ್ಚಿಗೂ ಕಾಣಿ ಬಂದಿದೆ. ಹಗಲಾಟ ಬಂಡಾಟವಾಗದೇನು?"

ಮೊದಲಿನವನ ಕಣ್ಣು ಆಗಲೇ ಒಂದು ಅಚ್ಚರಿಯ ವಿಷಯವನ್ನು ಅರಸಿ ನಿರ್ಧಾರಕ್ಕೆ ಬರುತ್ತಿದ್ದವು. ಇದನ್ನು ಕಂಡ ಎರಡನೆಯವನು ಕುತೂಹಲದಿಂದ "ಅದೇನು?" ಎಂದನು.

"ನಿಲ್ಲು. ಸ್ವಲ್ಪ ಸುಳಿವು ಹತ್ತಿದೆ. ಅದು ನೋಡು ಆಚೆ ಮಲ್ಲಿಗೆಯ ಅಂಟಿನ ಹತ್ತರ ನಿಂತಿರುವ ಹಸುರು ಪತ್ತಲದ ಹುಡುಗಿ ನಿನ್ನನ್ನೇ ಎವೆಯಿಕ್ಕದೆ ನೋಡಿ, ಇದೀಗ ಅತ್ತ ಹೊರಳಿದ್ದಾಳೆ. ಅವಳೊಡನೆ ನಿಂತಿರುವವರ

ಕೂಡ ನಿನ್ನ ಸಂಬಂಧವಾಗಿ ಏನೋ ತಿಳಿಸಿ ಹೇಳುವಂತಿದೆ. ನಿನಗೆ ಪರಿಚಯಸ್ಥರೋ?"

"ನಾನರಿಯೆನು ಬಿಡು. ತಡೆ ಇಲ್ಲಿಯೇ ಬರುವರು ನೋಡು. ಹಾಂ! ಎಲ್ಲಿಯೋ ನೋಡಿದಂತಿದೆ. ಅದೆಷ್ಟು ತೊಂದರೆ ಅವರು ಗುರುತು ಹಿಡಿದು ನಾನು ಹಿಡಿಯದಿದ್ದರೆ!"

ಅಷ್ಟರಲ್ಲಿಯೇ ಅವಳ ಸಂಗಡಿಗರು ಬಂದು ಕೈಚಾಚಿದರು. ಯಾಂತ್ರಿಕವಾಗಿ ಕೈ ಕುಲುಕಿಸಿ ತರುಣ ಮೂಕನಾಗಿ ನಿಂತನು. "ಅದೇನು ಎಷ್ಟು ಬೇಗನೆ ಮರೆತುಬಿಟ್ಟಿರುವಿರಲ್ಲ? ಆರು ತಿಂಗಳ ಹಿಂದೆ ನಾವು ಗಾಡಿಯಲ್ಲಿ ಕೂಡಿ ಬರಲಿಲ್ಲವೇ?" ಎಂದರು ಆ ದೃಢಕಾಯದವರು.

"ಓ! ಅಹುದು. ರಾಣಿಬಿದನೂರಿನ ನಿಲ್ದಾಣದಲ್ಲಿ ಗಾಡಿ ವೇಗದಲ್ಲಿದ್ದಾಗ ಹತ್ತಿದವರು ನೀವೆ ಅಲ್ಲವೆ. ಅವರೂ ನಿಮ್ಮ ಜೊತೆಯಲ್ಲಿದ್ದರು" ಎಂದು ಆ ಕುಮಾರಿಯ ಕಡೆಗೆ ಕಣ್ಣಿಟ್ಟರು ಚಿಕ್ಕಯ್ಯನವರು. ಅವೇ ಬೊಗಸೆಗಂಗಳು. ಪೂರ್ಣಿಮೇಂದುವಿನ ಅದೇ ದುಂಡು ಮುಖ. ಅವೇ ಕೆನ್ನೆಗಳು: ಕೆನ್ನೆಯ ಕುಣಿಗಳು. ಅವೇ ಮುಂಗುರುಳು. ಅವೇ ಕೆಂದುಟಿಗಳು. ಅದೇ ದುಂಡು ದೇಹ. ಲಂಗದ ಮೇಲೆ ಪತ್ತಲ ಮಾತ್ರ ಬಂದಿದೆ.

"ಅಂದು ಅವಸರದಲ್ಲಿ ನಿಮ್ಮ ಪರಿಚಯ ಲಾಭವಾಗಲಿಲ್ಲ" ಎಂದು ಮಾತು ಮುಂದರಿದಾಗ ಚಿಕ್ಕಯ್ಯನವರು ಎಚ್ಚತ್ತು "ಅಹುದು. ಇಂದು ಆಗಬಹುದಲ್ಲವೆ?" ಎಂದರು.

"ಇವಳು ನನ್ನ ಸೋದರನ ಮಗಳು. ಇಂದ್ರಾಣೀ ನಂದೀಮಠ" ಎಂದು ಚಿಕ್ಕಪ್ಪನವರು ಪರಿಚಯ ಮಾಡಿಕೊಟ್ಟರು. ತರುಣರು ಅವಳಿಗೆ ಸಾಂಪ್ರದಾಯಿಕವಾಗಿ ಶರಣೆಂದರು. ಚಿಕ್ಕಯ್ಯನವರ ಮಿತ್ರ, "ಇವರು ಶ್ರೀಮಾನ್ ಶಿವಪ್ರಸಾದ ಅರ್ಪಣಮಠ. ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಮಹಾ........" ಎನ್ನುತ್ತಿರುವಾಗಲೇ ಶಿವಪ್ರಸಾದ ಅವನನ್ನು ತಡೆಹಿಡಿದು, "ನನ್ನ ಗೆಳೆಯ ಕುಮಾರ ಚಂದ್ರಕಾಂತ ಪುರಾಣಿಕ. ನನ್ನ ವರ್ಗದಲ್ಲಿದ್ದಾನೆ" ಎಂದು ತನ್ನ ಮಿತ್ರನ ಗುರುತು ಹೇಳಿದನು.

"ಸಮವಯಸ್ಸಿನವರು. ನಿಮ್ಮ ನಿಮ್ಮ ಪರಿಚಯವಾಯಿತು. ನನ್ನನ್ನು ಬಿಡುವದೇಕೆ. ನನ್ನ ಹೆಸರು ನಂಜುಂಡಯ್ಯ ನಂದೀಮಠ. ನನ್ನ

ಸೋದರ ಒಕ್ಕಲುತನದ ಖಾತೆಯಲ್ಲಿ ಅಧಿಕಾರಿಯಿದ್ದಾನೆ. ನಾನು ಆರಾಮು ........" ಎಂದು ಮುಂದೆ ಹೇಳುವದರಲ್ಲಿದ್ದರು. ಇಂದ್ರಾಣಿ "ಬಾ. ಅಪ್ಪಯ್ಯ" ಎಂದು ಎಳೆದುಕೊಂಡು ಹೋಗುವ ಭರದಲ್ಲಿ "ಹೊಸಬರ ಕೂಡ ಏನು ಸಲಿಗೆ?" ಎಂಬ ಭಾವವನ್ನು ಬಹಿರಂಗಪಡಿಸುತ್ತಿದ್ದಳು. "ಬನ್ನಿರಿ ಸ್ಥಳ ದೊರೆಯುವದಿಲ್ಲ" ಎನ್ನುತ್ತ ನಂಜುಂಡಯ್ಯನವರು ಮಂದಿರವನ್ನು ಹೊಕ್ಕರು. "ಉಳಿದುಕೊಂಡೆವು ಮಹಾರಾಯ. ಅವಳು ಬಿಂಕದ ಸಿಂಗಾರಿ ನೋಡು. ಏನು ರೂಪದ ಹೆಮ್ಮೆ" ಎಂದನು ಪ್ರಸಾದ. "ಹೆಣ್ಣಿನಲ್ಲಿರದೆ ಇನ್ನೆಲ್ಲಿರ ಬೇಕು ಆ ಹೆಮ್ಮೆ?" ಎಂದನು ಚಂದ್ರಕಾಂತ. "ಬಾರಪ್ಪ ಬಾ. ಪ್ರಪಂಚ ದಲ್ಲಿ ಸ್ತ್ರೀ ರೂಪರಾಣಿಯಾಗಿ ಬಾಳಿದರೆ ತೀರಿತೆ? ಅವಳಿಗೂ ಮಾನವೀ ಆರ-ಭಾರಗಳಿಲ್ಲವೆ?" ಎನ್ನುತ್ತ ಪ್ರಸಾದ ಮಿತ್ರನೊಂದಿಗೆ ಪ್ರವೇಶಿಸಿದನು.

ಮೊದಲನೆಯ ವರ್ಗದಲ್ಲಿ ಕುಳಿತ ಇಂದ್ರಾಣಿಯ ಕಣ್ಣುಗಳು ಎರಡ ನೆಯ ವರ್ಗದಲ್ಲಿ ಮೆಟ್ಟಿಲುಗಳನ್ನು ಇಳಿಯುತ್ತಿದ್ದ ಶಿವಪ್ರಸಾದನ ಹರವಾದ ಹಣೆ, ಕಾಂತಿಯುತ ಕಣ್ಣುಗಳು, ದಾರ್ಶನಿಕರ ಹುಬ್ಬುಗಳು, ದುಂಡು-ಚೌಕಿನ ನಡುವೆ ಹೋರಾಡುತ್ತಿರುವ ಮುಖ, ಇವುಗಳನ್ನು ನೋಡಿದವು. ಮುಡಿಯಿಂದ ಅಡಿಯವರೆಗೆ ನೋಡುವ ಅಭಿಲಾಷೆಯಿಂದ ವಿಶಾಲವಾದ ವಕ್ಷ ಸ್ಥಳವನ್ನು ಪರೀಕ್ಷಿಸಿ, ಎತ್ತರವನ್ನು ಸುಮಾರು ೫||| ಅಡಿಗೆ ನಿರ್ಣಯಿಸಿ ಮುಗಿಸುತ್ತಿರುವಾಗಲೇ ಪ್ರಸಾದನ ಕಣ್ಣುಗಳು ಆಕೆಯ ಕಳವನ್ನು ಕಂಡವು. 'ಬಿಂಕದ ಸಿಂಗಾರಿ' ಅತ್ತಿತ್ತ ಕಣ್ಣು ತಪ್ಪಿಸುವ ಭರದಲ್ಲಿ ಪುನಃ ಸಿಕ್ಕು ಪೇಚಾಡಿ ಕೊನೆಗೆ ಸುಮ್ಮನೆ ಚಿಕ್ಕಪ್ಪನ ಕೂಡ ಸರಸವನ್ನು ಹೂಡಲೇಬೇಕಾಯಿತು.

ನೆಳಲು ಬೆಳಕಿನ ಕಣ್ಣುಮುಚ್ಚಾಲೆ ಪ್ರಾರಂಭವಾಯಿತು.

ರಾತ್ರಿ ೯ ಘಂಟೆಗೆ ನಾಲ್ವರು ಒಂದೇ ದಾರಿಯಲ್ಲಿ ಕೂಡಿದರು. ಫಾಲ್ಗುನ ಮಾಸದ ಏಕಾದಶಿಯ ಚಂದಿರ ಬಾನಿನಲ್ಲಿ ವಿಕಾರರಹಿತನಾಗಲು ಹವಣಿಸುತ್ತಿದ್ದನು. ಎಲ್ಲಿಯದೋ ಒಂದು ಮುಗಿಲಗರಿ ಬಳಿಯಲ್ಲಿ ತೇಲುತ್ತಿತ್ತು. ಹೆಚ್ಚು ಮಾತಿಗೆ ಅವಕಾಶವೀಯದೆ ಚಿತ್ರದ ಹೊಗಳಿಕೆಯಲ್ಲಿಯೇ ಪ್ರಸಾದನು ದಾರಿ ಯಲ್ಲಿದ್ದ ಊಟದ ಮನೆಗಾಗಿ ಅವರಿಂದ ಅಗಲಿದನು. ಮೂವರು ಮುಂದರಿ ದರು. ಊಟವನ್ನು ಮುಗಿಸಿಕೊಂಡು ಶಿವಪ್ರಸಾದ ತನ್ನಲ್ಲಿಗೆ ಬರುತ್ತಲಿ ದ್ದನು. ನಿಲ್ದಾಣದ ಹಾದಿಯಿಂದ ಕವಲೊಡೆದು ಬಲಕ್ಕೆ ಉಳಿವಿ ಬಸವನ

ಗುಡ್ಡದ ಕಡೆಗೆ ಹೊರಳಿದನು. ಮುಂದೆ ನಾಲ್ಕು ದಾರಿಗಳು ಕೂಡುವದಿತ್ತು. ಎಡಗಡೆಗೆ ಅಟ್ಟದಮೇಲೆ ವಿದ್ಯುದ್ದೀಪ ಒಮ್ಮೆ ಆರಿ ಒಮ್ಮೆ ಹತ್ತಿತು. ಕೋಣೆಯೊಂದರಲ್ಲಿ ಒಂದು ವ್ಯಕ್ತಿ ಸುಳಿದಾಡಿತು. ನಿಟ್ಟಿಸುವ ಮುನ್ನವೇ ಪುನಃ ಕತ್ತಲೆ. ಅಲ್ಲಿಯವರೆಗೆ ಸುತ್ತು ಕಣ್ಣಿಡುತ್ತ ಬೆಳ್ದಿಂಗಳಿನ ಸೊಬಗು ಸವಿಯುತ್ತ ಬರುತ್ತಲಿದ್ದ ಪ್ರಸಾದ ಸರಸರನೆ ಮನೆ ಸೇರಿದನು.

"ಇದೇನು! ಎಷ್ಟು ಅವಸರದಿಂದ ಬಂದೆಯಲ್ಲ." ಮನೆಯ ಮುಂದಿನ ತೋಟದಲ್ಲಿ ಕುಳಿತ ಚಂದ್ರಕಾಂತ ಕೇಳಿದನು.

"ಏನೂ ಇಲ್ಲ. ಹಾಗೆಯೇ ಬಂದುಬಿಟ್ಟೆನು" ಎನ್ನುತ್ತ ಪ್ರಸಾದ ಬಳಿಯಲ್ಲಿದ್ದ ಆಸನದಲ್ಲಿ ಒರಗಿದನು.

"ಪ್ರಸಾದ, ಆ ನಂಜುಂಡಯ್ಯನವರು ಎಷ್ಟು ಸಾದಾ ಇರುವರಲ್ಲ! ಅವರು ಉತ್ತರದ ವಿಶ್ವವಿದ್ಯಾಲಯವೊಂದರಲ್ಲಿ ಕೆಲವು ಕಾಲ ಪ್ರಾಧ್ಯಾಪಕರಿದ್ದರಂತೆ. ಆಯುರ್ವೇದ ಪಂಡಿತರಂತೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ಎತ್ತಿದಕೈ. ಮದುವೆಯಾಗಿಲ್ಲವಂತೆ. ಬ್ರಹ್ಮಚರ್ಯದ ವ್ರತವನ್ನೇನೂ ಕೈಕೊಂಡಿಲ್ಲವಂತೆ. ಪಾಲಿಸಿದ್ದಾರಂತೆ. ಅದೇನೋ ಚಿಕ್ಕ ವಯಸ್ಸಿನಲ್ಲಿ ಪ್ರೇಮದ ಬರೆ ಹಾಕಿಸಿಕೊಂಡಿರಬಹುದು. ಮೇಲುಗಡೆಗೆ ನಾಲ್ಕು ದಾರಿಗಳು ಕೂಡುವದಿಲ್ಲವೆ? ಆ ಕೂಟದ ಆಚೆಯ ಮೊದಲಿನ ಮನೆ ನೋಡು ಅವರದು."

" ಏನು ? ಆ ಮನೆಯೆ? " ಎಂದನು ಪ್ರಸಾದ. " ಯಾಕಪ್ಪ, ಎಷ್ಟು ಉತ್ಸಾಹ ! " ಎಂದನು ಚಂದ್ರಕಾಂತ. " ಎಲ್ಲಿಯದೋ ? ಈಗ ಬರುವಾಗ ಒಂದು ಹುಡುಗಾಟಿಕೆ ನಡೆಯಿತು ಆ ಮನೆಯ ಉಪ್ಪರಿಗೆಯ ಮೇಲೆ "ಎಂದು ಆದುದನ್ನು ಹೇಳಿದನು. "ಮುಗಿಯಿತು ಬಿಡು. ಅವಳು ನಿನಗೆ ಬೆಪ್ಪನನ್ನು ಮಾಡುವದು ನಿಶ್ಚಯ. "

" ಬಯಸಿದರೆ ಬೆಪ್ಪ. ಏನೋ ಸಣ್ಣ ಹುಡುಗರಿಗೆ ಕಥೆ ಹೇಳುವರಲ್ಲ. ಅಲ್ಲಿಂದ ಒಂದು ಗುಬ್ಬಿ ಬಂತು. ಇಲ್ಲಿಂದ ಒಂದು ಗುಬ್ಬಿ ಬಂತು. ಅದೊಂದು ಕಾಳು ಆಯ್ದಿತು. ಇದೊಂದು ಕಾಳು ಆಯ್ದಿತು. ಪುರ್ರನೆ ಹಾರಿಹೋದವು. ಆದರಂತೆ. ನಮ್ಮ–ನಮ್ಮದು ನಾವು ಮುಗಿಸಿಕೊಂಡು ಊರು ಸೇರಬೇಕೆನ್ನುವವರಿಗೆ ಯಾರು ಯಾರನ್ನೇಕೆ ಬೆಪ್ಪು ಮಾಡುವರು? ಅಹುದಲ್ಲೋ? ಅವಳೇ, ಆದೂ ಉದ್ದೇಶಪೂರ್ವಕವಾಗಿ, ಆ ಆಟ ಹೂಡಿದ್ದಳು ಎನ್ನುವದು

ಯಾವ ಆಧಾರದ ಮೇಲಿಂದ ?" ಶಿವಪ್ರಸಾದ ಸತ್ಯದ ಸರಳತನದಿಂದ ನುಡಿದನು.

"ನಿಜ. ನಗೆಯಾಡಿದೆನು. ಹುಡುಗ-ಹುಡುಗಿ, ಇದರಲ್ಲೇನಿದೆ ?" ಚಂದ್ರನ ಮಾತಿಗೆ "ನಮ್ಮಿರ್ವರ ನಗೆಯಾಟ ಇನ್ನು ಸಾವಿರ ಪಟ್ಟು ಬಳೆದು ನಲಿಯಲಿ. ಅದು ಇನ್ನಾರಿಗೂ ತಾಗಿ ಹೊಗೆಯಾಗಬಾರದು, ಇಷ್ಟೆ. ಭಾವನೆಯ ಮಾತುಗಳು ಭಾವನೆಯನ್ನರಿತವರಿಗೆ ಮೀಸಲಾಗಿರಲಿ. ಸಣ್ಣಮಕ್ಕಳ ಆಟದಂತೆ ಆಟವಾಗಿರಲಿ. ನಿನ್ನೆದುರು ಯಾವುದೇ ವ್ಯಕ್ತಿಯನ್ನು ಕುರಿತು ಸಲಿಗೆಯಿಂದ ಮಾತಾಡಿದಂತೆ ಉಳಿದವರೆದುರು ಮಾತಾಡುವದು ಸಾಧ್ಯವೆ? ಪ್ರಂಪಚವನ್ನು ಕುರಿತ ನಮ್ಮ ವಿಮರ್ಶೆ ನಮ್ಮ ತಿಳುವಳಿಕೆ ತಿಳಿಯಾಗಲಿಕ್ಕೆ ಸಹಾಯವಾದರೆ ಸಾಕು.ನಮ್ಮ ವಿಮರ್ಶೆಯನ್ನು ಪ್ರಪಂಚವು ಅನ್ಯಥಾ ತಿಳಿದರೆ ವ್ಯರ್ಥ ಹೋರಾಟವಲ್ಲವೆ ? ಅಂತೆಯೆ ನಮ್ಮ ತಿಳುವಳಿಕೆ ನಮ್ಮವರ ಮಟ್ಟಿಗೆ ಮಾತ್ರ" ಎಂದು ಪ್ರಸಾದ ಗೆಳೆಯನನ್ನು ತಟ್ಟಿದನು.

"ಪ್ರಸಾದ, ನಿನ್ನ ಮಾತುಗಳು ನನ್ನನ್ನು ಬಹಳ ವಿಚಾರದಲ್ಲಿ ಕೆಡವುತ್ತವೆ. ಎಳ್ಳಷ್ಟೂ ಹಚ್ಚಿಕೊಳ್ಳದಂತೆ ಪರಿಶೀಲಿವುದನ್ನು ನೀನು ಈ ವಯಸ್ಸಿನಲ್ಲಿ ಹೇಗೆ ಸಾಧಿಸಿದ್ದೀಯಾ ? ಸಂಗೀತದಲ್ಲಿ ಕುಳಿತರೆ ಅಲ್ಲಿಯೂ ಇದೇ ಶುದ್ಧಿಯ ಪರಮಾವಧಿ. ಇದೆಲ್ಲ ನಿನ್ನನ್ನು ಅವ್ಯವಹಾರಿಕನನ್ನಾಗಿ ಮಾಡಲಿಕ್ಕಿಲ್ಲವೆ ? " ಪ್ರಸಾದ ಗೊಳ್ಳನೆ ನಕ್ಕನು. "ಜಗತ್ತು ಬಹುಮುಖವಾಗಿ ಅಸತ್ಯವನ್ನು ಬೆಂಬತ್ತಿದೆ. ಯಾವುದನ್ನು ಈ ಅಸತ್ಯದ ಬಹುಮತದ ಗುಂಪು ಸಹಜವಾಗಿ ನುರಿಸಬಲ್ಲುದೋ ಅದಕ್ಕೆ "ವ್ಯವಹಾರ್ಯ"ವೆಂಬ ನಾಮಕರಣ ಅವರಿಗೆ ತಾತ್ಕಾಲಿಕ ಹಿತಕಾರಿಯಲ್ಲವೆ ? ಸತ್ಯವನ್ನು ಬಳಕೆಯಲ್ಲಿ ತಂದರೆ ಅದು "ವ್ಯವಹಾರ್ಯ"ವಾಗುವುದಿಲ್ಲವೆ ? ಅಸಾಮಾನ್ಯ ಪುರುಷರ ಜೀವನವನ್ನು ಕುರಿತು ಮಾತಾಡುವಾಗ ಸಾಮಾನ್ಯ ಮನುಷ್ಯನೂ ಸಹ ಆವೇಶದಿಂದ ಸತ್ಯಪ್ರಿಯನಾಗುವದಿಲ್ಲವೆ ? ಸ್ವಲ್ಪ ಹೆಚ್ಚು ಪರಿಶ್ರಮದಿಂದ ಸಾಧಿಸಲು ಹಿಂಜರಿದು, ಹೇಡಿತನಕ್ಕೆ ಇಂಬು ಕೊಟ್ಟು, ಸತ್ಯವನ್ನು "ಅವ್ಯವಹಾರ್ಯ"ವೆಂದು ಕರೆಯುವದು 'ಮನುಷ್ಯರಾಗಿ ನಾವು, ಸತ್ಯ-ಸಾಧನೆ-ಶೋಧನೆಯನ್ನು ಬಿಟ್ಟು, ಮಾಡುವ ಶತಕೃತ್ಯವೇನು?' ಎಂದು ನಿನ್ನನ್ನು ಕೇಳ ಹಚ್ಚಲಿಕ್ಕಿಲ್ಲವೆ ? ಹಿಂದಿನಿಂದ ಇಂದಿನವರೆಗೆ ಮಾನವ ಜೀವನದಲ್ಲಿ ಕಣ್ಣಿಟ್ಟು ನೋಡು. ಜೀವ

ಸವು ಸಾಧನೆಯಾದರೆ ಯಾವುದು ಅವ್ಯವಹಾರ್ಯ? "ಎಂದು ಶಿವಪ್ರಸಾದ ಹಿಂದಕ್ಕೊರಗಿದನು. "ನಿನ್ನ ನಡೆ-ನುಡಿಗಳಿಂದ, ನೀನು ಜೀವನದಲ್ಲಿ ಮನಃ ಪೂರ್ವಕವಾಗಿ ಒಂದು ಗುರಿಯನ್ನು ಗೊತ್ತುಮಾಡಿಕೊಂಡು ಹೊರಟಂತೆ ಕಾಣುವದು. ಆದನ್ನು ನನಗೊಂದು ದಿನ ಏಕೆ ತಿಳಿಸಬಾರದು?" ಎಂದನು ಚಂದ್ರಕಾಂತ. "ಆಯಿತು. ನನಗೂ ಕೋಡು ಹಚ್ಚಲಿಕ್ಕೆ ಪ್ರಾರಂಭಿಸಿದೆ. ಕೆಲವರಿಗೆ ಪ್ರಾಪಂಚಿಕ ಯಶಸ್ಸಿನಿಂದ ಕೋಡು ಬಂದರೆ ಕೆಲವರಿಗೆ ಆಧ್ಯಾತ್ಮಿಕ ಯಶಸ್ಸಿನಿಂದ ಕೋಡು ಬರುವದುಂಟು. ನನಗೆ ಮಾತ್ರ ಮನುಷ್ಯ ಇನ್ನೂ ಅಪೂರ್ಣ ಅರಳಿದ ಹೂ ಎಂದು ತಿಳಿದು ಬಂದಿದೆ. ಈದಿನ ಉನ್ನತದಲ್ಲಿರಿಸಲ್ಪಟ್ಟ ಯಾವ ಮಹಾತ್ಮನೂ ಪೂರ್ಣಾತ್ಮನಲ್ಲ. ನಮ್ಮ ಮಾನವ ಕುಲದಲ್ಲಿ ಒಬ್ಬನನ್ನು ಎತ್ತಿ ಹಿಡಿದು, ಉಳಿದ ತಾವು ಕೊಳೆಯುವ ರೂಢಿ ಹೆಚ್ಚು. ಮನೆಯ ಮೇಲೆ ನಿಶಾನಿಯನ್ನೇರಿಸಿ ಒಳಗೆ ಗೊರಕೆ ಹೊಡೆಯುವ ಜನಗಳು ಬಹಳ. ನೀನು ಕಾಳಿ ಊದು. ಅವನು ನಗಾರಿ ನೌಬತ್ತು ಬಾರಿಸಲಿ. ನಾನು ಮೇಣೆಯಲ್ಲಿ ರುವೆನು. ಉಳಿದವರು ಹೆಗಲು ಕೊಡಿರಿ. ಇದು ಇಂದು ಸ್ವಾರ್ಥ-ಅಜ್ಞಾನಗಳ ಸಿಂಧೂರ ತಿಲಕ ಹಾಳು ಸುರಿಯುವ ನಮ್ಮ ಹಣೆಗಳಮೇಲೆ.

ನನ್ನ ಹಿರಿಯರು ನಡೆದ ದಾರಿ, ನನ್ನ ಗುರುಗಳು ನನಗೆ ತೋರಿದ ದಾರಿ, ಅವೇ ಬೇರೆ: 'ಪರಿಸ್ಥಿತಿಯನ್ನು ಪರಿಶೀಲಿಸಿ ನಿನ್ನ ಸ್ಥಾನವನ್ನು ಕಾಣು. ಕಂಡರಿತು ಸಾಧನೆಯಲ್ಲಿ ಆನಂದವನ್ನು ಹೊಂದು.' ಇದೇ ಅವರ ಸಂದೇಶ. ನಾನು ನಿನ್ನೆದುರು ಬಯ್ಚಿಡುವದೇನು?" ಎಂದು ಮೆಲ್ಲನೆ ಎದ್ದು ಆಕಾಶದೆಡೆ ನೋಡಿ, "ಬಹಳ ಮಾತು ನಡೆದವು. ನಿನಗೆ ಬೇಸರವಾಗಿಲ್ಲವಷ್ಟೇ" ಎಂದನು.

"ಎಳ್ಳಷ್ಟು ಇಲ್ಲ. ನಿನ್ನ ಮಾತುಗಾರಿಕೆ ವಿಲಕ್ಷಣ. ನಿನ್ನ ವಿಲಕ್ಷಣ ವಿಚಾರಗಳ ಜೊತೆಗೆ ನಿನ್ನ ಸರಳತನ, ನಿನ್ನ ರಸಿಕತನ ಇವು ಇಲ್ಲದಿದ್ದರೆ ಜೀವನದಲ್ಲಿ ನೀನು ಸಾಕ್ರೇಟಿಸನ ಅಪ್ಪನಂತೆ ಕಷ್ಟಪಡುತ್ತಿದ್ದಿ."

"ಅಬ್ಬಬ್ಬಾ! ಆ ಕಾಲವಾವುದು, ಇಂದಿನ ಕಾಲವಾವುದು! ಗಟ್ಟಿಗ ಧೈರ್ಯಶಾಲಿ ಎಂದೇ ಸಾಕ್ರೇಟೀಸನಿಗೆ ಸಾಧ್ಯ ಅಂದಿನ ಎದೆಗಾರಿಕೆ. ಆಗಿನ ಜನರ ಅಜ್ಞಾನಕ್ಕೆ ನಮಗೀಗ ನಗೆ ಬರುತ್ತದೆ. ಅವನಂತೂ ಎಂದೋ ನಕ್ಕು ನಕ್ಕು ಸಾಕಾಗಿ ವಿಷದ ಬಟ್ಟಲಕ್ಕೆ ಬಾಯಿ ಹಚ್ಚಿದನು. ಅದರೆ ನಾವು ಇಂದು

ಈ ಅಂತಸ್ತಿನಲ್ಲಿ? ಹುಚ್ಚು ಜಗತ್ತು. ಹುಟ್ಟಿ ಯುಗಯುಗಾಂತರಗಳಾದರೂ ಜ್ಞಾನಕ್ಕೆ ಮಹತ್ವ ಕೊಡದೆ ಹೊಟ್ಟೆಯ ಪಾಡಿಗೆ ಪೇಚಾಡುತ್ತಿದೆ. ತುತ್ತಿನ ಚೀಲದಲ್ಲಿ ಪ್ರಳಯಗಳನ್ನು ಕಲ್ಪಿಸಿ, ಸಿದ್ಧಿಯನ್ನು ಮರೆವಿನ ಕಾಳ ನದಿಯಲ್ಲಿ ಹೂಳಿಟ್ಟಿದೆ." ಇಂತು ಬಿರುನುಡಿದು ಪ್ರಸಾದ ತನ್ನ ಕೊಠಡಿಯನ್ನು ಹೊಕ್ಕನು.

ಬಹಳ ಹೊತ್ತಿನ ನಂತರ ದೀಪ ಹತ್ತಿತು. ಶಯನಕ್ಕೆ ಹಾಸು ಹೊಚ್ಚುಗಳು ಸಿದ್ಧವಾದವು. ಪುನಃ ಕತ್ತಲೆ ಆವರಿಸಿತು. ಬೆಳದಿಂಗಳು ಕಿಡಿಕಿಯೊಳಗೆ ತೂರಿ ಅಲ್ಲಿ ನಡೆದ ಮಿದು ಆಲಾಪನೆಯ ಮೆಲ್ಲುಲಿಯನ್ನು ತೆರೆ ತೆರೆಯಾಗಿ ಹೊರತಂದು ತನ್ನ ಲೀಲಾಜಾಲದಿಂದ ಮುಕ್ತಗೊಳಿಸುತ್ತಿತ್ತು. ಮಿತ್ರನು ಸ್ತಿಮಿತಕ್ಕೆ ಬಂದುದನ್ನು ಚಂದ್ರಕಾಂತನು ಗ್ರಹಿಸಿ ತಾನೂ ನಿದ್ರಾದೇವಿಯ ಉಪಾಸನೆಗೆ ಹೋದನು.

ಶಿಶಿರ ಋತುವಿನ ಕೊನೆಯ ತರಗೆಲೆಯೊಂದು ಬೆಳ್ದಿಂಗಳಲ್ಲಿ ಸುಳಿದು ತೇಲಿ ಕೊನೆಗೆ ಧರಿತ್ರಿಗೆ ಸುಯ್ಯನೆ ಎರಗಿ ಒರಗಿತು. ಸುತ್ತು ನಿಶ್ಶಬ್ದ: ನಿಶ್ಶಬ್ದ. ವಸಂತ ಋತುವಿನ ಸೌರಭವು ಮಾತ್ರ ತಂಗಾಳಿಯ ತಿಳುಪಿನ ಕೊರೆತವನ್ನು ಭಾರದಿಂದ ಮೃದುಮಧುರವನ್ನಾಗಿ ಮಾರ್ಪಡಿಸಿತ್ತು. ಸ್ನಿಗ್ಧತೆ ವಿಲಾಸದಿಂದ ವಿಹರಿಸುತ್ತಿತ್ತು. ರಾತ್ರಿಯ ಈ ವಿಲಾಸದಲ್ಲಿಯೇ ಅಲ್ಲವೆ ಮುಂಜಾವಿನ ವಿಕಾಸ? ಪ್ರಪಂಚ ಮುಂಜಾವಿನಲ್ಲಿ ವಿಕಾಸವನ್ನು ಕಂಡು ಕಣ್ಣರಳಿಸುತಿದೆ. ಕವಿ ಕಾಳಿದಾಸನಂತಹನೊಬ್ಬ ಮಾನವೀ ವಿಹಾರಿ ವಿಶ್ವದ ಈ ನಿಸರ್ಗ ನಿಯಮವನ್ನು ತನ್ನ ಮನೋವಿಕಾಸಕ್ಕೆ ವಿಲಾಸಮಯವಾಗಿ ಅರಿತು ಹೊಂದಿಸಿಕೊಂಡಿಲ್ಲವೆ? ಸಾಮಾನ್ಯ ಜಗತ್ತು ಎಚ್ಚತ್ತಾಗ ಯೋಗಿ ಅಲಿಪ್ತ: ಸುಪ್ತ ಜಗತ್ತು ಯೋಗಿಯ ಜಾಗರಣೆಯನ್ನು ಅರಿಯದು: ಅಂತೆಯೆ ವಿಭೂತಿಗಳು ವಿರಳ: ಕಾಣುವ ಕಣ್ಣು ಕಾಣದಾದುದರಿಂದ.

೫

ಚೈತ್ರಮಾಸದ ಒಂದು ಶುಕ್ರವಾರ. ಹತ್ತಿ ಬಿಡಿಸುವ ಹೆಣ್ಣಾಳುಗಳ ಮೇಲ್ನೋಟಕ್ಕೆ ಬಂದ ಮುದ್ದಣ್ಣ-ಪ್ರಸಾದರು ಮರೆಕಟ್ಟೆಯ ಹೊಲಿದ

ಪಶ್ಚಿಮದ ಮೇರೆಯಲ್ಲಿ ಪೂರ್ವಾಭಿಮುಖವಾಗಿದ್ದ ಬನಶಂಕರಿಯ ಚಿಕ್ಕ ಗುಡಿ ಯೆದುರು ಬೇವಿನ ಮರದ ನೆರಳಿನಲ್ಲಿ ಕಂಬಳಿಯ ಮೇಲೆ ಒರಗಿದ್ದರು.

'ಮರೆಕಟ್ಟೆ' ಅನ್ವರ್ಥಕ. ಮರೆ ಒಂದು ಜಾತಿಯ ಚಿಗರೆ. ಕಟ್ಟೆ ಒಂದು ನಿಲ್ದಾಣ. ಮರೆಕಟ್ಟೆ ಚಿಗರೆಗಳ ವಾಸಸ್ಥಳ. ಆ ಮರೆಕಟ್ಟೆಯ ಹೊಲಗಳು ಇತ್ತೀಚಿನ ಸಾಗುವಳಿಯಿಂದ ಫಲಪ್ರದ ಭೂಮಿಯಾಗಿವೆ. ಇಂದಿಗೂ ಅಲ್ಲಿ ಚಿಗರೆ-ಮಿಕಗಳ ಕಾಟ ತಪ್ಪಿಲ್ಲ. ಸಮೀಪದಲ್ಲಿ ಕಾರಿಹಳ್ಳ, ಬೆಟ್ಟ. ಸುತ್ತಲಿರುವ ಇಲ್ಲಿಯ ಪ್ರಕೃತಿ ಸೌಂದರ್ಯ ಕಣ್ಣಿಗೆ ಸೊಬಗು ನೀಡಿ ಬಿಸಿಲಿನ ಜೊಂಪು ತರುವದು.

ಗುಡಿಯಲ್ಲಿ ಮಾತ್ರ ಯಾವ ಶಿಲ್ಪಿಯ ಕುಶಲ ಕೈವಾಡವೂ ಇಲ್ಲ. ಪ್ರಸಂಗಕ್ಕನುಗುಣವಾಗಿ ಮಾರ್ಪಟ್ಟ ಐತಿಹಾಸಿಕ ಹಿನ್ನೆಲೆಯಿದೆ. ಪರಮತೀಯರ ದಾಳಿಗಳಿಗೆ ಭವ್ಯ ಭವ್ಯ ದೇವಾಲಯಗಳು ನೆಲಸಮವಾಗಹತ್ತಿದಾಗ, ದೂರಿನಿಂದ ಏರಿ ಬರುವ ವೈರಿಗಳ ನೋಟಕ್ಕೆ ಕೇವಲ ದಿನ್ನೆಯಂತೆ ಕಾಣಲೆಂದು ಕಟ್ಟಿರಬಹುದಾಗಿದೆ. ಮುಖದಲ್ಲಿ ಚಿಕ್ಕ ಚೌಕು ಕಲ್ಲಿನ ಕಮಾನು. ಉಳಿದ ಮೂರು ನಿಟ್ಟಿಗೆ ಮಣ್ಣಿನ ಗುಂಪು ಏರಿಸಿ ಇಳಿಜಾರಾಗಿ ಭೂಮಿಗೆ ಕೂಡಿಸಿರುವರು. ವಿಮಾನ ದಾಳಿಯ ಮುಂಜಾಗ್ರತೆ ನೆನಪಿಗೆ ಬಾರದೆ? ಅತ್ತ ಹೆಣ್ಣು-ಗಂಡುಗಳಲ್ಲಿ ಕಾರ್ಯಕ್ಷೇತ್ರವನ್ನು ಹಂಚಿ ಶ್ರಮವಿಭಾಗ ಮಾಡಿರುವದನ್ನು ಕಾಣುವಾಗ ಪೂರ್ವಜರ ಜಾಣ್ಮೆಯ ನಿದರ್ಶನ ಬೆಳಕಿಗೆ ಬರಲಿದೆ. ಹತ್ತಿ ತೊಳೆ ಬಿಡಿಸುವುದಕ್ಕೆ ಹೆಣ್ಣು. ಜೋಳ ಕೊಯ್ಯುವುದಕ್ಕೆ ಗಂಡು. ಅನುಭವದಿಂದ ಅನುಭವಕ್ಕೆ ಜಿಗಿದು, ವಿವೇಕದಿಂದ ವಿದ್ಯೆಯನ್ನು ಗಳಿಸಿ, ಮಾನವ ಇಂದಿನ ನಿಚ್ಚಳತೆಗೆ ಬಂದಿದ್ದಾನೆ. ವಿದ್ಯೆಯಿಲ್ಲದ ಅನುಭವ ಬಾಳಬಹುದು. ಅನುಭವವಿಲ್ಲದ ವಿದ್ಯೆ ಬಾಳುವದಾದರೆ ಅನ್ಯರ ನೆರವಿನಿಂದ. ದುಡಿತದಿಂದಲೇ ಹೆಚ್ಚಾದ ಅನುಭವ. ಅಂತೆಯೆ ದುಡಿತದಲ್ಲಿ ನಿಜವಾದ ದೊಡ್ಡಸ್ತಿಕೆ ಇದೆ. —

ಅಂದು ಪ್ರಸಾದ ಮನೆಗೆ ಬಂದಾಗ ಇದೆಲ್ಲ ಮನದಟ್ಟಾಗಿತ್ತು. ಇತ್ತ ಕಣದ ಅಂಗಳದಲ್ಲಿ ಮಧುವಯ್ಯನವರು ಸಾವುಕಾರರ ಸಂಗಡ ಅದೇ ವಿಚಾರದ ಪ್ರಸ್ತಾಪವನ್ನೆತ್ತಿ ಮಾತಾಡುತ್ತ ಕುಳಿತಿದ್ದರು. ಊಟ ಮುಗಿಸಿ ಬಂದು ಪ್ರಸಾದ ಅವರೊಡನೆ ಮಾತಿನಲ್ಲಿ ಬೆರೆತನು.

" ನಮ್ಮ ಕನ್ನಡ ನಾಡಿನ ಸುತ್ತುಮುತ್ತಿನ ಎಲ್ಲ ನಾಡುಗಳಲ್ಲಿ ಎಂಥೆಂಥ ಮಹನೀಯರು ಮುಂದೆ ಬಂದು ಪ್ರಪಂಚದಲ್ಲಿರುವ ಎಲ್ಲ ಸಮಸ್ಯೆಗಳಿಗೂ ಉತ್ತರ ಕೊಡುವಷ್ಟು ಪ್ರಾವೀಣ್ಯತೆಯನ್ನು ಪಡೆದಿದ್ದಾರೆ. ನಮ್ಮ ನಾಡಿನಲ್ಲಿ ಅಂಥವರು ಮುಂದೆ ಬಾರದಿರುವುದಕ್ಕೆ ಕಾರಣವೇನು ?" ಸಾವುಕಾರರು ಮಾತು ಎತ್ತಿದರು.

" ಜಾತಿಯ ಪೆಡಂಭೂತ ಅಂಟಿಕೊಂಡಿದೆಯಲ್ಲ. ಅಖಿಲ ಭಾರತ ಸ್ವಾತಂತ್ರ್ಯದ ರೂಪರೇಷೆಯಲ್ಲಿ ಕರ್ನಾಟಕಕ್ಕೆ ಯಾವುದೇ ಮಹತ್ವದ ಸ್ಥಾನ ದೊರೆಯದಿರುವದಕ್ಕೆ ನಮ್ಮ ಪ್ರತಿನಿಧಿಗಳನ್ನು ಆರಿಸುವಾಗ ನಮ್ಮ ಮನೋಭೂಮಿಕೆ ಆ ಸ್ಥಾನಕ್ಕೆ ಅರ್ಹರನ್ನು ಹುಡುಕುವ ಬದಲು ನಮ್ಮ ಜಡ ಜಾತಿಗೆ ' ಸೋ ' ಎನ್ನುವವರನ್ನು ಆರಿಸುವದೇ ಕಾರಣ. ಎಂತಾದರೂ ತಮ್ಮ ಪದವಿಗೆ ಬಾಧೆಯಿಲ್ಲವೆಂದರಿತ ನಮ್ಮ ಪ್ರತಿನಿಧಿಗಳು ಹೆಚ್ಚಿನ ಪರಿಶ್ರಮಕ್ಕೆ ಮನಸ್ಸು ಹಾಕುವ ಬದಲು ನಮ್ಮ ಕೊಳೆಯನ್ನೇ ಕೆದರುವದರಲ್ಲಿ ನಿಷ್ಣಾತರಾಗುವದು ಸಂದೇಹವಿಲ್ಲ. ಕಾಂಗ್ರೆಸ್ಸಿನಂಥ ಸುಂದರ ಸಂಸ್ಥೆಯಲ್ಲಿಯೂ ಈ ಕುರೂಪಿತನ ತಲೆಯೆತ್ತಿದೆ.

ಯಾವುದಾದರೊಂದು ಒಳಪಂಗಡದ ದುರಭಿಮಾನದ ತಿರುಗಣೆಯ ಮಡುವಿಗೆ ಅರಿಯದ ಜನತೆಯನ್ನು ಹುರಿದುಂಬಿಸಿ, ಕಾಂಗ್ರೆಸ್ಸಿನ ಧ್ವಜದಡಿಯಲ್ಲಿ ತಮ್ಮ ಬೇಳೆಯನ್ನು ಬೇಯಿಸಿಕೊಂಡು ಕಾಂಗ್ರೆಸ್ಸನ್ನು ಬಲಪಡಿಸಲು ಹವಣಿಸುವದು ಹೆಗ್ಗಣವನ್ನು ಒಳಗಿರಿಸಿ ಗುದ್ದು ಮೆತ್ತಿದಂತೆಯೇ ಸರಿ. ಕನ್ನಡ ಜನತೆಯ ಸಮಸ್ಯೆಗಳನ್ನು ಕನ್ನಡಿಗನಾಗಿ ಬಗೆಹರಿಸಲು ಮುಂದೆ ಬಂದು, ಪರಿಶ್ರಮದಿಂದ ಅಭ್ಯಾಸಿಸಿ, ಪ್ರಪಂಚದ ಮುಂದೆ ಇಡಲಿ. ಆಗ ಬಯಸದಿದ್ದರೂ ಬೆಂಬತ್ತಿ ಬರುವದು ಹಿರಿಯತನ. ದಿನಪತ್ರಿಕೆಗಳಲ್ಲಿ ಎಂತೋ ತಮ್ಮ ಪಡಿಯಚ್ಚು ಮೂಡಿದಾಕ್ಷಣಕ್ಕೆ, ಜನತೆ ತಮ್ಮ ಹಿಂದೆ ಏರುಗಚ್ಚಿ ಹಾಕಿ ನಿಂತಿದೆ ಎಂದು ತಿಳಿದ ಮೆರವಣಿಗೆಯ ಅಣ್ಣಂದಿರು ಇನ್ನಾದರೂ ಕಣ್ದೆರೆದರೆ ಅವರಿಗೂ ನಾಡಿಗೂ ಒಳಿತು. ಮುಂದೆ ಬರುವದಿದ್ದರೆ ಉತ್ತರದ ನಾಯಕರ ಮರಿ ತುಂಡು ಅಥವಾ ಹಿರಿ ಮಗನಾಗಿ ಬಾರದೆ, ಕನ್ನಡದ ಅಚ್ಚ ಕಲಿಯಾಗಿ—ಅಚ್ಚ ನಾಯಕನಾಗಿ ಮುಂದೆ ಬಂದು, ಪ್ರಪಂಚ ಒಪ್ಪುವಂತೆ ತನ್ನವರ ಸಮಸ್ಯೆ ಹೋರಾಟಗಳನ್ನು ಮುಂದಿಡುತ್ತ ಭಾರತೀಯ ಮುಂದಾ

ಳಾಗುವ ನಿಶ್ಚಿತ ಭರವಸೆಯನ್ನು ಪಡೆಯಬೇಕು. ಬಿಚ್ಚುಮಗ್ಗಿಯ ಬಯಲು ನಾಯಕರು ಬರುವದನ್ನು ಕನ್ನಡ ಜನತೆ ಎದುರು ನೋಡುತ್ತಿದೆ. ಬಂದರೆ ಕುಣಿದು ಕುಣಿಸೀತು" ಎಂದನು ಪ್ರಸಾದ.

"ಏನು ಓಟವಪ್ಪ ಈಗಿನ ಮಕ್ಕಳದು. ಎಳೆ ವಯಸ್ಸಿಗೆ ಎಂಥ ತುತ್ತು. ಇವನ ಮಾತು ನೋಡಿದರೆ ಇವನೇನು ನಮಗೆ ದಕ್ಕುವಂತೆ ಕಾಣುವದಿಲ್ಲ." ಅಯ್ಯನವರ ಇಳಿದನಿಯಲ್ಲಿ ಪ್ರೇಮಪೂರ್ಣವಾದ ವ್ಯಸನವಿತ್ತು. ತನ್ನ ಉತ್ಸಾಹವನ್ನು ಪೂರ್ಣ ಹಿಂದಕ್ಕೆಳೆದು ಪ್ರಸಾದ ಮುದ್ದಣ್ಣನ ಮಗ್ಗುಲನ್ನು ಸೇರಿದನು. ಕೊನೆಯ ತೀರ್ಮಾನವೆಂದು ಅಯ್ಯನವರು 'ಕೈಯಲ್ಲಿ ಹಿಡಿದ ಕಾರ್ಯವನ್ನು ಪೂರಯಿಸಿ, ತನ್ನ ಎದೆಯಲ್ಲಿ ಹುಮ್ಮಸ್ಸಿದ್ದರೆ ತನ್ನ ಸ್ವತಂತ್ರ ವಿಚಾರದಂತೆ ನಡೆಯಲಿಕ್ಕೆ ನನ್ನ ಮೊಮ್ಮಗನಿಗೆ ನಾನು ಎಂದೋ ಬಿಟ್ಟುಕೊಟ್ಟಿದ್ದೇನೆ. ತನ್ನ ವ್ಯಾಸಂಗವನ್ನು ಮುಗಿಸುವ ವರೆಗೆ ಮಾತ್ರ ಅವನಿಗೆ ಜೀವನದ ಇತರ ಯಾವ ತಾರತಮ್ಯಗಳು ಹತ್ತದಂತಿರಲಿ. ಹಸುಮಗನಂತೆ ಜೀವನವನ್ನು ಒಮ್ಮೆ ಪೂರ್ಣ ನೋಡಲಿ. ಆ ಮೇಲೆ ಅವನು, ಅವನ ಜೀವನ, ಅವನ ಹೋರಾಟ, ಅವೆಲ್ಲ ಅವನಿಗೆ ಮೀಸಲು. ನಮ್ಮೆಲ್ಲರ ಆನಂದ ಅವನ ವಿದ್ಯಾರ್ಥಿದಸೆಯಲ್ಲಿ ಮಾತ್ರ. ಪ್ರಬುದ್ಧನಾದ ನಂತರ ಅವನು ಪ್ರಪಂಚದ ಸೊತ್ತು' ಎಂದು ಮುಗಿಸಿ ಎದ್ದರು.

ಇಲ್ಲಿಯ ವರೆಗೆ ಮುಟ್ಟಬಹುದೆಂದು ಮನೆಯವರಾರೂ ಭಾವಿಸಿರಲಿಲ್ಲ. ಅಜ್ಜನ ವೈರಾಗ್ಯದ ಅರಿವು ಮೊಮ್ಮಗನಿಗೆ ಬರಸಿಡಿಲು. ಸುಮ್ಮನೆದ್ದು ಮುದ್ದಣ್ಣನ ಸಂಗಡ ತೋಟದ ಹಾದಿ ಹಿಡಿದನು. ಇನ್ನೂ ಮುಟ್ಟಿರಲಿಕ್ಕಿಲ್ಲ. ಆಗಲೇ ಅಯ್ಯನವರು ಸೊಸೆಯ ಮುಂದೆ 'ನನ್ನ ಮನಸ್ಸು ಈ ಪ್ರಪಂಚದಲ್ಲಿ ನಿಮಿತ್ತ ಮಾತ್ರಕ್ಕೆ ಅಂಟಿಕೊಂಡಿದೆಯೆಂದು ನಿನ್ನ ತಮ್ಮ ತಿಳಿದುಕೊಂಡಿರಬೇಕು. ಎಳೆಯ ಮಗ. ತಾನೊಬ್ಬನಾದನೆಂದು ಅವನೂ ವೈರಾಗ್ಯಕ್ಕೆಳೆದರೆ!' ಎಂದು ಗಕ್ಕನೆ ಆ ಸಾಧ್ಯವಾದ ಅನಿಷ್ಟವನ್ನು ನೆನೆದು, ನಡುಗಿ, ಸಂಬಳದ ಆಳನ್ನು ಕರೆದು ಅವರೀರ್ವರನ್ನು ಹಿಂದಕ್ಕೆ ಕಳುಹುವಂತೆ ಹೇಳಿಕಳಿಸಿದರು. ಆ ರಾತ್ರಿ ಯಾರೂ ಹೆಚ್ಚು ಮಾತನಾಡುವ ಹವ್ಯಾಸಕ್ಕೆ ಹೋಗದೆ ಸುಮ್ಮನೆ ಮಲಗಿದರು.

ಮರುದಿನ ಮುಂಜಾವಿನಲ್ಲಿ ಅಜ್ಜ–ಮೊಮ್ಮಗ ಒಬ್ಬರನ್ನೊಬ್ಬರು ನೋಡಿ ನಗುತ್ತ ಕುಳಿತಿದ್ದರು. ಇವರ ಗದ್ದಲವನ್ನು ಕೇಳಿ ಮುದ್ದಣ್ಣ ಕಣ್ಣು ತಿಕ್ಕುತ್ತ ಎದ್ದು ಕುಳಿತನು: "ಏನು ಜನ, ಅಪ್ಪಯ್ಯ, ನೀವು. ರಾತ್ರಿ ಎಲ್ಲರ ಕೈಕಾಲು ಬಿಡಿಸಿದಿರಿ. ಇನ್ನೂ ಚುಮು–ಚುಮು ಅನ್ನುವದಿದೆ. ಆಗಲೇ ನಗೆಯಾಟ ಹೂಡಿದ್ದೀರಲ್ಲ." ಅವನನ್ನು ನೋಡಿ ಮತ್ತಿಷ್ಟು ನಕ್ಕರು. ಮುದ್ದಣ್ಣನೂ ಕೂಡಿಕೊಂಡನು. ಮಾದಕ್ಕನೂ ಬೆರಗಾಗಿ ಬಂದು ಕೂಡಿಕೊಂಡಳು. ಬಗಲೊಳಗಿನ ಮಗುವೂ ಸುಮ್ಮಸುಮ್ಮನೆ ನಗಹತ್ತಿತು. ಸಾವಳಿಗಯ್ಯನವರು ಬಾಗಿಲಿಗೆ ಬಂದರು. ಮಾದಕ್ಕ ಸರಿದಳು. ಮುದ್ದಣ್ಣನು ಎದ್ದನು. ಪ್ರಸಾದ ಶಯನದ ಓರಣದಲ್ಲಿ ತೊಡಗಿದನು. ಮಧುವಯ್ಯನವರು ಮೊಮ್ಮಗನ ಸಹಾಯಕ್ಕೆ ನಿಂತರು.

ಪ್ರಾತರ್ವಿಧಿಗಳು ತೀರಿದನಂತರ ಪ್ರಸಾದ "ಅಜ್ಜಯ್ಯ, ಸುಮ್ಮನೆ ಕುಳಿತು ಬಿಟ್ಟೆಯಲ್ಲ. ಸಂಗೀತ ಪಾಠಗಳು ಇಂದಿನಿಂದ ಪ್ರಾರಂಭ. ಒಂದು ತಾಸು ನಿತ್ಯ. ಏನಂದಿ?"ಎಂದು ಕೇಳಿದನು. "ಏನಂದಿ ಎಂದರೆ ನಂದಿ ಏನು ಅನ್ನುವದು ತಲೆ ಹಾಕುವದಿಲ್ಲವೆ?"ಎಂದು ಮಧುವಯ್ಯನವರು ಒಳಗೆ ಹೋಗಿ ಜತನವಾಗಿ ಕಾಯ್ದಿಟ್ಟ ಪಿಟೀಲನ್ನು ಹೊರತಂದು ಶ್ರುತಿಯನ್ನು ಅಣಿಮಾಡಿದರು. "ಆಗಲಪ್ಪ ಎತ್ತು." ಮಧುರ ಶಾರೀರದ ಆಲಾಪನೆ ಆರಂಭಿಸಿತು. ಹಣ್ಣು ಕೈಗಳು ತೀಡಿದವು. ಪ್ರಸಾದ ಮೆಲ್ಲನೆ 'ಆಸಾವೇರಿ' ರಾಗವನ್ನು ಎತ್ತಿದನು. ಅಯ್ಯನವರು ಮುಗುಳ್ನಗೆಯಿಂದ ಸಮ್ಮತಿಯನ್ನು ಸೂಚಿಸಿದರು. ಒಳಗಿದ್ದ ಜೋಡುಹಕ್ಕಿಗಳು ಮೂಕವಿಸ್ಮಿತವಾಗಿ ಬಾಗಿಲ ಬಳಿಯಲ್ಲಿ ನಿಂತಿದ್ದವು. ಅಜ್ಜಂದಿರೂ ಮೊಮ್ಮಗನೊಡನೆ ಕಂಠವೆತ್ತಿದ್ದರು. ಪ್ರಾವೀಣ್ಯತೆಯ ಮಾಧುರ್ಯ ನಾವೀನ್ಯತೆಯ ಹುರುಪಿಗೆ ಕಳೆಯನ್ನಿತ್ತಿತ್ತು. ಕೆಲ ಹೊತ್ತು ಮೈಮರೆತು ನಿಂತ ಸಾವಳಿಗಯ್ಯನವರು ತೋಟಕ್ಕೆ ಭರಭರನೆ ಸಾಗಿ ಮುದ್ದಣ್ಣನನ್ನು ಕಳುಹಿದರು. ಮುದ್ದಣ್ಣ ಬಂದು ಮಗುವನ್ನೆತ್ತಿಕೊಂಡು ಗಾಯಕರ ಬಳಿ ಕುಳಿತನು. ತಲೆದೂಗುವರೊಬ್ಬರು ಕೂಡಿದ ಮೇಲೆ ಕೇಳುವದೇನು? ಆಸಾವೇರಿ ತಾಸಿನ ವರೆಗೆ ಆನಂದದ ತುಟ್ಟ ತುದಿಯು ಮೇಲಿತ್ತು. ಹೊರಗೆ ಯಾರೋ ಸುಳಿದಾಡಿ ಒಳಗೆ ನೆರಳು ಬಿದ್ದಾಗಲೇ ಮುದ್ದಣ್ಣನಿಗೆ ಅರಿವು. ಸಾವುಕಾರರ ತಮ್ಮಂದಿರು ಜೊತೆಯಲ್ಲಿ ಹೊಸಬರೊಬ್ಬರು.

ಮುಗಿಯುವದರಲ್ಲಿದ್ದ ಹಾಡು ಮುಗಿಯಿತು.

“ ಇವರಾರು ಸಾವುಕಾರರೇ ? ಈವರೆಗೆ ನಾನು ಇವರನ್ನು ನೋಡಿಲ್ಲ.” “ ರಾಣಿಬಿದನೂರಿನವರು. ನಿನ್ನೆ ಬಂದಿರುವರು. ನಮ್ಮೂರ ನಾಟಕಕ್ಕೆ ಕರಿಸಿದ್ದೇವೆ. ಈಗ ಜಳಕ ಮುಗಿಸಿ ಮನೆಗೆ ಹೊರಟಿದ್ದೆವು. ನಿಮ್ಮ ಸಂಗೀತ ಅವರನ್ನು ಇಲ್ಲಿಗೆ ತಂದಿದೆ. ”

“ ಒಳ್ಳೆಯದಾಯಿತು ಬಂದದ್ದು. ಸಂಗೀತ ಪಂಡಿತರೇನು ? ಮುಖ ಲಕ್ಷಣಗಳೇನೋ ಹಾಗೆ ಹೇಳುತ್ತವೆ. ”

“ ಅಹುದು. ತಬಲದಲ್ಲಿ ಪ್ರಸಿದ್ಧರಾದ ಚೆನ್ನಮಲ್ಲಪ್ಪನವರು ಇವರು.” “ ಹಾಂ ! ಈಗ ನೆನಪಾಯಿತು. ನಾಗಪ್ಪಜ್ಜನ ಶಿಷ್ಯರು ಬಿದನೂರಿನವರಲ್ಲವೆ ? ” ಎಂದರು ಉತ್ಸುಕತೆಯಿಂದ ಮಧುವಯ್ಯನವರು. “ಹಾಂ ! ಅವರೇ ಇವರು ! ” ಎಂದರು ಸಾವುಕಾರರು.

ಚೆನ್ನಮಲ್ಲಪ್ಪನವರು ಎದ್ದು ಅಯ್ಯನವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದರು. ಅಯ್ಯನವರು ಮನಃ ಪೂರ್ವಕವಾಗಿ ಆಶೀರ್ವದಿಸಿದರು. ಮುದ್ದಣ್ಣ ಒಳಗೆ ಹೋಗಿ ಅಣಿಮಾಡಿ ಅತಿಥಿಗಳನ್ನು ಉಪಹಾರಕ್ಕೆ ಕರೆದನು.

ಮುಗಿಸಿ ಬರುವಷ್ಟರಲ್ಲಿ ತಬಲಗಳೂ ಬಂದಿದ್ದವು. ತಾಂಬೂಲಪ್ರಿಯರಾದ ಚೆನ್ನಮಲ್ಲಪ್ಪನವರು ಮುದ್ದಣ್ಣನೊಡನೆ ರಂಗಾಗಿ, ಮೃದಂಗಿಗಳನ್ನು ಅಣಿಮಾಡಿದರು. ಒಂದು ಚಾಪು ಹಾಕಿದರು. ಪ್ರಸಾದ ಬೆಚ್ಚಿಬಿದ್ದನು. ಆ ನಾದ ಅದೆಷ್ಟು ಅಚ್ಚುಕಟ್ಟಾಗಿ ಅಂತರಂಗವನ್ನು ಮುಟ್ಟುವಂತಿದೆ. ಒಮ್ಮೆ ಅಜ್ಜನನ್ನು ನೋಡಿ ತೋಡಿ ರಾಗವನ್ನು ಎತ್ತಿದನು. ಚೆನ್ನಮಲ್ಲಪ್ಪನವರು ಒಂದು ಸುತ್ತಿನ ವರೆಗೆ ಬಾಹ್ಯ ಪ್ರಪಂಚದಲ್ಲಿದ್ದು, ಆಲಾಪನೆ ಮುಗಿದು ಲಯಬದ್ಧವಾಗಿ ಶ್ರುತಿಮಧುರ ಹಾಡು ಪ್ರಾರಂಭವಾದಕೂಡಲೇ ಕಣ್ಣುಮುಚ್ಚಿ ತನ್ಮಯವಾಗಿ ಬಾರಿಸಹತ್ತಿದರು. ಅಯ್ಯನವರಿಗೆ ತಡೆಯುವದಾಗಲಿಲ್ಲ. ಪಿಟೀಲು ಎತ್ತಿ ತೀಡಿದರು. ನಯವಾಗಿ ಎಳೆದರು. ಬಿರುಸಾಗಿ ಸೆಳೆದರು. ಏರಿಸಿದರು. ಇಳಿಸಿದರು. ತಬಲದಣ್ಣಂದಿರ ಬೆರಳುಗಳು ಕುಣಿಯುತ್ತಿದ್ದವು.

ಶಿವಪ್ರಸಾದನಿಗೆ ಈ ಲೋಕದ ಅರಿವೇ ಇರಲಿಲ್ಲ. ಅಯ್ಯನವರ ಮೂಕ ಸೂಚನೆಯಂತೆ ಚೆನ್ನಮಲ್ಲಪ್ಪನವರ ಇದುವರೆಗಿನ ಸರಳ ಶೈಲಿ ಬದಲಾಯಿತು. ಗಡುಚಾದ ಶಾಸ್ತ್ರೀಯ ಕುಶಲ ಕೈವಾಡಗಳು ಎದುರಾದವು. ಇಲ್ಲಿ ನಡೆದು ದೇನೆಂಬುದನ್ನು ಕಾಣಲು ಪ್ರಸಾದನಿಗೆ ಆಗ ಎಚ್ಚರ. ಉಳಿದ ಎಲ್ಲ ರಾಗ ಕೌಶಲ್ಯಗಳನ್ನು ಬಿಟ್ಟು ಸರಳ ಆಲಾಪನೆಗೆ ನಿಂತನು. ಆನಂದಕ್ಕೆ ಭಂಗವಾಗಿ ಅಲ್ಲಿ ಬೆರಳುಗಳಿಗೂ ನಿರುತ್ಸಾಹ. ಇದನ್ನರಿತು ಪ್ರಸಾದ ಸರಳ ಆಲಾಪನೆ ಯನ್ನು ಪುನಃ ಏರಿಳಿತ, ತೆರೆ, ತರಂಗ, ಅರ್ಭಟ ನಿದಾನಗಳ ಪ್ರಪಂಚಕ್ಕೇರಿ ಸಿದನು. ಚೆನ್ನಮಲ್ಲಪ್ಪನವರು ಕುಣಿವ ಬೆರಳುಗಳನ್ನು ಕುಣಿಸಿದರು. ಅಯ್ಯ ನವರು ಪಿಟೀಲು ಕೆಳಗಿರಿಸಿ, "ವಾಹವ್ವಾ.......ವಾಹವ್ವಾ" ಎಂದು ಚಪ್ಪಾಳೆ ಹಾಕಿದರು. ತಬಲದಣ್ಣಂದಿರು ನಗುತ್ತ ಹೊರಗೆ ಹೋಗಿ ತಾಂಬೂಲಾಮೃತ ವನ್ನು ನೆಲಕ್ಕಿಟ್ಟು ಬಂದರು.

"ಈ ಸಂಗೀತದ ಜನಗಳಿಗೆ ಹೊಲ, ಮನೆ, ಹೆಂಡರು, ಮಕ್ಕಳು ಯಾತಕ್ಕೆ ಮುದ್ದಣ್ಣ. ನೋಡು ಖಂಡಗ ಜೋಳ ಬೆಳೆದವರು ಹಾರಾಡಲಿ ಕ್ಕಿಲ್ಲ. ಅಷ್ಟು ಹಾರಾಡಿಬಿಟ್ಟರು. ಅಜ್ಜನು ವೊಮ್ಮಗನಲ್ಲಿ ಮೂಡಿಬಿಟ್ಟಿ ದ್ದಾನೆ. ನಾಗಪ್ಪಜ್ಜನ ಬುದ್ಧಿ ಚೆನ್ನಮಲ್ಲಪ್ಪನವರ ಹಸ್ತಗತವಾಗಿದೆ. ಇನ್ನೇನು ಕೇಳುವದು!" ಎನ್ನುತ್ತ ಸಾವುಕಾರರು ಹೊರಬಿದ್ದರು.

ಎಪ್ರೇಲ್ ಆರನೆಯ ದಿನ ಮಂಗಳವಾರ ಚೆನ್ನಮಲ್ಲಪ್ಪನವರ ಸಂಗಡ ರಾಣೆಬಿದನೂರಿಗೆ ಹೋಗಿ ಅಲ್ಲಿರುವ ಸಂಗೀತ ವಿಶಾರದರ ಪರಿಚಯಲಾಭ ದಿಂದ ಮುಗ್ಧನಾಗಿ ಬುಧವಾರ ಏಳನೆಯ ದಿನಾಂಕದ ಪತ್ರವನ್ನು ಕೊಂಡು ಕೊಂಡು ಊರಿಗೆ ಪ್ರಸಾದನು ಮರಳಿದನು. ಬಂಡಿ ರಾತ್ರಿ ೮ ಘಂಟೆಗೆ ಮುಟ್ಟಿತು. ಸರಸರನೆ ಇಳಿದು ಪ್ರಸಾದ ಅಜ್ಜನ ಬಳಿಗೆ ಹೋದನು. ಕಂದೀ ಲಿನ ಬತ್ತಿಯನ್ನೇರಿಸಿ ದಿನಪತ್ರವನ್ನು ಬಿಚ್ಚಿಟ್ಟನು. "ನೋಡು, ಅಜ್ಜ. ಬಂಗಾಳದ ನಾಗರಿಕರು ನಿನ್ನೆ ಸುಭಾಸ ಚಂದ್ರ ಬೋಸರಿಗೆ ಎಷ್ಟು ಮರ್ಯಾದೆ ಸಲ್ಲಿಸಿರುವರು. ಅವರಿಗಾಗಿ ಕಲಕತ್ತೆಯ ಶ್ರದ್ಧಾನಂದ ಪಾರ್ಕಿನಲ್ಲಿ ೫೦,೦೦೦ ಜನ ನೆರೆದಿದ್ದರಂತೆ. ೨೦೦ ಸಂಸ್ಥೆಗಳು ಪೂಮಾಲೆಗಳನ್ನು ಅರ್ಪಿಸಿದವಂತೆ ಪ್ರಸಿದ್ಧ ಪತ್ರಿಕಾ ಸಂಪಾದಕರಾದ ರಮಾನಂದ ಚಟರ್ಜಿ ಅವರು ಅಧ್ಯಕ್ಷರಾ ಗಿದ್ದರು. ಬೋಸ ಹೇಳಿದರಂತೆ. 'ನಾನು ಇಂದು ಬಂಗಾಲ ಪ್ರಾಂತದ

ಸಮಸ್ಯೆಯನ್ನಷ್ಟೇ ಪರಿಶೀಲಿಸುವುದಿಲ್ಲ. ಇಡೀ ಭರತಖಂಡದ ಕಡೆಗೆ ಕಣ್ಣಿಡ ಬೇಕಾಗಿದೆ' ಎಂದು. ನೋಡು, ಅವರು ಒಂದೊಂದೆ ಹೆಜ್ಜೆ ಹೇಗೆ ಮುಂದಕ್ಕೆ ಬರುತ್ತಾರೆ. ಇಂಥ ಸಮಯಗಳನ್ನು ಕಂಡಿದ್ದರಿಂದ ನನಗೆ ನಮ್ಮ ಮುಂದಾಳುಗಳು ಯಾಕೆ ಹಿಂದಾಳುಗಳಾಗುವರು ಎಂದೆನಿಸಿ ಆ ದಿನ ಆವೇಶದಿಂದ ಮಾತಾಡಿದೆನು. ಹೀಗೆಯೇ ನಡೆದರೆ ಬಿಳಿಯ ಆಳರಸರ ಬದಲು ಉತ್ತರದ ಮುಂಗೈ ಜೋರಿನವರ ಆಳಿಕೆಗೆ ನಾವೆಲ್ಲಿ ತಲೆಬಾಗಬೇಕಾಗುವದೋ ಎಂಬ ಹಳಹಳಿ ಆಗಲಿಕ್ಕಿಲ್ಲವೆ ?'' ಪ್ರಸಾದನ ಈ ಮಾತುಗಳಿಗೆ ಅಯ್ಯನವರು ಆತನ ಮುಂದೆಲೆಯನ್ನು ನೇವರಿಸಿ ಊಟಕ್ಕೆ ಕಳುಹಿದರು.

ಶರಚ್ಚಂದ್ರನು ಆಗಲೇ ನಿದ್ರೆಯಲ್ಲಿದ್ದನು. ಮುದ್ದಣ್ಣನಿಗೆ ಬುತ್ತಿಯನ್ನು ಕಟ್ಟುವದಕ್ಕೆ ನಸುಕಿನಲ್ಲಿ ಎದ್ದ ಮಾದಕ್ಕ ತೊಟ್ಟಿಲದ ಬಳಿ ತೂಕಡಿಸುತ್ತಿದ್ದಳು. ಕಿಡಿಗೇಡಿ ಪ್ರಸಾದ ಉಪಾಯ ಹೂಡಿದನು. "ಬಿಡು ಮಾವಾ ಪಾಪ, ನಿದ್ದೆ ಹತ್ತಿದೆ. ಕಿವಿಯಲ್ಲಿ ಏಕೆ ಎಳೆಯುನ್ನಿಡುತ್ತೀ." ಮಾದಕ್ಕ "ಅವ್ವಾ" ಎಂದವಳೇ ಸೆರಗು ಹೊತ್ತುಕೊಂಡು ಸುತ್ತು ನೋಡಿದಳು. ಎಲ್ಲಿ ಮಾವ ಎಲ್ಲಿ ಸೊಸೆ. ನಿಜ ಹೊರಬಿತ್ತು.

"ಅಷ್ಟಕ್ಕೂ ಇಷ್ಟಕ್ಕೂ ಅವರನ್ನೊಳ್ಳೆ ತರುತ್ತೀ. ವಾರಿ ನೋಡಿ ನೋಡಿ ಈಗ ತುಸು ಕಣ್ಣು ಮುಚ್ಚಿದ್ದೆನು. ಚಿಟುಕು ಮುಳ್ಳು ಆಡಿಸಿಬಿಡುತ್ತಿಯಲ್ಲ, ಶಿವು. ನೀನಾದರೂ ಹೇಳಬಾರದೇನು ಮುದ್ದಣ್ಣ'' ಎಂದು ಅದೇ ಬಂದ ಮುದ್ದಣ್ಣನನ್ನೂ ಸಂಚಿನಲ್ಲಿ ಪಾಲುಗಾರನನ್ನಾಗಿ ಮಾಡಿದಳು. "ನನಗೆ ತಿಳಿಸಿ ಮಾಡಿದರೆ ಅಲ್ಲವೆ ಅವನು, ನಾನು ಅವನಿಗೆ ಹೇಳುವದು." ಸಂಪನ್ನನಂತೆ ಆಗಲೇ ಪ್ರಸಾದ ಮಣೆಯ ಮೇಲಿದ್ದ. "ನಾನು ತೀರಿಸಬೇಕೆಂದರೆ ಆದಿನ ಇನ್ನೂ ಬರಲೊಲ್ಲವು. ಮುದ್ದಣ್ಣ ಏನುಮಾಡುವದು" ಎಂದು ಮಾದಕ್ಕ ಉಣಬಡಿಸಿದಳು. ಕತ್ತೆತ್ತದೆ ಮುಗುಳ್ನಗೆಯಿಂದ ಪ್ರಸಾದ ಅಲ್ಲಾಡಿದನು.

ಇಂತು ಮೂರು ತಿಂಗಳು ತನ್ನವರೊಡನೆ ಕಳೆದು, ಆರಿದ್ರಾ ಮಳೆಯು ಪ್ರವೇಶವಾದ ದಿನ ಪ್ರಸಾದ ಧಾರವಾಡಕ್ಕೆ ಹೊರಟನು. ಶನಿವಾರ ಜೂನ್ ೧೯ಕ್ಕೆ ವಿದ್ಯಾಲಯದ ಪ್ರಾರಂಭದ ದಿನ. ಎರಡುದಿನ ಮುನ್ನವೇ ಗುರುವಾರ ೧೭ನೆಯ ಮುಂಜಾನೆ ರಾಣಿಬಿದನೂರಿಗೆ ಬಂದು ರಸಿಕ ಮಿತ್ರರನ್ನು ಕಂಡು

ಲೋಕಲ್ ಗಾಡಿಯನ್ನು ಹತ್ತಿ ಸಾಯಂಕಾಲ ಧಾರವಾಡದಲ್ಲಿ ಚಂದ್ರಕಾಂತ ನನ್ನು ಕೂಡಿದನು.

೬

ಭೂಮಿಯನ್ನು ಪುನಃ ಹದಕ್ಕೆ ತರುವ ಪುನರ್ವಸುವಿನ ಒಂದು ದಿನ. ೫-೬ ವರ್ಷದ ಮಗುವೊಂದು ಸೂಸು ಹಸಿ ಮಳಲಿನಿಂದ ಗುಬ್ಬಿಯ ಗೂಡನ್ನು ಕಟ್ಟಿ ತಟ್ಟುತ್ತಲಿತ್ತು. ಹರವಾದ ಒಂದು ಎಲೆಯಲ್ಲಿ ನಾಲ್ಕಾರು ಗುಲಾಬಿ ಮಲ್ಲಿಗೆ ಹೂಗಳು ಬದಿಯಲ್ಲಿದ್ದವು. ಒಳಗಿನಿಂದ ಮಗುವಿನ ತಾಯಿ ಕರೆದಳು: “ದೀನೂ!” ಎಂದು. “ಆ........ಆ........ಂ” ಎಂದಿತು ಲೀಲಾಮಯವಾಗಿ ಆಟದಲ್ಲಿದ್ದ ಮಗು. “ಹೂ ತಂದೇನೋ?” ತಾಯಿ. “ಏನೂ ........ಉ.... ಊ?” ಮಗುವಿನ ಆಲಾಪನೆ. ಆಟ ರಂಗಿಗೆ ಬಂದಿತ್ತು. ತಾಯಿ ಕಿಡಿಕಿಯೊಳಗಿಂದ ಮಗುವಿನ ಕಾರಭಾರವನ್ನು ಕಂಡು, ಮಗುವು ಅವಸರ-ಆಸರ ಫನ್ನೀ ಅರಿಯದ್ದೆಂದು ಬಗೆದು, ಗಟ್ಟಿಯಾಗಿ, “ಹೂವು ತಂದೆಯೇನೋ?” ಎಂದು ಗದರಿಸಿದಳು. “ತರತೀನಿ” ಎಂದು ಮಗುವು ಮುಖವನ್ನು ಮುದುಡಿಕೊಂಡು ಗುಬ್ಬಿಯ ಗೂಡಿನ ಮೇಲೆ ಕಣ್ಣಿರಿಸಿ ಒಳಗೆ ಹೋಯಿತು.

ಜುಲೈ ತಿಂಗಳು. ಮೇಲಾಗಿ ಬಿ. ಎ. ತರಗತಿಯ ಮೊದಲಿನ ವರ್ಷ. ಅಭ್ಯಾಸದ ಗಡಿಬಿಡಿ ಇಲ್ಲ. ಚಂದ್ರ-ಪ್ರಸಾದರೀರ್ವರು ಮಹಡಿಯ ಮೇಲೆ ನಿಂತು ಮಗುವಿನ 'ಲೀಲೆಯನ್ನು ಅನುಭವಿಸಿ ನಗುತ್ತ ಒಳಗೆ ಹೋದರು. ಇವರ ತನ್ಮಯತೆಗೆ ಭಂಗಬಾರದಂತೆ ಇವರ ಹಿಂದೆ ತಡೆದು ನಿಂತ ನಂಜುಂಡಯ್ಯನವರು ನಗುವಿನಲ್ಲಿ ಒಂದಾದರು. ಈ ಒಂದು ವರ್ಷದ ಅವಧಿಯಲ್ಲಿ ಅವರು ಮಿತ್ರರ ಗಾಢವಾದ ಸ್ನೇಹವನ್ನೂ ಆದರವನ್ನೂ ಸಂಪಾದಿಸಿದ್ದರು.

“ನಂಜುಂಡಯ್ಯನವರೆ, ಅವರ ತಾಯಿ ಗದರಿಸುವವರೆಗೆ ಆ ಮಗು ತನ್ನ ಲೀಲಾಪ್ರಪಂಚದಲ್ಲಿದ್ದು, ತಾಯಿಯ ಮೊದಲು ಮಾತಿಗೆ ಉತ್ತರ ಕೊಡುವಾಗಲೂ ತನ್ನ ರಾಜ್ಯದ ರೀತಿ-ನೀತಿಗನುಸಾರವಾಗಿ ಆ....ಊ....ಗಾ ಎಂದು ಸರಾಗವಾಗಿ ರಾಗಮಾಲಿಕೆಯನ್ನೆತ್ತಿತು. ತಾಯಿ ಗದರಿಸಿದಾಗ ಮಿಂಚಾಗಿ ಮಿತಿಯಾಗಿ 'ತರತೀನಿ' ಎಂದು ಅತಿ ಚೊಕ್ಕ ಶುದ್ಧ ಪ್ರಾಪಂಚಿಕ ಒರೆ ತಿಕ್ಕಿತು. ಆ ಸುಂದರ ಸನ್ನಿವೇಶ ನಮಗೊಂದು ಸಂದೇಶವನ್ನು ಕೊಡ

ಲಾರದೆ? ಜೀವನದಲ್ಲಿ ಕುಣಿತವಿದೆ: ಗಣಿತವಿದೆ. ಎರಡನೆಯದು ಮೊದಲ ನೆಯದಕ್ಕೆ ಸಾಧಕವೂ ಆಗಬಹುದು, ಬಾಧಕವೂ ಆಗಬಹುದು. ಇವೆರಡರ ಶುದ್ಧಿ ಸಂಗಮದಲ್ಲಿ ಆನಂದವಿದೆ. ಆಗಬಹುದೋ?" ಪ್ರಸಾದನ ಪ್ರಶ್ನೆಗೆ ನಂಜುಂಡಯ್ಯನವರು ಒಪ್ಪಿದರು.

ಚಂದ್ರಕಾಂತನು ಮಾತ್ರ, "ಈ ಗಣಿತ-ಕುಣಿತ ವಿಧಿಯ ಹಿಡಿತವನ್ನು ಮೀರಿ ಕೇವಲ ಮಾನವ ಸದಿಚ್ಛೆಗೆ ಮಾತ್ರ ಸ್ವಾಧೀನವೋ?" ಎಂದನ್ನು "ಮಾನವರು ನಿರ್ಜೀವ ಬೊಂಬೆಗಳಲ್ಲ. ಆತ್ಮನ ಅರಿವಿಲ್ಲದ ಅಧೀರ ಕರ್ಮ-ಕಾಸ್ತಾರದ ಕಮಲಗಳಲ್ಲ. ವಿಧಿಯೆನ್ನುವದು ಒಂದು ಭ್ರಮೆ. ಭಿನ್ನ ಭಿನ. ಮಾನವ-ನಿರ್ಮಿತ-ಕಲ್ಪಿತ ಪರಿಸ್ಥಿತಿಗಳಲ್ಲಿ ಸಿಲುಕಿ ತೊಳಲುವ ಪ್ರಾಪಂಚಿಕರು ಮಾನವೀ ವಿಷಮ ವ್ಯವಸ್ಥೆಗೆ ಆಧೀನರು. ನಾಳೆಯ ಅಂಜಿಕೆ ಇಂದಿನ ದುರಾಶೆಗೆ ಮೂಲ. ಶಾಂತಿಸಮೃದ್ಧಿ ದೈವಾಧೀನವಲ್ಲ. ವಿವೇಕಪೂರ್ಣ ಮಾನವೀ ವ್ಯವಸ್ಥೆಗೆ ತಲೆಬಾಗುವದು. ನಮ್ಮ ಹಳ್ಳಿಯವರು 'ನಾಲ್ಕು ಜನಗಳಿಗೆ' 'ದೈವದವರು' ಎನ್ನುವರು. ಆಕಾಶಮಲ್ಲಿಗೆ ಗಾಳಿಗೋಪುರಗಳು ವಿಧಿವಶ. ನಿತ್ಯ ಮುಂದರಿವ ದುಡಿತಕ್ಕೆ ವಿಧಿ ವಶ. 'ಕರ್ಮಧರ್ಮಸಂಯೋಗ' ವೆಂಬ ಶಬ್ದ ಅಪಾರ್ಥಕ್ಕೆ ಗುರಿಯಾಗಿ 'ಅಕಸ್ಮಾತ್' ಎಂಬರ್ಥವನ್ನು ಸೂಚಿಸ ಹತ್ತಿದೆ. ಕೆಲವರು ಅಪೂರ್ವವಾಗಿ ಕಂಡುಹಿಡಿದ ಮಾನವೀ ಹಿತಸಂಕಲ್ಪವಾವುದೇ ಇರಲಿ ಅದಕ್ಕೆ ಉಳಿದವರು ಆ ಹಿತದ ಹಿಡಿತಕ್ಕೆ ಒಳಗಾಗಿ ಕಾರ್ಯವನ್ನು ನಡೆಸಿದರೆ, ಕೆಲವರ ಕಾರ್ಯಕರ್ಮಕ್ಕೆ ಉಳಿದವರ ಧರ್ಮಬುದ್ಧಿ ಶಕ್ತಿಗಳು ಸಂಯೋಗವಾದಲ್ಲಿ ಈ ಕರ್ಮ-ಧರ್ಮ-ಸಂಯೋಗದಿಂದ ಪ್ರಪಂಚದಲ್ಲಿ ಅಘಟಿತ ಘಟನೆಗಳು ಫಲಿಸುವದರಲ್ಲಿ ಸಂದೇಹವಿಲ್ಲ. ಆ ಘಟನೆಗಳು ಆಕಸ್ಮಿಕವಲ್ಲವೆ? ಇಂದು ವೈಯಕ್ತಿಕವಾಗಿ ಕೆಲವು ರಾಷ್ಟ್ರಗಳಾಗಲಿ ಮಾನವರಾಗಲಿ ಸಾಧಿಸಿದ ಮಾನವೀ ಹಿತ ಸಾಧನೆಗಳನ್ನು ಅದ್ಭುತ ಪ್ರಮಾಣದ ಮೇಲೆ ವಿಶ್ವವ್ಯಾಪಕವಾಗಿ ವಿಶ್ವಕಲ್ಯಾಣಕ್ಕಾಗಿ ಪ್ರಾರಂಭಿಸಿ, ಅದಕ್ಕೆ ಅವಶ್ಯವಿದ್ದ ಶಿಕ್ಷಣ, ಅಂಥ ಬದುಕಿನಲ್ಲಿ ವಿಶ್ವಾಸ, ಈ ಮಾನವೀ ಕಲ್ಯಾಣದ ಕಲ್ಪನೆ ಇವೆಲ್ಲವನ್ನು ಇಂದಿನ ಸುಶಿಕ್ಷಿತರು ಪ್ರಪಂಚದ ಜನತೆಗೆ ದೊರೆಯುವಂತೆ ದುಡಿದರೆ, ಇನ್ನೆಲ್ಲಿಯ ವಿಧಿ, ಇನ್ನೆಲ್ಲಿಯ ರಾಕ್ಷಸೀ ಮಹತ್ವಾಕಾಂಕ್ಷೆ?" ಎಂದು ಪ್ರಸಾದ ಕಾರುಮಿಂಚಿನ ಕಣ್ಣುಗಳನ್ನೆತ್ತಿದನು. ಚಂದ್ರ

ಕಾಂತನು ನಗುತ್ತ, "ಒಪ್ಪಿದೆನಪ್ಪ ಒಪ್ಪಿದೆನು. ನಿನ್ನನ್ನು ರೇಗಿಸುವದೇ ನನ್ನ ಉದ್ದೇಶವಿತ್ತು" ಎಂದನು.

"ಬಯಸಿದ್ದು ದೊರೆಯಿತಲ್ಲ ನಡೆಯಿರಿ. ಸಾಯಂಕಾಲದ ವಿಹಾರವು ಬೇಡವೆ? ನಾನೂ ನಾಳೆ ಚೌಡದಾನಪುರಕ್ಕೆ ಹೋಗುವದಿದೆ. ಬಿತ್ತಿಗೆಯ ತತಿ ಬಂದಿದೆ" ಎಂದರು ನಂಜುಂಡಯ್ಯನವರು. "ಚೌಡದಾನಪುರವೆಲ್ಲಿರಿ?" ಎಂದನು ಚಂದ್ರಕಾಂತ. "ರಾಣಿಬಿದನೂರಿನಿಂದ ಉತ್ತರಕ್ಕೆ ಸುಮಾರು ೧೫ ಮೈಲಿನಲ್ಲಿದೆ. ತುಂಗಭದ್ರೆಯು ಪಶ್ಚಿಮಾಭಿಮುಖವಾಗಿ ಹರಿಯುವಲ್ಲಿ ದಡದ ಮೇಲೆ ಇದೆ. ಪುರಾತನ ಸ್ಥಳ. ಒಮ್ಮೆ ವನಭೋಜನಕ್ಕೆ ಹೋಗೋಣ" ಎನ್ನುತ್ತ ಆರಡಿ ಎತ್ತರದ ನಂಜುಂಡಯ್ಯನವರು ಹೊರಹೊರಟರು. ಬೀಸು ಆಳು. ವಿಶಾಲವಾದ ಹಣೆ. ಗುಂಗುರುಗೂದಲು. ಚಂಚಲ ಹುಬ್ಬುಗಳು. ಆಳಿದು ನೋಡುವ ಕಣ್ಣುಗಳು. ಮುಖಕ್ಕೆ ತಕ್ಕ ಮೂಗು. ಬಾಯಿ ಮಾತ್ರ ತುಸು ಸಣ್ಣದು. ತುಟಿಗಳ ಕೂಡು, ಗದ್ದದ ಕಂಸಾಕಾರವಾದ ಬಿಗಿತ, ಅವರ ಗಂಭೀರತ್ವವನ್ನು ಸೂಚಿಸುತ್ತಿದ್ದವು. ತಲೆ ಅಸಾಧಾರಣವಾಗಿ ದೊಡ್ಡದಿದ್ದರೂ ಉಳಿದ ಅವರ ಮುಖದ ಭಾಗಗಳು ಅದಕ್ಕೊಪ್ಪುವಂತೆ ಸಮತೋಲನೆಯಲ್ಲಿದ್ದವು. "ಗಿರಿಯಂತೆ ಬಿಣ್ಪೆದಂ, ಸುರಕರಿಯಂತೆ ಬಲಾಢ್ಯನ್, ಅಬ್ಧಿಯಂತೆ ಗಭೀರಂ" ಎಂದು ಶಬ್ದಮಣಿದರ್ಪಣದಲ್ಲಿ ಬಣ್ಣಿಸಿದಂತೆ ಅವರು ಕಾಣಿಸುತ್ತಿದ್ದರು.

ಬದಿಯಲ್ಲಿದ್ದ ಪ್ರಸಾದನ ನಿಲುವಿಕೆ ಮಧ್ಯಮ. ಮೈಕಟ್ಟು ಮಾಟವಾದುದು. ನಡಿಗೆಯಲ್ಲಿ ಪ್ರಕೃತಿ ಪ್ರಾಪಕವಾದ ಸಹಜ ಹಿಗ್ಗು ಹೀಚುಗಳಿದ್ದವು. ಅವನ ದೇಹಸಂಪತ್ತು ಅವನ ಆಧೀನವಾಗಿದ್ದುದು ಮೂಡಿಬರುತ್ತಿತ್ತು. ಅವನ ನಗುವಿಗೂ ಮೇಲ್ದುಟಿಗೂ ಸೊಬಗು ತರುವ ನಡುವಿನ ಎರಡು ಹಲ್ಲುಗಳು ಕಂಡಿ ಹಲ್ಲುಗಳಾಗಿದ್ದವು. ಚಂದ್ರಕಾಂತನು ಎಣ್ಣೆಗೆಂಪಿನ ಕಳೆತುಂಬಿದ ಮುಖದಿಂದ ಎಲ್ಲರಿಗೂ ಪ್ರಿಯ. ದೇಹ ಬಡಕಲಾದರೂ ಆರೋಗ್ಯಪೂರ್ಣ. ಪ್ರಸಾದನಷ್ಟೇ ಎತ್ತರವಾಗಿದ್ದರೂ ಶರೀರಮಾನದಿಂದ ಹೆಚ್ಚು ಎತ್ತರ ಕಾಣುತ್ತಿದ್ದನು. ವಿದ್ಯಾಲಯದ ವಿದ್ಯಾರ್ಥಿವೃಂದದಲ್ಲಿ ಜೋಡೆಲುಬಿನ ಪ್ರಸಾದ ಒಂಟೆಲುಬಿನ ಚಂದ್ರಕಾಂತ ಒಳ್ಳೆ ಜೋಡಿ.

ಚಂದ್ರಕಾಂತನಿಗೆ ಪಾಶ್ಚಾತ್ಯ ಪದ್ಧತಿಯ ಉಡುಪು ಸಹಜವಾಗಿ ಅಂದವಾಗಿತ್ತು. ರೂಢಿಯಿಂದ ಅನುಭವದಿಂದ ಅಷ್ಟು ಒಗ್ಗಿತ್ತು. ಪ್ರಸಾದನ ದೇಶೀಯ ಉಡುಪು ಅವನ ಸರಳತನಕ್ಕೆ ಸಹಕಾರಿಯಾಗಿ ಮೈಯಲ್ಲಿ ಇದೆಯೋ ಇಲ್ಲವೋ ಎನ್ನುವಂತೆ ಅವನ ಮನೋಭಾವಗಳಿಗೆ ಈಲಾಗಿತ್ತು. ಅಸ್ತವ್ಯಸ್ತವಾಗಿ ಮುಂಗುರುಳೊಂದು ಸುಳಿಯಾಗಿ ಸ್ವಚ್ಛಂದವಾಗಿ ಹಣೆಯನ್ನು ಶೋಭಿಸುತ್ತಿತ್ತು. ಕೊನೆಯಾಗಿ, ಇವರ ಉಡುಪಿನ ಚೊಕ್ಕ ಅಚ್ಚುಕಟ್ಟುತನಕ್ಕೆ ಎಲ್ಲಿಯಾದರೂ ಸ್ವಲ್ಪ ಸುಂದರವಾಗಿ ಭಂಗಬರುವದು ಅವರ ಕಲೋಪಾಸನೆಯ ಹೆಗ್ಗುರುತಾಗಿ ತೋರುತ್ತಿತ್ತು.

ಇಂತು ಈ ವಿಹಾರಿ ತ್ರಿವಿಕ್ರಮರು ನಿಲ್ದಾಣ ಮಾರ್ಗವಾಗಿ ವಾಯುಸೇವನೆಗೆ ಸಾಗಿದ್ದರು. ಪ್ರಸಾದ ಪಶ್ಚಿಮದ ಸೊಬಗನ್ನು ಸವಿಯುತ್ತಲಿದ್ದನು. ಕರುವು ಮೊಲೆಯುಣ್ಣುವಾಗ ಮೆಲುಕುಹಾಕುತ್ತ ತೇಲ್ಗಣ್ಣಿನಲಿ ನಿಂತ ಗೋವಿನಂತೆ ಅವನ ನೋಟ ಅಂತರ್ಮುಖಿಯಾಗಿತ್ತು. "ಪ್ರಸಾದ, ಸೂರ್ಯಾಸ್ತ ನಿನ್ನನ್ನು ಇಷ್ಟು ಆವರಿಸಿದೆಯಲ್ಲವೆ. ಬಾ. ಅಲ್ಲಿ ಹಸುರಿನ ಹಚ್ಚಡದ ಮೇಲೆ ಕುಳಿತು ನಿನ್ನ ಬಣ್ಣಿಸುವ ಶಕ್ತಿಯನ್ನು ಒರೆಗೆ ಹಚ್ಚು. ನಾವೂ ನಿನ್ನೊಡನೆ ಒಂದಾಗುವೆವು" ಎಂದು ನಂಜುಂಡಯ್ಯನವರು ಒಂದು ಎತ್ತರವಾದ ಸ್ಥಳಕ್ಕೆ ಕರೆದೊಯ್ದರು. ಪ್ರಸಾದ ಸೂರ್ಯಾಸ್ತವನ್ನೇ ದಿಟ್ಟಿಸುತ್ತ ಮಧುರಸ್ಮೃತಿಯ ಮಂದಹಾಸದಿಂದ, "ನಮ್ಮ ಮಾದಕ್ಕನ ಮಗು ಮಲಗುವ ಮುನ್ನ ಕೊನೆಗೊಮ್ಮೆ, ಬದಿಯಲ್ಲಿ ತಾಯಿ ಇನ್ನೂ ಜೋಗುಳವನ್ನು ಪಾಡುತ್ತ ತೊಟ್ಟಿಲನ್ನು ತೂಗುತ್ತ ತನ್ನ ಪ್ರೇಮದಲ್ಲಿ ನಿರತಳಾಗಿರುವಳೋ ಎಂದು ಎದ್ದು ಕಣ್ಣರಳಿಸಿ, ನೋಡಿ ಭರವಸೆ ಪಡೆದು, ಸಾಂತ್ವನ ಹೊಂದಿ ನಿದ್ರೆಹೋಗುವದು. ಅದೇ ನೋಟ ಇಲ್ಲಿದೆ. ಭೂಮಿ ತಾಯಿ. ದಿಗಂತದ ತೊಟ್ಟಿಲು. ಸೂರ್ಯದೇವನ ಹಸುಗೂಸುತನ. ಕೊನೆಯ ನೋಟ. ಶಾಂತ ನಿದ್ರೆ. ಸರಿಯಾಗಿದೆಯೋ?" ಎಂದು ಕೇಳಿದನು.

"ಅತ್ಯುತ್ತಮ. ಹುಟ್ಟೂರನ್ನು ಮಾತ್ರ ಎಲ್ಲಿಯೂ ಬಿಡಬೇಡ. ಬಹಳ ಅಭಿಮಾನಿ." ನಂಜುಂಡಯ್ಯನವರು ಸಮ್ಮತಿಯಿತ್ತರು. "ಒಂದು ಸನ್ನಿವೇಶ ಹುದುಗಿದ ಹಳೆಯ ಸವಿ ನೆನಪುಗಳನ್ನು ಅರಳಿಸುವದು ಸಹಜ. ಹಳೆಯದು ಎಂದೂ ಅಳಿಯದು. ಹೊಸದಕ್ಕೆ ಪುರಸ್ಕಾರ ಕೊಡುತ್ತ ಚಿರಂಜೀವಿಯಾಗಿರು

ವದು. ಅಭಿಮಾನಕ್ಕೆ ಇದ್ದಂತೆ ಇದಕ್ಕೆ ಉದ್ದೇಶದ ಪೂರ್ವರಂಗವಿಲ್ಲ. ನೆನಪು ಇಲ್ಲಿಯ ಪೂರ್ವರಂಗವನ್ನು ನಿರ್ಮಿಸಿದೆ." ಪ್ರಸಾದ ವಿವರಿಸಿದನು.

ಮರಳಿ ಬರುವಾಗ ನಂಜುಂಡಯ್ಯನವರು ತಾವೂ ಕಲಾಸೇವೆಯನ್ನು ಕೈಕೊಂಡ ಸಂಗತಿಯನ್ನು ತಮ್ಮ ಹೃದಯಕೋನವೊಂದರಲ್ಲಿ ಬಚ್ಚಿಟ್ಟಿರುವದನ್ನೂ ಅದನ್ನು ಸಮಯಾನುಸಾರ ಅರಳಿಸುವ ವಿಚಾರವನ್ನೂ ಮಿತ್ರರಿಗೆ ಅರುಹಿದರು. ಮುಂದಾಗುವ ಶರ್ಯತ್ತುಗಳಲ್ಲಿ ತಾನು ಭಾಗತೆಗೆದುಕೊಳ್ಳುವ ಯೋಜನೆಯನ್ನೂ, ಅದಕ್ಕಾಗಿ ಮುಂಬರುವ ೩೯ ನೆಯ ಮಾರ್ಚ ತಿಂಗಳಲ್ಲಿ ಬೆಂಗಳೂರಿನ 'ಅಯ್ಯರ'ರಲ್ಲಿ ವ್ಯಾಸಂಗಮಾಡುವ ಅಭಿಲಾಷೆಯನ್ನೂ ಪ್ರಸಾದ ಪ್ರತಿಯಾಗಿ ತಿಳಿಸಿದನು. ಚಂದ್ರಕಾಂತನೂ ತನ್ನ ಬಿಡುವಿನ ದಿನಗಳಲ್ಲಿ ಮಿತ್ರರಿಗೆ ಅಚ್ಚರಿಯಾಗುವಂತೆ ತಾನೊಂದು ವ್ಯಾಸಂಗವನ್ನು ಗುಟ್ಟಾಗಿ ಕೈಕೊಳ್ಳುವದನ್ನು ತಿಳಿಸಿದನು. ಎಲ್ಲರಿಗೂ ವಿಸ್ಮಯ ಹಾಗೂ ಆನಂದ ಮುತ್ತಿಬಿಟ್ಟವು.

ಇಂತು ಮಿತ್ರರ ಬಿ. ಎ. ತರಗತಿಯ ಮೊದಲಿನ ವರ್ಷ ರಸಿಕವಾಗಿ ಸಾಗಿತು. ೧೯೩೯ನೆಯ ಜುಲೈ ೧೨ನೆಯ ದಿನ ಮುಂಜಾನೆ ಧಾರವಾಡದ ತರುಣ-ತರುಣಿಯರಲ್ಲಿ ನವೋತ್ಸಾಹವು ತುಂಬಿ ತುಳುಕುತ್ತಿದೆ. ಆಷಾಢ ಮಾಸದ ಬೀಸುಗಾಳಿಗೂ ಧಾರವಾಡದ ಸುಶಿಕ್ಷಿತ ತಾರುಣ್ಯ ಎದೆಗೊಟ್ಟಿದೆ. ಉತ್ಸುಕವಾಗಿ ನಿಲ್ದಾಣದಲ್ಲಿ ಕಾಯ್ದು ನಿಂತಿದೆ. ಮುಂಜಾವಿನ ತಂಗಾಳಿಯಲ್ಲಿ ಗಾಡಿ ನಿಲ್ದಾಣದಲ್ಲಿ ಉತ್ಸಾಹದಿಂದ ತಂಗಿತು. ಪ್ರಸಾದನ ಭುಜದ ಮೇಲೆ ಕೈಯಿಟ್ಟು ನಗೆಮೊಗದಿಂದ ಭವ್ಯವಾದ ಮನೋಹರವಾದ ವ್ಯಕ್ತಿಯೊಂದು ಖಾದಿಯ ಬಿಳಿಯ ಉಡುಪಿನಲ್ಲಿ ಗಾಡಿಯಿಂದ ಇಳಿಯಿತು. "ದೇಶಗೌರವ ಸುಭಾಸಚಂದ್ರ ಬೋಸರಿಗೆ ಜಯ" ಎಂಬ ಜಯಘೋಷವು ನಿಲ್ದಾಣದಲ್ಲಿ ಮರುಧ್ವನಿಗೆಯ್ದಿತು. ಸುಭಾಸರ ಸ್ಪರ್ಶಮಾತ್ರದಿಂದ ಪುನೀತನಾದ ಪ್ರಸಾದ ಈ ಲೋಕದಲ್ಲಿರಲಿಲ್ಲ. ನೂರಾರು ನವಮಲ್ಲಿಗೆ ಮಾಲೆಗಳ ಸೊಂಪು ಬದಿಯಲ್ಲಿದ್ದ ಪ್ರಸಾದನನ್ನು ದೂರ ದೂರ ತೇಲಿಸಿತು. ಅತಿಥಿಗಳಿಗೆ "ಗೌರವ ರಕ್ಷಣೆ"ಯನ್ನು ಕೊಡಲು ಸ್ವಯಂಸೇವಕರಿಗೆ ವಿಧಿಸುವಾಗ ಅವನಿಗೆ ಪರಿವೆಯೇ ಇದ್ದಿಲ್ಲ. ಮೆರವಣಿಗೆಯು ಮುಗಿಯುವ ವರೆಗೆ ಪುನರ್ವಸು ಮಳೆಯು ಪ್ರಸಾ ವಿಸಿತ್ತು. ಸಾಯಂಕಾಲ ೫ ಘಂಟೆಗೆ ಅನ್ನಪೂರ್ಣಾ ನಾಟ್ಯಗೃಹದ ಒಳಗೂ

ಹೊರಗೂ ಜನರು ನೆರೆದಿದ್ದರು. ಸ್ಥಳದ ಅಭಾವದ ಕಾರಣ ಸ್ತ್ರೀಯರಿಗೆ ರಂಗಭೂಮಿಯ ಮೇಲೆ ಅನುವು ದೊರೆತಿತ್ತು. ಅತಿಥಿಗಳ ಭಾಷಣವೂ ಅಲ್ಲಿಯೆ.

ವಿದ್ಯಾಲಯದ ಪ್ರಾಧ್ಯಾಪಕರನ್ನು ಮೊದಲ್ಗೊಂಡು ನಗರದ ಎಲ್ಲ ವಿದ್ಯಾರ್ಥಿಗಳೂ, ಪ್ರಮುಖ ನಾಗರಿಕರೂ, ಸುತ್ತುಮುತ್ತಿನ ಹಳ್ಳಿ ಪಟ್ಟಣಗಳ ಅಭಿಮಾನಿಗಳೂ ರಾಷ್ಟ್ರಪತಿಯಾಗಿ ಮೆರೆದ ವಂಗ ಮಹಾವೀರನನ್ನು ಕಣ್ತುಂಬ ಕಂಡು ಮೈಮರೆತರು. ಗುಡುಗಿನಬ್ಬರದ ಮಾತುಗಾರಿಕೆ ಧ್ವನಿವಾಹಕಯಂತ್ರವನ್ನು ನಾಚಿಸುತ್ತಿತ್ತು. ನಾಟ್ಯಗೃಹದ ಹೊರಗೆ ಐದಾರುನೂರು ಜನರು ಯಂತ್ರದ ಇಮ್ಮಡಿ ಧ್ವನಿಯನ್ನು ಆಲಿಸುತ್ತ ಮಳೆಯನ್ನು ಲೆಕ್ಕಿಸದೆ ನಿಂತಿದ್ದರು. ಕರ್ನಾಟಕ ಯುವಕ ಸಂಘದ ಕೊನೆಯ ಕಾರ್ಯಕ್ರಮ ಕನ್ನಡಿಗರಿಗೆ ಭರತಖಂಡದ ಮಹಾ ಮುತ್ಸದ್ದಿಯ ದರ್ಶನವನ್ನು ಒದಗಿಸಿ ಕೃತಾರ್ಥವಾಯಿತು. ಪ್ರಸಾದನ ತೆರೆಯ ಹಿಂದಿನ ಅಪಾರ ಸೇವೆ ಕಾರ್ಯಕ್ರಮದ ಬಹಿರಂಗ ಯಶಸ್ಸಿಗೆ ಅಡಿಗಲ್ಲಾಗಿತ್ತು. ಇನಿದು ಇಪ್ಪತ್ತೆರಡು (Sweet two and twenty) ದಾಟಿ ಇಪ್ಪತ್ತು ಮೂರು ವಯಸ್ಸಿನಲ್ಲಿ ಅಡಿಯಿಟ್ಟ ಕಾರ್ಯದರ್ಶಿಯ ಆಪ್ತೇಯ ಸ್ನೇಹ ಸಂಪಾದನೆಯೇ ಆವನ ಈ ಸೇವೆಗೆ ಪ್ರತಿಫಲ. ಕರ್ನಾಟಕ ಯುವಕ ಸಂಘವು ಅರ್ಪಿಸಬೇಕಾಗಿದ್ದ ಮಾನಪತ್ರವನ್ನು ಕಾರ್ಯದರ್ಶಿಯು ಅಭಿಮಾನದಿಂದ ಈತನಿಗೆ ಓದುವನಕ್ಕೆ ಹಚ್ಚಿದ್ದು ಅವರ ಗಾಢಸ್ನೇಹದ ಉತ್ತಮ ಪ್ರತೀಕ.

ಸೇವೆಯ ಪರಿಣಾಮ ಮಾತ್ರ ಬೇರೊಂದು ಹೃದಯದಲ್ಲಿ ಬೇರೊಂದು ಸ್ಥಿತಿಯಲ್ಲಿ ನಾಟ್ಯವಾಡುತ್ತಿತ್ತು.

ಕುಮಾರಿ ಇಂದ್ರಾಣೀ ಸಂದೀಮಠ ಆಗ ಕರ್ನಾಟಕ ವಿದ್ಯಾಲಯದ ವಿದ್ಯಾರ್ಥಿನಿ. ಇದೇ ಜೂನ್ ತಿಂಗಳಲ್ಲಿ ಪ್ರೀವ್ಹಿಯಸ್ ತರಗತಿಗೆ ಬಂದವಳು. ತುಂಬು ಜವ್ವನೆ. ೧೫ ಮುಗಿಸಿ ೧೬ರಲ್ಲಿ ಅಡಿಯಿಟ್ಟವಳು. ರೂಪದ ಅಭಿಮಾನವನ್ನು ಬಿಟ್ಟು ಮತ್ತೊಂದನ್ನರಿಯದ ಮುಗ್ಧೆ. ವಿದ್ಯಾಲಯದಲ್ಲಿ ಕಾಲಿಟ್ಟಾಗ ಅವಳಲ್ಲಿದ್ದ ಚಿಕ್ಕಬಾಲಿಕೆಯ ಹುಡುಗಾಟಿಕೆ ಇನ್ನೂ ಅಳಿದಿದ್ದಿಲ್ಲ. ಅವಳು ವಿದ್ಯಾಲಯಕೆ ಬಂದಾಗ ಪ್ರಸಾದನು ಧಾರವಾಡಕ್ಕೆ ಇನ್ನೂ ಬಂದಿರಲಿಲ್ಲ.

ಜುಲೈ ೭ನೆಯ ದಿನ ಶುಕ್ರವಾರ. ಪ್ರಸಾದನ ಪತ್ರದಂತೆ ಚಂದ್ರಕಾಂತ ಆವನಿಗಾಗಿ ನಿಲ್ದಾಣದಲ್ಲಿ ಕಾದಿದ್ದನು. ಪ್ರಸಾದನು ಗಾಡಿಯಿಂದಿಳಿದು ಬೇರೊಂದೆಡೆ ಅರಸುತ್ತಿದ್ದ ಗೆಳೆಯನನ್ನು ಉತ್ಸಾಹದಿಂದ ಕೂಗಿದನು. ಚಂದ್ರ ಕಾಂತ ಧಾವಿಸಿ ಬಂದು ವೈದಡವಿದನು. "ಸ್ಯಾಂಡೋ ಆಗಿ ಬಂದಿರುವಿ ಯಲ್ಲ. ಅಯ್ಯರರವರು ಮಂತ್ರ ಹಾಕಿದರೇನೋ? ಒಳ್ಳೆಯದಾಯಿತು ಬಾ. ಬಲಿತು ಬಂದಿರುವಿ! ಕಾರ್ಯದರ್ಶಿ ಕರ್ನಾಟಕ ಯುವಕ ಸಂಘದ ಕಾರ್ಯ ಕ್ರಮವನ್ನು ನಿನಗಾಗಿ ಕಾದಿರಿಸಿದ್ದಾನೆ."

"ಆನಂದ. ಆದರೇನು ಇನ್ನು ನಾನು ನೀನು ಕೂಡಿರುವದೇ ಅಸಾಧ್ಯವಾ ಗುತ್ತಿತ್ತು. ನನ್ನ ಸರ್ವಸ್ವ ಕೈಬಿಡುವದರಲ್ಲಿತ್ತು. ನಾನು ಬೆಂಗಳೂರಿನಲ್ಲಿ ದ್ದೆನು. ನಮ್ಮ ಅಜ್ಜಂದಿರು ಊರವರ ಸಂತಸಕ್ಕಾಗಿ ಇದೇ ಎಪ್ರೆಲ್ ತಿಂಗಳ ೨೨ಕ್ಕೆ ಬಸವ ಜಯಂತಿಯ ನಿಮಿತ್ತ ಪುರಾಣವನ್ನು ಹೇಳಿ ಮುಕ್ತಾಯದ ಸಂಗೀತದಲ್ಲಿಯೇ ಮೂರ್ಛೆ ಹೋಗಿದ್ದರಂತೆ. ಮುದ್ದಣ್ಣನ ತಾತ್ಕಾಲಿಕ ಉಪ ಚಾರ ಅವರನ್ನು ಉಳಿಸಿತಂತೆ. ಮೇ ೧ಕ್ಕೆ ಮುದ್ದಣ್ಣನೇ ಬಲಾತ್ಕಾರದಿಂದ ಅಜ್ಜನ ಮನವೊಲಿಸಿ ನನಗೆ ಪತ್ರ ಹಾಕಿಸಿದನಂತೆ. ಪತ್ರದಲ್ಲಿ ಹೆಚ್ಚಿನ ಗಡಿ ಬಿಡಿ ಇಲ್ಲದಿದ್ದರೂ ಮುದ್ದಣ್ಣನ ಕರೆಯ ಅರ್ಥ ನನಗೆ ಪೂರ್ಣವಾಗದಿರದೆ? ಧಾವಿಸಿದೆನು. ಚಳಗೇರಿಯ ನಿಲ್ದಾಣದಲ್ಲಿಳಿದೆನು. ಗುಡ್ಡದಲ್ಲಿ ಅಡ್ಡಬಿದ್ದ ಕಣವನ್ನು ಸೇರಿದೆನು. ಮೆಲ್ಲನೆ ಬಳಿ ಸಾರಿ ಅಜ್ಜನ ಎದೆಗೆ ಒರಗಿ ಬಿಕ್ಕಿ ಬಿಟ್ಟೆನು. ನನ್ನ ಬೆದರಿದ ಕಣ್ಣುಗಳನ್ನು ಎದೆಗೆ ಒತ್ತಿಕೊಂಡು ಕೆದರಿದ ಕೂದಲುಗಳನ್ನು ನೇವರಿಸಿದರು. "ತಮ್ಮಾ, ನಾನಿನ್ನೂ ಬದುಕುವೆನು. ಹಡೆದ ವರನ್ನು ಮರೆಯಿಸಿದ ಮುದ್ದನಿಲ್ಲವೆ? ಎದೆಗುಂದಬಾರದಪ್ಪ. ನೀನು ಒಳ್ಳೆ ಯವನಾಗಿ ಬಾಳು. ನಿನ್ನ ಆ ಬಾಳು ನಮ್ಮೆಲ್ಲರನ್ನೂ ಕಾಪಾಡುವದು. ನೋಡು, ನನಗಾಗಿ ಮುದ್ದ ತಾನು ಜೀವ ಹಿಂಡಿಕೊಳ್ಳುವದು ಯೋಗ್ಯವೆ? ನೀನು ಬಂದಿದ್ದೀ. ಪ್ರಬುದ್ಧ. ಎಲ್ಲರಿಗೂ ಧೈರ್ಯ ಹೇಳು. ನಿನ್ನಕ್ಕ ಊಟ ಮಾಡುವದೆಂದು ಕೇಳು. ಶರದಯ್ಯ ಬಳಲಿ ನಾನು ಬದುಕಿದರೆ ಒಳಿತೆ? ನಿನ್ನ ಮಾವ ದಿನಾಲು ೨೦ ಮೈಲು ನನ್ನ ಔಷಧಿಗಾಗಿ ನಡೆದು ತಾನು ನೆಲ ಹಿಡಿಯಬೇಕೆ? ಕೇಳು. ಹೇಳು. ಮುದ್ದಾ, ನನ್ನ ಮೊಮ್ಮಕ್ಕಳನ್ನು ತಿದ್ದಿಕೊಂಡು ಬಾ. ಕಣ್ತುಂಬ ನೋಡಿ ಈ ಜಡತನಕ್ಕೆ ಚೈತನ್ಯ ತುಂಬುವೆನು."

ಆಗ ಮನೆಯಲ್ಲಿ ರಕ್ತ ಸಂಚಾರವಾಯಿತು. ಯೋಗ್ಯ ಆಯ್ಕೆ, ಮನೆಯವರೆಲ್ಲರ ಹರ್ಷಚಿತ್ತ, ಮುದ್ದಣ್ಣನ ಗೆಲುವಿನ ಮುಖ, ನನ್ನ ಮೆಲ್ಲುಡಿಯ ಸಂಗೀತ, ಶರಚ್ಚಂದ್ರನ ಚಿನ್ನಾಟ, ಇವೆಲ್ಲ ಅಜ್ಜನನ್ನು ಒಂದು ತಿಂಗಳಲ್ಲಿ ನಿಜಕಳೆಗೆ ತಂದವು. ನಂತರ ಒಂದು ತಿಂಗಳು ಮುದ್ದಣ್ಣನನ್ನು ಬಿಡಿಸಿ ಆಳುಗಳೊಡನೆ ನಾನೇ ನಿಂತು ದುಡಿದು ಅವನಿಗೂ ಪೂರ್ವದ ಗೆಲುವು ತಂದೆನು. ಆ ದುಡಿತದಿಂದ ಬೆಂಗಳೂರಿನ ಹೇಚು ಮಿಡಿಯಾಯಿತು. ನಮ್ಮವರಿಗೆ ಮರಳಿ ಆ ನೆಮ್ಮದಿ ದೊರೆಯದಿದ್ದರೆ, ಚಂದೂ, ನಿನ್ನ ಈ ಸಹವಾಸ ಪುನಃ ದೊರೆಯುತ್ತಿತ್ತೆ ? ಅದನ್ನು ನೆನೆದರೆ ಎದೆ ನಡುಗುವದು.''

ಪ್ರಸಾದನ ಈ ಬಾರಿಯ ಬಿಡುವಿನ ಅನುಭವ ಮುಗಿಯುತ್ತಲೆ ಕುದುರೆಯ ಗಾಡಿ ಮನೆಯ ಮುಂದೆ ನಿಂತಿತು. ವಿಶ್ರಾಂತಿಯ ನಂತರ ಚಂದ್ರಕಾಂತ ಪ್ರಸಾದನಿಗೆ ಇಂದ್ರಾಣಿಯು ವಿದ್ಯಾಲಯಕ್ಕೆ ತನ್ನ ಸಹಪಾಠಿ ಅಪರ್ಣೆಯೊಂದಿಗೆ ಬಂದಿರುವದನ್ನೂ ನಂಜುಂಡಯ್ಯನವರು ಬಿತ್ತಿಗೆಯ ಕಾರ್ಯಕ್ಕೆ ಹೋಗಿರುವದನ್ನೂ ತಿಳಿಸಿದನು. ಈ ಪೂರ್ವಪೀಠಿಕೆಯಿಂದ ಅವರು ವಿದ್ಯಾಲಯಕ್ಕೆ ಹೋದರು. ಜನ ಬಳಿಕೆಯ ಮುಗ್ಧ ಅಪರ್ಣೆ ಮಿತ್ರರ ಸ್ನೇಹವನ್ನು ಬೇಗನೇ ಸಂಪಾದಿಸಿ, ಇಂದ್ರಾಣಿಯನ್ನು ಮಿತ್ರರ ಗುಂಪಿಗೆ ಜೋಡಿಸುವ ಸಜೀವ ಸಾಧನೆಯಾದಳು. ಮಿತ್ರರೊಡನೆ ಅಪರ್ಣೆಯ ಗೆಳತಿ ಮಾತ್ರವಾಗಿ ಇಂದ್ರಾಣಿ ಗುಂಪಿನಲ್ಲಿರಹತ್ತಿದಳು. ೪-೫ ದಿನಗಳು ಸಾಗಿದವು. ಕಾರ್ಯದರ್ಶಿ ಬಂದು ಪ್ರಸಾದನನ್ನು ಗುಂಪಿನಿಂದ ಸೆಳೆದೊಯ್ದನು.

ಅದೇ ಜುಲೈ ೧೨ರ ಶುಕ್ರವಾರವು ಇಂದ್ರಾಣಿಯ ಹೃದಯದಲ್ಲಿ ಎಂದೂ ಇಲ್ಲದ ಭಾವನಾಕುಸುಮವನ್ನು ಅರಳಿಸಿತು. ಅದನ್ನು ಬಯ್ಚಿಡಲು ಇಂದ್ರಾಣಿ ಅಪರ್ಣೆಯ ಅಂತರಾಳಕ್ಕೆ ಒಪ್ಪಿಸಿದಳು: “ಅಪರ್ಣಾ, ನಮ್ಮ ಅಪ್ಪಯ್ಯ ಆ ಚಂದ್ರಕಾಂತನ ಗೆಳೆಯನನ್ನು ಐವತ್ತು ರೀತಿಯಿಂದ ಬಣ್ಣಿಸುತ್ತಿದ್ದರು. ಸ್ವಲ್ಪಮಟ್ಟಿಗಾದರೂ ನಿಜವಿದೆಯೆಂದು ಇಂದು ನನಗೆ ಕಂಡುಬಂದಿದೆ ನೋಡು. ೫ ಘಂಟೆಗೆ ಬೋಸರ ಭಾಷಣ. ೪ ಘಂಟೆಗೆ ನಾಟ್ಯಗೃಹದಲ್ಲಿ ಕುಳಿತುಕೊಳ್ಳುವ ವ್ಯವಸ್ಥೆ ಇಲ್ಲ. ಧ್ವನಿವಾಹಕ ಯಂತ್ರಗಳ ಸೌಕರ್ಯವಿಲ್ಲ. ಆದರೂ ೫ ಘಂಟೆಗೆ ಸರಿಯಾಗಿ ಕಾರ್ಯಕ್ರಮಕ್ಕೆ ಎಲ್ಲವೂ ಸಿದ್ಧ. ಇಷ್ಟು ದುಡಿದು ಏನೂ ದಣಿಯದವನಂತೆ ಆ ಮಾನಪತ್ರವನ್ನು

ಓದಿ ಸುಭಾಸರಿಗೆ ಅರ್ಪಿಸಿ ಹಸ್ತಾಂದೋಲನವನ್ನು ಪಡೆದನು. ನನ್ನ ಬದಿಯಲ್ಲಿದ್ದ ಅವನ ತರಗತಿಯ ಹುಡುಗಿಯರು "what a silent volcano he is!" ಎಂದರು. ನಮ್ಮ ಅಪ್ಪಯ್ಯ ಗಾಂಧಿಯವರ ಪ್ರಿಯ "ಸ್ಥಿತಪ್ರಜ್ಞ" ಶಬ್ದವನ್ನು ಸಾವಿರ ಬಾರೆ ನನಗೆ ತಿಳಿಸಿ ಹೇಳಲು ಯತ್ನಿಸಿದ್ದರು. ನನಗೆ ಪೂರ್ಣ ಅರ್ಥವಾಗಿರಲಿಲ್ಲ. ನಮ್ಮ ಅಪ್ಪಯ್ಯ ಬರಲಿ, ಅವರಿಗೇ ಮನದಟ್ಟಾಗುವಂತೆ ಹೇಳುವೆನು. ಕಾರ್ಯಕ್ರಮವನ್ನು ಮುಗಿಸಿ, ನಮ್ಮನ್ನು ಕಳಿಸಲಿಕ್ಕೆ ಮೋಟಾರಿನಲ್ಲಿ ಬಂದಿರಲಿಲ್ಲವೆ? ಅವನು ಮೋಟಾರಿನಲ್ಲಿ ಇದ್ದನೇ? ನಮ್ಮಲ್ಲಿ ಉಪಹಾರಕ್ಕೆ ಕುಳಿತಾಗ ಚಂದ್ರಕಾಂತ ಅವನ ಕರವಸ್ತ್ರವು ಬದಿಯಲ್ಲಿದ್ದುದನ್ನು ತೋರಿಸಬೇಕಾಯಿತು. ನಮ್ಮಲ್ಲಿ ಕುಳಿತ ಶಾಸ್ತ್ರಮಾಡಿ ಹಾರಿದನು. ಆ ಕಾರ್ಯದರ್ಶಿ ಏನಾದರೂ ಮಂತ್ರ ಊದಿದ್ದಾನೋ ಅಥವಾ ಒಂದು ಕಾರ್ಯವನ್ನು ಕೈಕೊಂಡರೆ ಮುಗಿಸುವ ವರೆಗೆ ಈತನಿಗೆ ಏನಾದರೂ ಗಾಳಿ ತುಂಬುತ್ತದೆಯೋ ನೋಡಬೇಕು. ಅವನನ್ನು ಕರೆತರಲು ಚಂದ್ರಕಾಂತನಿಗೆ ತಿಳಿಸಿದ್ದು ಒಳ್ಳೆಯದಾಯಿತು. ಎಂದೂ ಮಾತನಾಡಿಸದ ನಾನು "ನಮ್ಮಲ್ಲಿ ಉಪಹಾರಕ್ಕೆ ಬನ್ನಿ" ಎಂದರೆ ಚಂದ್ರಕಾಂತ ಅವನಿಗೆ ನನ್ನ ಅಭಿಪ್ರಾಯವನ್ನು ತಿಳಿಸಿ ಹೇಳಿ ಒಪ್ಪಿಸಬೇಕಾಯಿತು. ತಾನೇ ತಾನಾಗುವ ಈ ಸ್ವಭಾವ ಒಳ್ಳೆಯದೆ ಅಪರ್ಣಾ?"

"ಹಡೆದ ತಾಯಿಗೆ ಮಗುವಿನ ಪೂರ್ಣ ಪೂರ್ವ ಪರಿಚಯವಿರುವಂತೆ, ಇಂಥವರ ಒಡನಾಡಿಗಳಿಗೆ ಅವರ ಸ್ವಭಾವದ ಪೂರ್ಣ ಪರಿಚಯವಿದ್ದರೆ, ಅದರಿಂದ ಎಲ್ಲರಿಗೂ ಒಳ್ಳೆಯದೆ."

"ಅಂದರೆ ಕೈಹಿಡಿದವಳ ಗತಿ?" ಎಂದಳು ಇಂದ್ರಾಣೀ. "ಗತಿಯೇನು? ತಾನೇತಾನಾಗುವ ಅವನ ಸ್ವಭಾವ ಸರ್ವ ರಂಗಗಳಲ್ಲಿಯೂ ಉಪಯುಕ್ತ. ಕೈ ಹಿಡಿದವಳ ಹೃದಯದ ಮಾಧುರ್ಯಕ್ಕೆ ಅವನು ಮನ ಸೋತರೆ ಅಲ್ಲಿಯೂ ತಾನೇ ತಾನು ತನ್ನವಳೊಡನೆ! ಇನ್ನೇನು ಹೆಚ್ಚು ಬಯಸುವದು ನೀನು?" ಎಂದಳು ಅಪರ್ಣೆ.

"ಏ, ನನಗೇಕೆ ಬಂದೆ? ಸಾಮಾನ್ಯವಾಗಿ ಮಾತಾಡು. ಸ್ವಲ್ಪ ಅವನ ವಿಚಾರದಲ್ಲಿ ನನ್ನವಳು ಎಂದು ಗುಟ್ಟಾಗಿ ಅಭಿಪ್ರಾಯಕೊಟ್ಟರೆ ಆಗಲೇ ನನಗೆ ಅಂಟಿಸಬಂದೆಯಾ?" ಎಂದು ಇಂದ್ರಾಣಿ ಗೆಳತಿಯ

ಮೇಲೆ ಹರಿಹಾಯ್ದಳು.

"ನಾನೇನು ನಿನಗೆ ಅಂಟಿಸಿದ್ದು? 'ರೆ' ರಾಜ್ಯದಲ್ಲಿ ಕಲ್ಪಿತ ಬೊಂಬೆಯ ಆಟ. ಕಲ್ಪನೆ ಮೆಲ್ಲನೆ ನಿನಗೆ ತಟ್ಟಿತೇನು? ಶ್ರುತಿಗೂಡಿದ ವೀಣೆ. ಬೆರಳಿಡುವದೊಂದೇ ತಡ. ಮಿಡಿಯುದಿರದೇ?" ಎಂದು ಅಪರ್ಣೆ ಹಾಸ್ಯ ಮಾಡಿದಳು.

"ನಾನು ಮಾತ್ರ ಸುಸಜ್ಜಿತ ವೀಣೆ. ನೀನು?" ಎಂದು ತನ್ನದನ್ನು ಅವಳಲ್ಲಿ ಹಂಚಿದಳು ಇಂದ್ರಾಣಿ.

ಈ ಮಧುರ ಸಂವಾದ ಮುಗಿಯುವದು ಎಂದೋ ಎಂದು ಅನಿಸುವಷ್ಟು ಅದನ್ನು ಕಿನ್ನರ ಮಾಯೆ ಮುಸುಕಿತ್ತು. ಚಂದ್ರಕಾಂತ ಬಂದು ಪರದೆಯನ್ನೆಳೆದು ವಸ್ತುಸ್ಥಿತಿಯ ಬೆಳಕನ್ನು ಬರಮಾಡಿದನು: "ಹುಬ್ಬಳ್ಳಿಯ ಕರ್ನಾಟಕ ವಕ್ತೃತ್ವೋತ್ತೇಜಕ ಸಂಘದವರು ದೇಶಗೌರವರಿಗೆ ಆಮಂತ್ರಣವನ್ನಿತ್ತಿದ್ದಾರೆ. ಪ್ರಸಾದ ಈ ಆಕಸ್ಮಿಕ ಕಾರ್ಯಕ್ರಮಕ್ಕಾಗಿ ಕಾರ್ಯದರ್ಶಿಯೊಡನೆ ಹುಬ್ಬಳ್ಳಿಗೆ ಇದೀಗ ಹೋದನು."

ಗೆಳತಿಯರ ಪರಸ್ಪರ ನೋಟದಲ್ಲಿ ಆದರಪೂರ್ಣ ಕರುಣೆ ಮೂಡಿತು. ಈ ನೋಟ ಚಂದ್ರಕಾಂತನಿಗೆ ಹೊಸದು. ಗಡಿಬಿಡಿಯಿಂದ ಅಪ್ಪಣೆ ಪಡೆದು ಹೋಗಿ ತನ್ನ ಉಪ್ಪರಿಗೆಯ ಆಸನದಲ್ಲಿ ಉಯ್ಯಾಲೆಯಾಡುತ್ತ ವಿಚಾರವಶನಾದನು.

ಆ ಆದರ ಆ ಕರುಣೆ, ಅವರೂ ತನ್ನಂತೆ ತನ್ನ ಗೆಳೆಯನನ್ನು ಸಂಪೂರ್ಣ ಅಳೆದುದರ ಪರಿಣಾಮವೋ? ತನ್ನ ಬಯಕೆಯಂತೆ ಇಂದ್ರಾಣಿ ಪ್ರಸಾದನ ಪ್ರೇಮಪಾತ್ರಳಾಗುವಳೋ? ಅಪರ್ಣೆಯು ಮುಗ್ಧತನ ಪ್ರಸಾದನ ಜೀವನದಲ್ಲಿ ಯಾವುದಾದರೂ ನಾಟ್ಯವನ್ನು ಅಭಿನಯಿಸಬಹುದೋ? ಇವೇ ಮೊದಲಾದ ಭಾವನಾತರಂಗಗಳು ಸುಳಿದು ಸುಳಿದು ತಿಳಿಯಾದವು. ಕೆಳಗಿಳಿದು, ಸಿತಾರೆಗೆ ಕೈಯಿಟ್ಟು ಸಂಧ್ಯಾರಾಗವೊಂದನ್ನು ನುಡಿಸಿ ನಲಿದನು. ಮಿತ್ರನ ನಲ್ಮೆಯ ಕಣ್ಣುಗಳು ಎದುರು ನಿಂತು 'ಸೈ' ಎಂದಂತೆ ಭಾಸವಾಗಿ ಹೆಚ್ಚು ಉತ್ಸುಕತೆಯಿಂದ ಬೆರಳುಗಳು ಏರಿಳಿದವು. ಚಂದ್ರಕಾಂತನ ತಾಯಿ ಬಂದು ಬೆರಗಾಗಿ ಪಾವಟಿಗೆಯಲ್ಲಿ ನಿಂತು ಆಲಿಸಿದಳು. ಮಗನ ಅಂತರಂಗ

ತರಂಗ ತರಂಗವಾಗಿ ಸಿತಾರೆಯಿಂದ ತೇಲಿ ಅವಳ ಅಂತರಂಗವನ್ನು ಸೂರೆಗೊಂಡಿತು. ಅತ್ಯಂತ ಪ್ರೇಮದಿಂದ "ಬಾ ಚಂದೂ. ಊಟ ಮುಗಿಸಿ ಬಾರಿಸುವಿಯಂತೆ. ನಿನ್ನ ಸೊಸೆ ಇಂದು ನಸುಕಿನಲ್ಲಿಯೆ ಎದ್ದಿಲ್ಲವೆ?" ಎಂದಳು. ಪಾವಟಿಗೆಯ ಕಡೆಗೊಮ್ಮೆ ಕಳ್ಳನೋಟ ನೋಡಿದನು. "ಅವಳು ಇಲ್ಲಿಗೆ ಬಂದಿಲ್ಲ ಕೇಳುವದಕ್ಕೆ, ಬಾ. ಎಷ್ಟು ಹಿಂದೆ ಮುಂದೆ ನೋಡುತ್ತೀ." "ನಾನೆಲ್ಲಿ ಬೇಡವೆಂದಿರುವೆನು. ನಿನ್ನ ಅವಳ ಶಾಸ್ತ್ರದಲ್ಲಿ ಹಾಗೆ ಏನಾದರೂ ಬರೆದಿದೆಯೋ? ಮತ್ತು ಗಂಡನ ಊಟದ ನಂತರ ಉಣ್ಣುವ ನಿಯಮವನ್ನು ಮದುವೆಯಾದ ನಂತರ ಅಲ್ಲಿ ಗಂಡನ ಮನೆಯಲ್ಲಿ ನಡೆಸುವದಿತ್ತು. ಈಗಲೇ ಇಲ್ಲಿ ಯಾಕೆ?" ಎನ್ನುತ್ತ ಅರಸುವ ಕಣ್ಣುಗಳಿಂದ ಕೆಳಗಿಳಿದು ಹೋದನು. ಎಡಬದಿಯ ಕೋಣೆಯಲ್ಲಿ ಸುಳಿವು ಹಿಡಿದು, "ಅವ್ವಾ, ಮುಖ-ವಸ್ತ್ರ ಈ ಕೋಣೆಯಲ್ಲಿ ಇದೆಯೋ?" ಎನ್ನುತ್ತ, ಅವನ ತಾಯಿ, "ಇಲ್ಲ ಇಲ್ಲಿದೆ ಬಾ" ಅನ್ನುವದರೊಳಗಾಗಿಯೇ ಕೋಣೆಯನ್ನು ಹೊಕ್ಕಿದ್ದನು. ಕತ್ತಲಲ್ಲಿ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದ ಹಕ್ಕಿ ಪುರ್ರನೆ ಅಡುಗೆಯ ಮನೆಯ ಬೆಳಕಿಗೆ ಹಾರಿ, ಒಲೆಯ ಮುಂದೆ ಗರಿಗೂಡಿಸಿಕೊಂಡು ಮೆಲ್ಲನೆ ಕಂಪಿಸುತ್ತ ಕುಳಿತಿತು. "ಎಂಥವನು ನೀನು! ಏನಾದರೂ ನೆವಮಾಡಿ ಹುಡುಗಿಯನ್ನು ಹೆದರಿಸಿ ।ಬಿಡುತ್ತೀಯಲ್ಲ." ತಾಯಿಯ ಈ ಉಪಶಾಂತಿಗೆ, "ನಾನೇನು ಹುಲಿಯೋ ಕರಡಿಯೋ? ಇರಿಯುವ ದನವೋ? ಅವಳು ಅಲ್ಲಿದ್ದದ್ದು ನಾನು ಕಂಡಿದ್ದರೆ ಅವಳನ್ನೇ ನಾನು ವಿಚಾರಿಸುತ್ತಿದ್ದಿಲ್ಲವೆ? ಅರಿಯದವಳೇನು ನನಗೆ?" ಎಂದನು ಚಂದ್ರಕಾಂತ.

"ಸಂಪನ್ನ! ಅಹುದು ಬಾರಪ್ಪ. ಜಾಜಿವಂತ ಸೆಜ್ಜೆತೆನೆ" ಎಂದು ತಾಯಿಯವರು ಮಗನಿಗೆ ಮೂದಲಿಸಿದರು. ಹಿಗ್ಗುವದನ್ನು ಹೆಚ್ಚು ಹಿಗ್ಗಿಸುವದರಲ್ಲಿ ಹುರುಳಿಲ್ಲೆಂದು ಚಂದ್ರಕಾಂತ ಸುಮ್ಮನೆ ಊಟಮಾಡಿ ಮೇಲೆ ಹೋದನು.

ಬೆಳಗಿನ ಜಾವ ಇನ್ನು ೨-೩ ತಾಸು ಇರುವಾಗ ಆವಾರದ ಹೊರಗೆ ನಿಂತ ಮೋಟಾರಿನ ಭರಗುಡುವ ಸಪ್ಪಳಕ್ಕೆ ಚಂದ್ರಕಾಂತನಿಗೆ ಎಚ್ಚರವಾಗಿ ಹೊರಬಂದನು. "ನಿಶಾಚರ ಮಹಾಶಯರೇ ನಿಮ್ಮ ಹಾಸಿಗೆಯನ್ನು ಸಂಕನು ಆಗಲೇ ಹಾಕಿಟ್ಟಿರುವನು. ಇನ್ನೊಮ್ಮೆ ನೋಡಿ ಮಲಗಿಕೊಳ್ಳಿರಿ."

ಚಂದ್ರಕಾಂತ ಮೇಲಿನಿಂದಲೇ ಕೂಗಿ ಹೇಳಿದನು. "ಉಪಕಾರವಾಯಿತು ಬಿಡು ದೊರೆಯೆ. ನಿನಗೆ ಬೇಗನೇ ಸಂಗಾತಿ ದೊರೆಯುಲಿ" ಎಂದು ಪ್ರಸಾದ ಹರಕೆ ಹಾರಯ್ಕೆಯ ಕೂಗು ಕೂಗಿದನು. "ನಿನ್ನ ಆಶೀರ್ವಾದ ತಡವಾಗಿ ಬಂದಿತು." ಚಂದ್ರಕಾಂತ ಒಳಗೆ ಓಡಿದನು. "ಏನು ? ಏನಂದೆ ? ಮತ್ತೇನು ಗಡಿಬಿಡಿ ? ಎಲಾ ಇವನು ಒಳಗೆ ಓಡಿದನಲ್ಲ, ಬಾಯಿಯೊಳಗಿನ ಮಾತು ಬಾಯಿಯಲ್ಲಿರಿಸಿಕೊಂಡು'' ಎಂದು ಒಳಗೆ ಹೋಗಿ, ದೀಪ ಹಚ್ಚಿ ನೋಡಿ, ಏನೇನೋ ಕೆಲವು ವೇಳೆ ಯೋಚಿಸಿ ವಿಚಾರವನ್ನು ಮುಂಜಾನೆಗೆ ತಳ್ಳಿ, ದೀಪ ಕಳೆದು, ಪ್ರಸಾದನು ಮುಸುಗು ಎಳೆದುಕೊಂಡನು.

## ೭

೧೯೩೯ ನೆಯ ಅಕ್ಟೋಬರ ೧೩. ಶುಕ್ರವಾರ. ಘಟಸ್ಥಾಪನೆಯ ದಿನ. ನಂಜುಂಡಯ್ಯನವರನ್ನು ನಿರೀಕ್ಷಿಸುತ್ತ ನಿಂತ ಮಿತ್ರರು ಅವರ ವಿಷಯವನ್ನೆತ್ತಿದ್ದರು.

" ನಂಜುಂಡಯ್ಯನವರು ನಿಜವಾಗಿಯೂ ಜ್ಞಾನಿಗಳಲ್ಲವೆ, ಪ್ರಸಾದ ! "
" ಅನುಭಾವಿಗಳು ! " "ಜನರನ್ನು ಪೂರ್ಣ ಅಳೆಯುತ್ತೀಯಾ, ಪ್ರಸಾದ."

" ಸಾಹಸ ಮಾಡುತ್ತಿದ್ದೇನೆ. ಯಶಸ್ಸು ಅಪಯಶಸ್ಸು ನನ್ನ ಗ್ರಹಿಕೆಯ ಅಂತಸ್ತನ್ನು ಅವಲಂಬಿಸಿವೆ. "

ಅಷ್ಟರಲ್ಲಿ ನಂಜುಂಡಯ್ಯನವರು ದಯಮಾಡಿಸಿದರು. ಚಳಿಗಾಲದ ಬಿಡುವಿನಲ್ಲಿ ಮೂವರೂ ಕೂಡಿ ಒಂದು ವಾರ ಆರೇಮಲ್ಲಾಪುರದಲ್ಲಿ ಕಳೆಯುವುದನ್ನೂ ಕೊನೆಯ ದಿನ ಆ ತಿಂಗಳ ೨೮ಕ್ಕೆ ಚೌಡದಾನಪುರದ ಹೊಳೆಯೂಟಕ್ಕೆ ಹೋಗುವದನ್ನೂ ಅಂದು ನಿರ್ಣಯಿಸಿದರು. ಅದರಂತೆ ಬಳಗವು ಅದೇ ೨೨ರ ನಸುಕಿನಲ್ಲಿಯೇ ಸೀಮೋಲ್ಲಂಘನವ ಗೆಯ್ದು ಬನ್ನಿಯ ಕಾರ್ಯಕ್ರಮವನ್ನು ಪೂರಯಿಸಿ ಮುಂಜಾನೆಯೇ ಧಾರವಾಡವನ್ನು ಬಿಟ್ಟು ಮಧ್ಯಾಹ್ನ ೨ ಘಂಟೆಗೆ ರಾಣಿಬಿದನೂರಿನಲ್ಲಿತ್ತು. ಅಲ್ಲಿ ಅದೇ ಬಂದ ಪತ್ರವೊಂದು ನಂಜುಂಡಯ್ಯನವರಿಗಾಗಿ ಕಾದಿತ್ತು. ಇದೇನು ! ಪತ್ರದ ಕವಚದ ಕೋನದಲ್ಲಿ " ಇನ್ನಿ ! "

ನಂಜುಂಡಯ್ಯನವರಿಗೆ ವಿಸ್ಮಯ. ಗೆಳೆಯರಿಗೆ ಕುತೂಹಲ. ಅಯ್ಯನವರು ಒಡೆದು ಓದಿದರು. ಇಂದ್ರಾಣಿಯ ಮುನಿಸು. ಅವಳ ಹುಟ್ಟುಹಬ್ಬವನ್ನು ಬಿಟ್ಟು ಬಂದಿರಲಿಲ್ಲವೆ? "ಇದು ನೋಡಿರಿ ನಮ್ಮ ಮಗಳ ಆಟವನ್ನು. ನಾವು ಇಂದು ಇಲ್ಲಿ ಓದಿ ಕಂಗಾಲಾಗಲೆಂದು ಅಲ್ಲಿಂದ ನಿನ್ನೆಯೇ ಬರೆದು ಹಾಕಿದ್ದಾಳೆ. ಅವಳ ಜನ್ಮ ೨೪-೧೦-೨೩ ನೆಯ ಬುಧವಾರ. ಸೀಗೆಹುಣ್ಣಿಮೆಯ ದಿನ. ಆಗಲಿ ಅನುಕೂಲಸಿಂಧು. ಸೀಗೆಹುಣ್ಣಿಮೆ ೨೮-೧೦-೩೯ ಕ್ಕೆ ಬಂದಿದೆ. ನಮ್ಮವರ ದಿನಮಾನದಂತೆ. ಅಂದು ಅವಳ ಹುಟ್ಟುಹಬ್ಬವನ್ನು ಇಡಲು ಬರೆಯುವೆನು. ಹಾರಾಡಲಿ. ಅವಳ ಚಿಕ್ಕಪ್ಪನೊಡನೆ ಬುದ್ಧಿಯನ್ನು ಓಡಿಸಲು ಬರುವಳಲ್ಲವೆ?" ಎಂದು ನಂಜುಂಡಯ್ಯನವರು ಅದರಂತೆ ಬರೆದು ಆಗಲೇ ಅಂಚೆಗೆ ಕಳುಹಿದರು.

"ನಂಜುಂಡಯ್ಯನವರೆ, ಕುಮಾರಿ ಇಂದ್ರಾಣಿಯವರು ಸಂಕ್ಷಿಪ್ತವಾಗಿ 'ಇನ್ನಿ' ಯೆಂದು ಇದೇ ಮೊದಲು ನಮ್ಮೆದುರು ಬಂದರಲ್ಲ?" ಎಂದು ಚಂದ್ರ ಕಾಂತ ಕುತೂಹಲವನ್ನು ವ್ಯಕ್ತಪಡಿಸಿದನು.

"ಓಹೋ! ಅದೊಂದು ರಸಮಯ ರಹಸ್ಯ. ನಮ್ಮ ಇಂದ್ರಾಣಿಯ ತಮ್ಮ ಒಂದು ದಿನ ಅವಳೊಡನೆ ಒಳ್ಳೆ ಸರಸವಾಗಿ ಆಡುತ್ತಿದ್ದನು. ಅಕ್ಕರತೆ ಮಾತಿಗೆ ಮಿತಿ ತಂದಿತ್ತು. ಅವಳ ತಮ್ಮ ಮೈಮೇಲೆ ಬಿದ್ದು ಒಂದು ಕತೆ ಹೇಳೆಂದು ತನ್ನ ಎಲ್ಲ ಪ್ರೇಮವನ್ನು ಉಪಯೋಗಿಸಿದನು. ನಾಟಲಿಲ್ಲ. ಇನ್ನಷ್ಟು ಮುಂದೆ ಸಾಗಿ ಅವಳ ಗಲ್ಲವನ್ನು ಹಿಡಿದನು. ಗೆಳೆತನ ವನ್ನು ಸಾಧಿಸಿದನು. ಅವಳು ೧೦-೧೧ ವರ್ಷದವಳು. ಅವನು ೬-೭ ವರ್ಷದವನು. ಆಕೆಯ ಕೊರಳಿಗೆ ಕೈ ಹಾಕಿ ಎದೆಯ ಮೇಲೆ ಸಾಗುಬಿದ್ದು ಪುನಃ ಗಲ್ಲವನ್ನು ನೇವರಿಸಿ, "ಇನ್ನಿ! ಕತೆ ಹೇಳುತ್ತೀಯೋ ಇಲ್ಲವೊ?" ಎಂದು ಬತ್ತಳಿಕೆಯ ಕೊನೆಯ ಬಾಣವನ್ನು ಬಿಟ್ಟನು. ನಾಟಿತು. 'ಇನ್ನಿ' ತಮ್ಮನಿಗೆ ಮುದ್ದಿಟ್ಟು ಗುಟ್ಟುಗುಟ್ಟಾಗಿ ಸವಿಯಾಗಿ ಕತೆ ಹೇಳಿದಳು. ಅಂದಿ ನಿಂದ ಅವಳ ಅಚ್ಚುಮೆಚ್ಚಿನವರಿಗಷ್ಟು ಮೀಸಲು ಆ ಅಕ್ಕರೆಯ ಹೆಸರು. ಆ ಹೆಸರಿನ ಹುಟ್ಟಿಗೆ ನಾನು ಸಾಕ್ಷಿಯಾಗಿದ್ದುದರಿಂದ ಇಂದಿಗೂ ನನ್ನ ಅಂತರಂಗ ವನ್ನು ತಟ್ಟುವಾಗ ಮುಟ್ಟುವಾಗ ಇದೇ 'ಇನ್ನಿ' ಮುಂದೆ ಬರುವದುಂಟು."

" ಮಕ್ಕಳ ಮುದ್ದಿನ ಪ್ರಪಂಚದಲ್ಲಿ ಇಂಥ ಚೊಕ್ಕ ಚಿಕ್ಕ ಅಕ್ಕರತೆಯ ಸಂಬೋಧನೆಗಳಿಗೆ ಎಣೆಯೇ ಇಲ್ಲ. ಪ್ರೇಮದ ಸೌಕರ್ಯಕ್ಕನುಗುಣವಾಗಿ ಮಾಧುರ್ಯದ ಎಸಳುಗಳು ಅವರ ತೊದಲ್ನುಡಿಯಲ್ಲಿ ಸಹಜವಾಗಿ ಜನಿಸುವವು. ಚಿಕ್ಕಮಕ್ಕಳಿಗೆ ಅರ್ಥಕ್ಕಿಂತ ಅಕ್ಕರೆ ಪ್ರಾಧಾನ್ಯ. ಸಂಪ್ರದಾಯವು ಇಂದ್ರಾಣಿಯೆಂದು ಮಾತಾಸ್ವರೂಪಿಣಿಯಾದ ಶಕ್ತಿಗೆ ಅರ್ಥವನ್ನು ಕಲ್ಪಿಸಿ ಕೊಟ್ಟಿದೆ. ಸಂಪ್ರದಾಯದ ಮೇರೆಯಲ್ಲಿಯೇ ಅಕ್ಕರೆಯನ್ನು ಕಂಡುಕೊಂಡ ಮಗುವಿಗೆ 'ಇಂದ್ರಾಣೀ' 'ಇನ್ನಿ' ಯಾದಳು. 'ಇಂದ್ರಾಣೀ' ಎಂದು ಅರ್ಥದ ಜೊತೆಗೆ ಓಡದ ಮಕ್ಕಳು 'ಇನ್ನಿ' ಯೆಂದು ಮಿತಿಯ ಮಮತೆಯಲ್ಲಿಯೇ ಮುಂದಿನ ತಮ್ಮ ಕನಸಿನ ರಾಜ್ಯಕ್ಕೆ ಅಣಿಮಾಡುವರು " ಎಂದು ಪ್ರಸಾದ ತನ್ನದೇ ರಾಜ್ಯದಲ್ಲಿ ಸಂವಾದವನ್ನು ಸಾಗಿಸಿದ್ದನು.

ನಂಜುಂಡಯ್ಯನವರು ಸಮ್ಮತಿಯ ಸೂಚನೆಯನ್ನಿತ್ತು ಮುಂದಿನ ವ್ಯವಸ್ಥೆಗೆ ಒಳಗೆ ಹೋದರು.

" ಇದೇನು ! 'ಇಂದ್ರಾಣೀ' 'ಇನ್ನಿ' ಈ ಶಬ್ದಗಳ ಮೇಲೆ ಉಪನ್ಯಾಸವನ್ನೇ ಆರಂಭಿಸಿರುವೆಯಲ್ಲ. ಉತ್ಪತ್ತಿ ಉದ್ದೇಶ ಪರಿಣಾಮ ಇವುಗಳೇಕೋ ನಿನ್ನ ಪಾಂಡಿತ್ಯವನ್ನು ಹುರಿದುಂಬಿಸಿರುವವಲ್ಲ. ನೀನೇನು ಇಂದ್ರಾಣಿಯ ಅಚ್ಚುಮೆಚ್ಚಿನವನಾಗಿ ಆ ಹೆಸರನ್ನು ಜಪಮಾಡುವ ಇಚ್ಛೆಯಿದ್ದವನಂತೆ ರಗಳೆಯನ್ನು ಆರಂಭಿಸಿರುವೆಯಲ್ಲ. ನಂಜುಂಡಯ್ಯನವರು ನಿನ್ನ ಅಂತರಂಗವನ್ನು ಆಳೆದಾರು " ಎಂದು ಚಂದ್ರಕಾಂತ ಕೆಣಕಿದನು.

" ನನಗೆ ಮಕ್ಕಳ ಮಧುರ ಪ್ರಪಂಚ ಮರುಳುಮಾಡಿತ್ತಲ್ಲದೆ, ಅವರ ಒಂದು ವಿಶಿಷ್ಟ ಸನ್ನಿವೇಶದ ಒಂದು 'ಇನ್ನಿ' ಯಂಥ ವಿಷಯ ಮಾತ್ರ ಮಧುರವಾಗಿದ್ದಿಲ್ಲ."

ರವಿವಾರ ಸಂತೆಗಾಗಿ ಬಂದ ಬಂಡಿ, ಮಿತ್ರರು ಹಿಂದಿನಿಂದ ಇಳಿಹೊತ್ತು ಮಾಡಿಕೊಂಡು ನಡೆದು ಬರುವರೆಂಬ ವಾರ್ತೆಯೊಡನೆ ಮುಂದೆ ಹೋಯಿತು. ಚೆನ್ನಮಲ್ಲಪ್ಪನವರನ್ನೊಳಗೊಂಡು ಸಾಯಂಕಾಲ ೫ ಘಂಟೆಗೆ ಹೊರಟು ಸೂರ್ಯಾಸ್ತವಾದ ಒಂದು ತಾಸಿನ ನಂತರ ಮಿತ್ರಮಂಡಳಿಯು ಮಧುವಯ್ಯನವರ ಸ್ವಾಗತವನ್ನು ಪಡೆಯಿತು.

ಮನೆಯ ಮುಂದಿನ ಹೊರ ಅಂಗಳದಲ್ಲಿ ನಡುವೆ ಗುಡಾರದ ಮೇಲೊಂದು ತಿವಾಸಿಯನ್ನು ಹಾಸಿ ನೆಲದಿಂಬುಗಳನ್ನು ಇರಿಸಿದ್ದರು. ಈ ಮಧ್ಯ-ವರ್ತುಳದ ಸುತ್ತು ನಾಲ್ಕು ಬಹಿರ್ಮುಖ ದುಂಡು ಕಂಸಗಳು. ಕಂಸಗಳ ನಡುವೆ ದಾರಿಗಳು. ಕಂಸಗಳ ಒಳಬದಿಯಲ್ಲಿ ಒಂದೊಂದು ಪಾತಿ. ಪಾತಿಯಲ್ಲಿ ಪತಿಯೊಂದಿಗೆ ಕನಸು ಕಾಣುವ ಸತಿಯಂತೆ ನೀಳವಾಗಿ ಬೆಳೆಯಿಸಿದ ಮದರಂಗಿಯ ಗಿಡಕ್ಕೆ ಅಂಟಿದ ಮಲ್ಲಿಗೆ ಮುಗಿಲು ಮುದ್ದಿಸುವ ಮರುಕವನ್ನು ಸೂಚಿಸುತ್ತಿತ್ತು. ಇನ್ನೊಂದರಲ್ಲಿ ರಾತ್ರಿಯ ರಾಣಿ ತೂಗಿ ಸ್ವಾಗತಿಸುತ್ತಿದ್ದಳು. ಮತ್ತೊಂದರಲ್ಲಿ ಮದವೇರಿ ಬೆಳೆದ ಗುಲಾಬಿ "ಮುಟ್ಟೀಯಾ, ಕಚ್ಚೇನು!" ಎಂಬ ನಲಿವಿನಲ್ಲಿತ್ತು. ಇನ್ನೊಂದು ಪಾತಿಯಲ್ಲಿ ಕರಿಬೇವು ಮಡಿಯಿಂದ ಓರಣವಾಗಿ ನಿಂತಿತ್ತು. ಅಂಗಳ ನಿಚ್ಚಸಾರಣೆಯಿಂದ ಪಡಸಾಲೆಯಂತೆ ನಿಚ್ಚಳವಾಗಿತ್ತು. ಕಣದ ಒಂದು ಮೂಲೆಯಲ್ಲಿ ಬಂಡಿಯ ನಿಲ್ದಾಣ. ಮನೆಯ ಹಿಂಬದಿಯ ಮೂಲೆಯಲ್ಲಿ ದನಗಳ ಕೊಠಡಿ. ಮನೆಯ ಬಲಬದಿಗೆ ಸೇದುವ ಬಾವಿ. ಕಣದ ಸುತ್ತು ಹೊರಬದಿಗೆ ಜಾಲಿಯ ಮುಳ್ಳು ನೆಟ್ಟು, ಒಳಮೈಯಲ್ಲಿ ದಟ್ಟವಾಗಿ ಮದರಂಗಿ ಕಣಗಿಲೆಗಳನ್ನೂ ನಾಲ್ಕು ಮೂಲೆಗೆ ನಾಲ್ಕು ಲಿಂಬೆಯ ಗಿಡಗಳನ್ನೂ ಹಚ್ಚಿ ಅದನ್ನು ಭದ್ರವಾಗಿರಿಸಿದ್ದರು.

ಮನೆಯ ಎದುರಿಗೆ ಪೂರ್ವದಿಕ್ಕಿನ ಬೇಲಿಯಲ್ಲಿ ಒಂದು ಜನಬಳಕೆಯ ಬಾಗಿಲುದಾರಿ, ಇನ್ನೊಂದು ವಿಶಾಲವಾದ ಬಂಡಿಯ ಜಾಡಿನ 'ರಾಡು' ದಾರಿ. ಸುತ್ತು ಓರಣವಾಗಿ ಕಂಗೊಳಿಸುವ ಈ ಎಲ್ಲ ಅಚ್ಚುಕಟ್ಟುತನವನ್ನು ಪೂರ್ಣವಾಗಿ ನೋಡಿ ಮುಗಿಸುವ ವರೆಗೆ ಒಮ್ಮೆ ನೆಟ್ಟ ನೋಟ ಕದಲುತ್ತಿರಲಿಲ್ಲ. ಮನೆಯ ಮುಂದಿನ ಎರಡೂ ಬದಿಗೆ ಕಟ್ಟೆಯ ಹಾಸುಗಲ್ಲುಗಳು ಯಾವ ಮೇಲು ಹಾಸಿಗೆಯನ್ನು ಬಯಸಡಷ್ಟು ಶುಚಿಯಾಗಿದ್ದವು.

ದಾರಿಯ ದಣಿವು ತೀರಿದ ನಂತರ ಎಲ್ಲರೂ ಊಟಕ್ಕೆ ಹೋದರು. ಸಾವಳಿಗಯ್ಯನವರು ಆತಿಥೇಯದಲ್ಲಿ ಮಾದಕ್ಕನಿಗೆ ನೆರವಾಗಿ ನಿಂತರು. ಪ್ರಸಾದ, "ನಾಲ್ಕು ಜನ ಜಂಗಮರ ಮೂರು ಜನ ಭಕ್ತರ ಅನ್ನಸಂತರ್ಪಣೆಯ ಪ್ರತಿಫಲವಾಗಿ ದಂಪತಿಗಳಿಗೆ ಸುಪುತ್ರಿಯ ಜನನ ಲಾಭಪ್ರದವಾಗಲಿ" ಎಂದು ಗಂಭೀರವಾಗಿ ನುಡಿದು ಮಾದಕ್ಕನೆಡೆ ಮುಗುಳ್ನಗೆಯನ್ನು ಬೀರಿ ಮುದ್ದಣ್ಣನನ್ನು ನೋಡಿ ತುತ್ತು ಬಾಯಿಗೆ ಹಾಕಿದನು.

"ಸುಮ್ಮನೆ ಊಟಮಾಡು, ತಮ್ಮ. ಆಗಲೇ ಆರಂಭಿಸಿದೆಯಲ್ಲ." ಮಧುವಯ್ಯನವರಿಗೆ ನಂಜುಂಡಯ್ಯನವರು, "ನಿಮ್ಮ ಮೊಮ್ಮಗ ಜಾಣನಲ್ಲವೇನು? ಹರಕೆಯಲ್ಲಿಯೂ ಬಯಕೆಯಿದೆ ನೋಡಿರಿ. ಸೊಸೆಯನ್ನು ಅಪೇಕ್ಷಿಸುತ್ತಾನೆ" ಎಂದು ಮಾತಿಗೆ ಕಳೆ ತಂದರು. ಅದಕ್ಕೆ ಸಾವಳಿಗಯ್ಯನವರು "ಹರಕೆಯಿಲ್ಲ, ಬಯಕೆಯಿಲ್ಲ. ವರ್ಷಕ್ಕೊಮ್ಮೆ ಊರಿಗೆ ಬಂದು ಇದ್ದ ನಾಲ್ಕು ದಿನಗಳಲ್ಲಿಯೂ ಕಾಡಿ ಕಾಡಿ ಹೋಗುತ್ತಾನೆ. ಅವನೆದುರಿಗೆ ನಿಲ್ಲುವದು ಕಷ್ಟ. ಅಣ್ಣನಿಗೆ ಇನ್ನೂ ಬಿಸಿ ಹತ್ತಿಲ್ಲ. ಎಲ್ಲಿಯಾದರೂ ಕಿವಿ ಹಿಂಡಿ ನೀರು ಕುಡಿಸುವ ಒಬ್ಬ ಪುಣ್ಯಾತ್ಮಳನ್ನು ಹುಡುಕಿಕೊಟ್ಟರೆ ಗಂಟುಹಾಕಿ ನಾವೂ ಹಂಗಿಸಿ ತೀರಿಸುತ್ತೇವೆ, ನೋಡಿರಿ" ಎಂದು ಅಳಿಯನನ್ನು ನೋಡಿ ನಕ್ಕರು. ಸಂವಾದದಲ್ಲಿ ತಾಟು ಬರಿದಾಗಿದ್ದವು. ಅಜ್ಜಂದಿರು ಸಪ್ಪಳದಿಂದ ಸೂಚಿಸಿದರು. ಮಾವಂದಿರೂ ಮಾದಕ್ಕನೂ ನಾಚಿಕೊಂಡು ಉಣಬಡಿಸಿದರು. ಪ್ರಸಾದನಿಗೆ ಗೆಲುವಿನ ನಗೆಮೊಗ ತುತ್ತು ನುಂಗುವದನ್ನು ತೊಂದರೆಗಿಡಿಸಿತು. ಊಟಮಾಡಿ ಎಲ್ಲರೂ ಬಂದು ಆ ಮಾತು ಈ ಮಾತು ಆಡಿ ನಿದ್ರೆಗೆ ಸಿದ್ಧರಾದರು. ಬೆಳ್ದಿಂಗಳು ಮನೆಯನ್ನೂ ಮನೆಯ ಸುತ್ತುಮುತ್ತನ್ನೂ ಒಂದು ಕಿನ್ನರಸ್ವಪ್ನದಿಂದ ಮುಸುಕಿತು.

ಮರುದಿನ ಸಾಯಂಕಾಲ ಸಾವುಕಾರರ ಕಣದ ಮನೆಯ ಕಟ್ಟೆಯ ಮೇಲೆ ಪ್ರಸಾದನೂ ನಂಜುಂಡಯ್ಯನವರೂ ಸಾವುಕಾರರೊಡನೆ ಕುಳಿತಿದ್ದರು. ಇತ್ತ ಊರಲ್ಲಿ ಒಂದು ಮನೆತನದ ತಂದೆ ಮಕ್ಕಳ ಜಗಳ ದೀರ್ಘಕ್ಕೆ ಬೆಳೆದು ಚಿಕ್ಕ ಸಾವುಕಾರರ ಕೈಮೀರಿಹೋಗಿತ್ತು. ಚಿಕ್ಕ ಸಾವುಕಾರರು ಅಣ್ಣನ ಬಳಿ ಬಂದು ಸಂಗತಿಯನ್ನು ತಿಳಿಸಿ ಒಂದು ಬದಿಗೆ ಕುಳಿತರು. ಹಣ್ಣು ಹಣ್ಣು ಮುದುಕ ಸಾವುಕಾರರಿಗೆ ನಮಸ್ಕರಿಸಿ ದೂರ ನಿಂತನು. ಸಾವುಕಾರರು "ಇವೇ ಜಗಳುಗಳು ನೋಡಿರಿ ಸ್ವಾಮಿಗಳೇ. ಈ ತಂಟೆ ತಗಾದಿಯಲ್ಲಿಯೇ ಈ ಹಳ್ಳಿ ಹಾಳಾಗಿದ್ದುದು. ಏನು ಮಾಡುವುದು ಹೇಳಿರಿ. ಮುದುಕ, ಸೊಸೆ, ಮಗ. ಈ ಮೂವರು ಕೂಡಿ ನಡೆಯುವದು ಸಾಧ್ಯವಿಲ್ಲ. ನಮ ಗಾಂಧಿ, ಅಜ್ಜ, ಹಿಂದುಸ್ತಾನವೆಲ್ಲಾ ಒಂದಾಗಬೇಕು ಅನ್ನುತ್ತಾನೆ. ಕಾಶಿಯ ವರೆಗೆ ಹೋಗಿ ಬಂದಿದ್ದೀರಿ. ಈ ಒಗಟು ಬಿಡಿಸಿರಿ" ಎಂದರು

ಇನ್ನೂ ಮಾತು ಮುಗಿಯುತ್ತಿರಲಿಲ್ಲ. "ಪುಣ್ಯಾತ್ಮರು ಮಹಾರಾಯರು.

ಕಾಶಿ ಮುಟ್ಟಿದ ಪಾದ ಕೊಡಿ ಬುದ್ಧಿ" ಎಂದು ಮುದುಕ ತಡವರಿಸುತ್ತ ಬಂದು ಅಡಿಗೆರಗಿದ. "ಒಳ್ಳೆಯದಾಗಲಿ ಏಳು ಅಜ್ಜ. ಒಳ್ಳೆಯದಾಗಲಿ ಎಂದು ನಾವೂ ದೇವರನ್ನೇ ಬೇಡಿಕೊಳ್ಳುವವರೇ ನಾವೇನೂ ದೇವರ ಮೊಮ್ಮಕ್ಕಳಲ್ಲ. ನೀವೇನೂ ಆಲದ ಮರದ ರಸಬೇರಲ್ಲ. ನಮ್ಮ ಹೆಣ್ಣುಮಕ್ಕಳು ಕಾಶಿಗಿಂತಲೂ ಮಿಗಿಲು ತವರೂರು ಎಂದು ಹಾಡಿ ಹಾಡಿ ಬೀಸುತ್ತಾರೆ. ನೀನರಿಯದ್ದೆ? ನಿನ್ನ ಮನಸ್ಸು ತಿಳಿಮಾಡಿಕೊಂಡು ನಿನ್ನ ಮನದಲ್ಲಿ ಮುಕ್ತಿ ಪಡೆಯಬಾರದೇಕೆ? ಆತನು ನಿನ್ನ ಮಗನಲ್ಲವೆ? ನಿನಗೆ ಆತನು ಎರಡು ಬಗೆಯುವದುಂಟೆ? ಬಗೆದರೂ ಎಷ್ಟುದಿನ? ತಲೆಯೊಳಗಿನ ತಿಮಿರು ಇಳಿಯುವವರೆಗೆ ಅಲ್ಲವೆ? ನಿನ್ನ ಅವರೊಳಗೆ ಬಡಿದಾಟ ಬಂದದ್ದು ನೀನು ಹೂಳಿಟ್ಟ ಹಣವನ್ನು ಅವರು ಬಳಸಿದ್ದಕ್ಕಲ್ಲವೆ? ನೀನು ಇನ್ನೂ ಎಲ್ಲಿಯಾದರೂ ಇಟ್ಟಿದ್ದರೆ ಅವನ ಮುಖಕ್ಕೆ ಎಸೆದು ಬಾ. ಅವನೇನು ಮುದುಕನಾಗಿ ಮಕ್ಕಳನ್ನು ಕಾಣುವದಿಲ್ಲವೆ? ಅವನ ಮಕ್ಕಳು ಅವನಿಗೆ ಉತ್ತರ ಹೇಳುವರು. ಬಾ. ನನ್ನ ಊರಿಗೆ ಹೋಗೋಣ. ಸಾಯುವ ವರೆಗೆ ಕಾಪಾಡುತ್ತೇನೆ. ಇಗೋ, ಹಿಡಿ ಕೈ ಮೇಲೆ ಕೈ" ಎಂದು ನಂಜುಂಡಯ್ಯನವರು ಇಳಿದು ಹೋಗಿಯೇ ಬಿಟ್ಟರು. "ನಿಮ್ಮ ಮಾತು ನನಗೆ ಸಾಕು ಸ್ವಾಮಿ. ನಿಮ್ಮ ಈ ಧೈರ್ಯವೊಂದು ನನಗೆ ನಿಮ್ಮ ಪ್ರಮಾಣಕ್ಕೂ ಮಿಗಿಲು. ಚಿಕ್ಕ ಸಾವುಕಾರರೇ, ನನ್ನ ಮಂಚದ ಕೆಳಗೆ ಇನ್ನೂ ಇದೆ. ತೆಗೆದುಕೊಂಡು ಅವನಿಗೆ ಉಣ್ಣಲಿಕ್ಕೆ ಹೇಳಿರಿ. ಇಗೋ ಮನೆಯ ಬೀಗದ ಕೈ. ಅವನ ಮನೆ ಅವನಿಗಿರಲಿ. ನನಗೆ ಜಗತ್ತು ಇದೆ. ಒಂದು ದಿನ ಬಿದ್ದು ಹೋಗುವ ಮೂಳನಿಗೆ ದೇವರು ಈ ಆಶೆ ಏಕೆ ಹಚ್ಚಿದ್ದನೋ ಏನೋ!" ಎಂದು ಬೀಗದ ಕೈ ಬಿಸಾಟಿ, ನಂಜುಂಡಯ್ಯನವರ ಪಾದಗಳನ್ನು ತೋಯಿಸಿ ಕಣದ ಮನೆಯಿಂದ ಹೊರಬಿದ್ದನು. ಅವನ ನಡಿಗೆಯಲ್ಲಿ ಎಲ್ಲವನ್ನೂ ಬಿಸುಟಿದ ತ್ಯಾಗವಿತ್ತು. ಸಂಧ್ಯಾಕಾಲದ ಕೆಂಪು ಅವನ ಬಾಗಿದ ದೇಹಕ್ಕೆ ಅಲೌಕಿಕ ಕಳೆಯನ್ನು ತಂದಿರಿಸಿತ್ತು.

ಅಲ್ಲಿಯವರೆಗೆ ತಡೆ ಹಿಡಿದ ದುಃಖವನ್ನು ಹೊರಗೆಡಹಿ, ಓಡಿ ತಂದೆಯನ್ನು ತಡೆಯಲೆಂದು ಮಗನು ನುಗ್ಗಿದನು. ಭರದಲ್ಲಿ ಕಣ್ಣುಂಬಿದ್ದಕ್ಕೆ ಎಡವಿ ಮುದುಕನ ಮುಂದೆ ದೊಪ್ಪನೆ ಬಿದ್ದನು. ಮಿಸುಕಲಿಲ್ಲ. ಎಲ್ಲರೂ

'ಅಯ್ಯೋ' ಎಂದು ಓಡಿಬಂದು ನೋಡಿದರು. ನಿಶ್ಚೇಷ್ಟಿತ. ನಂಜುಂಡಯ್ಯನವರು ಎದೆ ಮುಟ್ಟಿನೋಡಿ ಹಿಂದೆ ಸರಿದರು. ನೀರು ತರಲು ಪ್ರಸಾದ ಓಡಿದ್ದನು. ಸೊಸೆಯು ಬಂದು, ಕೆರಳಿದ ಕಾಳಿಯಂತೆ "ಆಯಿತೇ? ಬಯಸಿದಂತೆ ಆಯಿತು. ಎಲ್ಲರೂ ಸನ್ಯಾಸಿಗಳು. ಹೆಂಗಸರಿಗೆ ಮಾತ್ರ ಈ ಬಂಡ ಬಾಳುವೆ. ಬೀಗದ ಕೈ ಕೈಬಿಡುವದಾದರೆ ಈ ವೈರಾಗ್ಯ. ನೋಡಿರಿ ಸ್ವಾಮಿಗಳೇ. ನನ್ನನ್ನು ಮಗಳಿಗಿಂತಲೂ ಹೆಚ್ಚು ಕಾಣುತ್ತಿದ್ದ ನಮ್ಮ ಮಾವ ನೆರೆಯುವರ ಮಾತು ಕೇಳಿ ನನ್ನನ್ನು ಕಂಡರೆ ಸೇರದಂತಾದನು. ಈ ಮುದುಕನಿಂದ ನೆರೆಯವರಿಗೆ ಸಾಲವು ಬೇಕಿತ್ತು. ಈ ಆಟ ಹೂಡಿದರು. ನಾನೇ ಆ ದುಡ್ಡು ತೆಗೆಯಿಸಿ ಬೇರೊಂದೆಡೆ ಇರಿಸಿದವಳು. ನಮಗೇನು ಅದನ್ನು ಕದ್ದು ನುಂಗಿ ನಮ್ಮ ಮಾವನನ್ನು ಹೊರಗೆ ಹಾಕಿ ಲೋಲಾಡುವ ಆಶೆಯಿದ್ದಿಲ್ಲ. ಸಣ್ಣ ಸಾವುಕಾರರ ಕೂಡ ಅವನಿಗೆ ಹೇಳಿಸಿದೆನು. ತನ್ನ ಹೆಸರಿನಿಂದಾದರೂ ಹೊಲ ಹಿಡಿಯಲು ಒಪ್ಪಲಿಲ್ಲ. ನಾವಿಬ್ಬರೂ ದುಡಿಯಲಿಕ್ಕೆ ಒಂದು ದಾರಿ ಬೇಕಿತ್ತು. ಮನೆಯಲ್ಲಿ ಒಬ್ಬರ ಮುಖ ಒಬ್ಬರು ನೋಡಿಕೊಂಡು ನನ್ನ ಗಂಡನ ತಲೆಯಲ್ಲಿ ನರೇ ಆರಿಸುವದೇನ್ರಿ? ಕುಳಿತು ಉಂಡರೆ ಇವನ ಕುಡಿಕೆ ಹೊನ್ನು ಸಾಲಬಹುದೋ? ಹೇಳಿರಿ ನನ್ನ ತಪ್ಪು ಇದ್ದರೆ. ಕೆರೆ ಕೆಂಚವ್ವ ನನ್ನನ್ನು ಕರಕೊಳ್ಳುತ್ತಾಳೆ. ನಾವೇನು ಹೆಂಗಸರು ತಲೆಮೂಸಿದವರು ತಲೆವಾರಿಸಿಂದ" ಎಂದು ಅರ್ಭಟಿಸಿದಳು. ಅಷ್ಟರಲ್ಲಿ ಮಗನು ಉಪಚಾರದಿಂದ ಎದ್ದು ಕುಳಿತಿದ್ದನು. "ನನ್ನ ತಾಯೀ, ಬಿಚ್ಚಿ ಈ ಮೊದಲೇ ಮಾತಾಡಿದ್ದರೆ ಈ ಗತಿಯಾಗುತ್ತಿತ್ತೇ? ನಡೆ ತಾಯೀ ಮನೆಯಲ್ಲಿಯೇ ಸಣ್ಣ ಕೂಸಿನಂತೆ ಇರುತ್ತೇನೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ನೀವು ಮಾಡಿಕೊಂಡು ಯಾವ ದಾರಿಯಲ್ಲಾದರೂ ಆಗಲಿ, ಒಟ್ಟು ನೀವು ಸುಖವಾಗಿದ್ದರೆ ಆಯಿತಲ್ಲ. ನಾನೂ ಅದನ್ನೇ ಕಂಡು ಕಣ್ಣುಮುಚ್ಚಬೇಕೆನ್ನುತ್ತೇನೆ," ಎಂದು ಮುದುಕ ಮಗನನ್ನೂ ಸೊಸೆಯನ್ನೂ ತಬ್ಬಿಕೊಂಡು ಬಂದು ನಂಜುಂಡಯ್ಯನವರ ಪಾದಗಳಿಗೆ ಹಣೆಯಿಟ್ಟು ಹೋದನು.

"ಏನು ನಾಟಕ ಮಾಡಿಬಿಟ್ಟರಲ್ಲ ಸ್ವಾಮಿಯವರು!" ಎಂದು ಸಾವುಕಾರರು ಉದ್ಗಾರ ತೆಗೆದರು. "ಭಾವನಾಪ್ರಧಾನರು ನಮ್ಮ ಜನ. ನಾಟಕ ಬೇಕೇಬೇಕು ಹೆಜ್ಜೆ ಹೆಜ್ಜೆಗೆ. ಬಣ್ಣ ಬಳೆದುಕೊಂಡು ರಂಗಭೂಮಿಯ

ಮೇಲೆ ಬರುವ ಜನಗಳೇ ಹೆಚ್ಚು. ಅಂತೆಯೇ ಗಾಂಧಿಯುವರು ನಾಟಕ ಹೂಡಿಲ್ಲವೆ? ಕಿನ್ನರಲೋಕ, ರಾಕ್ಷಸಲೋಕ, ನಮ್ಮ ಜನಗಳಿಗೆ ಇವೇ ಎರಡು ಸ್ವಾಧೀನ. ಮರ್ತ್ಯಲೋಕದ ಹಗಲು ಬೆಳಕಿನಲ್ಲಿಯೂ ಹಗಲು ದೀವಟಿಗೆ ಹಿಡಿಯುವ ಚಟ ಬಳೆದು ಬಂದಿದೆ. ವಿವೇಕ ವಿಚಾರಗಳು ಶುದ್ಧ ಸ್ವರೂಪದಲ್ಲಿ ತಾತ್ಕಾಲಿಕ ನಾಟುವುದಿಲ್ಲ. ಭಾವನಾವೇಶದ ಹೊದಿಕೆ ಅಗತ್ಯ. ನಮ್ಮ ಜನರು ಅರಿತುಕೊಳ್ಳುವುದನ್ನು ಸಾಧಿಸಿದರೆ ಇಂಥ ಬಿಕ್ಕಟ್ಟು ಐದು ನಿಮಿಷಗಳಲ್ಲಿ ಮಾಯವಾಗುವುದು.

ಆ ಮೂವರಲ್ಲಿ ನನಗೆ ಆ ಸೊಸೆಯ ಲೌಕಿಕ ವ್ಯಾವಹಾರಿಕ ರೀತಿ ನೀತಿಗಳು ಬೆರಗುಗೊಳಿಸಿದವು. ನಮ್ಮ ಸ್ತ್ರೀಯರ ಈ ವಿವೇಕವಿಲ್ಲದಿದ್ದರೆ ನಾವೂ ಯಾವುದೊಂದು ತಪ್ಪಲಿನಲ್ಲಿ ತಪ್ಪಲೆದು ಕಿನ್ನರರು (ಮನುಷ್ಯರೋ?) ಆಗಿರುತ್ತಿದ್ದೆವು. ಚಿತ್ತ ಬಂದತ್ತ ಸುತ್ತಿ ಸುಳಿದು, "ಎಲೆ ಗಿಳಿಗಳಿರಾ, ಎಲೆ ಮರಗಳಿರಾ" ಎಂದು ಆಲಾಪನೆಯಲ್ಲಿಯೇ ಉಸಿರು ಬಳಸಿ ಹಳಸಿ ಹೋಗುತ್ತಿದ್ದೆವು. ಇಂದು ಆ ತಾಯಿಯನ್ನು ನೋಡಿ ನನಗೆ ನಮ್ಮ ನಾಡಿನ ಭವಿತವ್ಯದಲ್ಲಿ ಆಶೆ ಅಂಕುರಿಸಿದೆ. ಸುಶಿಕ್ಷಿತ ನಮ್ಮ ತರುಣಿಯರು ಕಿನ್ನರ ಲೋಕವನ್ನು ಆಶ್ರಯಿಸುವುದನ್ನು ಬಿಡುವುದು ಸಾಧ್ಯವಿದೆ. ನಮ್ಮ ಶ್ರೀಮಂತ ಮನೆತನದ ಅರ್ಧಮರ್ಧ ಸುಶಿಕ್ಷಿತ ಗೃಹಿಣಿಯರು ಕರ್ತವ್ಯವನ್ನು ಮರೆತು, ಶಿವಶರಣೆ 'ಅಕ್ಕಮಹಾದೇವಿ'ಯ 'ಕೀರ್ತನ' ವೈರಾಗ್ಯವನ್ನು ತಳೆಯುವುದನ್ನು ತೊರೆಯುವುದು ಸಾಧ್ಯವಿದೆ. ಶ್ರೀಮಂತರೂ ಸುಶಿಕ್ಷಿತರೂ ಕೂಡಿ ನಾಡಿನ ವ್ಯಾವಹಾರಿಕ ಪ್ರಗತಿಗೆ ಲಕ್ಷ್ಯವಿತ್ತರೆ ನಾವು ಮರ್ತ್ಯಲೋಕದ ಅಮರ ಅಂತಸ್ತಿನಲ್ಲಿ ನಲಿಯಬಹುದು.'' ನಂಜುಂಡಯ್ಯನವರು ಬದಿಗೆ ನಿಂತಿದ್ದ ಆಕಳ ಕರುವಿನ ಮೈ ನೀವುವದರಲ್ಲಿ ಆವೇಶವನ್ನು ಇಳಿಸಿದರು.

ಅಲ್ಲಿಂದ ಮನೆಗೆ ಮರಳಿದಾಗ ನಂಜುಂಡಯ್ಯನವರೂ ಪ್ರಸಾದನೂ ಚಂದ್ರಕಾಂತನ ನೂತನ ರಹಸ್ಯ ವ್ಯಾಸಂಗದ ಪರಿಚಯವನ್ನು ಪಡೆದರು. ಚಂದ್ರಕಾಂತನು ಮಧುವಯ್ಯನವರ ಪಿಟೀಲು ನುಡಿಸುತ್ತಿದ್ದನು. ಪ್ರಸಾದನ ಅಚ್ಚರಿಗೆ ಉತ್ತರವಾಗಿ "ನೀನು ಬೆಂಗಳೂರಿಗೆ ಹೋದಾಗ ನಾನು ಬೆಳಗಾಂವಿಗೆ ಹೋಗಿ ಇದನ್ನು ವ್ಯಾಸಂಗಮಾಡಿದೆನು. ಗುರುಮುಖದಲ್ಲಿ ಮೊದಲು ನನ್ನದನ್ನು ಅರ್ಪಿಸಿ ಅವರ ಭರವಸೆಯನ್ನು ಪಡೆಯುವೆನು" ಎಂದು

ಚಂದ್ರಕಾಂತ ಹೇಳಿದನು. ಸಂಗೀತ ಸಾಗಿತು. ತಬಲದಣ್ಣಂದಿರ ಕೊನೆಯ 'ಸಮ್ಮು' ಎಲ್ಲರನ್ನು ಎಚ್ಚರಿಸಿತು. ಮಾದಕ್ಕ ಬೆದರಿ ಹಾಲಿನ ವ್ಯವಸ್ಥೆಗೆ ಓಡಿದಳು. ಹಾಲು ಉಕ್ಕುವುದರಲ್ಲಿತ್ತು.

ಕೊನೆಯ ತೀಡುವಿಕೆಯಲ್ಲಿ ಮಾಧುರ್ಯ ಬರುವದಾದರೆ ಈ ಸೆಳೆತದಿಂದ ಎಂದು ಮಧುವಯ್ಯನವರು ಪಿಟೀಲು ಎತ್ತಿ ಒಂದೇ ಒಂದು ಹೊಯಿತದಲ್ಲಿ ತೆರತೆರನಾದ ತರಂಗಗಳನ್ನು ತೇಲಿಸಿ ಕೆಳಗಿರಿಸಿದರು. ಅವರ ದೇಹ ಕಂಪಿಸುತ್ತಿತ್ತು. ಪ್ರಸಾದ ಅಜ್ಜನನ್ನು ನೋಡುತ್ತಿದ್ದನು. ಆ ನೋಟ ಅವರ ಕಲಾಪ್ರೌಢಿಮೆಗೆ ಮೆಚ್ಚಿದ್ದಲ್ಲ. ಪರಿಣಾಮವನ್ನು ನೆನೆದು ಬೆಚ್ಚಿದ್ದು. ಅಜ್ಜನ ಮುಗುಳ್ನಗೆ ಸೂಸುವ ವರೆಗೆ ಆ ನೋಟ ಕದಲಲಿಲ್ಲ. ನಂತರ ಹಾಯವಾಗಿ ಉಸಿರೆಳೆದು ಪ್ರಸಾದನು ಒಳಗೆ ಹೋದನು.

"ನನ್ನ ಬಾಳಿನಲ್ಲಿ ಇಂದು ಏನೂ ಅಸಾಮಾನ್ಯವಾಗಿ ಸಂಭವಿಸುವಂತಿಲ್ಲ. ಅವನ ಆ ಕರುಣಾಪೂರಿತ ಅಂಜಿಕೆಯನ್ನು ನೀವು ಕಾಣಲಿಲ್ಲವೆ? ಈ ೩-೪ ವರ್ಷ ನನ್ನ ಬಾಳು ಅವನ ಪ್ರಗತಿಯಿಂದ ಉಳಿದುಬಂದಿದೆ. ಪರಮಾತ್ಮನು ಇಲ್ಲಿಯುವರೆಗೆ ತಾಳಿದಂತೆ ಇನ್ನು ಕೆಲವು ದಿನ ತಾಳಲೆಂದು ನಾನು ಪ್ರಾರ್ಥಿಸಿದರೆ ನನಗೆ ಆಶೆಯು ಅಂಜಿಕೆಯಿಲ್ಲ. ಕರ್ತವ್ಯದ ಆನಂದವಿದೆ. ಮುದ್ದನಿಗೂ ಅಷ್ಟೆ" ಎಂದು ಮಧುವಯ್ಯನವರು ನಂಜುಂಡಯ್ಯನವರೊಂದಿಗೆ ಅಂಗಳದ ಬೆಳದಿಂಗಳಿಗೆ ಬಂದರು.

ಐದು ದಿನಗಳು ಇಂಥ ಒಂದಿಲ್ಲೊಂದು ಘಟನೆಗಳಿಂದ ಸಾಗಿದವು.

ಆರೇಮಲ್ಲಾಪುರದವರು ಶನಿವಾರ ಹುಣ್ಣಿವೆಯಾದರೂ ತಮ್ಮ ಹಾಗೂ ದನಕರುಗಳ ಅನುಕೂಲತೆಗಾಗಿ ಸೀಗೆ ಹುಣ್ಣಿಮೆಯನ್ನು ೨೮ ರ ಬದಲು ಸೋಮವಾರ ೩೦ ನೆಯ ಅಕ್ಟೋಬರಕ್ಕೆ ಮುಂದರಿಸಿದರು. ತಮ್ಮ ಕಾರ್ಯಕ್ರಮದಂತೆ ಮಿತ್ರಮಂಡಳಿಯು ನಂಜುಂಡಯ್ಯನವರ ಚೌಡದಾನಪುರದ ಹೊಳೆಯೂಟಕ್ಕೆ ಶನಿವಾರ ನಸುಕಿನಲ್ಲಿ ೪ ಘಂಟೆಗೆ ಬಂಡಿಯಲ್ಲಿ ಹೊರಟಿತು. ಬೆಳಗಿನ ತಾತ್ಪೂರ್ತಿಕ ಹಸಿವೆ ಹಿಂಗಿಸಲು ಮಾದಕ್ಕ ಅಲ್ಪ ಉಪಹಾರವನ್ನು ಮುದ್ದಣ್ಣನ ವಶಕ್ಕೆ ಒಪ್ಪಿಸಿದಳು. "ಮುದ್ದಣ್ಣ, ಇಷ್ಟಕ್ಕೆ ಮುಗಿಯಿತೋ ಅಥವಾ ಸೀಗೆ ಹುಣ್ಣಿಮೆಗೆ ಸ್ವಲ್ಪ ಉಳಿದಿದೆಯೋ?" ಪ್ರಸಾದನ ಮಾತಿಗೆ ಒಳಗಿದ್ದ ಮಾದಕ್ಕ ಸಾವಳಗಯ್ಯನವರಿಗೆ "ಮದುವೆಗೆ ಉಳಿದಿದೆ, ಹುಣ್ಣಿವೆಗೆ

ಇಲ್ಲವೆಂದು ಹೇಳಿರಿ'' ಎಂದು ಪ್ರೋತ್ಸಾಹಿಸಿದಳು. "ಹೇಳಿರಿ ಮಾವಾ, ಹೇಳಿರಿ. ಆಕಾಶವಾಣಿ ನುಡಿದು ನೆನಪು ಕೊಡಲಿಲ್ಲವೆ?" ಎಲ್ಲರೂ ಹುಚ್ಚು ನಗೆ ನಕ್ಕರು. ಸಾವಳಿಗಯ್ಯನವರು "ಸುಮ್ಮನೆ ನಡೆ. ಕುಳಿತು ಮಲಗಿ ಏಳು. ಕಾಣುವೆ'' ಎಂದರು.

೮ ಘಂಟೆಯ ಮುಂಚೆ ಹೊಳೆಯ ದಂಡೆಯ ಮೇಲೆ ಮಾವಿನ ತೋಪಿನೊಳಗೆ ಮುದ್ದಣ್ಣ ಬಂಡಿಯ ಕೊರಳು ಹರಿಯುತ್ತಿದ್ದನು. ಚಳಿಗಾಲದ ಹೊಳೆ ತಾಯಿ ಒಡಲಿನಲ್ಲಿ ಹರಿಯುತ್ತಿತ್ತು. ಬಂದವರು ಹೊಳೆಯಲ್ಲಿದ್ದರು. "ಪ್ರಸಸಾದೋದಯಾದಂಬಃ ಕುಂಭಯೋನೇರ್ಮಹೋಜಸಃ" ಎಂಬ ರಘುವಂಶದೊಳಗಿನ ಆಗಸ್ತ್ಯೋದಯದ ಕಾಳಿದಾಸನ ಮಾತನ್ನು ಪ್ರಸಾದನು ಉಳಿದವರ ನೆನಪಿಗೆ ತಂದು "ನೀರು ನಿಚ್ಚಳಾಗುವ ಈ ಅಗಸ್ತ್ಯ ಉದಯದ ಕಾಲವು ಭಾದ್ರಪದ ಬಹುಳ ಸಪ್ತಮಿಯೆಂದು ರೂಢಿ ಗಣಿಸಿದ್ದರೂ, ಆ ದಿನವು ಶ್ರಾವಣಮಾಸದಲ್ಲಿ ಬರುವದೆಂದು ಗುರುಗಳು ಹೇಳಿದ್ದರು. ಇಂಗ್ರೇಜಿಯಲ್ಲಿ ಆಗಸ್ಟ್ ೯ ನೆಯ ದಿನವಂತೆ ನಿಜವೆ?'' ಎಂದನು. ನಂಜುಂಡಯ್ಯನವರು ಅಹುದೆಂದು "ಇಂದು ನಾವು ಅಚ್ಚುಹಾಕಿದ ಅಂಕಿ ಸಂಖ್ಯೆಗಳ ದಾಸರು. ನಿಸರ್ಗದ ಸುಂದರ ಆಗುಹೋಗುಗಳ ಸ್ವಾನುಭವದ ಸಂತಸವನ್ನು ಕಾಣೆವು'' ಎಂದರು.

ಎಲ್ಲರೂ ಮೇಲೆ ಬಂದು ಗುಡಿಯ ಪೌಳಿಯನ್ನು ಪ್ರವೇಶಿಸಿದರು. ಹೂಬಿಸಿಲು ಹಾಳು ಶಿಲ್ಪಕ್ಕೂ ಸೊಬಗು ನೀಡಿತ್ತು. ಮುಕ್ತೇಶ್ವರನ ದೇವಾಲಯದ ಕೆತ್ತನೆ ಶಿಲೆಗೆಲಸ ರಸಿಕರನ್ನು ಮುಗ್ಧ ಮಾಡಿತು. ಒಂದೇ ಅಚ್ಚುಕಟ್ಟುತನ ಒಂದೇ ನುಣುಪು ಒಂದೇ ತೆರನಾದ ಮಿದು ಒಳಹೊರ ಸುಳಿಗಳು. ಎಲ್ಲಿ ನೋಡಿದಡಲ್ಲಿ ಮುಕ್ತೇಶ್ವರನ ಚಿಕ್ಕ ಚಿಕ್ಕ ಪ್ರತಿಮೆಗಳು. ಗಗನಕ್ಕೆ ಮುಖವೆತ್ತಿ ನಿಂತ ಗೋಪುರದ ಎಲ್ಲ ಬಹಿರಂಗ ವೈಭವವು ಮನಸ್ಸನ್ನು ತಣಿಸಿತು. ಪೂರ್ವಜರ ವಿಶ್ರಾಂತಿ ವಿರಾಮ ಸಮೃದ್ಧಿಗಳ ಫಲವಾದ ಆ ಶಿಲ್ಪಮಾಯಾ ಪ್ರಪಂಚವನ್ನು ಕಂಡು ಅವರಿಗೆ ಇಂದಿನ ಹೊಟ್ಟೆಯ ಹೋರಾಟವು ಇಂಥ ಶಿಲ್ಪಸೃಷ್ಟಿಗೆ ಬಿಡುವು ಕೊಡಬಹುದೇ ಎಂಬ ಮರುಕ ತುಂಬಿ ಅವರು ಗುಡಿಯ ಗರ್ಭಕ್ಕೆ ಅಡಿಯಿಟ್ಟರು. ಅಲ್ಲೇನಿದೆ? ಹಾಳು ಕತ್ತಲೆ. ಕಪ್ಪಟೆಯೊಂದು ಕುರುಡು ಎರಗಿನಿಂದ ಸುಯ್ಯನೆ ಮೂಲೆಯಿಂದ ಮೂಲೆಗೆ ಹಾರಿತು.

ಕಣ್ಣು ಮುಚ್ಚಿ ತೆರೆದರು. ನಿಚ್ಚಳ ನೋಟಕ್ಕೆ ದೇವನು ಕಾಣಲಿಲ್ಲ. ನೆತ್ತಿಯ ಮೇಲಿರುವ ಒಳಬಿತ್ತಿಯ ಚಿತ್ತಾರಗಳನ್ನು ನೋಡಿ ಹೊರಬಂದು ದೇವನನ್ನು ಅರಸಿದರು. ಗುಡಿಯ ಹಿಂಬದಿ ಗೋಡೆಗೆ ಒರಗಿ ನೊಂಡಗೈ ಮುಕ್ಕ ಮೂಗಿನ ಮುಕ್ತೇಶ್ವರ ಆಳೆತ್ತರವಾಗಿ ನಿಂತಿದ್ದನು. ನೋಟದಲ್ಲಿ ಹಾಸ್ಯದ ಮುರುಕ ಮೂಡಿತು. ನಿತ್ಯ ಪೂಜಾ ಪುರಸ್ಕಾರಗಳನ್ನು ಪಡೆಯುವ (ಮುಕ್ತೇಶ್ವರನ) ಪ್ರತಿನಿಧಿ ಸುಣ್ಣದಿಂದ ಸಿಂಗರಿಸಿದ ಮಣ್ಣಿನ ಚಿಕ್ಕ ಗುಡಿಯಲ್ಲಿದ್ದನು. ನೆತ್ತಿಯಲ್ಲಿ ರೂಢಿಯ ಭಕ್ತಿ ಅರ್ಪಿಸಿದ ಒಂದು ಹಾಳು ಹೂವಿನಿಂದ ಪ್ರತಿ ದೇವನು ನಿದ್ರಿಸುತ್ತಿದ್ದನು. ಈ ಪತಿತ ಅಗ್ಗತನದ ಭಕ್ತಿಗೆ ಬೇಸತ್ತು, ಹೊಳೆಗೆ ಮುಖಮಾಡಿ ಉನ್ನತವಾದ ಪೌಳಿಯಿಂದ ಸುತ್ತು ಕಣ್ಣಿಟ್ಟು ಪ್ರಕೃತಿಯ ಸೊಬಗಿನಲ್ಲಿ ತಲ್ಲೀನರಾದರು.

ಮುದ್ದಣ್ಣನು ಬಂದು ಎಚ್ಚರಿಸಿದಾಗ ಬಿಸಿಲು ಏರಿಕೆಯಲ್ಲಿತ್ತು: "ಆಶ್ವೀಜದಲ್ಲಿ ಹೊನ್ನು ಕರಗುವ ಬಿಸಿಲು ಮಣ್ಣು ಕರಗುವ ಮಳೆ ಬನ್ನಿರಪ್ಪ. ಬಿಸಿಲೇರಿದರೆ ಊಟ ಹೋಗುವದಿಲ್ಲ; ಮಳೆ ಬಂದರೆ ಊಟ ಸಾಗುವದಿಲ್ಲ." "ಸ್ವಾತಿಯ ಕಸುವು ಮುರಿದಿದೆ. ಅಂಜಿಕೆಯಿಲ್ಲ" ಎಂದು ನಂಜುಂಡಯ್ಯನವರು ಅಂದರು. ಎಲ್ಲರೂ ಹೊಳೆಗಿಳಿದು ನೀರಿನ ಪರಿಚಯ ಮಾಡಿಕೊಂಡು ಒಂದು ತಾಸು ಮೈ ಹಗುರು ಮಾಡಿಕೊಂಡು ಬಂದರು.

ಅಂಚೆಯ ಹಸುರಿನಲ್ಲಿ ವನಭೋಜನ ನಿದಾನವಾಗಿ ನಡೆಯಿತು. ಮುಗಿಸಿ ಮಾಮರದ ಸುಳಿಗಾಳಿಯ ತೋಪಿಗೆ ಹೋಗಿ ವಿರಾಮಿಸಿದರು. ಮೈ ಮರೆಯಲಿಲ್ಲ. ನಂಜುಂಡಯ್ಯನವರು ೩ ಘಂಟೆಗೆ ಹೊರಟು ದೇವರ–ಗುಡ್ಡದಲ್ಲಿ ಗಾಡಿಯನ್ನು ಹತ್ತಿ ಧಾರವಾಡಕ್ಕೆ ಅಂದೇ ಇಂದ್ರಾಣಿಯ ಹುಟ್ಟು ಹಬ್ಬಕ್ಕೆ ಹೋಗುವದಿರುವದಲ್ಲವೆ? ಎರಡು ಘಂಟೆಯ ಸಮಯ. ಚಂದ್ರಕಾಂತನ ಸೂಚನೆಯಂತೆ ಚೆನ್ನಮಲ್ಲಪ್ಪನವರು ಎದ್ದು 'ಛಾಪ' ಹಾಕಿದರು. ಇಂಗಿತವು ಹೊಳೆದು ಎಲ್ಲರೂ ತಟ್ಟನೆ ಎದ್ದು ಕುಳಿತರು. "ಇದೀಗ ಬಂದೆ" ನೆಂದು ಪ್ರಸಾದ ಅಂಚೆಯಲ್ಲಿ ಹಾಯ್ದು ಹೊಳೆಗೆ ಓಡಿದನು. ದಣಿವು ಆರಿಸಿಕೊಂಡು ಮುಖ ತೊಳೆದುಕೊಂಡನು. ಮುಖವನ್ನೊರಸಿಕೊಂಡು ಕಣ್ಣು ತೆರೆಯುತ್ತಿದ್ದನು. ಏನೋ ಬಾಣದಂತೆ ಎರಗಿ ಹೊಳೆಯ ಪ್ರವಾಹವನ್ನು ಸೀಳಿತು. ಧ್ಯಾನದ ಅರೆನಿಮಿಷದಲ್ಲಿ ಚುಂಚೊಂದು ಮಾತ್ರ ಕಂಡಿತ್ತು.

ನಿಮಿಷ ಕಳೆಯಲಿಲ್ಲ.. ತೆರೆಗಳನ್ನು ತಡೆದು ಮೇಲೆದ್ದಿತು ಹಕ್ಕಿ. ಜಾಲಗಾರನ ಹಕ್ಕಿ ಪಟಪಟನೆ ರೆಕ್ಕೆ ಬಡೆದು ನೀರ್ಗಳೆಯುತ್ತ ಮೀನದೊಡನೆ ಗಗನಕ್ಕೆ ನೆಗೆಯಿತು. ಅದನ್ನೇ ನೋಡುತ್ತ ಅರೆನಿಮಿಷ ಕಳೆದು ಪರ್ವತಶ್ರೇಣಿಯ ನೀಲಸ್ವಪ್ನದಿಂದ ಹೊಳೆಗೆ ಕಣ್ಣಿಟ್ಟು ಹೊರಳುವದರಲ್ಲಿದ್ದನು. ಪುನಃ ಅದೇ ಹಕ್ಕಿ ಎಲ್ಲಿಂದಲೋ ತೇಲಿಬಂದು ಕೆಲಹೊತ್ತು ತೂಕದಿಂದ ಒಂದೆಡೆ ನಿಂತು ಮೇಲಿನಿಂದ ಪ್ರವಾಹದ ಅಂತರಾಳವನ್ನೇ ನಿರೀಕ್ಷಿಸಿತು. ಆ ನಿರೀಕ್ಷಣೆಯಲ್ಲಿ, ತೂಕದಿಂದ ನಿಂತ ಆ ಬಂಗಿಯಲ್ಲಿ, ಪರಿಶ್ರಮದ ಆಯಾಸವಿದ್ದಿಲ್ಲ. ಅಭ್ಯಾಸಬಲದ ವಿಲಾಸವಿತ್ತು. ಸರ್‍ರನೆ ಗರಿಗೂಡಿ ಬಾಣದ ಮೊನೆಯಂತೆ ಚುಂಚುಮಾಡಿ, ಹಕ್ಕಿ ನದಿಯ ಆಳದಲ್ಲಿ ‘ ಸುರಂಗ ’ ಹೊಡೆಯಿತು. “ ಅಹಾ ! ” ಎಂದು ಉಲ್ಹಾಸದಿಂದ ಬಂದು ಪ್ರಸಾದ ಗೆಳೆಯರನ್ನು ಕೂಡಿದನು.

“ ಎಲ್ಲಿಂದ ಹಿಡಿದು ಈ ಸಂತಸವನ್ನು ತಂದಿಯಪ್ಪ ? ” ಎಂದರು ನಂಜುಂಡಯ್ಯನವರು. “ ನದಿಯ ತೀರದಿ ನಿಂತು ನಿರುಕಿಸಿದೆ ಸಂತಸವು ತೆರೆಯ ಮೇಲಾಡಿ ತೇಲಿ ಎನ್ನ ಬಗೆಯೊಳು ಬಂದುದು.’’ ತನ್ನ ಹುದುಗಿದ ಕಾವ್ಯಶಕ್ತಿಗೆ ಒಳಗಾದ ಪರವಶತೆಗೆ ಅರೆನಿಮಿಷದಲ್ಲಿ ನಾಚಿ ನಸುನಕ್ಕು ಪ್ರಸಾದ ನಡೆದ ಸಂಗೀತದ ಪ್ರಥಮ ಲಹರಿಗೆ ತಲೆದೂಗಿ ಕಂಠವನ್ನೆತ್ತಿದನು. ರಸಿಕನಾಗಿ ಅರ್ಧ ತಾಸು ಹಾಡಿದನು. ಕೊನೆಯದಾಗಿ, ಚಂದ್ರಕಾಂತನು ತೀಡಿ ಸೂಚಿಸಿದಂತೆ, ಪುಟ್ಟಪ್ಪನವರ ಭಾವಗೀತೆಯನ್ನು ಎತ್ತಿದನು. “ ಸೊಗಸಾಗಿದೆ. ಇಂದು ನಿಮ್ಮ ನೆಮ್ಮದಿಯ ಮಿತಹಿತವನ್ನು ಅನುಭವಿಸಿದೆನು. ಹಾಡು ರಸಪೂರ್ಣವಾಗಿ ಹೊರಬರಲಿ.’’ ನಂಜುಂಡಯ್ಯನವರು ತಲೆದೂಗುತ್ತ ಕುಳಿತರು. ಮುದ್ದಣ್ಣ ತೂಗದೇನು ? “ ಹಿಗ್ಗುವಿಯೇತಕೆ ಚೆಲುವಿನ ಹೆಣ್ಣೆ ? ಕಡೆಗೀ ರೂಪಿಗೆ ಗತಿ ಮಣ್ಣೆ ! ” ಎಂದು ಪಲ್ಲವಿಯನ್ನು ಹಾಡಿದನು. ತಬಲದಣ್ಣಂದಿರು “ ವಾಹವ್ವಾ” ಎಂದು ರಂಗರಂಗಿತವಾದ ಬಾಜಿನಿಂದ ಕಳೆಯೇರಿಸಿದರು. ಹಾಡು ಭಾವಪೂರ್ಣವಾಗಿ ಎರಡುಬಾರಿ ಏರಿಳಿದಿತು. ಕೊನೆಯ ಆಲಾಪನೆ ಸವಿಯಾಗಿ ತೇಲುತ್ತಿತ್ತು.

‘‘ ವನ್ನಸ್ ಮೋರ್ ’’ ಎಂದು ಗ್ರಾಮ್ಯವಾಗಿ ತೋಪಿನಾಚೆ ಬದಿಯಿಂದ ಜೋಡು ದನಿಗಳು ತೂರಿಬಂದವು. ಅಲ್ಲಿ ಎಲೆಗಳ ಸಂದಿನೊಳಗಿಂದ

ಟೊಂಗೆಗಳ ಕವಲಿನೊಳಗಿಂದ ರವಿರಶ್ಮಿಗಳು ಸೂಸಿ ಬರುತ್ತಿದ್ದವು. ಮುಕ್ತಾಯದ ಅವಧಿಯಲ್ಲಿ ಅರಸುವ ಕಣ್ಣುಗಳಿಗೆ ಮಾಯವಾಗಿ ಪುನಃ ಚಪ್ಪಾಳೆಗಳು ನಗೆಯಾಡಿದವು.

"ಮಂಗಗಳು ನೋಡು ಈ ಹಳ್ಳಿಯ ಹುಡುಗರು. ಆದರೂ ಮಂಗೇಶನಂತೆ ಆಯತ ವೇಳೆಗೆ ನೆರವಾಗಿ ಪ್ರವಾಸದ ನೆನವು ತಂದರು." ಎಂದು ಏಳುತ್ತಲೇ ನಂಜುಂಡಯ್ಯನವರಿಗೆ ಗುಡಿಯ ಕಡೆಯಿಂದ ಮೋಟಾರಿನ ಸಪ್ಪಳ ಕೇಳಿಸಿತು. "ಹಾಂ! ಈ ಹಳ್ಳಿಗೆ ಎಲ್ಲಿಯ ಮೋಟಾರು!" ಎನ್ನುತ್ತ ತೋಪಿನ ಹೊರಗೆ ಬಂದರು. "ಗ್ರಾಮಸುಧಾರಣಾ ಸಮಿತಿಯ ಮೋಟಾರು! ಇದೇನು!" ಎಂದು ಇನ್ನಷ್ಟು ಹೊರಬಂದರು. ಹಿಂದೆ ನೋಡಿ ನಗುತ್ತ ಈರ್ವರು ಹುಡುಗಿಯರು ಓಡುತ್ತ ಪೌಳಿಯಲ್ಲಿ ಪ್ರವೇಶಿಸಿದರು. "ಯಾರಿವರು?" ಎಂದು ನಂಜುಂಡಯ್ಯನವರು ಚಂದ್ರಕಾಂತನೊಡನೆ ಆಶ್ಚರ್ಯದ ಶೃಂಗವನ್ನೇರಿ ಹಿಂದೆ ಪೌಳಿಯೊಳಗೆ ನುಗ್ಗಿದರು.

ಹೊಳೆಯಲ್ಲಿಳಿದು ಮುಖ ತೊಳೆದು ಬಂದು ಓಡಿ ಎದೆಗೆ ಅಂಟಿಕೊಂಡ ಮಗಳ, ಆವಳ ಭುಜಕ್ಕೆ ಜೋತುಬಿದ್ದ ಅಪರ್ಣೆಯ ಗಲ್ಲಗಳನ್ನು ಮೃದುವಾಗಿ ಹಿಂಡಿ ಗೆಳತಿಯರನ್ನು ನಂಜುಂಡಯ್ಯನವರು ಸ್ವಾಗತಿಸಿದರು. "ನೀವು ಇಲ್ಲಿಗೆ ಹೇಗೆ ಬಂದಿರುವಿರಿ? ನನ್ನ ಪತ್ರವನ್ನು ಓದಿಲ್ಲವೆ? ನಾನು ಇದೀಗ ಹೊರಡುವವನಿದ್ದೆನು."

"ನಿಮ್ಮ ಮಗಳಲ್ಲವೆ ನಾನು? ಇಂದು ಮುಂಜಾನೆ ಗಾಡಿಗೆ ಬಂದೆವು. ಆ ಮೋಟಾರಿನವರಿಗೆ ಅಪ್ಪಯ್ಯನಿಂದ ತಾರು ಮಾಡಿಸಿದ್ದೆವು. ರಾಣಿಬಿದನೂರಿಗೆ ಬಂದ ಮೋಟಾರು ನಿಲ್ದಾಣದಲ್ಲಿ ಕಾದಿತ್ತು. ಅಪ್ಪಯ್ಯನ ಪತ್ರದಂತೆ ನಮ್ಮನ್ನು ಇಲ್ಲಿಗೆ ಮುಟ್ಟಿಸಿದೆ. ಆ ಬೈರಾಗಿಯ ಹಾಡಿನ ಮುಕ್ತಾಯಕ್ಕೆ ನಮ್ಮ ಗ್ರಾಮ್ಯ ಸನ್ಮೃತಿಯನ್ನು ಒಪ್ಪಿಸಲು ಸರಿಯಾಗಿ ಬಂದಿರುವೆವು ಅಲ್ಲವೆ?" ಮಾತಿನಲ್ಲಿಯೇ ತೋಪಿನ ಮುಖಕ್ಕೆ ಬಂದರು.

ಗುಂಗಿಮಾವಿನ ಹೋಟೆಯೊಳಗಿಂದ ಗುಂಗೀಹುಳ ಗುಂಯಿಗುಡುತ್ತ ಹೊರಬೀಳುವುದೆಂಬ ಪ್ರತೀತಿಯಿಲ್ಲವೆ? ಆದರಂತೆ ಆ ಮಾವಿನ ತೋಪಿನೊಳಗಿಂದ ಪ್ರಸಾದನು ರಶ್ಮಿಗೆ ಕಣ್ಣು ಕೆಳಗೆ ಇರಿಸಿಕೊಂಡು ಯಾವುದೋ ಒಂದು ಮೃದು ಆಲಾಪನೆಯಲ್ಲಿ ಹೊರಬಂದನು. "ಪ್ರಸಾದ!" ನಂಜುಂಡಯ್ಯನವರ

ಕರೆಗೆ ಆಲಾಪನೆಯ ' ಆ ' ಎಂಬಬಾಯಿಯನ್ನು ಮುಚ್ಚದೆ ಸಲಿಗೆಯಿಂದ ಕಣ್ಣೆತ್ತಿದನು. ನಾಲ್ಕು ಕಣ್ಣುಗಳು ತಾಕಲಾಡಿದವು ಬಲಬದಿಗೆ. ನಾಲ್ಕು ಕಣ್ಣುಗಳು ತಾಕಲಾಡಿದವು ಎಡಬದಿಗೆ. ಅಚ್ಚರಿ ಮೂಕವಾಗಿತ್ತು. ತೂಗುತ್ತಿದ್ದ ಟೊಂಗೆಯನ್ನು ಹಿಡಿದು ತೂಗಿ ಬದಿಗೆ ಸರಿದನು. ಎಲ್ಲರೂ ಒಳಹೊಕ್ಕರು. ಓರೆಗಣ್ಣುಗಳು ಮಾತ್ರ ಸ್ವಾಗತಿಸಿದ ಕಣ್ಣುಗಳನ್ನು ಅರಸುತ್ತಿದ್ದವು.

ಊಟ ಮುಗಿಸಿ ಹೊರಟುಬಂದ ಗೆಳತಿಯರು ವನವಿಹಾರಕ್ಕಾಗಿ ಮಾತ್ರ ಆಗಮಿಸಿದ್ದರು. ತೋಪಿನಾಚೆಯ ಬದಿಯ ಹಸುರಿನ ಬಯಲಲ್ಲಿ ೪ ಘಂಟೆಗೆ ಎಲ್ಲರೂ ಹೋಗಿ ವಿಲಾಸವಾಗಿ ಹರಿದ ಹೊಳೆಯ ಪೂರ್ವದ ತಾಣವನ್ನು ನೋಡುತ್ತ ನಿಂತರು. ಓರೆಗಣ್ಣುಗಳ ಆಟವನ್ನು ಮುದ್ದಣ್ಣ ಅರಿಯದವನಂತೆ ಕಂಡು ಹರ್ಷಿಸುತ್ತಿದ್ದನು.

ಅಂದೇ ಸಂಜೆಗೆ ಎಲ್ಲರೂ ಮೋಟಾರಿನಲ್ಲಿ ರಾಣಿಬಿದನೂರಿಗೆ ಹೋದರು. ಮರುದಿನ ಮುದ್ದಣ್ಣನ ಮಾತಿಗೆ ಬೆಲೆಯಿತ್ತು ಸಾಯಂಕಾಲ ಅತಿಥಿಗಳು ಆರೇಮಲ್ಲಾಪುರಕ್ಕೆ ಹೊರಟರು. ಈಗ ಮಾತ್ರ, " ಕಪಟ ನಾಟಕ ಸೂತ್ರಧಾರಿ ' ಮುದ್ದಣ್ಣನು ' ಮನಗಂಡು ಕಣಗಂಡು ' ಈ ಕಾರ್ಯಕ್ರಮವನ್ನು ಹೊಂದಿಸಿದನೆಂದು ಪ್ರಸಾದನಿಗೆ ಪೂರ್ಣ ಹೊಳೆಯಿತು. ಮೇಲೆ ಮಾತ್ರ ಸೀಗೆಹುಣ್ಣಿಮೆಯ ಔತಣ. ತೋರಿಕೆ : ಸಾಧನ. 'ವಾಹವ್ವಾ' ಎಂದನು ಮನಸ್ಸಿನಲ್ಲಿ.

ಚೌಡದಾನಪುರದಿಂದ ಮರಳಿ ಬಂದ ಬಂಡಿ ಇಂದು ಮುಂಜಾನೆ ಮಧುವಯ್ಯನವರಿಗೆ ಮುದ್ದಣ್ಣನ ಮಾತನ್ನು ಮುಟ್ಟಿಸಿತ್ತು. ಅಂದು ಸಾಯಂಕಾಲ ಅಯ್ಯನವರ ಮನೆಯಲ್ಲಿ ಗಡಿಬಿಡಿ. ಬರುವ ಗೆಳತಿಯರ ಸಂಭಾವನೆಗೆ ಸಾವುಕಾರರ ಹೆಣ್ಣುಮಕ್ಕಳು ಬಂದಿರುವರು. ಬಳಗವು ಸೂರ್ಯಾಸ್ತದ ಮುನ್ನವೇ ಬಂದಿತು. ಅಪರಿಚಿತ ಕನ್ಯೆಯರಿಗಿತ್ತ ಅಜ್ಜನ ಅಪೂರ್ವ ಸ್ವಾಗತ ಪ್ರಸಾದನಿಗೆ ಆನಂದವನ್ನುಂಟುಮಾಡಿತು. ಆದರೆ ಇದರ ಹಿನ್ನೆಲೆಯಲ್ಲಿ ಒಂದು ವಾರದಿಂದ ಮುನ್ನುಡಿಯಾಗಿ ಅಜ್ಜನು ಇವರೀರ್ವರನ್ನು ಕುರಿತು ಮಾತುಕತೆ ಬಳಸಿರಬಹುದಾದ್ದ ವಿಚಾರವು ಸುಳಿದು ಅಚ್ಚರಿ ಇಣಿಕಿತು. ಸನ್ನಿವೇಶಗಳು ಮೆಲ್ಲನೆ ಬಲಿಯುತ್ತಿರುವದು ಅವನ ಸೂಕ್ಷ್ಮ ದೃಷ್ಟಿಗೆ ಬಾರದಿರಲಿಲ್ಲ. ಈ ನಾಟಕದಲ್ಲಿ ತನ್ನನ್ನುಳಿದು ಎಲ್ಲರೂ ಒಂದೊಂದು ಪಾತ್ರ

ಧರಿಸಿರಲಿಕ್ಕೆ ಸಾಕೆಂದು ಹೊಳೆಯದಿರಲಿಲ್ಲ. ಅಕ್ಕನ ನಗೆಗಣ್ಣುಗಳು ಇದಕ್ಕೆ ಇಮ್ಮಡಿಯಾಗಿ ಪುಟಕೊಟ್ಟವು. ತನ್ನ ಹೆಚ್ಚಿನ ಗಾಂಭೀರ್ಯ ಈ ಎರಡು ದಿನಗಳ ಹರುಷದ ಪರ್ವಕ್ಕೆ ಉಪ್ಪು ಬೆರಸದಿರಲೆಂದು ತಾನೂ ಸ್ವಾಭಾವಿಕವಾಗಿ ಹರುಷದ ಬಳಗದಲ್ಲಿ ಒಂದಾದನು. ಅವನಿಂದ ಅವನರಿಯದಂತೆ ಘಟಿಸಿದ ಒಂದು ಸನ್ನಿವೇಶ ಗೆಳತಿಯರ ಸಂಕೋಚವು ಊಟದ ಸಮಯವು ಬರುವದರೊಳಗಾಗಿ ಕಳಚಿ ಅವರ ಕುತೂಹಲವು ಅರಳುವಂತೆ ಮಾಡಿತು.

ಸಾವುಕಾರರ ಮನೆಯವರೊಡನೆ ಮಾತಾಡುತ್ತ ಕುಳಿತ ಗೆಳತಿಯರಿಗೆ ಅಡುಗೆಯ ಮನೆಯಿಂದ ಪರಿಚಿತ ಗಂಡುದನಿ ಕೇಳಿಬಂತು. ಇಂದ್ರಾಣಿ ಇಂಗ್ರೇಜಿಯಲ್ಲಿ ಅಪರ್ಣೆಗೆ ಸಲಹೆಯಿತ್ತಳು. ಅಪರ್ಣೆ ಅಡಿಯಿಟ್ಟಳು. ಇಂದ್ರಾಣಿಯೂ ನುಸುಳಿದಳು. ಅವರನ್ನು ಕಂಡು ಸಾವುಕಾರರ ಮನೆಯವರೂ ಅರಗಾದರು. ಪಾತ್ರಧಾರಿಗಳಿಗೆ ಪ್ರೇಕ್ಷಕರ ಸುಳಿವು ಹತ್ತಿರಲಿಲ್ಲ. ಶಿವಪ್ರಸಾದರು ಮಾದಕ್ಕನ ನೆರವಿಗೆ ನಿಂತು ಉದ್ದಿನ ವಡೆಗಳನ್ನು ಕರಿಯುತ್ತಿದ್ದರು. "ಏನು ಯೋಚನೆ ಮಾಡುತ್ತೀರಿ ಅಯ್ಯನವರೆ? ಬೆಂದು ಹೊತ್ತಿಹೋಗಲಿಕ್ಕೆ ಬಂದಿವೆ. ಹಾಗೆ ತಿರುವಿ ತಿರುವಿ ಎಣ್ಣೆಯಲ್ಲಿ ಹಾಕುತ್ತೀರಲ್ಲ. ತೆಗೆದು ಬುಟ್ಟಿಗೆ ಹಾಕಿರಿ, ಏನಾದರೂ ದೊರೆಯಬೇಕೆಂದರೆ." ಮಾದಕ್ಕ ತಮ್ಮನನ್ನು ಎಚ್ಚರಿಸಿದಳು. "ಅಹುದಲ್ಲ. ನೆನಪು ಹಾರಿಬಿಟ್ಟಿತು ನೋಡಕ್ಕ" ಎಂದು ಪ್ರಸಾದನು ತೆಗೆದು ಹಾಕಿದನು.

"ಎಲ್ಲಿಗೆ ಹಾರಿ ಹೋಗಿತ್ತು ಅಯ್ಯನವರೇ ನೆನಪು, ಪಡಸಾಲಿಗೇನು ?" ಎಂದಳು. ಅರಿವೆ ಸುಟ್ಟ ವಾಸನೆ ಬಂದು ಪ್ರಸಾದನು ಸುತ್ತು ನೋಡಿ ಬಾಳೆಯಲ್ಲಿ ಕಣ್ಣಿಟ್ಟನು. ಮಾರುತ್ತರ ದೊರೆತದ್ದಕ್ಕೆ ಹರ್ಷಹೊಂದಿದನು.

"ಹಾಂ! ನನ್ನದಿರಲಿ. ಏನೂ ಇಲ್ಲ. ಎಂತೂ ಇಲ್ಲ. ನಿನ್ನದೆಲ್ಲಿಗೆ ಹಾರಿತ್ತು ನೆನಪು? ಸಾವಳಿಗ ಮಾವನ ಕಡೆಗೇನು ? ಬಾಳೆಯಲ್ಲಿ ಗಾರಿಗಿ ಹಾಕುವದು ಬಿಟ್ಟು ಹಸಿ ಅರಿವೆ ಹಾಕಿದ್ದೀಯಾ? ಮಾವನನ್ನು ಕರೆಯಲೇನು ? ಮಾವಾ! ಮಾವಾ!" "ಏನೋ?" ಸಾವಳಿಗಯ್ಯನವರು ಧಾವಿಸಿ ಬಂದರು. ಪ್ರೇಕ್ಷಕ ಮಹಿಳಾ ಸಮೂಹವೆಲ್ಲ ಗೊಳ್ಳೆಂದಿತು. ಬೆಳದಿಂಗಳಿನ ದುಂಡು ಮಂಟಪದಿಂದ ಅಜ್ಜಂದಿರು ಬಂದರು. ಮಗ ಮೊಮ್ಮಗ ಸೊಸೆ ಎಲ್ಲರೂ ಕಕ್ಕಾಬಿಕ್ಕಿಯಾಗಿರುವುದನ್ನು ಕಂಡು "ಏನಿರೋ ಇದು ?" ಎಂದು

ಕೇಳಿ ತಿಳಿದುಕೊಂಡು ಹೊರಗಿನಿಂದ ಎಲ್ಲರನ್ನು ಕರೆತಂದು ನಗೆಗಡಲಿನಲ್ಲಿ ದೂಡಿದರು.

ತೊಟ್ಟಿಲೊಳಗಿದ್ದ ಶರಚ್ಚಂದ್ರನು ಎಚ್ಚತ್ತು ಪಾಲನೆಯನ್ನು ಬಯಸಿದ ನಂತರವೇ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದುದು. ಈ ಎಲ್ಲ ಹಾಸ್ಯಮಂಥನವನ್ನೆಬ್ಬಿಸಿದ ಮೋಹಿನಿಯರು ಮಾತ್ರ ಈ ಸನ್ನಿವೇಶವನ್ನು ತಮ್ಮ ಮುಂದಿನ ವಿರಾಮಕ್ಕಾಗಿ ಕಾಯ್ದಿರಿಸಿದರು ಊಟದ ಸಮಯದಲ್ಲಿ ಇನ್ನೊಂದು ಪೇಚು ತಲೆ ಎತ್ತಬಹುದೆಂಬ ಹೆದರಿಕೆಯು ಪ್ರಸಾದನ ಬಾಯಿಗೆ ಬೀಗ ಹಾಕಿತ್ತು. ಆ ರಾತ್ರಿ ಹೇಮಂತ ಋತುವಿನ ಹಿಮಾಂಶು ಕಣದ ಮನೆಯನ್ನು ಯಾವುದೋ ಒಂದು ಆಕಾಲಿಕವಾದ ಮಾಯಾವರ್ಣ ವಿಲಾಸ ದಿಂದ ಹೊದಿಸಿದನು.

ಮರುದಿನ ನಸುಕಿನಲ್ಲಿ ಬಾವಿಯ ದಂಡೆಯ ಮೇಲೆ ಏನೋ ಉಲಿವು ಆನಂತೆ ಭಾಸವಾಗಿ ಇಂದ್ರಾಣಿ ಆಲಿಸಿದಳು. ಅದೇ ಧ್ವನಿ. ಮೆಲ್ಲನೆದ್ದು ಕಿಡಿಕಿಯಲ್ಲಿ ಮುಖವಿಟ್ಟಳು. ಅಪೂರ್ಣ ಉಡುಪಿನಲ್ಲಿ ನಿಂತ ಪ್ರಸಾದನ ಮೈಕಟ್ಟನ್ನು ಅದೇ ಮೊದಲು ಅವಳು ನೋಡಿದುದು. ಅಲ್ಲಿಯ ವರೆಗೆ ಅವಳಿಗೆ ಪರಿಚಯವಿದ್ದ ಪ್ರಸಾದನೆಂದರೆ ಅಸಾಧಾರಣ ವಿದ್ಯಾರ್ಥಿ, ಚಿಕ್ಕಪ್ಪನ ಸ್ನೇಹಿತ, ಪ್ರೇಮವೈರಾಗಿ, ಕಲಕಂಠ. ಎಂದೋ ಸಹ ಪ್ರವಾಸಿಯಾಗಿ ತೋಳು ಮಂಜು ಗಟ್ಟುವಂತೆ ಹಿಡಿದವನೆಂದು ಎಲ್ಲಿಯೋ ಹಿನ್ನೆಲೆಯಲ್ಲಿ ಅಳಿಯದೆ ಉಳಿದ ನೆನಪಿನ ಸರಪಳಿಯ ಒಂದು ಗೊಣಸಿನ ಮಾಯಾವಿ. ಆದರೆ ಅವನ ದೇಹ ಸಂಪತ್ತು ಅವಳಿಗೆ ಅಪರಿಚಿತ. ಪೂರ್ಣ ಅಳೆಯುವ ಭರದಲ್ಲಿ ಕಣ್ಣುಗಳು ಕೂಡಿದವು. ಅವು ಅಂತರಂಗವನ್ನು ಓದುವ ಉತ್ಸುಕತೆಯಲ್ಲಿ ಅಗಲಲಿಲ್ಲ. ಪ್ರಶ್ನಾರ್ಥಕ ಸಾರ್ಥಕವಾಗಲಿಲ್ಲ. ಒಂದು ಜೋಡು ಆತಿಥೇಯದ ಪ್ರಮಾದಕ್ಕೆ ಅಂಜಿ ಹಿಂದೆಗೆಯುವದರಲ್ಲಿತ್ತು. ಇನ್ನೊಂದು ಅಭಿಮಾನದ ನೆನಹಿನಿಂದ ಹಿಂದೆಗೆಯಿತು. ಪ್ರಸಾದನು ನೀರು ತರುವುದನ್ನು ಮುಗಿಸಿ ತೋಟಕ್ಕೆ ಹೋದನು. ಉಳಿದ ಅತಿಥಿಗಳೆಲ್ಲರು ಸ್ನಾನಾದಿಗಳನ್ನು ಮುಗಿಸಿದ ನಂತರ ಚಂದ್ರಕಾಂತನು ಅವರೊಡನೆ ತೋಟಕ್ಕೆ ಹೊರಟನು.

"ನಮ್ಮ ಹುಡುಗನಿಗೆ ಅವಳ ಸಂಬಂಧವಾಗಿ ಆದರವಿದೆ. ಇನ್ನೂ ಕಂಡೇನೋ ಕಾಣಲಿಕ್ಕಿಲ್ಲವೋ ಎಂಬ ಪ್ರೇಮ ಚಿಗುರಿಲ್ಲ. ಅವಳಲ್ಲಿ ಇನೂ

ಮುಗ್ಧ ಚಿನ್ನಾಟ ಮಾಯವಾಗಿ ಬಯಕೆಗೆ ದಾರಿಕೊಟ್ಟಿಲ್ಲ. ಅವಳಿಗೂ ಅವನನ್ನು ಕುರಿತು ಆದರ, ಅವನ ಜೀವನವನ್ನು ಒಳಹೊಕ್ಕು ನೋಡುವ ಕುತೂಹಲ ಹುಟ್ಟಿವೆ. ಅಂತೆಯೇ ನಂಜುಂಡಯ್ಯನವರು ಮಗಳ ಚಿನ್ನಾಟಕ್ಕೆ ನಮ್ಮ ಹಳ್ಳಿಯ ರಂಗಸ್ಥಳವನ್ನು ಆಯ್ದಿದ್ದಾರೆ. ಮುಂದೆ ಪ್ರಸಾದನು ಜೀವನ ಇಲ್ಲಿಯೇ ಸಾಗಿಸುವುದಾದರೆ ಅವರ ಮಗಳು ಇಲ್ಲಿ ಸಂತಸ ಪಡೆಯಬಹುದೇ? ಇವೇ ಮೊದಲಾದ ವಿಚಾರಗಳನ್ನು ತಂದೆಯು ಮಾಡದೆ ಇನ್ನಾರು ಮಾಡುವದು? ಬಹಳ ಬುದ್ಧಿವಂತ. ಅತಿ ವ್ಯಾವಹಾರಿಕ ಮನುಷ್ಯ ನಂಜುಂಡಯ್ಯ. ಏನೇ ಆಗಲಿ. ಸಂಗಯ್ಯನೊಲುಮೆಯಲ್ಲವೆ? ನಮ್ಮದೆಷ್ಟು ನಾವು ಮಾಡುವಾ. ಬಾ." ಮಧುವಯ್ಯನವರು ಮುದ್ದಣ್ಣನನ್ನು ತಬ್ಬಿಕೊಂಡು ಮುಂದಿನ ಸಿದ್ಧತೆಗೆ ಮಾದಕ್ಕನ ಪ್ರಪಂಚಕ್ಕೆ ಹೋದರು.

ಹೊಂಬಿಸಿಲು ತೋಟಕ್ಕೆ ಶೋಭೆಯ ಮೇಲು ಮುಸುಕನ್ನೆಳೆದಿತ್ತು. ಗುಡ್ಡದ ಓರೆಯಲ್ಲಿದ್ದ ಈ ತೋಟ ಅರೆಗಣ್ಣಿನಲ್ಲಿ ಒರಗಿದ ತಾಯಿಯ ಮೊಲೆಯ ನುಣ್ಣುವ ಮಗುವಿನಂತೆ ತನ್ನ ಹಸುಳ ಕಾರ್ಯವನ್ನು ನಡಿಸಿತ್ತು.

ಕಣದ ಮನೆಯಿಂದ ಹೊರಟ ಬಳಗವು ತೋಟದ ಹೊರಬದಿಯ ಕಾಲುದಾರಿಯಲ್ಲಿತ್ತು. "ಹೊ! ಹೋ!" ಎಂಬ ರಾಗಪಲ್ಲವಿ ತರಂಗ ತರಂಗವಾಗಿ ಕಿವಿಗಳಿಗೆ ತಟ್ಟಿತು. ತಟ್ಟನೆ ನಿಂತು ಆಲಿಸಿ ಬಳಗವು ಮೆಲ್ಲನೆ ಮುಂದರಿಯಿತು. ಪ್ರಸಾದ ತನ್ನ ಬದುಕಿನ ಸಡಗರದಲ್ಲಿದ್ದನು. ಕಪ್ಪಲಿ ನೀರುದುಂಬಿ ಮೇಲೆ ಬರುವಾಗ ಎಳೆಯುವ ಮಿಣಿಯ ಮೇಲೆ ತೂಗುತ್ತ ಕುಳಿತು ತನ್ನ ಹಾಡಿನಿಂದ ಹೋರಿಗಳನ್ನು ಹುರಿದುಂಬಿಸುತ್ತಿದ್ದನು. ತಿರುಗಿ ಮಿಣಿಯನ್ನು ನೊಗದಿಂದ ಬಿಡಿಸಿಕೊಂಡು ಕಪ್ಪಲಿಯ ಒಳ ಎಳೆತಕ್ಕೆಏರಿ ಸಾಗಿ ಬರುವಾಗ "ಹೊ....ಹೊ....ಹೋ!" ಗಳ ರಾಗಮಾಲಿ ತೆರೆಯನ್ನೆಬ್ಬಿಸುತ್ತಿತ್ತು. ಮೂರು ನಾಲ್ಕು ಬಾರಿಯ ವರೆಗೂ ಬದುಕಿನಲ್ಲಿ ಇದೇ ಉಲ್ಲಾಸವಿತ್ತು. ಕೊನೆಗೆ ನೀರು ಬಿಡುತ್ತಿದ್ದ ಆಳು ತನ್ನ ಕಾರ್ಯವನ್ನು ನಿಲ್ಲಿಸಿ ಬಿಟ್ಟುಬಿಡದೆ ತೋಟದ ಬಾಗಿಲನ್ನು ನೋಡಹತ್ತಿದ್ದನ್ನು ಕಂಡು ಬದುಕಿಗೆ ತಡೆ ಬಂತು. ಈ ಬಾರಿ ಮಾತ್ರ ಬದುಕಿನ ಅಭಿಮಾನವು ಬಳಗವನ್ನು ನಗೆಯಿಂದ ಸ್ವಾಗತಿಸಿತು. "ಚಂದೂ! ನಂಜುಂಡಯ್ಯನವರನ್ನು ಆ ಬಾಳೆಯ ವನಕ್ಕೆ ಕರೆದುಕೊಂಡು ಹೋಗು. ಇನ್ನೆರಡು ಬಾರಿಗೆ ಮುಗಿಸಿ ಬರುತ್ತೇನೆ" ಎಂದನು ಪ್ರಸಾದ.

ಎಲ್ಲರೂ ಚಂದ್ರಕಾಂತನೊಡನೆ ಹೋದರು. ಗೆಳತಿಯರು ಮಾತ್ರ ನಿಂತಲ್ಲಿಂದ ಕದಲಲಿಲ್ಲ. ಬಾಳೆಯ ವನದಿಂದ ನಂಜುಂಡಯ್ಯನವರು "ಏ ಇಂದ್ರಾಣಿ ಅಪರ್ಣೆ" ಎಂದು ಕೂಗಿದಾಗ ಪ್ರಸಾದನಿಗೆ ಪರಿಸ್ಥಿತಿಯ ಅರಿವು. ಅಪರ್ಣೆ ಇಂದ್ರಾಣಿಯನ್ನು ಕರೆಯುವ ನಟನೆಯಲ್ಲಿದ್ದಳು. ಇಂದ್ರಾಣಿ "ನಂಜುಂಡಯ್ಯನವರಿಗೆ ಬಾಳೆಯ ವನಕ್ಕೆ ಔತಣ. ನಿನಗೆಲ್ಲಿಯದು ನಿಲ್ಲು!" ಎಂದು ಮುನಿಸು ತೋರಿದಳು. ಪ್ರಸಾದ ಕಪ್ಪಲಿಯ ಕಟ್ಟೆಯ ಮೇಲೆ ನಿಂತು ಚಂದ್ರನನ್ನು ಕೂಗಿ "ಬಾಳೆಯ ವನಕ್ಕೆ ಅತಿಥಿಗಳೆಲ್ಲರನ್ನೂ ಸ್ವಾಗತಿಸುವ ಉಪಕಾರ ಮಾಡಬೇಕಿತ್ತು" ಎಂದು ಹೆಂಗಳೆಯರ ಕಡೆಗೆ ತಿರುಗಿ ನಟನೆಯ ಹುಬ್ಬುಗಳನ್ನೇರಿಸಿದನು. ಇಂದ್ರಾಣಿಯ ಕೈ ಹಿಡಿದು ಎಳೆಯುತ್ತ ಅಪರ್ಣೆ ಕಿಲಿಕಿಲಿ ನಕ್ಕು ಚಂದ್ರಕಾಂತನನ್ನು ಹಿಂಬಾಲಿಸಿದಳು. ಇಂದ್ರಾಣಿ ಕೈ ಬಿಡಿಸಿಕೊಂಡು ಯಾರೂ ಕಾಣದಂತೆ ಒಂದು ಚಿಕ್ಕಹೆಂಟೆಯನ್ನು ಆಯ್ದುಕೊಂಡಳು. ಪ್ರಸಾದನು ತೆಗ್ಗಿನಲ್ಲಿ ಮಿಣಿಯನ್ನು ಬಿಚ್ಚಿ ಹೊರಳುತ್ತಿದ್ದನು. ಮೇಲಿನಿಂದ ಹೆಂಟೆ ಕುತ್ತಿಗೆಯ ಹಿಂದೆ ಬಿದ್ದು ಮಣ್ಣು ಅಂಗಿಯೊಳಗೆ ಸೇರಿತು. ಸರಸರನೆ ಮಿಣಿಯೊಂದಿಗೆ ಮೇಲೆ ಬಂದು ನೋಡುತ್ತಾನೆ. ಇಂದ್ರಾಣಿ ಗೆಳತಿಯನ್ನು ಕೂಡಲು ಓಡುತ್ತಿದ್ದಾಳೆ. ಹಿಂದೆ ಹೊರಳಿದಾಗ ಕುಲುಕುಲು ಕಣ್ಣು ತೆರೆದ ಬಾಯಿ ಮಾತ್ರ ಅವಳ ನಗುವನ್ನು ಸೂಚಿಸುತ್ತಿವೆ. ಮುಂದಿನವರಿಗೆ ತಿಳಿಯಬಾರದೆಂದು ನಗುವಿನ ಸದ್ದು ಅಡಗಿದೆ. ಕಪ್ಪಲಿಯ ಕುಣಿಗಾಗಿ ಬಾಗಲು ಹೆಂಟೆಗಾಗಿಯೇ ಬಾಗಿದನೆಂದು ತಿಳಿದು ಇಂದ್ರಾಣಿ ಹಿಂದೆ ಮುಂದೆ ನೋಡದೆ ರಭಸದಿಂದ ಓಡಿ ನಂಜುಂಡಯ್ಯನವರಿಗೆ ತೆಕ್ಕೆ ಹಾಯ್ದಳು. ಅವಳ ಆ ರಭಸ ಮಾತ್ರ ಎಲ್ಲರಿಗೂ ಆಚ್ಚರಿಯಾಯಿತು. ಬೆನ್ನಟ್ಟಿಸಿಕೊಂಡು ಬಂದ ಹರಿಣದಂತೆ ಇಂದ್ರಾಣಿಯು ಚಿಕ್ಕಪ್ಪನ ತೋಳ್ಸೆರೆಯಲ್ಲಿ ಕಂಪಿಸುತ್ತಿದ್ದಳು. ಎದೆಗೊತ್ತಿದ ಮಗಳ ತಲೆಯನ್ನು ನೀವಿ ಗದ್ದವನ್ನೆತ್ತಿದಾಗ ಕೆಂಪಡರಿದ ಅವಳ ಮುಖ ನಸು ನಾಚಿಕೆಯಿಂದ ಕೂಡಿತ್ತು. ಆಳು ಸುಳಿಬಾಳೆಯೊಂದರಲ್ಲಿ ಮಲ್ಲಿಗೆಗಳನ್ನು ತಂದಿರಿಸಿ ಸ್ನಾನಕ್ಕೆ ಚಂದ್ರಕಾಂತನನ್ನು ಅಯ್ಯನವರು ಕರೆಯುವುದಾಗಿ ತಿಳಿಸಿ ಹೋದನು.

ಗೆಳೆಯರಿಗೆ ಸೂರ್ಯದೇವನು ಪ್ರಸನ್ನನಾಗಿದ್ದನು. ಹೊಂಗಿರಣಗಳು ಇವರ ಚೆಲ್ಲಾಟದಿಂದ ತೂರಿಬಂದ ತುಷಾರಗಳಲ್ಲಿ ಕಾಮನ ಬಿಲ್ಲಿನ ಸಪ್ತವರ್ಣ

ಗಳನ್ನು ಅನಂತಾನಂತವಾಗಿ ಮೂಡಿಸುತ್ತಿದ್ದವು. "ಬೇಗ ಬರಬಾರದೆ? ನಿಮ್ಮ ಆಟ ಸಾಕು." ಮುದ್ದಣ್ಣನ ಕರೆಗೆ ಮೇಲೆ ಬಂದು ಮಿತ್ರರು ಹೊಲಕ್ಕೆ ಹೋದರು. ಹತ್ತು ಹೆಜ್ಜೆ. ಜೋಳದ ನಿಲುವಿನಲ್ಲಿ ಬಳ್ಳಿಯ ತೊಡಕಿನಲ್ಲಿ ತೊಗರಿಯ ಗಿಡಗಳಲ್ಲಿ ಸಾಗಿ ಬನ್ನಿಯ ಬಯಲಿಗೆ ಬಂದಾಗ ಗೆಳತಿಯರ ಕಣ್ಣುಗಳಲ್ಲಿ ಯಾವುದೋ ಹೊಸ ಲೋಕಕ್ಕೆ ಬಂದ ಕೌತುಕವಿತ್ತು. ಅಂದಿನ ಹಳ್ಳಿಯ ಊಟದಲ್ಲಿ ಪುಷ್ಟಿಯ ಸಂತುಷ್ಟಿಯಿತ್ತು. ತುಟಿಯ ಮೇಲೆ ಕರಗುವ ಬಿಸ್ಕತ್ತುಗಳ ಹುರುಳಿಲ್ಲದ "ನಯ-ನಾಜೂಕು"ಗಳ ರಾಜ್ಯ ಈ ಒರಟು ಸಂತುಷ್ಟಿಯ ಲೋಕ ಇವುಗಳ ಮಹದಂತರವು ಗೆಳತಿಯರು ಒಬ್ಬರನ್ನೊಬ್ಬರು ತುತ್ತಿಗೊಮ್ಮೆ ಮಿಕಿಮಿಕಿ ನೋಡುವುದರಲ್ಲಿ ಮೂಡುತ್ತಿತ್ತು.

ಚಂದ್ರಕಾಂತ ಪ್ರಸಾದರು ಮುಖ್ಯ ಗುಂಪನ್ನು ಬಿಟ್ಟು ಎರಡು ಮೂರು ಸಾಲುಗಳಾಚೆ ಇಳಿದನಿಯಲ್ಲಿ ಮಾತಾಡುತ್ತ ಊಟವನ್ನು ಸಾಗಿಸಿದ್ದರು. ಜೋಳದ ನಿಲುವು ಗಾಳಿಗೆ ತೂಗಿದಾಗ ಮಾತ್ರ ಅಲ್ಲಿ ಇಲ್ಲಿ ಇರುವವರ ನಯನ ಸಂಪರ್ಕ. ಊಟ ಮುಗಿದ ಮೇಲೆ ಹೆಣ್ಣು ಗಂಡಿನ ಎರಡು ಗುಂಪುಗಳಾಗಿ ಮಾತುಕತೆ ನಡೆದವು. ಮಾದಕ್ಕನ ಮಗು ಅಪರ್ಣೆಯ ಕೆಂದುಟಿಗಳೊಡನೆ ತಂಟೆ ತೆಗೆದು ಆಡುತ್ತಿತ್ತು. ರಾತ್ರಿ ಯಾರೂ ಊಟಮಾಡಲು ಒಪ್ಪದ್ದರಿಂದ ಎಲ್ಲರೂ ಇಳಿಹೊತ್ತು ಮಾಡಿಕೊಂಡು ಮನೆಗೆ ಹೋದರು. ಮುದ್ದಣ್ಣನೊಡನೆ ಪ್ರಸಾದ ಹಿಂದುಳಿದನು.

ಬೆಳ್ದಿಂಗಳಿನಲ್ಲಿ ಇಬ್ಬರೂ ತೋಟದಿಂದ ಬಂದಾಗ ಪಿಟೀಲು ತಬಲಗಳ ಮೇಳ ಆರಂಭವಾಗಿತ್ತು. ಮೆಲ್ಲನೆ ಬಂದು ಮೂಲೆಹಿಡಿದು ಆನಂದದಲ್ಲಿ ಒಂದಾದರು. ಅಷ್ಟರಲ್ಲಿ ಮಾದಕ್ಕನಿಗೆ ಒಂದು ಕಿವಿಬೋಧೆಯಾಗಿ ಮುದ್ದಣ್ಣನಿಗೆ ಮುಟ್ಟಿ ಮುಂದರಿಯಿತು. ಆಗಲೇ ಈ ಆಟ ತನ್ನ ಸುತ್ತು ಇರಬಹುದೆಂದು ಗ್ರಹಿಸಿದ ಪ್ರಸಾದನ ವಿಚಾರವನ್ನು ಚಂದ್ರಕಾಂತನ ತೀಡುವಿಕೆ ಭದ್ರಮಾಡಿತು. ಹೊಸ ಹಾದಿಯನ್ನು ಕಂಡು ಅಜ್ಜಂದಿರು 'ಇದೇನು?' ಎಂದರು. "ಮೊನ್ನೆ ಹೊಳೆಯ ದಂಡೆಯಲ್ಲಿ ಒಂದು ಭಾವಗೀತೆಯನ್ನು ಹಾಡಿದ್ದೆನು. ಅದನ್ನು ತೀಡುತ್ತಾನೆ. ಹೀಗೆ ಇವರೇಕೆ ಕೊಂಕಣ ಸುತ್ತಿ ಮೈಲಾರಕ್ಕೆ ಬರಬೇಕು. ನೇರವಾಗಿ ನನಗೆ ಹೇಳಿದ್ದರೆ ನಾನು ಹಾಡುತ್ತಿರಲಿಲ್ಲವೆ?" ಎಂದು ಕಾನಡಾ ರಾಗದಲ್ಲಿ ಒಂದು ಹಿಂದುಸ್ಥಾನೀ ಚೀಜನ್ನು ಎಲ್ಲರೂ ತಲೆದೂಗುವಂತೆ ಹಾಡಿ ಹಾಗೆಯೇ ಭೈರವಿ

ಯನ್ನು ಎತ್ತಿ ಮುಗಿಸಿದನು. ಆನಂದದಲ್ಲಿ ಬಯಸಿದ ಹಾಸ್ಯ ಹಿಂದಾಯಿತು.

ಮರುದಿನ ಮಧ್ಯಾಹ್ನ ಊಟ ತೀರಿಸಿಕೊಂಡರು. ಇಳಿಹೊತ್ತಿನಲ್ಲಿ ಹೊರಡುವುದಕ್ಕೆ ಸವಾರಿ ಬಂಡಿಯು ಹೂಡಿ ನಿಂತಿತ್ತು. ಪ್ರಸಾದ ಅಜ್ಜನೊಡನೆ ಪಡಸಾಲೆಯಲ್ಲಿದ್ದನು. ನಂಜುಂಡಯ್ಯನವರು ಮಗಳೊಂದಿಗೆ ಮಾದಕ್ಕನ ಬಗಲಲ್ಲಿದ್ದ ಶರಚ್ಚಂದ್ರನ ಮುದ್ದಾಟದಲ್ಲಿದ್ದರು. ಅಜ್ಜಂದಿರು ಹೊರಬಂದು ನಂಜುಂಡಯ್ಯನವರೊಡನೆ ಕಣದ ಬಾಗಿಲಿಗೆ ಹೋದರು. ಇಂದ್ರಾಣಿಯೂ ಹೊರಡಲನುವಾಗಿ ಮಗುವಿನ ಎಡಗಲ್ಲದ ಮೇಲೆ ಮುದ್ದಿಡುತ್ತಿದ್ದಳು. 'ಮಾದಕ್ಕ' ಎನ್ನುತ್ತ ಪ್ರಸಾದ ಹೊರಬಂದನು. ಇಂದ್ರಾಣಿ ಸರಿದು ನಿಂತಳು. ಪ್ರಸಾದ ಅಳಿಯನ ಅಪ್ಪಣೆ ಪಡೆಯುವುದಕ್ಕಾಗಿ ಮುದ್ದಿಡಲು ಬಾಗಿ ಎಡಗಲ್ಲಕ್ಕೆ ಬಾಯಿ ಹಾಕಿದಳು. ಮಾದಕ್ಕ 'ಹಾಂ!'ಎಂದಳು. "ಈ ಬದಿಯಲ್ಲಿ. ಅದು ಆಗಲೇ ಮೀಸಲು ಮುರಿದಿದೆ" ಎಂದು ಇಂದ್ರಾಣಿಯನ್ನು ನೋಡಿದಳು. "ಹೀಗೋ?" ಎಂದು ಬಲದ ಗಲ್ಲವನ್ನು ಮುದ್ದಿಟ್ಟು, ಸರ್ರನೆ ಎಡಗಲ್ಲದ ಮೇಲೆ ತುಟಿಯಿಟ್ಟು, ಮಾದಕ್ಕನು ಇಟ್ಟ ಹಿಂದಲೆಯ ಮೇಲಿನ ಪ್ರೇಮದ ಪೆಟ್ಟನ್ನು ತುರಿಸಿಕೊಳ್ಳುತ್ತ ಓಡಿದನು. ಮಾದಕ್ಕನ ನಸುನಗೆಗೆ ಇಂದ್ರಾಣಿಯ ಮುಖವು ಬಣ್ಣವೇರಿತು. ಕೊನೆಗೆ ಸೌಹಾರ್ದ ಕೊನರಿದ್ದಕ್ಕೆ ಸಾರ್ಥಕವಾಯಿ ತೆಂದು ಆನಂದಭರಿತಳಾಗಿ ಮಾದಕ್ಕನು ಇಂದ್ರಾಣಿಯನ್ನು ಗೆಳತಿಯಂತೆ ತಬ್ಬಿಟ್ಟಳು. ದೂರದಿಂದಲೇ ಕಂಡ ಅಪರ್ಣೆಯೂ ಓಡಿಬಂದು ಕೂಡಿದಳು. ಈ ತ್ರಿವೇಣಿ ಸಂಗಮದ ದೃಶ್ಯವನ್ನು ಶರಚ್ಚಂದ್ರನು ಕಣ್ಣರಳಿಸಿ ನೋಡಿ ಒಂದು ಮುಖದಿಂದ ಒಂದು ಮುಖಕ್ಕೆ ತನ್ನ ನೋಟವನ್ನು ಹಾರಿಸಿ, ತನ್ನ ಆಚ್ಚರಿಯಿಂದ ಅವರನ್ನು ನಗಿಸಿ ತಾನೂ ನಲಿದು ಬಂದವರಿಗೆ ಬೀಳ್ಕೊಟ್ಟನು.

## ೮

೧೯೩೫ ನೆಯ ಡಿಸೆಂಬರ ೭ ರಿಂದ ೧೨ ರ ವರೆಗೆ ವಿದ್ಯಾಲಯದಲ್ಲಿ ವಿಶ್ವವಿದ್ಯಾಲಯದ ಪಂದ್ಯಾಟಗಳು ನಡೆದವು. ಕೊನೆಯ ವರ್ಷದ ಬಿ. ಎ. ಅಭ್ಯಾಸದ ಗಡಿಬಿಡಿಯಲ್ಲಿಯೇ ಪೂರ್ವಸಿದ್ಧತೆಯಂತೆ ಪ್ರಸಾದನು ಓಟ- ಜಿಗಿತಗಳ ಚಟುವಟಿಕೆಯಿಂದ ಕೂಡಿದ ಪಂದ್ಯಾಟ (Hurdles) ದಲ್ಲಿ ಭಾಗ ವಹಿಸಿ ಮೊದಲಿನವನಾಗಿ ವಿದ್ಯಾಲಯಕ್ಕೆ ಮರ್ಯಾದೆಯನ್ನು ತಂದನು.

೧೯೪೦ ಬಂದು ಚಂದ್ರಕಾಂತ ಪ್ರಸಾದರು ಗೆಳತಿಯರಿಗೆ ' ಕನಸಾಗಿ ಬಿಟ್ಟರು.' ಒಮ್ಮೆ ಪರೀಕ್ಷೆ ಮುಗಿಯಿತು. ಎಲ್ಲರೂ ' ಮೈ ತೊಳೆದ ಹೋರಿ ' ಯಾದರು. ಅದೇ ಮಾರ್ಚ ಕೊನೆಯ ದಿನ ಶನಿವಾರ ಧಾರವಾಡದ ರೀಗಲ್ ಚಿತ್ರ ಮಂದಿರದಲ್ಲಿ ಐವರು ಉತ್ಸುಕತೆಯಿಂದ "Good Bye Mr. Chips" ಎಂಬ ಎಮ್. ಜಿ. ಎಮ್. ಕಂಪನಿಯ ಪ್ರಸಿದ್ಧ ಚಿತ್ರವನ್ನು ನೋಡಲು ಬಂದಿದ್ದರು. ಐವರಿಗೂ ಈ ದಿನ ಒಂದಿಲ್ಲೊಂದು ರೀತಿಯಿಂದ ಸ್ನಿಗ್ಧಭಾವವು ಆವರಿಸಿ ಪರಸ್ಪರ ಭಾವನೆಗಳಿಗೆ ಬಾಧೆ ಬಾರದಂತೆ ಜಾಗರೂಕ ರಾಗಿ ಐವರೂ ವರ್ತಿಸುತ್ತಿದ್ದರು. ಬಹುಶಃ ತಾವು ಇನ್ನು ಮೇಲೆ ಇಲ್ಲಿಯ ವರೆಗೆ ಕಳೆದ ಮಧುರ ಬಾಂಧವ್ಯಕ್ಕೆ ಪರಿಸ್ಥಿತಿಗಳ ಮೂಲಕ ಹೊರತಾಗ ಬಹು ದೆಂಬ ಮಿಡುಕು ಈ ಸ್ನಿಗ್ಧಸ್ನೇಹಕ್ಕೆ ಕಾರಣವಾಗಿರಬಹುದು.

' ಬ್ರೂಕ್‌ಫೀಲ್ಡ ಶಾಲೆ 'ಯ ಅಧ್ಯಾಪಕನ ಒಂದು ಕರುಣಾಜನಕ ಕಥೆ. ಸರಳ ರಸಿಕತೆ ಎಲ್ಲರನ್ನೂ ಮುಗ್ಧಮಾಡಿತು. ರಾಬರ್ಟ ಡೋನಾಟನೂ ಗ್ರೀಅರ ಗಾರ್ಸನಳೂ ಅಭಿನಯಿಸಿದ ಮಹಾಚಿತ್ರ ಐವರಿಗೂ ಎಷ್ಟೋ ದಿನ ಕಣ್ಣಲ್ಲಿ ಕಟ್ಟಿ ಕರೆಯಿತು. ಒಟ್ಟು ಅದೇ ಚಿತ್ರದ ಮೂರು ಆಟಗಳನ್ನು ನೋಡಿದರು. ಆದಿತ್ಯವಾರ ಎರಡನೆಯ ಆಟವನ್ನು ಮುಗಿಸಿ ಮನೆಗೆ ಬರು ವಾಗ ಇಂದ್ರಾಣಿ ಯಾವ ಮೊದಲಿನ ಸಂಕೋಚ ಬಿಗುವು ಇಲ್ಲದೆ ಪ್ರಸಾದ ನೊಡನೆ ಮಾತುಕತೆ ನಡೆಸಿ ಚಿತ್ರದ ಸಾರವನ್ನೆಲ್ಲ ಪಡೆಯುತ್ತಿದ್ದಳು. ಅಕ ಸ್ಮಾತ್ ಬದಿಗಿದ್ದ ಮೂವರಲ್ಲಿ ಯಾರಾದರೂ ಪ್ರಸಾದನ ಲಕ್ಷ್ಯವನ್ನು ತಮ್ಮ ಕಡೆಗೆ ಎಳೆದಿದ್ದರೆ ಅವನ ಮುಂಗೈಯನ್ನು ಅಲುಗಿಸಿ ತನ್ನ ಮಾತಿಗೆ ಎಳೆಯು ತ್ತಿದ್ದಳು. ಅರ್ಥವಿವರಣೆಯ ಹಾವಭಾವಕ್ಕನುಗುಣವಾಗಿ ಎತ್ತಿದ ಕೈ ಒಮ್ಮೊಮ್ಮೆ ಎಳೆಯುವ ಹವಣಿಕೆಯ ಆವಳ ಕೈಯನ್ನು ಹಿಡಿಯುತ್ತಿತ್ತು. ಮಾತಿನ ಭರದಲ್ಲಿ ಇದರ ಪರಿವೆಯೇ ಅವರಿಗೆ ಇದ್ದಿಲ್ಲ. ಮನೆಯು ಸಮೀಪಿ ಸಿದಂತೆ ಮಾತಿನ ಭರ ಹೆಚ್ಚಾಯಿತು. ಚಂದ್ರಕಾಂತ ಉದ್ದೇಶಪೂರ್ವಕ ವಾಗಿ ವಾದವನ್ನು ಹೂಡುತ್ತಿದ್ದನು. ಮನಬಿಂಬಿಸುವ ಪರಿಣಾಮಕಾರಕ ಮಾತು ಗಳು ಬಲಿತವು. ಪ್ರಸಾದನೊಬ್ಬನೆ ನಾಲ್ವರನ್ನೂ ಎದುರಿಸಬೇಕಿತ್ತು. ಅವ ರಿಂದ ಇವರಿಗೆ ಇವರಿಂದ ಇನ್ನೊಬ್ಬರಿಗೆ ತಿಳಿಸುತ್ತ ಬರುವಾಗ ಒಮ್ಮೊಮ್ಮೆ ದಾರಿ ಯಲ್ಲಿಯೇ ಗುಂಪುಗುಂಪಾಗಿ ನಿಂತು ಮಾತುಮುಗಿಸಿ ಮುಂದೆ ಬರುತ್ತಿದ್ದರು.

ಮೆಲ್ಲನೆ ಮೂವರು ಮುಂದೆ ಸಾಗಿದರು. ಒಂದು ಹೆಜ್ಜೆ ಅಂತರ. ಎರಡು ಹೆಜ್ಜೆ. ಮೂರು, ನಾಲ್ಕು .... ಹತ್ತು. ಮಾತಿನಲ್ಲಿದ್ದ ಪ್ರಸಾದನಿಗೂ ಇಂದ್ರಾಣಿಗೂ ಆಗ ಅರಿವು. ಆದರೆ ಅವರೂ ಇವರಂತೆಯೆ ಮಾತಿನಲ್ಲಿಯೆ ನಡೆದಿದ್ದರು. ಉದ್ದೇಶದ ಸಾಧನೆಯಲ್ಲಿ ಅವಸರದ ತಪ್ಪು ತಡೆ ಇದ್ದಿಲ್ಲ. ಆದರೂ ಪ್ರಸಾದ ಗ್ರಹಿಸದಿರಲಿಲ್ಲ. ಅಂತೆಯೆ ಅವನ ಆವೇಶ ಆರಿತು. ಮುಂದೆ ಹೆಜ್ಜೆ ಹಾಕಲನುವಾದನು. ಇಂದ್ರಾಣಿ ಕೈ ಹಿಡಿದು ತಡೆದಳು. "ಅದೇಕೆ ಅವಸರ? ಇದರಲ್ಲಿ ಅವರ ಒಳಸಂಚು ಇದೆಯೆಂದು ನಿಮಗೆ ಅನಿಸಿತೋ? ಇದ್ದರೇನು? ನಮ್ಮ ಅಪ್ಪಯ್ಯ ನನ್ನ ಒಲವು ತಿಳಿದು ಕೊಳ್ಳಲು ಹವಣಿಸುವಂತಿದೆ. ಇರಲಿ. ಸರಳ ಮಾತುಕತೆಯಾಡಲು ನೀವು ಏಕೆ ಹಿಂಜರಿಯುವದು? ಅಪರ್ಣೆಯ ಅಣ್ಣ ನನ್ನೊಡನೆ ಹರಟೆ ಹೊಡೆ ಯಲು ಹಾತೊರೆಯುವನು. ನೀವು ಮಾತ್ರ ಇಷ್ಟು ದಿನದ ಪರಿಚಯಸ್ಥರಿದ್ದು ಇಷ್ಟು ಬಾಂಧವ್ಯ ಬೆಳೆದರೂ ನನ್ನನ್ನು ಕಂಡರೆ ಅಷ್ಟು ದೂರ ಸಿಡಿಯುವಿರಿ. ಅದೇನೋ ಈ ದಿನ ಮಾತ್ರ ಸ್ವಲ್ಪ ಸಲಿಗೆಯಿಂದ ಮಾತಾಡಿದಿರಿ. ನನಗೆ ಬಹಳ ಆನಂದವಾಗಿದೆ. ನಮ್ಮ ಮನೆತನದ ಶೀಲಕ್ಕೆ ಭಂಗತಾರದ ಎಂಥ ಮಾತುಕತೆಯಲ್ಲಿಯೂ ನನಗೆ ಆಸಕ್ತಿ ಇದೆ. ನನ್ನ ವಿದ್ಯಾಭ್ಯಾಸವು ಮುಗಿಯು ವದರೊಳಗಾಗಿ ನಾನು ತಿಳಿದುಕೊಳ್ಳಬೇಕಾದುದನ್ನೆಲ್ಲ ತಿಳಿಯಲಿಚ್ಛಿಸುವೆನು. ನಿಮ್ಮೊಡನೆ ನನ್ನ ವಿವಾಹವನ್ನು ಮಾಡುವ ಅಭಿಲಾಷೆ ಅಪ್ಪಯ್ಯನಿಗೆ ಇದ್ದಂತೆ ತೋರುವದು. ಅವಸರದ ವಿಚಾರದಲ್ಲಿ ನಾನೂ ನಮ್ಮ ತಂದೆಯ ವರೂ ಮನಸ್ಸು ಹಾಕುವದಿಲ್ಲವೆಂದು ಅರಿತು ಅವರು ಇಲ್ಲಿಯ ವರೆಗೆ ಸುಮ್ಮ ನಿರುವರು. ನನಗೆ ನಿಮ್ಮ ಸಹಸವಾಸದಲ್ಲಿದ್ದಾಗ ಆನಂದ ದೊರೆಯುವ ದನ್ನು ನೀವು ಬಲ್ಲಿರಿ. ಆದರೆ ನಿಮ್ಮ ಕಾರ್ಯಗಳಲ್ಲಿ ಪೂರ್ಣವಾಗಿ ನೆರವಾಗು ವಷ್ಟು ನಾನು ಪ್ರಾಪಂಚಿಕ ವಿಚಾರಗಳಲ್ಲಿ ಪಕ್ವವಾಗಿಲ್ಲ. ನನ್ನವರು ನನ್ನನ್ನು ಇನ್ನೂ ಮಗುವಿನಂತೆ ಪಾಲಿಸಿದ್ದಾರೆ. ನನ್ನ ಆಟಪಾಟಕ್ಕೆ ಮಹತ್ವ ಕೊಡು ವಷ್ಟು ನೀವು ತಾಳ್ಮೆಯನ್ನು ವಹಿಸುವದು ಸಾಧ್ಯವಿಲ್ಲೆಂದು ನನಗೆ ತೋರಿದೆ. ವಹಿಸಿದರೂ ಅದು! ನಿಮಗೆ ನೋವು ತರುವಂತಹದು. ಇದಲ್ಲದೆ ಇಂದು ನಾವು ನಿಮ್ಮ ಮನೆತನಕ್ಕೂ ನಮ್ಮ ಮನೆತನಕ್ಕೂ ಇರುವ ಅಂತರಕ್ಕೆ ಸೇತುವೆ ಹಾಕಿ ಸಾಗಬೇಕಾಗುವದು. ಆ ಸಾಹಸಕ್ಕೆ ನನ್ನ ಈ ಅನುಭವ ಸಾಲದು

ಎಂದನಿಸುವದು. ಇಲ್ಲದಿದ್ದರೆ ನಾನು ಎಂದೋ ನಿಮ್ಮವಳಾಗುತ್ತಿದ್ದೆನು."

ಇಂದ್ರಾಣಿಯು ಮಾತು ನಿಲ್ಲಿಸಿ ಬದಿಯಲ್ಲಿದ್ದ ಪ್ರಸಾದನ ಮುಖವನ್ನು ಪರೀಕ್ಷಿಸಿದಳು. ಮಾರುತ್ತರವು ಬಾರದುದನ್ನು ಕಂಡು "ಅದೇಕೆ! ಸುಮ್ಮನೆ ಸಾಗಿದೆಯಲ್ಲ ರಥ? ನಾನು ಇಷ್ಟು ಬಿಚ್ಚಿ ಮಾತನಾಡಿದರೂ ನೀವು ಒಂದು ಮಾತನಾಡಲಿಲ್ಲ. ನಿಮ್ಮ ಈ ಮೌನ ನನಗೆ ಸರಿಬರುವದಿಲ್ಲ. ಕೇಳಿಸಿತೋ ಮಹಾಶಯ?" ಎಂದಳು. ಮುಂದಿನವರು ಬಹು ದೂರದಲ್ಲಿದ್ದರು. "ಇಂದಿನ ಈ ನಿಮ್ಮ ಬಿಚ್ಚುಮಾತಿಗೆ ನಾನು ಸಿದ್ಧನಿರಲಿಲ್ಲ. ಇಂಥ ಸೂಕ್ಷ್ಮ ವಿಚಾರಗಳಲ್ಲಿ ಪೂರ್ವಾಪರ ಚಿಂತನೆಯಿಲ್ಲದೆ ನನಗೆ ಮಾತಾಡಲು ಸಾಧ್ಯವಿಲ್ಲ. ನೀವು ನಮ್ಮೂರಿಗೆ ಬಂದಾಗ ನನಗೆ ಹಿರಿಯರ ಅಭಿಲಾಷೆ ಸೂಚಕವಾಗಿತ್ತು. ಆದರೆ ಇಂದು, ಅದೂ ನಿಮ್ಮಿಂದ, ಈ ಪ್ರಸ್ತಾಪ ಬರುವದೆಂದು ನಾನು ಗ್ರಹಿಸಿರಲಿಲ್ಲ. ಅಂತೆಯೆ ನಾನು ನಿರುತ್ತರನಾದೆನು. ನನ್ನ ಎಲ್ಲ ವಿಚಾರಗಳನ್ನು ನೀವು ಸಮರ್ಪಕವಾಗಿ ಗುರುತಿಸಿ ಅವುಗಳನ್ನು ವಿವೇಕದ ಬೆಳಕಿನಲ್ಲಿ ಪರೀಕ್ಷಿಸಿದ್ದೀರಿ. ನನ್ನ ಅಜ್ಜ–ಮುದ್ದಣ್ಣರ ಆ ಪ್ರಪಂಚಕ್ಕೂ ನಿಮ್ಮ ತಂದೆಯವರ ನಿಮ್ಮ ಈ ಸುಧಾರಿಸಿದ ಪ್ರಪಂಚಕ್ಕೂ ಮಹದಂತರವೆಂದು ನಾನು ಎಂದೋ ಒಪ್ಪಿಕೊಂಡಿದ್ದೇನೆ. ಅಂತೆಯೆ ನಾನು ನಿಮ್ಮೊಡನೆ ಯಾವ ಸಾಹಸಕ್ಕೂ ಕೈ ಹಾಕಿಲ್ಲ. ಇಲ್ಲಿಯ ವರೆಗೆ ನೀವೂ ನಿಮ್ಮ ಗೆಳತಿಯರೂ ನನ್ನನ್ನು ಅಪೂರ್ವವಾದ ಸ್ನೇಹದಿಂದ ಕಂಡಿರುವಿರಿ. ಅದಕ್ಕೆ ನಾನು ಚಿರಋಣಿ. ಇದೇ ವಾತ್ಸಲ್ಯವನ್ನು ನಾವು ಕಾಯ್ದುಕೊಳ್ಳುವ ಭರವಸೆಯಿಂದ ನಮ್ಮ ನಮ್ಮ ಮುಂದಿನ ಪ್ರಾಪಂಚಿಕ ಕಾರ್ಯಾರ್ಥವಾಗಿ ಒಬ್ಬರನ್ನೊಬ್ಬರು ಬೀಳ್ಕೊಡುವ ಕಾಲ ಬಂದಿದೆ. ನಮ್ಮ ಮಾವ-ಮುದ್ದಣ್ಣರ ಸಾಗುವಳಿಯಲ್ಲಿ ನಾನೂ ಬೆರೆತು ದುಡಿಯುವ ವಯಸ್ಸಿಗೆ ಬಂದಿದ್ದೇನೆ. ದುಡಿದು ಅಜ್ಜನಿಗೂ ಮುದ್ದಣ್ಣನಿಗೂ ಆನಂದವನ್ನು ತರುವ ಕರ್ತವ್ಯ ನನ್ನೆದುರು ಇದೆ. ನನ್ನ ಪರಮ ಸ್ನೇಹಿತರಿಂದಲೂ ಅಗಲುವ ಕಠಿಣ ವ್ರತ ಎದುರಾಗಿದೆ. ನನ್ನೀ ಕರ್ತವ್ಯದಲ್ಲಿ ನನಗೆ ಸುಖವಿದೆ. ಅನ್ಯ ಸಾಹಸದ ಬಯಕೆಗೆ ನನಗೆ ವಿರಾಮವಿಲ್ಲ. ಇಂದು ನಿಮ್ಮ ವಿಚಾರಕ್ಕೂ ನನ್ನ ಪರಿಸ್ಥಿತಿಗೂ ಮೇಳವಿಸಿದೆ. ಸಣ್ಣ ಮಕ್ಕಳಂತೆ ಇಲ್ಲಿಯ ವರೆಗೆ ಕೂಡಿ ಆಡಿದ್ದೇವೆ: ಇನ್ನು ಬೆಳೆದ ಪ್ರೌಢರಂತೆ ಆಗಲಿ ನೆನೆಯುವದಲ್ಲವೆ?" ಪ್ರಸಾದ ಮಾತು ಮುಗಿಸಿ ಸರಸರನೆ ಸಾಗಿದನು.

ಇಂದ್ರಾಣಿ ಅರ್ಧ ಓಡುತ್ತ ಬಂದು ಕೂಡಿದಳು : "ಪ್ರಸಾದ ! ನೀವು ನನ್ನಿಂದ ಏನೂ ಬಯಸುವದಿಲ್ಲವೆ ?"

"ಇಷ್ಟು ಮರ್ಯಾದೆಯನ್ನೇ ನೀವು ಸಲ್ಲಿಸುತ್ತಿದ್ದೀರಿ. ಈ ಮರ್ಯಾದೆಯನ್ನು ಬದಿಗಿರಿಸಿ ನಾನು ಏನಾದರೂ ನಿಮ್ಮಿಂದ ಬಯಸಬೇಕಲ್ಲವೆ? ನಿಮ್ಮಿಂದ ನನಗೆ ದೊರೆಯುವಂಥದು ಈ ಮರ್ಯಾದೆಗಿಂತ ಮಿಗಿಲಾದುದು ಇನ್ನೇನಿದೆ? ನೀವು ಕೊಡುತ್ತಿರುವ ಈ ಮರ್ಯಾದೆಯಿಂದ ನಮ್ಮವರೆಲ್ಲ ನನ್ನನ್ನು ಭಾಗ್ಯಶಾಲಿಯೆಂದೇ ತಿಳಿದಿದ್ದಾರೆ. ಇದು ನನ್ನ ಸುಕೃತವಲ್ಲವೆ? ಬನ್ನಿ. ಅವರು ಆಗಲೇ ಮನೆಯ ಹತ್ತಿರ ಕಾಯ್ದಿದ್ದಾರೆ." ಪ್ರಸಾದನು ಇಂದ್ರಾಣಿಯನ್ನು ಮರ್ಯಾದೆಯಿಂದ ಕರೆದೊಯ್ದನು. ಕಾಯಾ ವಾಚಾ ಮನಸಾ ಉದ್ಭವಿಸಿದ ಈ ಶೀತಲ ಮರ್ಯಾದೆ ಅವಳನ್ನು ನಡುಗಿಸಿತು : "ಪ್ರಸಾದ ! ನಾನು ಇನ್ನೂ ಚಿಕ್ಕವಳು. ನೀವು ವಿಚಾರಮಾಡಿ ನನಗೆ ತಿಳಿಸಿ ಹೇಳದೆ ನನ್ನಿಂದಲೇ ಈ ಮಾತುಗಳನ್ನು ಹೊರಡಿಸಿರುವಿರಿ ನನಗೆ ಅದೇಕೋ ನನ್ನ ನಿರ್ಧಾರದಲ್ಲಿಯೇ ಅಂಜಿಕೆ ಹುಟ್ಟಿದೆ. ನಿಮ್ಮ ವಿಷಯವಾಗಿ ನನ್ನಲ್ಲಿ ಯಾರಿಗೂ ಇಲ್ಲದಷ್ಟು ಆದರವಿದೆ. ಈ ಆದರ ನನ್ನ ನಿರ್ಧಾರಕ್ಕಿಂತ ಹೆಚ್ಚು ಬಲಶಾಲಿ ಇದ್ದುದು ನನಗೆ ಇದೀಗ ಕಂಡುಬರಹತ್ತಿದೆ. ನನಗೆ ಅವಕಾಶ ವಿತ್ತು ನೀವು ವಿವಾಹಕ್ಕೆ ಕೈ ಹಾಕಬೇಕು. ನಮ್ಮ ಈ ವರೆಗಿನ ಪರಸ್ಪರ ಸ್ನೇಹಾಂಕುರವಾಗಿ ಇದೊಂದು ಮಾತು ಪಾಲಿಸುವಿರಾಗಿ ನಂಬಿದ್ದೇನೆ." ಪ್ರಸಾದನ ಕೈ ಹಿಡಿದು ಇಂದ್ರಾಣಿ ಆಶಾಪೂರ್ಣವಾದ ನೋಟವನ್ನು ಬೀರಿದಳು.

"ಇಂದ್ರಾಣಿಯವರೇ! ನಾನು ನಂಬಿರುವ ವಿಧಿ ದೈವ ದೇವರೆಂದರೆ ನನ್ನ ಸುತ್ತಲಿರುವ ಪ್ರಪಂಚ. ನನ್ನ ಅಕ್ಕ-ಮಾವರಿಗಿಂತಲೂ ಎಷ್ಟೋ ಪಾಲು ಅಧಿಕವಾಗಿ ನನ್ನ ಅಜ್ಜ-ಮುದ್ದಣ್ಣರು ನನ್ನ ದೇವರು ನನ್ನ ದೈವ. ಅವರು ನನಗಾಗಿ ಜೀವ ಹಿಡಿದು ನಿಂತವರು. ನನ್ನ ವ್ಯಾಸಂಗವು ಮುಗಿಯುವ ವರೆಗೆ ಅವರು ನನ್ನ ಮಾತನ್ನು ನಡಿಸಿದ್ದಾರೆ. ನಾನು ಇನ್ನು ಅವರ ಅಧೀನ. ನಾನು ಒಪ್ಪಿದವಳು ಅವರು ಬಯಸುವ ಕಾಲದಲ್ಲಿ ನನ್ನವಳಾಗ ಬಹುದು. ನನ್ನ ಪರಿಸ್ಥಿತಿಗೆ ನಿಲುಕುವಂಥ ಸ್ತ್ರೀಯಳನ್ನು ನಾನು ಒಪ್ಪುವದು. ನಿಮ್ಮಂಥ ಉಚ್ಚಮನೆತನದ ಸುಶಿಕ್ಷಿತರು ನನ್ನ ಮುಂದಿನ ಹೊಯ್ದಾಟದ

ಬಾಳಿನಲ್ಲಿ ಸಂಗಾತಿಯಾಗಿರುವದು ಸಾಧ್ಯವಿಲ್ಲವೆಂದೇ ನಾನು ನೀವಾಗಿ ಎತ್ತಿಕೊಟ್ಟ ಮಾತಿಗೆ ಒಪ್ಪಿದೆನು. ನಾನಂತೂ ನಿಮ್ಮನ್ನು ವಿಚಾರಿಸುವ ಸಾಹಸಕ್ಕೆ ಕೈ ಹಾಕುತ್ತಿರಲಿಲ್ಲ. ಇಂತಿರುವಾಗ ನಾನು ಹೇಳಬೇಕಾದುದು ಇಷ್ಟೆ. ನನ್ನವರು ಪಾಲಿಸಿದರೆ ನಾನು ನಿಮ್ಮ ವಿಚಾರವನ್ನು ಪಾಲಿಸದಿರಲಾರೆನು." ಭರಭರನೆ ಗುಂಪು ಸೇರಿ ಬೀಳ್ಕೊಟ್ಟರು.

ಇಂದ್ರಾಣಿ ಮೌನವಾಗಿ ಮುಂದರಿಯುತ್ತಿದ್ದ ಮಿತ್ರರನ್ನು ಮನವಾರೆ ನೋಡಿ ಮನೆಸೇರಿದಳು. ಚಿಕ್ಕಪ್ಪನವರು ಇವಳಿಗಾಗಿ ಕಾದಿದ್ದರು. "ಅಪ್ಪಯ್ಯ! ನಿಮ್ಮ ಪ್ರಸಾದರ ಮಾತು ಸತ್ಯ. ಕಠೋರವಾಗಿ ಸತ್ಯ. ಪರಿವರ್ತನಶೀಲವಾದ ಅವರ ವಿವೇಕ ಬಹಳ ಶೀತಲ. ಪರರ ಪರಿಶೀಲನೆಯಲ್ಲಿ ಮನಃಪೂರ್ವಕವಾದ ಸಹಾನುಭೂತಿ ಕಳಕಳಿ ತುಂಬಿ ತುಳುಕುತ್ತವೆ. ಸ್ವಯಂ ಜೀವನ ವಿಮರ್ಶೆಯಲ್ಲಿ ಬಹು ನಿಷ್ಠುರ. ಇಂತಿರುವ ಅವರು ನಿಮಗಿಷ್ಟು ಸ್ನೇಹಪಾತ್ರರಾದುದು ಹೇಗೆ ? ''

" ಈಗೇಕೆ ಆತುರ. ಅದು ನಿನಗೆ ಸ್ವಲ್ಪದಿನಗಳಲ್ಲಿ ತಿಳಿಯುವದು. ಅವನನ್ನು ಅರ್ಥಮಾಡಿಕೊಳ್ಳುವಷ್ಟು ನಿನಗೆ ವಯಸ್ಸಾಗಿಲ್ಲ. ಈಗ ತಿಳಿಸಿದರೂ ತಿಳಿಯುವಂತಿಲ್ಲ. ಸುಮ್ಮನೆ ನಾನು ಅವನ ಪರವಾಗಿ ಮಾತನಾಡಿದಂತೆ ನಿನಗೆ ಭಾಸವಾಗುವದು. ಒತ್ತಾಯದ ಯಾವದೇ ಆಕ್ರಮಣ ನನ್ನ ಮನಸ್ಸಿಗೆ ಹಿಡಿಯುವದಿಲ್ಲ. ನಿನ್ನ ಪ್ರೌಢ ಜೀವನದಲ್ಲಿ ಇಂಥ ಹಲವಾರು ಸ್ನೇಹಿತರ[illegible]ನಗೆ ದೊರೆಯುವರು. ಕಣ್ಣು ತೆಗೆದು ನೋಡುವ ದಿನಗಳು ಬಂ[illegible]ನೋಡಿ ಅರಿತುಕೊಳ್ಳುವೆ. ಆಗ ನಿನಗೆ ಪರಿಣಾಮಕಾರಿಯಾದುದು ಹಿತಕಾರಿಯೂ ಫಲದಾಯಿಯೂ ಆಗುವದು. ಈಗ ಪರಿಣಾಮಕಾರಿಯಾಗಲು ಬಯಸಿದುದು ನಿನ್ನ ಈ ಮುಗ್ಧ ಜೀವನದಲ್ಲಿ ಬಳಿಸುಳಿದ ತಂಗಾಳಿಯಂತೆ ತಾತ್ಕಾಲಿಕ.''

" ಅಪ್ಪಯ್ಯ! ನಿಮ್ಮ ಭಾಷೆ ನನಗೆ ಗೂಢವಾಗಿ ಕಾಣುವದಲ್ಲ."

" ಗೂಢವಾದುದು ಸುಲಲಿತವಾಗುವ ದಿನಗಳು ಬಂದು, ನನ್ನ ಮಾತು ನಿನ್ನ ಸ್ಮೃತಿಪಟಲದ ಮೇಲೆ ನಾಟ್ಯವಾಡಿದಾಗ ನೀನನುಭವಿಸುವ ಆನಂದದಲ್ಲಿ ನನ್ನನ್ನೂ ಭಾಗಿಯಾಗಲು ನೀನು ಅನುಮತಿಯಿತ್ತರೆ ಸಾಕು ಬಾ. ಇಂದಿನ ನಮ್ಮ ಉಪನ್ಯಾಸಕ್ಕೆ ಅದೇ ಪ್ರತಿಫಲ." ನಂಜುಂಡಯ್ಯನವರು ಮಗಳನ್ನು

ತಾಯಿಯ ಬಳಿ ಕಳಿಸಿ ತಮ್ಮ ಕೊಠಡಿಗೆ ಹೋದರು.

ವಸಂತ ಋತುವಿನ ಒಂದು ರಾತ್ರಿ. ಚೈತ್ರ ಶುದ್ಧ ಅಷ್ಟಮಿಯ ಚಂದ್ರನು ದಾರವಾಡ ನಿಲ್ದಾಣದಲ್ಲಿ ನಿಂತಿದ್ದ ಚಂದ್ರಕಾಂತ ಪ್ರಸಾದರ ಅಗಲುವಿಕೆಗೆ ಮಧುರಸ್ವಪ್ನವನ್ನು ನೀಡಿದ್ದನು. ಆ ಮಧುರರಾತ್ರಿ ಪ್ರಸಾದನು ತನ್ನ ಅಂದಿನ ಪ್ರಥಮ ದೀರ್ಘ ಘಟನೆಯನ್ನು ಸವಿಸ್ತಾರವಾಗಿ ಗೆಳೆಯನಿಗೆ ಅರುಹಿದನು. ಚಂದ್ರಕಾಂತನೂ ತನ್ನ ಪ್ರಣಯಜೀವನದ ರೋಮಾಂಚನವನ್ನು ಉಣಿಸಿದನು. ಪ್ರಸಾದನ ಜೀವನದ ಅನಿಶ್ಚಿತತನಕ್ಕೆ ಚಂದ್ರಕಾಂತನು ವ್ಯಸನದಿಂದ ಸಹಾನುಭೂತಿಯನ್ನು ತಳೆದನು. ವಿವೇಕದ ದಾರಿಯಲ್ಲಿ ವ್ಯಸನವಿಲ್ಲ. ಸಹಾನುಭೂತಿ. ಎಷ್ಟೇ ಒಳ್ಳೆಯದಾದರೂ ಅಪ್ರಾಸಂಗಿಕ ವಿದ್ದರೆ ಅದನ್ನು ತಾನು ಸ್ವೀಕರಿಸುವದು ತನ್ನ ವಿವೇಕಕ್ಕೆ ಕುಂದು ಎಂದು ತಿಳಿಸಿ ತನಗಾಗಿ ವ್ಯಕ್ತಪಡಿಸಿದ ಈ ಅಸಾಧಾರಣವಾದ ಸಹಾನುಭೂತಿಯನ್ನೂ ಪ್ರೇಮವನ್ನೂ ಚಂದ್ರಕಾಂತನು ತನ್ನ ಕೈ ಹಿಡಿಯುವವಳಲ್ಲಿಯೂ ತಾಯಿಯಲ್ಲಿಯೂ ಹಂಚಿ ಸುಖಿಯಾಗಿ ತನ್ನ ಸ್ನೇಹಕ್ಕೆ ಹೆಮ್ಮೆಯವನಾಗಿ ಬಾಳಲೆಂದು ಹಾರಯಿಸಿ, ಗೆಳೆಯನನ್ನು ಅತ್ಯಂತ ಗಾಢವಾದ ಅಪ್ಪುಗೆಯಿಂದ ಬಿಗಿದು ಬೀಳ್ಕೊಟ್ಟು ಪ್ರಸಾದನು ತನ್ನಲ್ಲಿಗೆ ಹೊರಟನು. ಹಿಂದಿನ ದಿನ ರಾತ್ರಿ ನಂಜುಂಡಯ್ಯನವರಿಗೆ ತಿಳಿಸಿ ಅವರು ಅಪರಾತ್ರಿಯಲ್ಲಿ ಬರುವ ಆವಶ್ಯಕತೆ ಇಲ್ಲವೆಂದು ಒಪ್ಪಿಸಿದ್ದರಿಂದ ಇವರಿಗೆ ಈ ಏಕಾಂತ ಈ ಮಾತುಗಳಿಗೆ ಅವಕಾಶವಾಗಿತ್ತು. ಇಂತು ೧೯೪೦ ನೆಯ ಎಪ್ರೇಲ್ ೧೫ ನೆಯ ಸೋಮವಾರ ಪ್ರಸಾದನು ತನ್ನ ವಿದ್ಯಾಭ್ಯಾಸವನ್ನು ಪೂರಯಿಸಿ ತನ್ನ ಮುಂದಿನ ಪ್ರಬುದ್ಧ ಕಾರ್ಯಕ್ಕೆ ಹುಟ್ಟೂರಿಗೆ ಹೊರಟನು.

## ೯

“ ಇದೇನು ನಂಜುಂಡಯ್ಯನವರೆ ! ನನ್ನನ್ನು ಓದಿದಂತೆ ನೋಡುವಿರಲ್ಲ ! ” ಹಸ್ತಾಂದೋಲನದಿಂದ ನಂಜುಂಡಯ್ಯನವರು ಇನ್ನೂ ಆಚ್ಚರಿಗೊಂಡರು. “ ಉಕ್ಕಿನ ಮನುಷ್ಯನಾಗಿದ್ದೀಯಲ್ಲ ಪ್ರಸಾದ. ಗಡಿನಾಡಿನಲ್ಲಿ ಚೆನ್ನಬಸವಣ್ಣ ತನ್ನ ಕೈವಾಡವನ್ನು ನಡೆಸಿರುವನಲ್ಲ. ಇದೇನು ಈ ಕ್ಷಾತ್ರಮುಖ !”.

ನಿಶ್ಚಯವಾಗಿಯೂ ಪ್ರಸಾದನು ಬದಲಾಗಿದ್ದನು. ಬಿಳಿಯ ಗೋದಿಯ ಬಣ್ಣ ರಕ್ತರಂಜಿತವಾಗಿತ್ತು. ಕಾಂತಿಯಿಂದ ಹಣೆ ಮಿರ್ರನೆ ಮಿಂಚುತ್ತಿತ್ತು. ಕಣ್ಣುಗಳಲ್ಲಿದ್ದ ಕಾರುಣ್ಯ ಹಿಂಬದಿಗೆ ಸರಿದು ಕಾಠಿಣ್ಯ ಬಂದಿತ್ತು. ಕಾಂತಿಯಲ್ಲಿ ಸೆಳೆಮಿಂಚಿತ್ತು. ಕೆನ್ನೆಗದ್ದಗಳ ಮೇಲೆ ಎಳೆಸುಳಿಯ ಕೂದಲು ಬೆಳೆದು ಸುಳಿಸುಳಿಯಾಗಿ ಮುತ್ತಿಡುವಂತಿದ್ದವು. ಕುಡಿ ಮೀಸೆಯೂ ಕುರುಳು ಕುರುಳಾಗಿ ಕೊನೆಗೆ ಮೇಲೆ ಚಿಮ್ಮಿ ಕಣ್ಣುಗಳ ಕಾಠಿಣ್ಯಪೂರ್ವವಾದ ಕಾಂತಿಯನ್ನು ಬೆರಳುಮಾಡಿ ತೋರಿಸುವಂತಿದ್ದವು. ತಲೆಯ ಕೂದಲು ಮಾತ್ರ ಪುನಃಪುನಃ ಪರಾಮರಿಕೆಯನ್ನು ಕಾಣುವಂತೆ ಇದ್ದು, ಸಾಕಷ್ಟು ಚೆಲುವಾಗಿ ಬೆಳೆದು ಮೊದಲಿನ ಸುಳಿತನಕ್ಕೆ ಭಂಗ ತಂದಿದ್ದಿಲ್ಲ. ತುಟಿಗಳ ಕೂಡುವಿಕೆಯಲ್ಲಿ ಸಿಸ್ತುರತೆಯ ಬಿಗುವಿತ್ತು. ಆಡಂಬರ, ನಯ, ನಾಜೂಕು, ಅಪವ್ಯಯ ಇವು ನಡೆನುಡಿಗಳಲ್ಲಿ ಎಲ್ಲಿಯೂ ಸುಳಿಯುವಂತಿದ್ದಿಲ್ಲ. ಎಲ್ಲೆಡೆಯಲ್ಲಿಯೂ ಹರಿತವಿತ್ತು.

"ನಮಗೆ ವಿರಾಮಕ್ಕೆ ಕಾಲವಿಲ್ಲ ನಂಜುಂಡಯ್ಯನವರೆ. ಇಂದಿನ ಹಳ್ಳಿಯ ರೈತನ ರಕ್ತ ಸುಡುವಾಗ ನಿಂತು ನೋಡಿ ನಿಟ್ಟುಸುರುಬಿಟ್ಟು ಉಪಶಾಂತಿಯಿಂದ ಮನಸೋಲಿಸುವ ಕಾಲವಿಲ್ಲ. ನನ್ನ ಸುಶಿಕ್ಷಿತ ಮಾವ, ಒಬ್ಬಳೇ ಆದ ನನ್ನಕ್ಕ ಇಳಿವಯಸ್ಸಿನಲ್ಲಿ ಪೇಚಾಡುವ ನನ್ನ ಅಜ್ಜ—ಮುದ್ದಣ್ಣರು 'ಮೂಗಿಗೆ ಕವಡೆ ಕಟ್ಟಿಕೊಂಡು' ಹಗಲಿರುಳೆನ್ನದೆ ದುಡಿವಾಗ ನನ್ನಂಥ ಹೊಣೆಗಾರಿಕೆಯನ್ನರಿತ ತರುಣನು ಓದು ಮುಗಿಸಿ ಮನೆಯ ಮೂಲೆಯಲ್ಲಿ ಸವಿಗನಸುಗಳ ವಿಲಾಸದಿಂದ ಮೆರೆಯುವ ಆಲಸ್ಯಕ್ಕೆ ಶರಣೆನ್ನುವದು ಸಾಧ್ಯವಾಗಲಿಲ್ಲ. ಈ ಉಕ್ಕು ನನ್ನಲ್ಲಿ ಸೇರಿದುದು ಆ ಮಣ್ಣಿನ ಭೋಗದಿಂದ. ನಿಮ್ಮೆಲ್ಲರನ್ನು ಕಾಣುವ ಸುಯೋಗವನ್ನು ಚಂದ್ರನ ಮದುವೆಯ ಔತಣ ದಯಪಾಲಿಸಿದೆ. ನಾಲ್ಕು ದಿನಗಳಿದ್ದು ಜಗತ್ತಿನ ಪರಿಳಿತಗಳನ್ನು ನೋಡಲು ಹೊಲಗೆಲಸಗಳೂ ಬಿಡುವು ಕೊಟ್ಟಿವೆ. ರೋಹಿಣಿಯೂ ಪ್ರಸಾದಿಸಿದ್ದಾಳೆ. ಹರಗುವದನ್ನು ಮುಗಿಸಿದ್ದೇನೆ. ಇದೀಗ ಆರು ದಿನಗಳಿಂದ ಮೃಗಶಿರ ಹಿಡಿದಿದೆ. ಮಾವ-ಮುದ್ದಣ್ಣರು ಆಳುಗಳೊಂದಿಗೆ ನಿಂತು ನನಗೆ ಬಿಡುವು ಮಾಡಿರುವರು. ನಿಮ್ಮ ಸಹವಾಸ ನನಗೆ ಮುಂದಿನ ದಿನಗಳಲ್ಲಿ ಸವಿಗನಸುಗಳನ್ನು ನೀಡಿ ನಾಲ್ಕಾರು ಭಾವಗೀತೆಗಳನ್ನು ನಮ್ಮ ಮುದ್ದಣ್ಣನೆದುರು ಹಾಡಲು ಪ್ರೇರೇಪಿಸುವದು."

ಇಂತು ಸ್ನೇಹಿತನ ವಿವಾಹ ನಿಮಿತ್ತವಾಗಿ ೧೯೪೧ ನೆಯ ಜೂನ್ ೯ನೆಯ ಸೋಮವಾರ ಅಗಲಿದ ಮಿತ್ರರು ಪುನಃ ಒಂದಾದರು. ಪ್ರಸಾದನು ಚಂದ್ರ ಕಾಂತನ 'ಬಂದವರನ್ನು ನನ್ನವನಾಗಿ ಸತ್ಕರಿಸು' ಎಂಬ ಮಾತನ್ನು ಹರ್ಷ ದಿಂದ ಕೈಕೊಂಡನು. ಸಾಯಂಕಾಲ ಗೋಧೂಳಿಯ ಮುಹೂರ್ತದಲ್ಲಿ ಅಕ್ಷ ತೆಯ ಕಾಳುಗಳನ್ನು ಹಂಚುವಾಗ ಇಂದ್ರಾಣಿಯು ಅಪೂರ್ವವಾಗಿ ಬೊಗಸೆ ಯನ್ನು ಮುಂದೆ ಮಾಡಿದಾಗ ಮಾತ್ರ ಪ್ರಸಾದನು ಅವಳ ಮುಖದಲ್ಲಿ ಕಣ್ಣಿ ಟ್ಟನು. ಬೊಗಸೆಗಂಗಳಲ್ಲಿ ಪ್ರಾರ್ಥನೆಯಿತ್ತು. ಅರೆನಿಮಿಷದಲ್ಲಿ "ನಾನಾರು ಮನ್ನಿಸಲು ?" ಎನ್ನುವ ನಿರಹಂಭಾವದ ತೊಡಕು ಬಿಡಿಸಿಕೊಳ್ಳುವ ಸಮ್ಮತಿ ಯಿಂದ ಮತ್ತೊಂದು ಬೊಗಸೆಗೆ ಹಂಚಿ ಮುಂದರಿಯುತ್ತ ಕಾರ್ಯವನ್ನು ಪೂರಯಿಸಿದನು.

ನಂಜುಂಡಯ್ಯನವರು ಅತಿಥಿಗಳ ಸಮೂಹದಲ್ಲಿ ನಿಂತು ಪ್ರಸಾದನನ್ನು ಕರೆದು ಚಂದ್ರಕಾಂತನ ಮಾವಂದಿರಿಗೆ ಅಳಿಯನ ಪರಮ ಸ್ನೇಹಿತನ ಪರಿಚಯ ಮಾಡಿಕೊಟ್ಟರು. ಬೆಳಗಾಂವಿಯ ಮೂರನೆಯ ಭಾಗದ ಪ್ರಾಂತ ಅಧಿಕಾರಿ ಗಳು ಅಳಿಯನ ಸ್ನೇಹಿತನಿಗೆ ಮುಗುಳ್ನಗೆಯ ಆದರವನ್ನಿತ್ತರು. ಇಳಿವಯ ಸ್ಸಿನ ಒಬ್ಬ ಗಂಭೀರ ಮಹನೀಯರನ್ನುದ್ದೇಶಿಸಿ ನಂಜುಂಡಯ್ಯನವರು "ಇವರು ನಮ್ಮ ತರುಣರಿಗೆ ಆದರ್ಶಪ್ರಾಯರಾದ ನನ್ನ ಪೂರ್ವದ ಸಹಪಾಠಿ ಗಳು. ತಮ್ಮ ಸ್ನೇಹಲಾಭವನ್ನು ಇಂದಿಗೂ ದಯಪಾಲಿಸಿದವರು. ನಿವೃತ್ತ ಕಲೆ ಕ್ಟರರು. ಮೇಜರ ಹಿರೇಮಠ. ಕ್ಷಾತ್ರ ತೇಜಸ್ಸಿನ ಅಭಿಮಾನಿಗಳು" ಎಂದು ಪರಸ್ಪರ ಪರಿಚಯ ಮಾಡಿಸಿದರು. ಮಹನೀಯರು ಕೈಕುಲುಕಿ "ನಿಮ್ಮ ತಾರುಣ್ಯದ ತೇಜಸ್ಸು ನನ್ನಲ್ಲಿ ಇನ್ನಷ್ಟು ಉಕ್ಕಿ ಬರಲಿ ಬನ್ನಿ" ಎಂದು ಗಾಢವಾಗಿ ಅಲೌಕಿಕವಾಗಿ ಪ್ರಸಾದನನ್ನು ಅಪ್ಪಿದರು. "ನೀವು ನನ್ನ ಕನ್ನಡ ಸಮಾಜಕ್ಕೆ ಒಂದು ಹೆಮ್ಮೆ. ನಿಮ್ಮಂಥ ತರುಣರ ಸ್ನೇಹ ನನಗೆ ಅತ್ಯವಶ್ಯ. ನನ್ನಿಂದ ನಿಮಗೆ ಯಾವ ಕಾಲದಲ್ಲಿಯೇ ಆಗಲಿ, ಯಾವ ಕಾರ್ಯವನ್ನೇ ಬಯಸಿರಿ, ನನ್ನ ಶಕ್ತಿಮೀರಿ ನಿಮ್ಮವನಾಗುವೆನು."

"ನಂಜುಂಡಯ್ಯನವರು ನನ್ನ ಜೀವನದಲ್ಲಿ ಅಡಿಯಿಟ್ಟು ನನಗೆ ಅತ್ಯಂತ ಅಲೌಕಿಕವಾದ ರಸನಿಮಿಷಗಳನ್ನು ಉಣಿಸಿದ್ದಾರೆ. ಇಂದು ಮನದಣಿ ಸವಿದಿದ್ದೇನೆ. ತಮ್ಮಂಥ ಮಹನೀಯರ ಆದರ್ಶಪ್ರಾಯವಾದ ಜೀವನಗಳೇ

ನನಗೆ ಇನ್ನೂ ಸಮಾಜದ ಪ್ರಗತಿಯಲ್ಲಿ ಭರವಸೆ ಇಡಲು ಹಚ್ಚಿವೆ. ಇಲ್ಲವಾದರೆ ನಾನು ಉತ್ಸಾಹಪೂರ್ವಕವಾಗಿ ನೇಗಿಲ ಮೇಲೆ ಮುಂಗೈ ಊರುತ್ತಿದ್ದಿಲ್ಲ. ನನ್ನ ಹಿರಿಯರ ಸಂತಸ ನನ್ನ ಸಂತಸದಲ್ಲಿದೆ. ನನ್ನ ಕರ್ತವ್ಯದಲ್ಲಿ ನನಗೆ ಸಂತಸವಿದೆ. ನಂಜುಂಡಯ್ಯನವರು ತಿಳಿದಂತೆ ನಾನು ನಿರಾಶೆಯಿಂದ ನನ್ನ ವರನ್ನು ಸೇರಿಲ್ಲ. ಪೂರ್ಣ ಆಶೆಯಿಂದ ಅಡಿಯಿಟ್ಟಿದ್ದೇನೆ. ತಾವು ನನ್ನನ್ನು ಒಳ್ಳೆ ಬೆಳಕಿನಲ್ಲಿ ವಿಮರ್ಶಿಸಬೇಕು."

"ನಿಮ್ಮ ಮನಸ್ಸಿನ ಪರಿವರ್ತನೆ ದೇಶದ ನಿಜವಾದ ಪರಿವರ್ತನೆಯ ಕಾಲದಲ್ಲಿ ಆಗುವದು ಸಹಜ, ಅತ್ಯವಶ್ಯ. ಹಳ್ಳಿಗಳು ತರುಣರನ್ನು ಕರೆಯುವದು ಸತ್ಯವಾಗಿ ಯೋಗ್ಯ. ಆದರೆ ಹಳ್ಳಿಯ ಮುಗ್ಧಲುತನದಲ್ಲಿ ಭಾಗಿಗಳಾಗಲೆಂದಲ್ಲ. ಅಲ್ಲಿ ಹೊಸ ಬೆಳಕು ನೀಡಲೆಂದು. ಹಳ್ಳಿಗೆ ತರುಣರು ತಂಡತಂಡವಾಗಿ ಪೂರ್ಣ ಜಾಗತಿಕ ಬೆಳಕಿನಿಂದ ಹೋಗಬೇಕು ಇಂದು ಕನಸು ಎಷ್ಟು ಅಸಹಜವೋ ಅಷ್ಟೆ ಅಸಹಜ ಅಡ್ಡದಾರಿಯಲ್ಲಿ ಅಪವ್ಯಯ ಮಾಡಿದ ಮನುಷ್ಯ ಶಕ್ತಿ. ನನಗೆ ನಿಮ್ಮಲ್ಲಿ ವ್ಯಾವಹಾರಿಕ ದೃಷ್ಟಿ ಕಂಡುಬಂದದ್ದರಿಂದ ಇನ್ನಷ್ಟು ಹದಗೊಳಿಸಲೆಂದು ಈ ನನ್ನ ಮಾತುಗಳು. ಇಲ್ಲಿ ನನ್ನನ್ನು ಸ್ನೇಹಿತನೆಂದು ಭಾವಿಸಿರಿ. ಅಲೌಕಿಕ ಗುರುವು ನಾನಲ್ಲ."

ಮಹನೀಯರ ಅಪ್ಪಣೆ ಪಡೆದು ಪ್ರಸಾದನು ಮುಂದಿನ ಅತಿಥಿಸತ್ಕಾರಕ್ಕೆ ಹೋದನು. ಸಕಾಲದಲ್ಲಿ ಸಾವಳಿಗಯ್ಯನವರೂ ಮೃದಂಗ ಪ್ರಿಯರೂ ಹುಬ್ಬಳ್ಳಿಯ ಗುರುಗಳೂ ಆಗಮಿಸಿ ಚಂದ್ರಕಾಂತನ ಹರ್ಷವನ್ನು ಉಕ್ಕಿಸಿದರು. ಸಂಗೀತ ಕಾರ್ಯಕ್ರಮ ಕಳೆದುಂಬದೆ ? ಕಾರ್ಯಕ್ರಮದ ನಂತರ ಪ್ರಸಾದನಿಗೆ ಮಾವನೂ ಗುರುಗಳೂ ಬಂದ ವಿಶಿಷ್ಟ ಉದ್ದೇಶವೂ ಹೊಳೆಯಿತು : "ಪ್ರಸಾದ! ನಿನ್ನವರು ನಿನ್ನ ಇತ್ತೀಚಿನಂಥ ತ್ಯಾಗಶೀಲ ಸೇವೆಯನ್ನು ಬಯಸುವದಿಲ್ಲ. ನಿನ್ನ ಜೀವನದ ಹೆಚ್ಚಳ ಅನ್ಯರಿಗೂ ಹೆಚ್ಚಳವಾಗುವದೆಂದು ನಿನ್ನ ವಿವೇಕ ಪ್ರಮಾಣವಾಗಿದೆ. ಕಂಡರಿತ ನಿನ್ನವರ ಪರವಾಗಿ ನಾನು ಗುರುವಿನ ಅಧಿಕಾರವಾಣಿಯಿಂದ ಹೇಳುವೆನು ನಿನ್ನ ಕುಶಾಗ್ರತನದ ದೃಷ್ಟಿಯಿಂದ ಈ ನೇಗಿಲು ಯೋಗವು ಬುದ್ಧಿಯ ಅಪವ್ಯಯ. ಒಂದು ಸಮಯ, ನೀನು ಹಳ್ಳಿಯಲ್ಲಿಯೇ ನಿನ್ನ ಸರ್ವಸ್ವವನ್ನೆಲ್ಲ ಅರ್ಪಿಸಿ ಕೃತಾರ್ಥನಾಗುವ ಚಿಂತನೆಯಲ್ಲಿದ್ದರೆ, ನಿನ್ನ ಶಿಕ್ಷಣದ ಮಟ್ಟದ ಮೇಲಿಂದ ನೀನು ಕೈಕೊಳ್ಳುವ ಕಾರ್ಯದ

ಕ್ಷೇತ್ರ ವಿಶಾಲವಾದದ್ದಿರಬೇಕಲ್ಲವೆ ? ಅದಕ್ಕೆ ಸಮಾಜದ ಗಣ್ಯ ಸಹಾನುಭೂತಿ ಬೇಡವೆ ? ಅಂತೆಯೆ ಅನ್ನುವೆವು. ಹೊರಗೆ ಬಾ : ಜಗತ್ತಿನ ಬೆಳ್ಳಂಬೆಳಕಿನಲ್ಲಿ ನಿಲ್ಲು ಎಂದು. ನೀನೊಬ್ಬನೆ ಆ ಮಹಾ ಸಾಹಸಕ್ಕೆ ಕೈ ಹಾಕಬೇಡ. ನಾನಿರುವೆನು. ನಂಜುಂಡಯ್ಯನವರಿಲ್ಲವೆ ? ಚಂದ್ರಕಾಂತ ಚೆನ್ನಮಲ್ಲಪ್ಪನವರಂಥ ಕಲಾವಿದರಿಲ್ಲವೆ ? ನಾವೆಲ್ಲರೂ ಗ್ರಾಮಜೀವನದ ದ್ವೇಷಿಗಳೇ ? ನಾವೂ ದೇಶದ ಏಳಿಗಾಗಿ ದುಡಿಯಲು ಉತ್ಸುಕರಾಗಬಾರದೆ ? ಹಿರಿಯರು ಸನ್ಯಾಸಿಗಳಾಗಿ ಬರುವೆವು. ತರುಣರು ಯೋಧರಾಗಿ ದುಡಿಯಿರಿ. ಈ ನಿನ್ನ ಅಕಾಲಿಕ ಏಕಾಕಿಯಾದ ತ್ಯಾಗ ನಮ್ಮೆಲ್ಲರಿಗೆ ನೋವು ಮಾಡಿದೆ. ನಂಜುಂಡಯ್ಯನವರ ಸಲಹೆಯನ್ನು ವಿಚಾರಿಸಿ ನೋಡು ".

" ನನ್ನ ಅಂತರಂಗದ ಗುರುಗಳಿಗೆ ನನ್ನ ಭಾವನೆಗಳು ಪೂರ್ಣ ತಿಳಿದಿವೆ. ಈ ಒಂದು ವರ್ಷ ನಾನು ಯಾವ ತ್ಯಾಗಶೀಲ ಮನೋಭೂಮಿಕೆಯಿಂದ ದುಡಿದಿಲ್ಲ. ನನ್ನ ಜನತೆಯ ಮನೋಭಾವವನ್ನು ತಿಳಿಯಲು ಬೆರೆತು ಕಣ್ಣಿಟ್ಟು ದುಡಿದಿರುವೆನು. ನನಗೆ ಆನಂದ ದೊರೆತಿದೆ. ಭರವಸೆ ಅಂಕುರಿಸಿದೆ. ಇನ್ನೂ ನಾನು ಯಾವ ನಿರ್ದಿಷ್ಟ ವಿಶಿಷ್ಟ ಕಾರ್ಯದ ರೂಪರೇಷೆಯನ್ನು ಸಿದ್ಧಗೊಳಿಸಿಲ್ಲ. ಅತ್ಯಂತ ವ್ಯಾವಹಾರಿಕ ದೃಷ್ಟಿಯಿಂದ ನನ್ನ ಆದರ್ಶವನ್ನು ಕಟ್ಟಲಿದ್ದೇನೆ. ಆ ಕನಸು ನಮ್ಮ ನಿತ್ಯ ವ್ಯಾಪಾರದ ದಿಗಂತದ ಅಂಚಿನಲ್ಲಿಯೇ ಉದಿಸಲೆಂದು ನಾನು ನನ್ನವರ ನೇಗಿಲ ಯೋಗಕ್ಕೆ ಮನಸ್ಸು ಹಾಕಿರುವೆನು. ಇದನ್ನರಿತು ನಂಜುಂಡಯ್ಯನವರು ತಮ್ಮ ಸಲಹೆಯನ್ನು ನೀಡಲಿ.''

'' ಪ್ರಸಾದ ! ನೀನು ನನ್ನನ್ನು ಸ್ನೇಹಿತನೆಂದು ಭಾವಿಸುವ ವರೆಗೆ ನನ್ನ ಸಲಹೆಯೆಲ್ಲ ಡಾಂಭಿಕ. ಚಂದ್ರಕಾಂತನ ಮಾವಂದಿರ ಸೂಚನೆಯಂತೆ ನೀನು ೨-೩ ತಿಂಗಳು ಸಾತಾರೆಯಲ್ಲಿ ಜನಗಣನೆಯ ಕಾರ್ಯದ ಮೇಲಧಿಕಾರಿಯಾಗಿ ಅಲ್ಲಿಯ ಕಲೆಕ್ಟರರ ಕೈಕೆಳಗೆ ದುಡಿಯಬೇಕು. ನೀನು ಇದೇ ತಿಂಗಳ ೧೨ನೆಯ ದಿನ ಗುರುವಾರ ಅಲ್ಲಿರಬೇಕು. ನಿನ್ನ ಅಭಿಪ್ರಾಯವೇನು ?"

" ತಡಮಾಡಲು ದಿನಗಳುಳಿದಿಲ್ಲವಷ್ಟೆ ? ನಮ್ಮ ಅಜ್ಜ-ಮುದ್ದಣ್ಣರ ಪ್ರತಿನಿಧಿಯಾಗಿ ಪೂರ್ವಸಿದ್ಧತೆಯಿಂದ ಬಂದ ನಮ್ಮ ಮಾವನು ಒಪ್ಪಿದರೆ ನಾನು ಎಲ್ಲಿಯಾದರೂ ದುಡಿಯಲು ಸಿದ್ಧನು.''

ಸಾವಳಿಗಯ್ಯನವರು ಮುಗುಳ್ನಗೆಯ ಸಮ್ಮತಿಯಿತ್ತರು. ಪ್ರಸಾದನು "ಚಂದ್ರಕಾಂತ! ಮನ್ನಿಸು. ನಾನು ಈ ರಾತ್ರಿ ರಾಣಿಬಿದನೂರಿಗೆ ಹೊರಡುವೆನು" ಎಂದನು. "ಹಾಂ!" ಎಂದರು ಎಲ್ಲರು. "ಹಾಂ! ನಾಡದು ಪೂನಾ ಮೇಲಿನ ಸಮಯದಲ್ಲಿ ನಿಲ್ದಾಣದಲ್ಲಿದ್ದರೆ ನಿಮ್ಮನ್ನು ಕಾಣುವೆನು" ಎಂದು ಹೇಳಿ ನಕ್ಕನು. ಬಳಗದ ಅಚ್ಚರಿ ಕಣ್ಣುಗಳಲ್ಲಿ ಕರುಣೆಯನ್ನು ಅರಳಿಸಿತು.

ಮಂಗಳವಾರ ಮಧ್ಯಾಹ್ನ ಕಣದ ಮನೆಯಲ್ಲಿ ಅಳಿಯನೊಂದಿಗೆ ಪ್ರಸಾದನು ಮಲಗಿದ್ದನು. ತನ್ನ ನಾಲ್ವರು ಬದಿಯಲ್ಲಿ ಕುಳಿತು ಮಾತಾಡುತ್ತಿದ್ದುದು ಸವಿಗನಸಿನಲ್ಲಿ ಅವನಿಗೆ ಒಂದು ಇಂಪು ಗೀತವಾಗಿತ್ತು. ಮರುದಿನ ನಸುಕಿನಲ್ಲಿ ಎಲ್ಲರನ್ನೂ ಬೀಳ್ಕೊಂಡು ಮಾದಕ್ಕನ ಉಪಹಾರದ ಕರಡಿಗೆಯ ಪ್ರತಿಫಲವಾಗಿ ಶರಚ್ಚಂದ್ರನಿಗೆ ಮುದ್ದಿಟ್ಟು ತನ್ನ ಭವಿತವ್ಯದ ಹಾದಿಯನ್ನು ಪ್ರಸಾದನು ಹಿಡಿದನು.

ಧಾರವಾಡ ನಿಲ್ದಾಣದ ಮೂರು ನಾಲ್ಕು ನಿಮಿಷಗಳು ರಸನಿಮಿಷಗಳು. "ಅತ್ತಿಗೆಯವರೆ! ಸಿತಾರೆಯನ್ನು ಸಾತಾರೆಗೆ ನನ್ನೊಡನೆ ಕಳುಹಬೇಕಿತ್ತು. ಚಂದ್ರಕಾಂತ ಅದರೊಡನೆ ಕುಳಿತು ನಿಮ್ಮನ್ನು ಮರೆಯಬಹುದು" ಎಂದು ಅತ್ತಿಗೆಯವರನ್ನು ಅರಳಿಸಿದನು. "ನನ್ನ ಅತ್ತಿಗೆ ಅದೆಂದು ಬರುವಳೊ ನಾನರಿಯೆ ಪ್ರಸಾದ! ಅದಾವ ಹೊಂಗನಸಿನ ತುರೀಯ ತೆರೆಯನೇರಿ ಬರ್ಪಳೋ ನಿನ್ನ ಆ ಮನೋಮತ್ಸ್ಯಕನ್ಯೆ! ನಾನರಿಯೆ. ಅದೆಂದು ಆ ತೆರೆ ನಿನ್ನನ್ನು ತುಷಾರಗಳಿಂದ ಕಣ್ಣು ಬಿಡಿಸುವದೋ!"

"ಚಂದ್ರಕಾಂತ! ಅತ್ಯುತ್ತಮ. ಅಕ್ಷತೆಯ ಸಹವಾಸದಿಂದ ಮೂಕ ಬೆರಳುಗಳಿಗೆ ನಾಕದ ನುಡಿ ಬಂದಿತು." ಪ್ರಸಾದ ಗೆಳೆಯನನ್ನು ತಬ್ಬಿಟ್ಟು ಎಲ್ಲರಿಗೂ ನಮಸ್ಕರಿಸಿ ಗಾಡಿಯನ್ನು ಹತ್ತಿ ಕಿಡಿಕಿಯಲ್ಲಿ ಮುಖವಿಡುತ್ತಿದ್ದನು. "ಸಾತಾರೆಯಿಂದ ವಿಳಾಸವನ್ನು ತಿಳಿಸಿರಿ." ಕಿವಿಯಲ್ಲಿ ಮೆಲ್ನುಡಿ. ಹೊರಳಿದನು. ಅರಗಳಿ–ಮರಗಳಿ. ಅಪರ್ಣೆ ನಾನಲ್ಲ ಅವಳು ಎನ್ನುವಂತೆ ಸೂಚಿಸಿ ಇಂದ್ರಾಣಿಯನ್ನು ನೋಡಿದಳು. ಅಪರ್ಣೆಯನ್ನು ಕರೆದು ಕಿವಿಯಲ್ಲಿ "ಅವಳೇ ಕೇಳಲಿ" ಎಂದನು. ಸಂದೇಶ ಇಂದ್ರಾಣಿಗೆ ತಲುಪಿ "ಹೂಂ!" ಎಂದು ಅರೆಮುನಿಸಿನ ಶಿರವನ್ನಲ್ಲಾಡಿಸಿ ಚಿಕ್ಕಪ್ಪನನ್ನು ಆಶ್ರಯಿಸಿದಳು. ಗಾಡಿಕೂಗಿತು.

"ನಂಜುಂಡಯ್ಯನವರೆ! ಸಾತಾರೆಯಿಂದ ಪತ್ರ ಬರೆಯುವೆನು. ಉತ್ತರ ಬರೆಯಿರಿ." "ಒಳ್ಳೇದು." "ನಾವು ಮಹಾಬಳೇಶ್ವರಕ್ಕೆ ಹೊರಡುವ ಎರಡು ದಿನ ಮುನ್ನ ಪತ್ರ ಹಾಕುವೆನು." "ಆಗಲಿ ಚಂದೂ." ಪ್ರಸಾದ ಪುನಃ ಎಲ್ಲರಿಗೂ ನಮಸ್ಕರಿಸಿದನು. ಎಲ್ಲರ ಹಿಂದೆ ನಿಂತು ಮೂಕ ಅಭಿನಯದಿಂದ ಶರಣು ಶರಣಾರ್ತಿಯ ಪರಿಹಾಸ್ಯವನ್ನು ಮಾಡುತ್ತಿದ್ದ ಇಂದ್ರಾಣಿಯನ್ನು ಕಂಡು ನಗುತ್ತ ಅವಳಿಗೆ ದೊಡ್ಡದಾಗಿ ನಮಸ್ಕಾರ ಮಾಡಿ ಪ್ರಸಾದನು ಗಾಡಿಯ ಹೊರಳಿಕೆಯಲ್ಲಿ ಮರೆಯಾದನು.

ಸಾತಾರೆಯ ಕಾರ್ಯಾರಂಭದ ಮರುದಿನವೇ ಪ್ರಸಾದನಿಗೆ ಚಂದ್ರಕಾಂತ ನಿಂದ ಪತ್ರ ಬಂದಿತು. ಮದುವೆಯ ಸಂಭ್ರಮದ ದಣಿವಿನಿಂದ ಚಂದ್ರ ಕಾಂತನ ತಾಯಿಯವರು ಅಸ್ವಸ್ಥರಾದುದರಿಂದ ತಮ್ಮ ಮಹಾಬಳೇಶ್ವರದ ಕಾರ್ಯಕ್ರಮವನ್ನು ಅವರ ಮನಸ್ಸು ಮುರಿದಿತ್ತು. ಪ್ರಸಾದ ಅಂದೇ ಪತ್ರ ಬರೆದು ತನ್ನ ಹೃದಯವನ್ನು ತೋಡಿಕೊಂಡನು.

ಒಂದು ವಾರದೊಳಗಾಗಿಯೇ ಯುರೋಪಿಯನ್ ಕಲೆಕ್ಟರರು ಪ್ರಸಾದನ ಕರ್ತವ್ಯ ದಕ್ಷತೆ, ಅಚ್ಚುಕಟ್ಟುತನ, ಅವನ ಓರಣ ಇವುಗಳಿಗೆ ಮೆಚ್ಚಿ ಅವನನ್ನು ತಮ್ಮ ಮನೆಗೆ ಕರೆದಿದ್ದರು. ಪ್ರಸಾದನ ದಿಟ್ಟತನ, ವಿವೇಕಪೂರ್ಣ ದೇಶ ಪ್ರೇಮ, ಜಾಗತಿಕ ಬದಲಾವಣೆಯ ಕಡೆಗಿದ್ದ ತಿಳಿನೋಟ ಇವೆಲ್ಲವೂ ಅವರನ್ನು ಚಕಿತಗೊಳಿಸಿದ್ದವು. ಅವನ ದೇಹ ಸಂಪತ್ತಿಯನ್ನು ಕಂಡು ತಮ್ಮ ಸ್ವಂತ ಕುದುರೆಯ ಸವಾರಿಗೆ ಅನುಮತಿಯನ್ನಿತ್ತು, ಸಾಯಂಕಾಲ ಅದನ್ನು ಎರಡು ತಾಸು ಅವನಿಗೆ ಮೀಸಲಿರಿಸಿದರು. ಜೂನ್ ೩ನೆಯ ದಿನ ಅವರ ಅಧಿಕಾರವು ಬದಿಗಾಗಿ ಪರಸ್ಪರ ಸ್ನೇಹಕ್ಕೆ ದಾರಿ ಮಾಡಿತು. ಎರಡು ದಿನ ಮುನ್ನವೇ ತಮ್ಮ ಬಳಕೆಯ ಸಿಂಪಿಗನನ್ನು ಕರೆಯಿಸಿ, ಪ್ರಸಾದನ ಮೈ ಅಳತೆ ಕೊಡಿಸಿ, ಖಾಕಿ ಬಟ್ಟೆಯಲ್ಲಿ ತಮ್ಮಂತೆ ಅವನಿಗಾಗಿ ಕುದುರೆಯ ಸವಾರಿಯ ಉಡುಪು ಸಿದ್ಧಪಡಿಸಿದ್ದರು. ೩ನೆಯ ಮುಂಜಾನೆ ಈರ್ವರೂ ಕುದುರೆಗಳ ಮೇಲೆ ಕುಳಿತು ಅಂದವಾದ ಭಂಗಿಯಲ್ಲಿ ಭಾವಚಿತ್ರವನ್ನು ತೆಗೆಯಿಸಿದರು. ನಾಲ್ಕು ಪ್ರತಿಗಳನ್ನು ತರಿಸಿ ಅವುಗಳ ಮೇಲೆ ಈರ್ವರೂ ಜೋಡು ಹಸ್ತಾಕ್ಷರ ಗಳನ್ನು ಹಾಕಿದರು. ಅದು ಮುಗಿದ ನಂತರವೆ ಕಲೆಕ್ಟರರು ತಾವು ಸೈನ್ಯಾಧಿ ಕಾರಿಯಾಗಿ ಡೆಹರಾಡೂನಕ್ಕೆ ತೆರಳುವದನ್ನು ತಿಳಿಸಿದರು. ಆಗಲೆ ಪ್ರಸಾದನು

ತನ್ನ ಜೇಬಿನೊಳಗಿದ್ದ ಗೆಳೆಯ ಚಂದ್ರಕಾಂತನ ಕಂತಿಯನ್ನು ಸಾಹೇಬರಿಗೆ ತೋರಿಸಿದನು. "You are master of moods, Mr. Prasad!" ಎಂದರು. ತನ್ನ ಕಾರ್ಯದಿಂದ ಬಿಡುಗಡೆಯಾಗಿ ಗೆಳೆಯನ ನೆರವಿಗೆ ಹೋಗ್ಯ ವದಾಗಿ ಪ್ರಸಾದನು ತಿಳಿಸಿದನು. ಚಂದ್ರಕಾಂತನ ತಾಯಿ ಹಾಸಿಗೆ ಹಿಡಿದುದು ಪ್ರಸಾದನಿಗೆ ಹುಚ್ಚು ಹಿಡಿಸಿತ್ತು. ನವದಂಪತಿಗಳು ಎಳೆವಯಸ್ಸಿನಲ್ಲಿ ಆ ರುದ್ರ ದೃಶ್ಯವನ್ನು ಸಹಿಸುವದೆಂತು ?

ಜುಲೈ ಮೊದಲನೆಯ ದಿನವೇ ಕಲೆಕ್ಟರರು ಪ್ರಸಾದನನ್ನು ತಮ್ಮ ದಿವಾಣಖಾನೆಯಲ್ಲಿ ಕುಳ್ಳಿರಿಸಿಕೊಂಡು, ತಮ್ಮ ಸಮ್ಮುಖದಲ್ಲಿಯೆ ಅವನ ಹದಿನೆಂಟು ದಿನಗಳ ಸಂಬಳವನ್ನು ತರಿಸಿ ಕೊಡಿಸಿದರು. ತಮ್ಮ ಮೋಟಾರಿನಲ್ಲಿಯೇ ಸಾತಾರೆಯ ನಿಲ್ದಾಣಕ್ಕೆ ಆತನನ್ನು ಕರೆದೊಯ್ದರು. ಇಂಟರದಲ್ಲಿ ಸಿಪಾಯಿಯು ಎರಡು ಬುಟ್ಟಿಗಳನ್ನೂ ಪ್ರಸಾದನ ಸಾಮಾನುಗಳನ್ನೂ ಇರಿಸಿದನು. ಕಲೆಕ್ಟರರು ಪ್ರಸಾದನ ಕೈಯಲ್ಲಿ ಒಂದು ತಮ್ಮ ದೀರ್ಘ ಪ್ರಶಸ್ತಿ ಪತ್ರವನ್ನು ಕೊಟ್ಟರು. ಪ್ರಸಾದನು ಸಾಹೇಬರಿಗೆ ಬಾರಿಬಾರಿಗೆ ತಮ್ಮ ವಿಳಾಸದೊಂದಿಗೆ ಪತ್ರ ಬರೆಯಲು ಬಿನ್ನವಿಸಿಕೊಂಡನು. "I have high hopes of you, Mr.Prasad. I will write to you by the by. Bye-Bye!" ಎಂದರು. "I do not know how to thank you, Sir." "Don't you worry, my young friend!" ಎಂದು ಸಾಹೇಬರು ಪ್ರಸಾದನನ್ನು ಗಾಢವಾಗಿ ಆಲಿಂಗಿಸಿ ಅವರ ಪತ್ನಿಯವರ ಕೈಯಲ್ಲಿದ್ದ ಭಾವಚಿತ್ರದ ಎರಡು ಪ್ರತಿಗಳನ್ನು ಕೊಡಿಸಿದರು. ಮುಗುಳ್ನಗೆಯಿಂದ ಪ್ರಸಾದನು ಬಿಳಿ ಹೆಂಗಳೆಯ ಹಸ್ತಾಂದೋಲನವನ್ನು ಮಾಡಿ ಗಾಡಿಯನ್ನು ಹತ್ತಿದನು. ಅದೇ ಗಾಡಿಯಲ್ಲಿ ಕುಳಿತು ಈ ದೃಶ್ಯವನ್ನೇ ನೋಡುತ್ತಿದ್ದ ನಗಮೊಗದ ಒರ್ವ ಸುಸಂಸ್ಕೃತ ತರುಣಿಯನ್ನು ನೋಡಿ ಸಾಹೇಬರ ಪತ್ನಿಯು "How far?" ಎಂದರು. "Up to Dharwar." "Thank you!" ತರುಣಿ ನುಡಿದಳು. ಬಿಳಿ ಹೆಂಗಳೆ "Don't mention" ಎನ್ನುತ್ತಲೆ ಗಾಡಿ ಮುಂದುವರಿಯಲು ಕರವಸ್ತ್ರಗಳ ಬೀಸಾಟವು ಗಾರ್ಡನ ನಿಶಾನಿಯನ್ನು ನಾಚಿಸಿತು.

ಕಿಡಿಕಿಯಲ್ಲಿ ಮುಖವಿಟ್ಟು ನಿಂತ ಪ್ರಸಾದನ ಜೇಬಿನೊಳಗಿದ್ದ ಕನ್ನಡ

ಕಾದಂಬರಿಯನ್ನು ಗುರುತಿಸಿ ತರುಣಿಯು ಅವನನ್ನು "ಪ್ರಸಾದ! ತಾವೂ ಕನ್ನಡಿಗರೆ?'' ಎಂದು ಕೆಣಕಿದಳು. "ಅಹುದು. ನೀವು ಧಾರವಾಡಕ್ಕಲ್ಲವೆ ಬರುವದು? 'ನಾನೂ' ಕನ್ನಡಿಗನೆಂದಮೇಲೆ ಧಾರವಾಡದಲ್ಲಿ ನಾಲ್ಕು ವರ್ಷಗಳಿದ್ದರೂ ನಿಮ್ಮನ್ನು ಕಂಡಿಲ್ಲವಲ್ಲ. ಇದಲ್ಲದೆ ನನ್ನ ನಾಡು, ನುಡಿ, ನಾಮ ವೈಶಿಷ್ಟ್ಯದ ಗುರುತನ್ನು ತಾವು ಯಾವ ದಾರಿಯಿಂದ ಪಡೆದಿರಿ?" ಎಂದು ಪ್ರಸಾದನು ಅಲ್ಲಿ ಗುರುತುಕೊಟ್ಟ ವಸ್ತುಗಳಿಗಾಗಿ ಸುತ್ತು ನೋಡಿದನು. "ನಿಮ್ಮ ಜೇಬಿನಲ್ಲಿರುವ ಗ್ರಂಥ, ನಿಮ್ಮ ಯುರೋಪಿಯನ್ ಸ್ನೇಹಿತರ ಸಂಬೋಧನೆಯ ನೆನಪು ತಮಗಿಲ್ಲವೆ?" "ಓಹೋ! ಬಹು ಸೂಕ್ಷ್ಮಗ್ರಾಹಿಗಳು" ಎಂದು ಪ್ರಸಾದನು ಆವಳೆದುರು ಕುಳಿತನು.

ಆವಳಿನ್ನೂ ಇವನನ್ನು ಅಳೆಯುತ್ತಿದ್ದಳು. "ನಿಮಗೆ ಇನ್ನೂ ಏನಾದರೂ ಸಂಶಯ ನಿವಾರಣೆಯಾಗುವದಿದೆಯೋ ನನ್ನಿಂದ?" ಎಂದು ಕೇಳಿದನು. ಒಮ್ಮೆ ಈ ಅನವಶ್ಯ ಮಾತುಕತೆಯಿಂದ ಪಾರಾಗಿ ತನ್ನವರ ಚಿಂತನೆಯಲ್ಲಿ ಆವನಿಗೆ ಹುದುಗಬೇಕಿತ್ತು.

"ಅಂಥದು ಏನೂ ಇಲ್ಲ. ಕೇವಲ ಕುತೂಹಲ. ನಮ್ಮ ಚಿಕ್ಕಪ್ಪನವರು ನಾನು ಅಲ್ಲಿಗೆ ಹೋದಂದಿನಿಂದ ಉತ್ತಮ ಸಂಗೀತಪಟುಗಳಿದ್ದ ತಮ್ಮ ಸ್ನೇಹಿತರೊಬ್ಬರನ್ನು ಕುರಿತು ಪುನಃ ಪುನಃ ಪತ್ರದಲ್ಲಿ ಬರೆಯುತ್ತಿದ್ದರು. ಅವರ ಸ್ನೇಹಿತರ ಹೆಸರು ಶಿವಪ್ರಸಾದ. ಅವರೂ ನಿಮ್ಮಂತೆ ಬಲಾಢ್ಯರಾಗಿರುವರೆಂದು ಬರೆದಿರುವರು. ನಿಮ್ಮ ಹೆಸರು 'ಪ್ರಸಾದ.' ಎಂದುದೂ, ನೀವೂ ಧಾರವಾಡಕ್ಕೆ ಹೊರಟಿರುವದೂ, ಇತ್ತೀಚಿನ ಪತ್ರದಲ್ಲಿ 'ಶಿವಪ್ರಸಾದ'ರು ಧಾರವಾಡವನ್ನು ಬಿಟ್ಟಿರುವರೆಂಬುವದೂ, ನಾನು ತಮ್ಮನ್ನು ಇಷ್ಟು ತೊಂದರೆಗೆ ಈಡುಮಾಡುವಂತೆ ಹಚ್ಚಿರುವವು. ಕ್ಷಮಿಸಿರಿ." ವಿಸ್ಮಯ. ವಿಸ್ಮಯ. "ನಿಮ್ಮ ಚಿಕ್ಕಪ್ಪನವರು ನಂಜುಂಡಯ್ಯನವರು ನಂದೀಮಠ ಏನು? ನೀವು ಇಂದ್ರಾಣಿಯ ಅಕ್ಕಂದಿರೇನು?" ಪ್ರಸಾದನು ಉತ್ತರಕ್ಕೆ ಆತುರನಾದನು.

"Yes and no Mr. Shiva Prasad! shake hands!" ಎಂದು ಅವಳೇ ಇವನ ವಿಸ್ಮಯ ಮೂಕ ಕರಗಳನ್ನು ಕುಲುಕಿದಳು "ರಹಸ್ಯದ ಮೇಲೆ ರಹಸ್ಯ. ಆ ನಿಮ್ಮ ಚಿಕ್ಕಪ್ಪನವರು ಬಹಳ ವಿಚಿತ್ರಕಾರಸ್ಥಾನಿ

ಗಳು. ಸಿಗಲಿ ಅವರು. ಈ ಸಾರೆ. ನನಗೊಂದು ದಿನ ತಮ್ಮ ಕಲೋಪಾಸ ನೆಯ ರಹಸ್ಯವನ್ನು ಹೇಳುವೆವೆಂದಿರುವರು. ಅದನ್ನು ಬಯಲಿಗೆಳೆಯುವೆನು. ನೀವು ಬರುವದು ಅವರಿಗೆ ತಿಳಿದಿದೆಯೋ ? '' ಪ್ರಸಾದ ಹಸನ್ಮುಖ ದಲ್ಲಿದ್ದನು.

" ತಿಳಿದಿದೆ. ಶಾಂತಿನಿಕೇತನದಿಂದ ಈ ಮಾರ್ಗವಾಗಿ ಬರುವೆನೆಂದು ತಂತಿಯನ್ನು ಕಳಿಸಿದ್ದೇನೆ. ನನಗಾಗಿ ಅವರು ನಿಲ್ದಾಣದಲ್ಲಿ ಕಾಯ್ದಿರುವರು."
'' ಶಾಂತಿನಿಕೇತನ ? ನಿಮ್ಮ ಚಿಕ್ಕಪ್ಪನವರ ಕಲೋಪಾಸನೆಯ ಒಗಟು ಇಲ್ಲಿಯೇ ಬಿಚ್ಚಿತು. ಬಿಡಿರಿ. ಅಲ್ಲಿ ನೀವು ಯಾವ ಕಲೆಯನ್ನು ಅಭ್ಯಾಸಿ ಸಿರುವಿರಿ ? '' '' ನೃತ್ಯವನ್ನು ಪ್ರಾಧಾನ್ಯವಾಗಿರಿಸಿಕೊಂಡು ತೂರ್ಯತ್ರಯ ಗಳನ್ನು ಅಭ್ಯಾಸಿಸಿರುವೆನು."

" ಭಾಗ್ಯಶಾಲಿಗಳು. ಪುಣ್ಯಕ್ಷೇತ್ರಕ್ಕೆ ಹೋಗಿ ಬಂದವರನ್ನು ನನ್ನ ಹಳ್ಳಿಯಲ್ಲಿ ಆದರಿಸುವಂತೆ ನಾವು ನಿಮ್ಮನ್ನು ಸತ್ಕರಿಸಬಹುದಾಗಿತ್ತು. ಆದರೆ ನನ್ನ ಗೆಳೆಯನ ತಾಯಿ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾಳೆ.''

'' ನನ್ನ ಆದರವಿರಲಿ. ನಿಮ್ಮ ಚಿಂತೆಯನ್ನು ಬಿಡಿರಿ. ನಮ್ಮ ಚಿಕ್ಕಪ್ಪ ಅಲ್ಲಿರುವಾಗ ಉಳಿದ ನಾವು ನೀವು ಹೆಚ್ಚಿನದೇನು ಮಾಡುವದು ? ಅವರ ತಾಯಿಯವರಿಗೆ ಗುಣಮುಖವಾಗಿರಲೇಬೇಕು. ವ್ಯರ್ಥ ಚಿಂತೆಯನ್ನು ಬಿಟ್ಟು, ಸಮಕ್ಷ ಕಂಡು ಆರೈಕೆಯ ಕಾರ್ಯಕ್ಕೆ ಹತ್ತುವ ತನಕ, ಪರಸ್ಪರ ಪರಿಚಯದ ಸಂತಸದಲ್ಲಿರಬಾರದೇಕೆ?''

ಪ್ರಸಾದನು ತನ್ನ ಹಾಗೂ ತನ್ನವರ ಪರಿಚಯವನ್ನೂ ನಡೆದ ಮಹತ್ವದ ಘಟನೆಗಳನ್ನೂ ವಿವರಿಸಿದನು. ಅವಳು ತನ್ನ ಪರಿಚಯವನ್ನಾರಂಭಿಸಿದಳು : '' ನನ್ನ ಹಳ್ಳಿ ಕಾರವಾರದ ಸಮೀಪದಲ್ಲಿರುವ ಕದ್ರಾ. ನಾನು ನಾಲ್ಕು ವರ್ಷ ದವಳಿದ್ದಾಗ ನನ್ನ ತಾಯಿ ತೀರಿಕೊಂಡಳಂತೆ. ನನ್ನನ್ನು ನನ್ನ ಹಿರಿಯ ಅಣ್ಣ ಅಕ್ಕರೆಯಿಂದ ಪಾಲನೆ ಮಾಡಿದ್ದನು. ಒಂದು ದಿನ ನಮ್ಮ ಉತ್ಸವದಲ್ಲಿ ನಮ್ಮ ಅಣ್ಣನ ಕೊಳಲಿನೊಂದಿಗೆ ಅಲ್ಲಿಯ ಪದ್ಧತಿಯಂತೆ ಕುಣಿಯುತ್ತಿದ್ದೆನು. ನಾವು ಮನೆಗೆ ಹೋದಾಗ ಯಾರೋ (ಬೊಂಬಾಯಿನವರು ಇರಬಹುದೆಂದು ನನ್ನಣ್ಣ ಹೇಳಿದನು) ನಮ್ಮ ತಂದೆಯ ಕೂಡ ಮಾತಾಡುತ್ತ ಕುಳಿತಿದ್ದರು. ನಮ್ಮಣ್ಣನಿಗೆ ಒಂದು ಕೆಲಸವನ್ನು ಕೊಡಿಸುವದಾಗಿ ಹೇಳಿ ಅವರು ನನ್ನನ್ನು

ನಮ್ಮ ಅಣ್ಣನ ಬಳಗದೊಂದಿಗೆ ಕಳಿಸಬೇಕೆನ್ನುವ ವಿಚಾರ ನಡಿಸಿದ್ದರು. ಮನೆತನದ ಸೌಕರ್ಯಕ್ಕಾಗಿ ನಮ್ಮ ತಂದೆಯು ಇನ್ನೊಂದು ಮದುವೆಗೆ ಒಪ್ಪಿ ನೂರು ರೂಪಾಯಿಗಳು ಅವನಿಗೆ ಮುಟ್ಟಿದಲ್ಲಿ ನಮ್ಮ ವ್ಯವಸ್ಥೆಯನ್ನು ಹೇಗೆ ಮಾಡಿದರೂ ಸರಿಯೆ ಎಂದು ತಿಳಿಸಿದನು. ಬಂದವರು ಹಿಂದು ಮುಂದು ನೋಡದೆ ತೆರುವದನ್ನೆಲ್ಲ ತೆತ್ತು ನಮ್ಮನ್ನು ಧಾರವಾಡಕ್ಕೆ ಕರೆತಂದರು. ಇಂದ್ರಾಣಿಯ ತಂದೆಯವರ ಕಚೇರಿಯಲ್ಲಿ ನಮ್ಮಣ್ಣನನ್ನು ಸಿಪಾಯಿಯ ಕೆಲಸಕ್ಕೆ ಹಚ್ಚಿದರು. ಚಿಕ್ಕಪ್ಪನವರು ನನ್ನನ್ನು ತಮ್ಮಲ್ಲಿರಿಸಿಕೊಂಡು ಐದು ವರ್ಷ ಅತಿ ಸಾಹಸದಿಂದ ನನಗೆ ಶಿಕ್ಷಣವನ್ನು ಕೊಟ್ಟು ನನ್ನ ಹದಿನೈದನೆಯ ವರ್ಷದಲ್ಲಿ ಶಾಂತಿನಿಕೇತನಕ್ಕೆ ಕಳಿಸಿದರು. ಈ ಐದು ವರ್ಷ ಅವರ ಪತ್ರಗಳ ಹೊರತು ನನಗೆ ಇನ್ನಾವ ಇಲ್ಲಿಯ ಸಂಪರ್ಕವಿಲ್ಲ. ಇಂದ್ರಾಣಿಯ ತಂದೆತಾಯಿಗಳೂ ಇಂದ್ರಾಣಿಯೂ ನನ್ನ ವಿಚಾರದಲ್ಲಿ ಸ್ವಲ್ಪ ನಿರುತ್ಸಾಹವನ್ನು ತಳೆದಿರಬೇಕು. ಅಂತೆಯೇ ಇಂದ್ರಾಣಿ ಉಳಿದವರೆದುರು ನನ್ನ ಪ್ರಸ್ತಾಪವನ್ನೆತ್ತಿಲ್ಲ. ನನಗೆ ನನ್ನ ಚಿಕ್ಕಪ್ಪನವರ ಸಂತಸವನ್ನು ಬಿಟ್ಟು ಉಳಿದ ವಿಚಾರವಾದರೂ ಏಕೆ? ಅವರನ್ನು ಕಾಣಲು ಹೃದಯ ಹಾತೊರೆಯುತಿದೆ. ಅವರು ಮೊದಲಿನಂತೆ ಉಲ್ಹಾಸದಿಂದಿರುವರಷ್ಟೆ ? ''

"ಉಲ್ಹಾಸ ಎಂದಿಗೂ ಅವರ ಸಾಕು ಮಗು." ಪ್ರಸಾದನ ಮಾತಿನಲ್ಲಿಯೇ 'ಮಿರಜ' ಸಿಲ್ದಾಣ ಬಂದಿತು. ಪ್ರಸಾದನು ಸಾಹೇಬರ ಬುಟ್ಟಿಯಿಂದ ಸಾತಾರಾ ಪೇಡೆಯನ್ನು ತೆಗೆದು, " ಬನ್ನಿ .... ಕುಮಾರಿ .... ಹಾಂ ! ನಾವು ಇಲ್ಲಿಯ ವರೆಗೆ ಮಾತು ಬೆಳಸಿದರೂ ನಿಮ್ಮ ಹೆಸರು ಹೊರಬರಲಿಲ್ಲವಲ್ಲ '' ಎಂದನು. " ರಕ್ಷಾ ಪೈಕ.'' " ರಕ್ಷಾದೇವಿ. ಸುಂದರ ನಾಮಕರಣ. ಹಿಡಿಯಿರಿ. ಇದಷ್ಟು ತಿಂದು ಮಲಗಿದರಾಯಿತು. ಗೆಳೆಯರಿಗೆ ಒಂದು ಬುಟ್ಟಿ ಮೀಸಲಿದೆ.'' ತಿಂದು ರಕ್ಷಾದೇವಿಯ ತಿರುಪಿನ ತಂಬಿಗೆಯಿಂದ ನೀರು ಕುಡಿದರು.

" ಬನ್ನಿ ರಕ್ಷಾದೇವಿ. ಸ್ವಲ್ಪ ತಿರುಗಾಡಿ ಮೈ ಹಗುರು ಮಾಡಿಕೊಂಡು ಮಲಗಿದರೆ ಧಾರವಾಡದ ವರೆಗೆ ನಿದ್ರೆಯೇ ನಿದ್ರೆ.'' '' ಆ ದೇವಿಯನ್ನು ಬಿಟ್ಟುಬಿಡಿರಿ. ನಮ್ಮ ಚಿಕ್ಕಪ್ಪನ ಸ್ನೇಹಿತರಿಗೆ 'ರಕ್ಷಾ' ಎನ್ನುವ ಸಲಿಗೆ ಬೇಡವೆ ? " ಎನ್ನುತ್ತ ಹೊರಗೆ ರಕ್ಷಾದೇವಿ ಬಂದಳು. ಸಪ್ತಮಿಯ ಚಂದಿರ

ಬಾನಿನಲ್ಲಿ ನಲಿಯುತ್ತಿದ್ದನು. ಅವಳ ಪಾದ ಭೂಮಿಯನ್ನು ಮುಟ್ಟುವವೋ ಇಲ್ಲವೋ ಎನ್ನುವಂತೆ ಹಗುರವಾಗಿ ನಡೆದು ಬಂದಳು. ಶ್ಯಾಮವರ್ಣದ ಸುಕುಮಾರ ಪ್ರಕೃತಿಯ ಅವಳ ಮುಖದಲ್ಲಿ ಮೇಲ್ತುಟಿಯನ್ನು ಅರೆಮೀರಿದ ಎರಡು ಹಲ್ಲುಗಳು ಅವಳ ಮೌನದಲ್ಲಿಯೂ ನೋಡುಗರಿಗೆ ಹರ್ಷವನ್ನುಂಟು ಮಾಡುತ್ತಿದ್ದವು. ಪ್ರಸಾದನಿಗೆ ಕಾಳಿದಾಸನ 'ಶಿಖರಿ ದಶನಾ' ನೆನಪಾಗ ದಿರಲಿಲ್ಲ. ಆ ಸೊಬಗಿನ ಸವಿಯನ್ನು ಕಣ್ಣುಗಳು ಪುನಃ ಪುನಃ ಕಂಡುಂಡವು. ಭೂಮಿಯೂ ನನ್ನದು ನಭೋಮಂಡಲವೂ ನನ್ನದು ಎನ್ನುವಂತೆ ಅವಳ ನಡಿಗೆಯಿತ್ತು. ಅಡಿಯಿಡುವಾಗ ಭೂಮಿಯನ್ನು ಚುಂಬಿಸುವಂತೆ, ಅಡಿ ಯೆತ್ತುವಾಗ ಆಕಾಶದಲ್ಲಿ ತೇಲುವ ಹವಣಿಕೆಯುಳ್ಳಂತೆ ಅವಳ ಗಮನ ಮಂದಮಿಶ್ರಿತ ಚಪಲತೆಯಿಂದ ಕೂಡಿತ್ತು. ಪ್ರಸಾದನ ಭುಜದ ಹಾರಕ್ಕೆ ಇದ್ದ ಅವಳ ಅಂಗಸೌಷ್ಠವವು ನಿಲುವಿಕೆಗೆ ಮಾಟವಾಗಿತ್ತು. ಗಾಡಿ ಕೂಗಿತು. ಗರ್ರನೆ ಹೊರಳಿ ಗಾಡಿಯನ್ನೇರಿದರು. ಹಾಸಿಗೆಯನ್ನು ಬಿಚ್ಚಿ ಪ್ರಸಾದನು ಅಡ್ಡಾದನು. ಬೆಳ್ದಿಂಗಳಿನ ಶೋಭೆಗೆ ಕಣ್ಣುಗಳು ಭಾರವಾದವು. ನಿದ್ದೆಗಣ್ಣಿ ನಲ್ಲಿಯೇ ಅವಳ ಮಾತಿಗೆ ಏನೋ ಗುಣುಗುಟ್ಟಿ ಸುಮ್ಮನಾದನು. ಗಾಡಿಯು ದಿಕ್ಕು ಬದಲಿಸಿದಾಗ ಸುಳಿಗಾಳಿ ಸುಯ್ಯನೆ ಎರಗಿತು. ರಕ್ಷಾದೇವಿ ಮೆಲ್ಲನೆದ್ದು ಅವನ ರನ್ನಗಂಬಳಿಯನ್ನು ಹೊದಿಸಿದಳು. ತಾಯಿಯಂತೆ ಬಾಗಿ ಮುಖದಲ್ಲಿ ಕಣ್ಣಿಟ್ಟುಕೂದಲುಗಳನ್ನು ಸರಿಪಡಿಸಿದಳು. "ಇರಲಿ ಬಿಡು ರಕ್ಷಾ. ಗಾಳಿ ಮಸ್ತ ಕದಲ್ಲಿ ಸುಳಿದು ನಿದ್ದೆ ತರುವದು. ನೀನೂ ಮಲಗು. ಧಾರವಾಡ ಬರುವದ ರೊಳಗಾಗಿ ಎಚ್ಚರಿಸುವೆನು" ಅವಳ ಮುಂಗೈಯನ್ನು ಬದಿಗಿರಿಸಿ ತನ್ನ ಹಾಸಿಗೆ ಯೊಂದಿಗೆ ಮತ್ತಷ್ಟು ಕೆಳಗೆ ಸರಿದನು. ಅವಳೂ ತನ್ನ ಹಾಸಿಗೆಯನ್ನು ಪೂರ್ಣ ಬಿಚ್ಚಿ ಪ್ರಸಾದನ ಕಡೆಗೆ ತಲೆಮಾಡಿ ಮಲಗಿದಳು. ಗಾಳಿ ಅವಳ ಕೂದಲುಗಳನ್ನೊಯ್ದು ಅವನ ಮುಖವನ್ನು ಮುಚ್ಚಿತು. ಎದ್ದುಕುಳಿತು ತಲೆಗೆ ಕರವಸ್ತ್ರವನ್ನು ಕಟ್ಟಿ ಹೊದ್ದುಕೊಂಡು ಮಲಗಿದಳು. ಸುಳಿಗಾಳಿಯಲ್ಲಿ ಎರಡೂ ಬಿಸಿಯುಸಿರುಗಳು ಶಾಂತವಾಗಿ ನಿದ್ರೆ ಹೋದವು.

"ನಂಜುಂಡಯ್ಯನವರೆ! ಇದೇನು ಆತುರ?" "ಓಹೋ! ಬಂದು ಬಿಟ್ಟಿದ್ದೀಯಲ್ಲ. ಚಂದ್ರನ ತಾಯಿಗೆ ಗುಣಮುಖವಾಗಿದೆ. ಬಾರಪ್ಪಾ ನಿದ್ರೆಹತ್ತಿ ಹಾಗೆ ಮುಂದೆ ಹೋದಾಳು. ನಾನಾಗದೆ ನೀನಾಗಿದ್ದರೆ ತುಂಬಾ ಕೂಗಾಡಿ

ಎಬ್ಬಿಸುತ್ತಿದ್ದೆ. ನೀನರಿಯೆ. ನನ್ನ ಮಗಳು ರಕ್ಷಾ ಶಾಂತಿನಿಕೇತನದಿಂದ ಬರುವ ವಳಿದ್ದಾಳೆ. ತಿಳಿಯಿತೆ ?" "ಯಾರು ? ಏನು ? ಎಲ್ಲಿಂದ ? ಅಹುದಣ್ಣಾ ಅಹುದು. ಒಳ್ಳೆ ಮಂತ್ರಗಾರರ ಸಹವಾಸ. ಆಯಿತು. ಮಂತ್ರಕ್ಕೆ ತಿರು ಮಂತ್ರ. ಬನ್ನಿರಮ್ಮ ಬನ್ನಿ! ಶಾಂತಿನಿಕೇತನದಿಂದ ಬರಲಿರುವ ರಕ್ಷಾದೇವಿ ಬನ್ನಿ." ಪ್ರಸಾದ ಗಾಡಿಯೊಳಗೆ ಕತ್ತಲಿದ್ದ ಮುಂಭಾಗಕ್ಕೆ ಕೈಮಾಡಿದನು. ನಿಜವಾಗಿ ನಂಜುಂಡಯ್ಯನವರ ಕಣ್ಣಿಗೆ ಏನೋ ಸುಳಿಯಿತು. ಮಿಂಚಿನಂತೆ ಹಾರಿ ರಕ್ಷಾ ನಂಜುಂಡಯ್ಯನವರಿಗೆ ತೆಕ್ಕೆಬಿದ್ದು 'ಅಪ್ಪಯ್ಯ!' ಎಂದಳು. ಚಿಕ್ಕಪ್ಪನವರು ಕಕ್ಕಾಬಿಕ್ಕಿಯಾಗಿ ಪ್ರಸಾದನನ್ನು ನೋಡಿ ಅವನ ನಗೆಯಲ್ಲಿ ಒಂದಾದರು. ಮಗಳನ್ನು ಬಿಗಿದಪ್ಪಿದರು. ಬೆಳಕಿಗೆ ಅವಳ ಮುಖವನ್ನೆತ್ತಿ ನೋಡಿದರು. ಅಭಿಮಾನ ಪ್ರೇಮ ಸಂತಸಂಗಳು ಒಂದರ ಹಿಂದೊಂದು ಚಿಕ್ಕಪ್ಪನವರಲ್ಲಿ ಉಕ್ಕಿಬಂದು ಮತ್ತೊಮ್ಮೆ ಬಿಗಿದಪ್ಪುವಂತೆ ಮಾಡಿದವು.

ಮಿಣುಕು ದೀಪಗಳಿಂದ ಕತ್ತಲೆಯನ್ನು ಭೇದಿಸಲು ಹವಣಿಸುತ್ತ
ಕುದುರೆಯಗಾಡಿಗಳು ಮನೆಯ ಹಾದಿ ಹಿಡಿದವು.

## ೧೧

ನಂಜುಂಡಯ್ಯನವರ ಹಸ್ತಗುಣ, ಪ್ರಸಾದನ ನೆರವಿನಿಂದೊಡಗೂಡಿದ ಮಗನ ಆರೈಕೆ, ಸೊಸೆಯ ಅವಿರತ ಸೇವೆ, ಇವೆಲ್ಲ ಚಂದ್ರಕಾಂತನ ತಾಯಿ ಯನ್ನು ಒಂದು ತಿಂಗಳಲ್ಲಿ ಪೂರ್ವದ ಗೆಲುವಿನಿಂದ ಮನೆಯ ಮೇಲ್ನೋಟಕ್ಕೆ ಹಚ್ಚಿದವು. ತಮ್ಮವರ ಬಲುಮೆಗೆ ಮಿತ್ರರು ಎಮ್.ಎ. ಅಭ್ಯಾಸಕ್ಕೆ ಅಣಿ ಯಾದರು. ಬಾರಿಬಾರಿಗೆ ಬರುತ್ತಿದ್ದ ರಕ್ಷಾ-ಚೆನ್ನಮಲ್ಲಪ್ಪನವರ ಕಾರ್ಯ ಕ್ರಮಗಳು ಮಿತ್ರರ ೧೯೪೨ನೆಯ ಅಗಸ್ಟದಿಂದ ೧೯೪೩ನೆಯ ಆಗಸ್ಟದ ವರೆಗಿನ ಸಮಯುವನ್ನು ರಸಿಕವಾಗಿ ಕಳೆದವು. ೧೯೪೩ ನೆಯ ಅಗಸ್ಟ ಆಂದೋಲನ ಭರಾಟೆಯಲ್ಲಿತ್ತು. ಮಧುವಯ್ಯನವರ ಪತ್ರಗಳು ಮೊಮ್ಮಗ ನನ್ನು ಕಳಕಳಿಯಿಂದ ಎಚ್ಚರಿಸಹತ್ತಿದವು. "ಜನತೆ ತನ್ನ ವಿವೇಕ ಹಾಗೂ ಪರಿಸ್ಥಿತಿಗಳ ಅಂತಸ್ತಿಗೆ ಅನುಸರಿಸಿ ಕಾರ್ಯವನ್ನು ನಡೆಯಿಸಿದೆ: ನಾನು ನನ್ನ ಅಂತಸ್ತಿಗೆ ಒಪ್ಪುವ ಕಾರ್ಯವನ್ನು ಮಾಡಬೇಕಲ್ಲವೆ?" ಇದು ಪ್ರಸಾದನ ಪತ್ರಗಳ ಪಲ್ಲವಿಯಾಗಿ ಅಜ್ಜನ ಮನಸ್ಸನ್ನು ಹಗುರುಮಾಡಿತು.

೧೯೪೩ ಜನವರಿ ೨೬. ಸುಭಾಸರು ಕಣ್ಮರೆಯಾದ ಎರಡು ವರ್ಷಗಳ ನಂತರ. ಆ ಪರಿಸ್ಥಿತಿಯಲ್ಲಿ ತಾವು ಸ್ವಾತಂತ್ರ್ಯ ದಿನಾಚರಣೆ ಮಾಡುವದೆಂತು ಎಂದು ಧಾರವಾಡದ ವಿದ್ಯಾರ್ಥಿಗಳು ಒಂದು ವಾರ ಪೂರ್ವದಲ್ಲಿಯೆ ನಿರಾಶರಾಗಿದ್ದರು. ಪ್ರಸಾದ ತನ್ನ ನಮ್ರ ಸೂಚನೆಯಿತ್ತನು. ವಿದ್ಯಾರ್ಥಿಗಳು ಅವನನ್ನು ನಾಯಕನೆಂದು ಎತ್ತಿದರು. ಅವನು ಅದಕ್ಕೆ ಒಪ್ಪಲಿಲ್ಲ. " ಸದ್ದಿಲ್ಲದೆ ಪರಿಣಾಮಕಾರಿಯಾದ ನಿಜವಾದ ಜನತಾ ಸೇವೆಯನ್ನು ಮಾಡಬಯಸುವ ವಿದ್ಯಾರ್ಥಿಗಳಿಗೆ ಈ ಪ್ರದರ್ಶನ ಅನವಶ್ಯ. ನಮ್ಮ ನಾಡಿನಲ್ಲಿಯೆ ನರಳುತ್ತಿರುವ ವಿಜಯಪುರದ ದೀನಬಂಧುಗಳಿಗೆ ನೆರವೀಯುವ ಯಾವುದೇ ವಿಧಾಯಕ ಕಾರ್ಯಕ್ರಮವು ಅಂದಿನ ಸ್ವಾತಂತ್ರ್ಯ ದಿನಾಚರಣೆಗೆ ಯೋಗ್ಯವಾದುದಲ್ಲವೆ ?" ಎಂದನು. ಪ್ರಸಾದನ ಈ ವಿಚಾರವನ್ನು ಎಲ್ಲ ವಿದ್ಯಾರ್ಥಿಗಳು ಸ್ವಾಗತಿಸಿದರು. ಏಳು ದಿನ ಧಾರವಾಡದಲ್ಲಿ ಕೋಲಾಹಲ. ವಿದ್ಯಾರ್ಥಿ ವಿದ್ಯಾರ್ಥಿನಿಯರು ನಗರದ ಎಲ್ಲ ಪ್ರಮುಖರನ್ನೂ ಮುಖ್ಯ ಕಚೇರಿಗಳನ್ನೂ ತಮ್ಮ ವಿದ್ಯಾಲಯವನ್ನೂ ಶಾಲೆಗಳನ್ನೂ ಮುತ್ತಿ ಧನಸಂಗ್ರಹವನ್ನು ಮಾಡಿದರು. ವಿದ್ಯಾಲಯದ ಪ್ರಧಾನ ಪಾಧ್ಯಾಪಕರ ವಿನಂತಿಗೆ ಮನ್ನಣೆಯಿತ್ತು ಸ್ಥಳಿಕ ಕಲೆಕ್ಟರರು ಈ ಸಂತ್ರಸ್ತನಿಧಿ ಸಂಗ್ರಹದ ಸಮಿತಿಗೆ ಕಾರ್ಯಾಧ್ಯಕ್ಷರಾಗಿದ್ದಲ್ಲದೆ ಮುಂಬರುವ ಅರ್ಪಣ ಸಮಾರಂಭಕ್ಕೆ ಅಧ್ಯಕ್ಷರಾಗಲು ಒಪ್ಪಿದರು.

ಮಂಗಳವಾರ ಮುಂಜಾನೆ ವಿದ್ಯಾಲಯದ ಪ್ರಾಣಿಶಾಸ್ತ್ರ ಪ್ರಯೋಗ ಮಂದಿರದ ಬದಿಯಲ್ಲಿರುವ ಚತುಷ್ಕ ಪ್ರಾಂಗಣದಲ್ಲಿ ಒಂದು ಸಾದಾ ತರಗತಿಯ ರಂಗಭೂಮಿಯ ಸಂವರಣೆ ನಡೆದಿತ್ತು. ಪ್ರಾಂಗಣದಲ್ಲಿ ರಂಗಭೂಮಿಯ ಅರ್ಧಚಂದ್ರಾಕೃತಿಯು ಮಾತ್ರ ಹೊರಚಾಚಿತ್ತು. ರಂಗಭೂಮಿಯಿಂದ ನಾಲ್ಕು ಅಡಿ ಸ್ಥಳಬಿಟ್ಟು ಪ್ರಯೋಗ ಮಂದಿರದ ಮಹಾದ್ವಾರಕ್ಕೆ ನೇರವಾಗಿ ಎಡಕ್ಕೂ ಬಲಕ್ಕೂ ಎದುರಿಗೂ ಬಿದಿರಿನ ಬಣ್ಣದ ಬೇಲಿಯನ್ನು ರಂಗಭೂಮಿಯ ಪಾತಳಿಗೆ ಸರಿಯಾಗಿ ಕಟ್ಟಿದ್ದರು. ಬೇಲಿಯ ಮೇಲೆ ಆರಡಿ ಎತ್ತರವಾದ ಮೂರು ನೀಲಿಯ ಪರದೆಗಳು ತೂಗಾಡುತ್ತಿದ್ದವು. ಎದುರಿನ ಪರದೆಯ ಹೊರಬದಿಗೆ ವಿದ್ಯಾರ್ಥಿಯೊಬ್ಬನು ಬರಗಾಲದ ಬವಣೆಯ ಕರುಣಾಜನಕ ದೃಶ್ಯವೊಂದನ್ನು ಬರೆದಿದ್ದನು. ರಂಗಭೂಮಿಯ ವ್ಯಾಸಕ್ಕೆ ಹಿಮ್ಮೇಳವು ಕಾಣದಂತೆ ಆರಡಿ ಎತ್ತರವಾದ ಒಂದು ನೀಲಿಯ ಪರದೆ ಕಟ್ಟಿತ್ತು. ರಂಗಭೂಮಿಯ ಸೌರಣೆ

ಮುಗಿದು ಮನಸ್ಸಿಗೆ ಬಂದು ಪ್ರಸಾದನು ಮಿತ್ರರೊಂದಿಗೆ ಮನೆಯ ಹಾದಿಯನ್ನು ಹಿಡಿದನು.

ಸಾಯಂಕಾಲ ಏಳು ಘಂಟೆಯ ಸಮಯ. ಪ್ರಾಂಗಣವು ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಲಿದೆ. ಚತುಷ್ಕವು ಸಂತ್ರಸ್ತನಿಧಿಗೆ ನೆರವಿತ್ತ ದುಡಿದ ಹಿರಿಕಿರಿಯರಿಂದ ಕಿಕ್ಕಿರಿದು ತುಂಬಿದೆ. ಎಲ್ಲ ದೀಪಗಳೂ ಮಾಯವಾಗಿ ನಾಲ್ಕು ದಿಕ್ಕಿಗೆ ನಾಲ್ಕು ಹಾಲು ದೀಪಗಳು ಮಿಣುಕಿದವು. ಒಮ್ಮೆಲೆ ಪ್ರಾಂಗಣಕ್ಕೆ ಕಿನ್ನರ ಸ್ವರೂಪ ಮುತ್ತಿತು. ಪರದೆ ಎತ್ತಿರಲಿಲ್ಲ. ಹಿನ್ನೆಲೆಯಿಂದ ಕೋಮಲ ಸ್ವರವೊಂದರ "ಜನಗಣಮನ ಅಧಿನಾಯಕ ವಂದೇ .......ಹೇ! ಭಾರತ ಭಾಗ್ಯ ವಿಧಾತಾ" ಎಂಬ ಪಲ್ಲವಿ. ಸಿತಾರೆಯೊಂದು ತಬಲಗಳ ಮೃದುತರಂಗಗಳೊಡನೆ ಹತ್ತು ನಿಮಿಷಗಳ ವರೆಗೆ ಮುಂದಿನ ಅತಿ ಪರಿಚಿತ ನುಡಿಗಳನ್ನು ನುಡಿಸಿ ಬೇರೊಂದು ರಾಗಕ್ಕೆ ಹೊರಟಿತು. ಪರದೆ ಸಾವಧಾನವಾಗಿ ಮೇಲಕ್ಕೇರಿತು. ಅರ್ಧಚಂದ್ರನ ಪ್ರಪಂಚದಲ್ಲಿ ಒಂದೆಡೆ ವೀಣೆ ಮಾತ್ರ ಒರಗಿದೆ. ಜವ್ವನೆಯೊರ್ವಳು ಎಡಬದಿಯಲ್ಲಿ ಅದನ್ನೇ ನೋಡುತ್ತ ಚಿಂತೆಯನ್ನು ಸೂಚಿಸುತ್ತಿದ್ದಾಳೆ. ಒಮ್ಮೆ ಕರುಣ, ಒಮ್ಮೆ ರುದ್ರ, ಒಮ್ಮೆ ಭೀಭತ್ಸ. ಹೀಗೆ ತೆರತೆರನಾದ ಹಾವ ಭಾವಗಳನ್ನು ಮೂಡಿಸುತ್ತ ಕುಳಿತ ಭಂಗಿಯಿಂದ ಏಳುವದನ್ನು ಸೂಚಿಸುತ್ತಿದ್ದಾಳೆ. "ಯಾಕೋ ಕಾಣೆ ರುದ್ರವೀಣೆ ಮಿಡಿಯುತಿರುವುದು" ಎಂದು ವ್ಯಾಸ-ತಿರಸ್ಕರಿಣಿಯ ಹಿನ್ನೆಲೆಯಿಂದ ಹಾಡು ತೇಲಿತು. ಜವ್ವನೆ ಎದ್ದು ಪಾದವನ್ನೆತ್ತಿಟ್ಟಳು. ತಬಲದ ಮೃದು ಧ್ವನಿ ಮೇಳವಿಸಿತು. ಮುಂದೆ "ಜೀವದಾಣೆಯಂತೆ ತಾನೆ ನುಡಿಯುತಿರುವದು" ಎಂಬ ಪಂಕ್ತಿ ಬಂದಾಗ ನೃತ್ಯ ಜೀವಕಳೆಯಿಂದ ತುಂಬಿತು. ಬೇಂದ್ರೆಯವರ ಆ ಹಾಡು ಮುಗಿಯುವ ವರೆಗೆ ಸಂಗೀತ ಕಿನ್ನರಲೋಕದಲ್ಲಿದ್ದು ಮರ್ತ್ಯಲೋಕದ ಚಿಂತನೆಯನ್ನು ಪಾವನಂಗೆಯ್ದಿತು.

ಎರಡನೆಯದಾಗಿ 'ತುತ್ತಿನ ಚೀಲ' ವನ್ನು ಭಾವಪೂರ್ಣವಾಗಿ ಒಬ್ಬ ರಸಿಕ ವಿದ್ಯಾರ್ಥಿ ಹಾಡಿದನು. ನಂತರ ಮೊದಲಿನ ಜವ್ವನೆ ಒಂದು ತಂತಿ ವಾದ್ಯವನ್ನು ತಾನೇ ನಿಂತು ನುಡಿಸುತ್ತ ರವೀಂದ್ರರ ವಂಗ ಭಾವಗೀತೆಯೊಂದನ್ನಂದಳು. ವಿರಾಮದ ಪರದೆ ಬಿತ್ತು. ಪ್ರಾಧ್ಯಾಪಕರ ಪ್ರಾಸ್ತಾವಿಕ ಭಾಷಣಗಳೂ ವಿದ್ಯಾರ್ಥಿಗಳ ಅಭಿನಂದನಪರ ಭಾಷಣಗಳೂ ಆದವು.

ಪುನಃ ನಾಲ್ಕು ಹಾಲು ದೀಪಗಳುಳಿದವು.

ಕಬೀರರ "ಸಮುಝು ದೇಖಿ ಮನ ಮೀಟ ಪಿಯುರವಾ" ಎಂಬ ಗೀತಿಕೆಯನ್ನು ಹಿಮ್ಮೇಳದವರು ಕೇದಾರ ರಾಗದಲ್ಲಿ ಎತ್ತಿದರು. ತ್ರಿತಾಳದಲ್ಲಿ ತಬಲ ಪಡಿ ನುಡಿಯುತ್ತಿತ್ತು. ಸಿತಾರೆಯ ಕೋಮಲತೆ ಅವ್ಯಾಹತವಾಗಿ ಸಾಗಿತ್ತು. ಕಂಠ ಆಲಾಪದ ಭರದಲ್ಲಿತ್ತು. ವ್ಯಾಸ ತಿರಸ್ಕರಿಣಿಯ ಮುಂದೆ ಕುಳಿತು ಹಾವ ಭಾವಗಳಿಂದ ಅಭಿನಯಿಸುತ್ತಿದ್ದ ಕುವರಿ ಪ್ರಧಾನ ಪ್ರಾಧ್ಯಾಪಕರ ಸೂಚನೆಯಂತೆ ಸದ್ದಿಲ್ಲದೆ ಬಳುಕುತ್ತ ಸಾಗಿ ವ್ಯಾಸದ ಪರದೆಯನ್ನೆಳೆದಳು. ಚಂದ್ರಕಾಂತ ಚೆನ್ನಮಲ್ಲಪ್ಪ ಪ್ರಸಾದ ಮೂವರು. ತಾವೇ ತಾವಾಗಿ ತೂಗುತ್ತಿದ್ದರು. ಪ್ರಸಾದನ ಕೈಯೊಳಗಿನ ತಂಬೂರಿ ಅವನಂತೆ ತೂಗುತ್ತಿತ್ತು. ಎರಡು ನಿಮಿಷ ಈ ಪರವಶತೆಗೆ ಭಂಗ ಬರಲಿಲ್ಲ. ಅಲ್ಲಿಯ ವರೆಗೆ ತಾಳಿದ ರಕ್ಷೆಯ ಅಂಗಾಂಗಗಳು ಮೂಕ ಅಭಿನಯವನ್ನು ಬಿಟ್ಟು ನೃತ್ಯವನ್ನಾರಂಭಿಸಿದವು. ಪದಾಘಾತದ ಗೆಜ್ಜೆಯ ಸದ್ದಿಗೆ ಮೂವರೂ ಕಣ್ತೆರೆದರು ಪ್ರೇಕ್ಷಕರು ಹರುಷದಿಂದ ಕಿವಿ ಗಡುಚಿಕ್ಕುವಂತೆ ಚಪ್ಪಾಳೆ ಹಾಕಿದರು. ನಸು ನಾಚಿದರೂ ತಡೆಯದೆ ಆದೇ ಲಹರಿ ಉಕ್ಕುತ್ತಿತ್ತು. ಯಾರೋ ಹಿಂಬದಿಯ ರಂಗಭೂಮಿಯ ದೀಪವನ್ನು ಹಚ್ಚಿ ಹಾಲು ದೀಪಗಳನ್ನು ಆರಿಸಿದರು. ಸೂಚನೆಯಂತೆ. ಮುಂಬದಿಯ ರಂಗಭೂಮಿಯ ಹಸುರು ದೀಪ ಹತ್ತಿತು. "ನಾಡಿನ ಪುಣ್ಯದ ಪೂರ್ವ ದಿಗಂತದಿ ನವ ಅರುಣೋದಯ ಚಿಮ್ಮುತಿದೆ." ಪುಟ್ಟಪ್ಪನವರ ಭಾವಗೀತೆ ಸಂಗೀತದೊಡನೆ ಸಾಗಿತು. ಅಂತು ಅಂದಿನ ಕಾರ್ಯಕ್ರಮ ದುರ್ಗಾ ರಾಗದಿಂದ ಕೊನೆಗಂಡಿತು. ಪ್ರಧಾನ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿವೃಂದದ ಪರವಾಗಿ ನಾಲ್ಕು ಮಾತುಗಳನ್ನಾಡಿ ಕಲೆಕ್ಟರರ ಹಸ್ತದಲ್ಲಿ ಅಂದಿನ ಸಿಧಿಯನ್ನಿರಿಸಿದರು. ಕಲೆಕ್ಟರರು ನಾಲ್ವರೂ ಕಲಾವಿದರಿಗೂ ವಿದ್ಯಾರ್ಥಿವೃಂದಕ್ಕೂ ತಮ್ಮ ವಂದನೆಗಳನ್ನರ್ಪಿಸಿ, ತಮ್ಮ ಪ್ರೇಮದ ಕುರುಹು ಎಂದು ಕಲಾವಿದರಿಗೆ ಒಂದು ಬೆಳ್ಳಿಯ ಕರಡಿಗೆಯನ್ನೊಪ್ಪಿಸಿದರು. ವಿದ್ಯಾರ್ಥಿಗಳ ಪರವಾಗಿ ಅವರಿಗೆ ಪೂಮಾಲೆಗಳನ್ನಿತ್ತು ತಮ್ಮ ಆದರವನ್ನು ವ್ಯಕ್ತಪಡಿಸಿ ಅವರ ಪರಿಚಯ ಲಾಭವನ್ನು ಸ್ವೀಕರಿಸಿದರು. ವಿದ್ಯಾರ್ಥಿಗಳು ಈ ಸದ್ದಿಲ್ಲದ ಸೇವೆಯ ಮಹತ್ವವನ್ನೂ ಪರಿಣಾಮವನ್ನೂ ಅರಿತು ಆನಂದದಲ್ಲಿ ತೇಲಿದರು. ವಿದ್ಯಾಲಯದ ದೃಷ್ಟಿಕೋನದಲ್ಲಿ ಒಂದು ನವ ಜೀವಕಳೆ ಬಂದಿತು.।

ಇಂಥ ಆಕಸ್ಮಿಕ ಘಟನೆಗಳು ಯಾವ ವಿಧದಲ್ಲಿಯೂ ಚಂದ್ರಕಾಂತ ಪ್ರಸಾದರ ಅಭ್ಯಾಸಕ್ಕೆ ಭಂಗತರಲಿಲ್ಲ. ಇಂದ್ರಾಣಿಗೆ ಮಾತ್ರ ರಕ್ಷಾಮೈತ್ರಿ ಯಿಂದೊಡಗೂಡಿದ ಪ್ರಸಾದನ ಯಾವ ಪ್ರಗತಿಯೂ ಆನಂದವನ್ನು ತರಲಿಲ್ಲ. ಬರಬರುತ್ತ ಉತ್ಸುಕತೆ ಅಳಿದು ಉದಾಸೀನತೆ ತಲೆಯೆತ್ತಿತು. ಅಭ್ಯಾಸದಲ್ಲಿ ಹುದುಗುವುದು ಮಾತ್ರ ಅವಳಿಗೆ ಸುಖವನ್ನು ತಂದುದಲ್ಲದೆ ಚಿಂತೆಯನ್ನು ಬದಿಗಿರಿಸಿತು. ಪ್ರಸಾದನ ನೆನಹು ಅವಳ ಹೃದಯ ಕೋನದಲ್ಲಿ ಅಡಗಿತ್ತು. ಮೇಲೆ ನರ್ತಕಿಯ ಒಡನಾಟದ ವಿಚಾರ ಅದನ್ನು ಮೆಟ್ಟಿ ಹಿಡಿದಿತ್ತು. ಅದೊಂದು ಅವಳ ಸಿದ್ಧಾಂತ–ಆ ಒಡನಾಟ ವಾಸನಾಪೂರ್ಣವೆಂದು. ಅದನ್ನು ಯಾರೆದುರೂ ಬಾಯಿಬಿಟ್ಟಿರಲಿಲ್ಲ, ಎಲ್ಲರಿಗೂ ಅದೊಂದು ಒಗಟು. ಪ್ರಸಾದನಿಗೆ ಮಾತ್ರ ಅವಳೇ ಕಲ್ಪಿಸಿದ ಒಗಟು ಅವಳೇ ಬಗೆಹರಿಸಲಿ ಎಂಬ ಭಾವ ಸಹಜವಾಗಿತ್ತು. ಆದರೆ ತನ್ನ ಹೃದಯದ ಸುಕುಮಾರ ಭಾವಗಳನ್ನು ಅರಳಿಸಿದವರು ಅವಳಂತೆ ಇನ್ನಾರೂ ಆಗರೆಂಬು ಅವನಿಗೆ ಖಂಡಿತ. ತಾನು ಬಯಸದೆ ಅದು ಘಟಿಸಿತ್ತು. ಆ ಘಟನೆ ದೃಢವಾಗದಿದ್ದಲ್ಲಿ ದುಃಖದ ವೇದನೆ ಯಾಗುವದು ಸಾಧ್ಯವಿರಲಿಲ್ಲ. ಅವಳನ್ನು ಕುರಿತು ಅಷ್ಟು ಸಮುತ್ಸೂಕದಲ್ಲಿ ಅವನ ಸಹಜ ಭಾವನೆಯಿತ್ತು. ಆದರೆ ಅವಳು ಪರಡಿಯನ್ನು ಒತ್ತಿಕ್ಕಿ ತನ್ನ ಹತೋಟಿಯಲ್ಲಿರಿಸಿದ್ದಳು. ಇಲ್ಲವಾದರೆ, ಅವಳ ವಿಚಾರದಂತೆ, ಅವನಿಂದ ಒದಗಿದ ಮಹಾದ್ರೋಹ ವಿಪತ್ತು ಅವಳನ್ನು ವಿಪರೀತ ಸ್ಥಿತಿಗೆ ಒಯ್ಯಬಹು ದಾಗಿತ್ತು. ಆ ಸ್ಥಿತಿಗೆ ಒಯ್ಯದಿರಲು ಅವಳ ಬಿ. ಎ. ತರಗತಿಯ ಕೊನೆಯ ವರ್ಷದ ಅಭ್ಯಾಸವೂ ಬಂದು ಸಮಯಾನುಸಾರ ಸಹಕಾರಿಯಾಗಿತ್ತು.

"ಏನು ಪ್ರಸಾದ ! ಒಂದು ತಿಂಗಳು ಅಪರೂಪಂ....ದರ್ಶನಂ ಆಗಿಬಿಟ್ಟಿ ರಲ್ಲ ! ನಮ್ಮ ರಕ್ಷಾ ನೀವೂ ಜೊತೆಗೆ ಉಳವಿಗೆ ಹೋಗುವಿರೆಂದು ಹೇಳಿದಳಲ್ಲ. ಅಹುದೇನು ? " "ಅಹುದು ನಂಜುಂಡಯ್ಯನವರೆ ! ನಮ್ಮ ಅಜ್ಜಂದಿರು ಅಸ್ವಸ್ಥರಾದಾಗ ನಮ್ಮ ಮಾದಕ್ಕನು ತೆಗೆದಿಟ್ಟ ಮೀಸಲನ್ನು ಚೆನ್ನಬಸವಣ್ಣನಿಗೆ ಮುಟ್ಟಿಸುವ ಹೊಣೆಗಾರಿಕೆಯನ್ನು ಹೊತ್ತಿದ್ದೇನೆ. ಹಾಂ! ಕೋಳೂರಿನ ಕೊಡ ಗೂಸಿನಂತೆ ಎಂದು ಮಾತ್ರ ಭಾವಿಸಬೇಡಿರಿ." ೧೯೪೩ ನೆಯ ಫೆಬ್ರುವಾರಿ ೨೦ಕ್ಕೆ ಉಳವಿಯ ರಥೋತ್ಸವ. ಶಿಶಿರ ಋತುವಿನ ಕೊನೆಯ ದಿನ ಈರ್ವರೂ (ಮೇಲುಗೈ) ಎಲ್ಲಾಪುರದ ಅಬಕಾರಿ ಖಾತೆಯಲ್ಲಿರುವ 'ರಕ್ಷೆ' ಯ ಎರಡನೆಯ

ಅಣ್ಣನ ಮನೆಯಲ್ಲಿ ಸಾಯಂಕಾಲ ಉಳಿದು ಮರುದಿನ ನಸುಕಿನಲ್ಲಿಯೆ ಉಳವಿಯ ಹಾದಿ ಹಿಡಿದು ಹೊರಟ ಯಾತ್ರಿಕರ ಗುಂಪನ್ನು ಕೂಡಿದರು.

ರಕ್ಷೆ 'ಬಾಜಿಬಾಣದ' ವರೆಗೆ ಉತ್ಸಾಹದಿಂದಲೂ ಗಣೇಶನ ಗುಡಿಗೆ ಹಟಕ್ಕೆ ಬಿದ್ದೂ ನಡೆದಳು. ಅಲ್ಲಿ ವಿಶ್ರಾಂತಿಯನ್ನು ಹೊಂದಿ ಸಮೀಪದಲ್ಲಿಯೇ ಇದೆಯೆಂದ ಹೊಳೆಗೆ ಹೋಗುವ ಭರದಲ್ಲಿ ಅವಳೂ ಪ್ರಸಾದನಂತೆ ಜೀಪುಗಾಲು ಹಾಕಿ ನೋಡಿದಳು. ಹಟಕ್ಕೆ ಸರಿಯಾದ ಸ್ಥಳವಲ್ಲವೆಂದು 'ಕೂಗು ಮಾರಯ್ಯ'ನ ಗುಡಿಯಿಂದ ಕವಲೊಡೆದಾಗ ಅವಳಿಗೆ ಕಂಡುಬಂದಿತು. ಇಳಿಜಾರು, ಕಡಿದಾದ ಇಳಜಾರು, ಕಾಲು ಸೋಲುವ ಇಳಿಜಾರು, ಜಾರಿ ಬೀಳುವ ಇಳಿಜಾರು. ಇವಳ ಪೇಚಾಟವನ್ನು ನೋಡಲಾರದೆ ಪ್ರಸಾದನು ಅವಳಿಗೆ ತನ್ನ ಭುಜದ ಆಶ್ರಯವನ್ನಿತ್ತನು. ಮುಂದೆ ಮುಂದೆ ಅವನು ಹಿಂದೆ ಹಿಂದೆ ಅವಳು. ಅವನ ಎಡಭುಜದ ಮೇಲೆ ಇವಳ ಮುಂಗೈ. ಮೆಲ್ಲನೆ ಅಡಿಯಿಡುತ್ತ ತನ್ನ ಅನುಭವಕ್ಕೆ ದನಿಯಿತ್ತನು. "ರಕ್ಷಾ! ನಮ್ಮ ಪೂರ್ವಜರು ೮೦೦ ವರ್ಷಗಳ ಹಿಂದೆ ತಾವು ಮಾಡಿದ ಸತ್ಯಪರಿಪಾಲನೆಗಾಗಿ ಈ ಮಾರ್ಗದಿಂದ ತಾವರಿಯದ ಕಾಡಿಗೆ ಸೇರಿದರು. ಇಂದು ನಾವು ಅವರನ್ನು ಬಣ್ಣಿಸುವೆವು. ದೇವರೆಂದು ಪೂಜಿಸುವೆವು. ಅವರು ಪಟ್ಟ ಕಷ್ಟಗಳ ಮೂಲ ಕಾರಣವನ್ನರಿತು ಆ ಸತ್ಯ ಪಥಕ್ಕೆ ಅಡಿ ಮಾತ್ರ ಇಡೆವು. 'ಬಸವ ಎಂದರೆ ಪಾಪ ದಿಸೆಗೆಟ್ಟು ಪೋಗುವದು!' ಅಥವಾ 'ಬಸವ ಬಸವಾ! ಎಂದಡೆ....ಮುಸದ ಹಗೆಗಳು ನೆಂಟರಪ್ಪರು' ಎಂಬ ನಾಯಕ ಪೂಜೆಗೆ ತಾಳ ಹಾಕುವೆವು. ಅಂದಿನ ಧರ್ಮದ ಮುಸೆದ ಹಗೆಗಳಂತೂ ಇಂದು ಇಲ್ಲ. ಎಲ್ಲರೂ ಕನ್ನಡ ನೆಂಟರೆ. ಆದರೆ ಜನತೆಯ ಮನೋವೃತ್ತಿಯಲ್ಲಿ ನಾಡಿನ ನಿಜವಾದ ಉನ್ನತಿಗಾಗಿ ಪೂರ್ಣ ಕಳಕಳಿ ಆರಳಿಲ್ಲ. ತಪ್ಪುಹಾದಿ ಹಿಡಿದ ಕನ್ನಡಿಗನ ಕ್ಷಾತ್ರತೇಜ ಎಂತೋ ತಾಳತಪ್ಪಿ ಮನುಷ್ಯಶಕ್ತಿಯ ದುರ್ವ್ಯಯಕ್ಕೀಡಾಗಿದೆ. 'The perverted martial spirit is running amock' ಎಂದು ಸಾತಾರೆಯ ಕಲೆಕ್ಟರರ ಎದುರು ನನ್ನವರನ್ನು ಎತ್ತಿಹಿಡಿದಿದ್ದೆನು. ಇಂದು ತಮ್ಮ ತಮ್ಮ ಸಮಾಜಗಳಿಗೆ ಕಾಲಮಾನಕ್ಕನುಗುಣವಾಗಿ ಪೂರ್ವದ ಪಡಿಕವಚಗಳಲ್ಲಿಯೆ ನೂತನ ಸಂಸ್ಕಾರವನ್ನೀಯುವದು ಇಂದಿನ ಆಯಾ ಸಮಾಜದ ಮುಂದಾಳುಗಳಿಗೆ ಸಾಧ್ಯವಿಲ್ಲದ್ದನ್ನು ಕಂಡ ತರುಣರು ಬಸವಣ್ಣನಂಥ ಕಾರಣಪುರುಷರೂ ಜೀರ್ಣವಾದುದನ್ನು

ಹೊರತಳ್ಳಿ ಸಂಪ್ರದಾಯವನ್ನು ಹೂಳಿಟ್ಟರೆಂಬುದನ್ನು ಮನಗಾಣಬೇಕು. ಆಗ ಮಾತ್ರ ಇಂದಿನ ಜಾಗತಿಕ ಉತ್ಕ್ರಾಂತಿಯಲ್ಲಿ ಕನ್ನಡಿಗನಿಗೆ ಸ್ಥಾನವಿದೆ. ಇಂದು ಕನ್ನಡ ತರುಣರು ಒಂದು ಜೀವನ ಧರ್ಮವನ್ನು ಸಿದ್ಧಗೊಳಿಸಿ ಒಕ್ಕಟ್ಟಿನಿಂದ ದುಡಿಯುವುದು ಸಾಧ್ಯವಿದೆ. ನಮ್ಮ ಪ್ರಾಚೀನ ಕಾರಣಪುರುಷರಿಗಿದ್ದ ಮೂಢ ತೊಂದರೆಗಳು ಇಂದು ಇಲ್ಲ. ಅನೇಕ ಸೌಕರ್ಯಗಳಿವೆ. ಬಸವಣ್ಣ ತನ್ನ ೩೬ ವರ್ಷದ ಜೀವನದಲ್ಲಿ ಸಾಧಿಸಿದ ಧೀರಪ್ರಗತಿಗೆ ಈ ನಾಡೂ ಒಂದು ಪ್ರತೀಕ. ಆದರೆ ನಮ್ಮವರ ಪುರಾಣಶ್ರವಣಕ್ಕಿಂತ ನಮ್ಮವರ ಇತಿಹಾಸದ ಅಭ್ಯಸನದಲ್ಲಿ ಕನ್ನಡ ತರುಣರು ಹೆಚ್ಚು ಆಸ್ಥೆ ವಹಿಸಬೇಕು. 'ಹಚ್ಚಗೆ ಇದ್ದ ಹತ್ತರ ಮೇಯು, ಬೆಚ್ಚಗೆ ಇದ್ದ ಹತ್ತರ ಮಲಗುವವರು' ಆಗಬಾರದು. ಹಿಂದುಸ್ಥಾನದಂಥ ದಾಸ್ಯರಾಷ್ಟ್ರದಲ್ಲಿ ಒಬ್ಬ ವ್ಯಕ್ತಿಯಾವ ಪ್ರಮಾಣದಲ್ಲಿ ಆನಂದದಲ್ಲಿರಬಯಸುವನೋ ಅಷ್ಟೇ ಪ್ರಮಾಣದಲ್ಲಿ ಇನ್ನೊಬ್ಬ ವ್ಯಕ್ತಿ ದುಃಖದಲ್ಲಿರಬೇಕಾಗುವದು. ದಾಸ್ಯದ ಸಮತೋಲನೆಗಾಗಿ. ಅಂತೆಯೆ ಕನ್ನಡಿಗರು ಆನಂದವನ್ನು ಹಂಚಿಕೊಳ್ಳುವ ಬಯಕೆಯಿಂದ ದುಃಖವನ್ನು ದೂರಿಡುವ ಶ್ರಮವಿಭಾಗಕ್ಕೆ ಒಪ್ಪಿ ದುಡಿಯಲೇಬೇಕು. ನಾಡಿನ ಸಂಪತ್ತಿನ ಸಮತೋಲನೆಗಾಗಿ. ನಾವು ಪ್ರತಿಯೊಂದು ಉದ್ಯೋಗದಲ್ಲಿ ಗೌರವವೂ ಕೀರ್ತಿಯೂ ಇರುವದೆಂಬುದನ್ನು ಪೂರ್ಣ ಮನಗಂಡು, ನಿತ್ಯದ ನಮ್ಮ ಸಾಮಾನ್ಯ ಕಾರ್ಯಗಳನ್ನೂ ಸಹ ಬುದ್ಧಿಪೂರ್ವಕವಾಗಿಯೂ ಚಾತುರ್ಯಪೂರ್ಣವಾಗಿಯೂ ನೆರವೇರಿಸುವುದನ್ನು ಕಲಿತು, ನಮ್ಮ ದುಡಿತದಿಂದ ಅಭಿವೃದ್ಧಿಗೆ ಬಂದು ಬದುಕಿನಲ್ಲಿಯೇ ಬಾಳಬೇಕು. ನಾಡಿನ ಉನ್ನತಿಗೆ ಅಮಾನುಷ ಬಲಿದಾನ ಬೇಕಿಲ್ಲ: ಮಾನುಷ ಕರ್ತವ್ಯ ನಿಷ್ಠೆ ಅವಶ್ಯವಷ್ಟೆ. 'ಹೊಲದ ಹತ್ತಿ ಹೊಲದಲ್ಲೇ! ನಿನಗೆ ಮೊಳ ಉದ್ದ, ನನಗೆ ಮಾರುದ್ದ! ಅಂದ ಹಾಗೆ' ಮಾಡಬಾರದು. ನಮ್ಮ ನಾಡಿನಲ್ಲಿಯೇ ಬಳೆದು ಬಂದ 'ಒಮ್ಮನ ನೇಮ' ವನ್ನು ಪಾಲಿಸಬೇಕು. ನನ್ನ ಗುರುಗಳು ಹೇಳುತ್ತಿರುವ 'ಋಗ್ವೇದ ಸಂಹಿತೆ' ಯ 'ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ। ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ||' ಎಂಬ ಅಮೃತ ಗೋಷ್ಠಿ ಕನ್ನಡಿಗನಿಗೆ ದಾರಿದೋರಿದರೆ ಕನ್ನಡ 'ನಾಡಿನ ಪುಣ್ಯದ ಪೂರ್ವದಿಗಂತದಿ ನವ ಅರುಣೋದಯ' ಚಿಮ್ಮುವುದು ಸತ್ಯ. ಎಂದಿಗೂ ಸತ್ಯ."

ಘಟ್ಟದ ಮತ್ತೊಂದು ಸುತ್ತು ಇಳಿದರು. ಕಾಳೀ ನದಿಯಿಂದ ಜನರ ಕೂಗು ಕೇಳಿಸಿತು. ರಕ್ಷೆಗೆ ಮಾತಿನ ಆಲಾಪದಲ್ಲಿ ದಣಿದದ್ದು ತಿಳಿದಿರಲಿಲ್ಲ. ದಣಿದುದನ್ನು ಕಂಡು ಪ್ರಸಾದನು ತನ್ನ ನಡಿಗೆಯನ್ನು ಅವಳ ನಡಿಗೆಗೆ ಇಳಿಸಿದನು. ಹೊಳೆ ಕಂಡಾಗ ರಕ್ಷಾ ಮುಖ ಅರಳಿತು. ಇನ್ನೂ ಸೂರ್ಯ ಚೈತ್ರ ಮಾಸದ ನೀಲಿಯ ಉಗಿಮಂಜನ್ನು ಮೀರಿ ಉರಿಮಂಜಾಗಿ ಹೊರಬಂದಿರಲಿಲ್ಲ. ಈರ್ವರೂ ನದಿಯ ದಂಡೆಯ ಬಂಡೆಯ ಮೇಲೆ ವಿಶ್ರಾಂತಿಯನ್ನು ಹೊಂದಿದರು. ರಕ್ಷೆ ಪ್ರವಾಹಕ್ಕೆ ಪಾದಗಳನ್ನು ಇಳಿಬಿಟ್ಟು ಪ್ರಸಾದನಿಗೆ ಒರಗಿ ದಣಿವಾರಿಸಿಕೊಂಡಳು. ಮನೋಹರವಾದ ದೃಶ್ಯದಲ್ಲಿ ಮೈಮರೆತು ಪ್ರಸಾದನು ಮಂಜಿನ ಉಗಿಯೊಡನೆ ನಡೆಸಿದ ಸೂರ್ಯನ ಲೀಲೆಯಲ್ಲಿ ಒಂದಾಗಿದ್ದನು. ಸೂರ್ಯದೇವನು ಮೇಲೆ ಬಂದನು. ಪ್ರವಾಹಕ್ಕೆ ಇಳಿದರು. ಸ್ನಾನ ಉಪಹಾರಗಳ ನಂತರ ೨-೩ ತಾಸು ವಿಶ್ರಾಂತಿ.

ಯಾತ್ರಿಕರೊಡನೆ ಘಟ್ಟವನ್ನು ಸುತ್ತಿ ಏರುವದು ಪುನಃ ಪ್ರಾರಂಭ. ನದಿಯ ಸ್ನಾನದ ಹುರುಪಿನಲ್ಲಿ ತಣ್ಣೀರಿನ ಹಳ್ಳವು ಕಣ್ಣು ಮುಚ್ಚಿ ಕಣ್ಣು ತೆಗೆಯುವುದರಲ್ಲಿ ಬಂದಿತು. ರವಿಕಿರಣಗಳು ಮುದ್ದಿಡದ ಎಷ್ಟೋ ಕಾಡಡವಿಗಳಿಂದ ಹರಿದು ಬಂದ ಹಳ್ಳವು ನಿಜವಾಗಿ 'ತಣ್ಣೀರಿನ' ಹಳ್ಳವಾಗಿತ್ತು. ಪಾದರಕ್ಷೆಗಳಲ್ಲಿ ಕಾವುಂಡ ಬರಿಯ ಪಾದಗಳನ್ನು ಹಳ್ಳದಲ್ಲಿಟ್ಟಾಗ ಮಂಜಿನಲ್ಲಿ ಬರ್ರನೆ ಅದ್ದಿದಂತಾಯಿತು. ಅಲ್ಲಿಂದ ಮತ್ತೊಂದು ಘಟ್ಟದ ಏರು ಸುತ್ತು. ಯಾತ್ರಿಕರಲ್ಲೊಬ್ಬರು ಪರಿಚಯಾರ್ಥವಾಗಿ ಕೊಟ್ಟ ಬೆತ್ತಗಳನ್ನು ಊರಿ ಓರೆಯಿಂದ ಓರೆಗೆ ಸುತ್ತು ಹಾಕುವುದು ಈರ್ವರಿಗೂ ಒಂದು ಸೊಗಸಾದ ವಿನೋದವಾಗಿತ್ತು. ಕಂಟಲೆ ಎತ್ತುಗಳು, ಅನವಶ್ಯಕವಾಗಿ ಭಕ್ತಿಯ ಸೆಳವಿಗೆ ಸಿಕ್ಕು ಪೇಚಾಡುವ ವಯೋವೃದ್ಧರು, ಏನೂ ಅರಿಯದ ಮುಗ್ಧ ಮಕ್ಕಳು, ನಗರವಿಸ್ತರಣದ ಉದ್ಯಾನದಲ್ಲಿ ವಿಲಾಸದಿಂದ ಮೆಲ್ಲಡಿಯಿತ್ತ ನಾಗರಿಕ ಹೆಂಗಳೆಯರು, ಬೈರಾಗಿಗಳು, ವಿಲಾಸೀ ತರುಣ ತರುಣಿಯರು, ಯಾತ್ರೆಗಾಗಿಯೇ ಹೊಸ ಸೀರೆಯ ಸರ-ಭರದಲ್ಲಿ ಹೊರಟ ಹಳ್ಳಿಯ ಹೆಂಗಳೆಯರು, ಬೆವತು ನೀರು ಹರಿಯುತ್ತಿದ್ದರೂ ಮೇಲಿನ ಉಡುಪನ್ನು ಬಿಚ್ಚದ ಬಿಗಿ ಗುಂಡಿಯ ಉತ್ಸವಪ್ರಿಯ ಹಳ್ಳಿಯ ಗಂಡಸರು, ಒಬ್ಬರೆ ಇಬ್ಬರೆ, ಸಾವಿರಾರು ಜನ, ಸಾವಿರಾರು ಮುಖ.

ಒಂದು ಅಂತಸ್ತಿಗೆ ಬಂದ ರಕ್ಷೆಯ ನಡಿಗೆಯಲ್ಲಿ ಆಯಾಸದ ಸುಳಿವು ಇರಲಿಲ್ಲ. ಅವಳಲ್ಲಿ ಹರಟೆಯ ಬಯಕೆಯಿತ್ತು. ಮೆಲ್ಲನೆ ಮಾತೆತ್ತಿದಳು: "ಪ್ರಸಾದ! ನಿಮ್ಮೊಡನೆ ತರ್ಕಮಾಡಿ ನಿಮ್ಮಿಂದ ನನಗೆ ಅವಶ್ಯವಿದ್ದ ಕೆಲವು ನಿಮ್ಮ ಹೃದ್ಗತಗಳನ್ನು ತಿಳಿದುಕೊಳ್ಳಬಹುದೋ ?"

"ಆಗತ್ಯ. ಸಂಪೂರ್ಣ ಸ್ವಾಗತ."

"ನಾನು ಬರುವ ಮುನ್ನ ಇಂದ್ರಾಣಿ ನಿಮ್ಮೊಡನೆ ಸರಸವಾಗಿದ್ದಳಷ್ಟೆ. ನಾನು ಬಂದ ನಂತರ ನಿಮ್ಮೊಡನೆ ಉದಾಸೀನವಾಗಿ ವರ್ತಿಸುವುದು ಕಂಡು ಬಂದಿದೆ. ಅದಾವ ದೃಷ್ಟಿಯಿಂದ ?" "ನನ್ನ ನಿನ್ನ ದೃಷ್ಟಿಯಿಂದ. ನಮ್ಮೀರ್ವರ ಸಹವಾಸ ಪ್ರಣಯದ ಪರಿಣಾಮವೆಂದು ಅವಳ ಕಲ್ಪನೆ." "ಕಲ್ಪನೆ ಸತ್ಯವಾಗಿ ಪರಿಣಮಿಸಿದರೆ ಅವಳಿಗೆ ದುಃಖವೋ ನಿಮಗೆ ದುಃಖವೋ ?" "ಈರ್ವರಿಗೂ. ಅವಳ ಹುದುಗಿದ ದುಃಖ ಚಿಮ್ಮುವದು. ಇಲ್ಲದ ದುಃಖ ನನ್ನನ್ನು ಮುತ್ತುವದು." "ಅಂದರೆ, ನಾನು ನಿಮ್ಮ ಪ್ರೇಮಕ್ಕೆ ಪಾತ್ರಳಲ್ಲವೆ?" "ಅತ್ಯಂತ ಪಾತ್ರಳು. ಅಂತೆಯೆ ದುಃಖ." "ಅಂದರೆ!"

"ನೀನು ನನ್ನನ್ನು ಇಲ್ಲಿಯ ವರೆಗೆ ಪ್ರೀತಿಸಿದ್ದು ತಪ್ಪು ದಾರಿಯಲ್ಲಿ ಎಂದು. ನನ್ನ ಜೀವಮಾನದಲ್ಲಿ ನಾನು ಇಂದು ಎರಡು ಜೀವನಗಳನ್ನು ಕಳೆಯಬೇಕಾಗಿದೆ. ಒಂದು ಪ್ರಯೋಗ: ಒಂದು ಸಾಧನ. ಒಂದು ನಾನು ಅಂತರಂಗದಲ್ಲಿ ಮನಗಂಡ ಸತ್ಯ: ಒಂದು ಬಹಿರಂಗದ ಇಂದಿನ ಪರಿಸ್ಥಿತಿಯಲ್ಲಿ ಸಾಧಿಸಬಹುದಾದ ಸತ್ಯ. ನೀನು ನನ್ನ ಪ್ರಯೋಗಕ್ಕೆ ಪಾತ್ರಳಾದ ಗೆಳತಿ : ಇಂದ್ರಾಣಿ ನನ್ನ ಸಾಧನದಿಂದ ಪಡೆಯಬಹುದಾದ ಸಂಗಾತಿ. ನಿನ್ನ ಇಂದಿನ ಅಂತಸ್ತು ನನ್ನಂತೆ ಎರಡು ಜೀವನಗಳನ್ನು ನಡೆಯಿಸಬಹುದಾದ ಧೀರತನದ್ದೆಂದು ನನಗೆ ಕಂಡು ಬಂದಿದೆ. ಅಂತೆಯೆ ನಿನಗೆ ಕೇವಲವಾದ ಆತ್ಮೀಯ ಪ್ರೇಮವನ್ನು ಅನುಭವಿಸುವ ಪಾತ್ರವನ್ನು ನಾನು ಮನಸ್ಸಿನಿಂದ ಒಪ್ಪಿಸಿದ್ದೇನೆ.

ಆತ್ಮೀಯ ಪ್ರೇಮದಲ್ಲಿ ವಾಸನೆಯ ಸುಳಿವೂ ಇರದು. ನಿನ್ನೊಡನೆ ನಾನು ಒಂದು ಪಣತೆಯಲ್ಲಿರುವ ಎರಡು ಜ್ಯೋತಿಗಳಂತೆ ಇರಲು ಬಯಸುವೆನು. ನೀನು ನನಗೆ ಒಂದು ಶುದ್ಧ ಆತ್ಮ. ನೀನು ನನ್ನಿಂದ ದೂರ ಸಿಡಿದು ನಿಲ್ಲು ಎಂದು ಅರ್ಥವಲ್ಲ. ಹೊಣೆಗಾರಿಕೆಯನ್ನರಿತ ನಮಗೆ ಈ ನನ್ನ ನಿನ್ನ ತಾರುಣ್ಯ ಎಂದೂ ಅಡ್ಡ ಬಾರದು. ನಾವೀರ್ವರೂ ಇದನ್ನು ಒಂದು ವ್ರತ

ವೆಂದು ಪಾಲಿಸುವ ಆವಶ್ಯಕತೆಯಿಲ್ಲ. ಸಹಜವಾಗಿ ಒಂದೆ ಪಾತಿಯಲ್ಲಿ ಬೆಳೆದ ಎರಡು ವೃಕ್ಷಗಳಂತೆ ನಾವು ಬಾಳುವಾ. ಅಂದು ಗಾಡಿಯಲ್ಲಿ ನನಗೆ ನೀನು ಪರಾಮರಿಕೆ ಇತ್ತಾಗ ನಮ್ಮೀರ್ವರಲ್ಲಿ ವಾಸನೆಯು ಅಣುಮಾತ್ರವಾದರೂ ಇತ್ತೋ? ಸಣ್ಣ ಮಕ್ಕಳಂತೆ ಕೂಡಿ ಬರಲಿಲ್ಲವೆ? ಆಂತು ಇಂದು ಇನ್ನು ಮುಂದೆಯೂ ಕೂಡಿ ನಡೆದರೆ ಆದು ಪ್ರೇಮವಲ್ಲವೆ?"

"ಪ್ರಸಾದ! ನನ್ನ ಪ್ರಶ್ನೆಯಲ್ಲಿ ಪ್ರಮಾದವೇನಾದರೂ ಇಲ್ಲವಷ್ಟೆ? ಇಂದ್ರಾಣಿಯನ್ನು ಕುರಿತು ನಿನ್ನ ಮನೋವೃತ್ತಿ ಹೇಗಿತ್ತೋ ನನಗೆ ತಿಳಿದಿರಲಿಲ್ಲ. ಅಂತೆಯೆ ನಾನು ಈ ಪ್ರಸಂಗಕ್ಕೆ ಕೈಹಾಕಿದ್ದೆನು."

"ಪ್ರಾಣಿ ಸಹಜವಾದದ್ದನ್ನು ಇನ್ನೂ ಪೂರ್ಣ ಅರ್ಥಮಾಡಿಕೊಳ್ಳದಿದ್ದ ಇಂದಿನ ನಮ್ಮವರ ಪರಿಸ್ಥಿತಿಯಲ್ಲಿ ನಿನ್ನ ಪೂರ್ವ ಪೀಠಿಕೆಯ ಪ್ರಶ್ನೆ ಪೂರ್ಣ ಸಮಂಜಸ. ಒಮ್ಮೆ ಆವಳು ನನ್ನನ್ನು ಕೆಣಕದಿದ್ದರೆ, ಎಂಥ ಪ್ರಸಂಗಗಳಲ್ಲಿಯೂ ನಾನು ನಿನ್ನ ಮಾನವ ಪ್ರೇಮಿಯಾಗುತ್ತಿದ್ದೆನು. ಇಂದು ನಾನು ನೀನು ತೆರೆಯ ಮರೆಯಲ್ಲಿ ಶೀಲಕ್ಕೆ ಕುಂದು ತರುವುದು ನಮ್ಮ ಹೊಣೆಗಾರಿಕೆ ಹಾಗೂ ವಿವೇಕ ಇವುಗಳ ದೃಷ್ಟಿಯಿಂದ ಹಾಸ್ಯಾಸ್ಪದ. ಅಂತೆಯೆ ಇಂಥ ಸಂಧಿ-ಕಾಲದಲ್ಲಿ ಮನಬಿಚ್ಚಿ ಮಾತನಾಡಿದುದು ಹಿತಕರ."

"ನಿನ್ನ ಮನೋಗತ ಸಂಪೂರ್ಣ ತಿಳಿಯಿತು. ಇನ್ನೊಂದು ವಿಚಾರ ಮಾತ್ರ. ಇಂದ್ರಾಣಿಯ ವಿಚಾರದಲ್ಲಿ ನಿನ್ನ ಅನಾದರವೇಕೆ? ಹೀಗೆ ಪ್ರಿಯತಮೆಯ ಮನ ನೋಯಿಸುವದು ತಪ್ಪಲ್ಲವೆ? ನನ್ನ ಸಂಗತಿ ಆವಳನ್ನು ನಿನ್ನಿಂದ ದೂರಿರಿಸಿದರೆ ನೀನು ನನ್ನ ಸಂಗತಿ ಬಿಡಬಾರದೇಕೆ?"

"ರಕ್ಷಾ! ನಿನ್ನ ಈ ಮಾತು ಆಯೋಗ್ಯ. ನನಗೆ ನೀನು, ಇಂದ್ರಾಣಿ, ನನ್ನ ಗೆಳೆಯರು, ನನ್ನವರು- ಆದೇಕೆ- ಈ ಕುರುಡ ಜಗತ್ತಿಗಿಂತಲೂ ಮಿಗಿಲಾದುದು ಪ್ರಿಯಕರವಾದುದು ಎಂದರೆ ಶುದ್ಧ ವಿವೇಕ. ಆವಳು ವಿವೇಕಿಯಾಗಿ ನನ್ನನ್ನು ಆರಿತುಕೊಂಡು ನನ್ನವಳಾದರೆ ಆಗಲಿ. ನಿನ್ನಂತೆ ಆವಳು ನನ್ನೊಡನೆ ಹೃದಯವನ್ನು ಬಿಚ್ಚಿಟ್ಟು ಬೆಳಕು ಕಾಣಬಾರದೇಕೆ? ಆ ದಾರಿಯಿಂದ ಬರುವದಾದರೆ ಆವಳು ಬರಲಿ. ಇಲ್ಲವಾದರೆ ನೀನು ನನ್ನನ್ನು ನಿನ್ನ ನೃತ್ಯದ ಹಿಮ್ಮೇಳದಲ್ಲಿರಿಸಿಕೋ. ನಿನ್ನ ಇನಿಯ ನಿನ್ನ ಕೈಬಿಡದಂತೆ ನಾನು ಹಾಡಿ ನಿಮ್ಮನ್ನು ಸಂತೈಸುವೆನು. ನನ್ನ ಮುದ್ದಣ್ಣ ನಮ್ಮನ್ನು ಕಾಪಾಡಲಿಲ್ಲವೆ? ಆವನು

ನಮ್ಮಿಂದ ಬಯುಸಿರುವುದೇನು ? ಹಿಡಿ ಮಣ್ಣಲ್ಲವೆ ? ನೀನು ಅಷ್ಟು ಸಂಸ್ಕಾರವನ್ನು ನನಗೆ ಕೊಡಲಾರೆಯಾ ? "

" ಪ್ರಸಾದ! ನಾನು ಆ ಮಾತು ಎತ್ತಿದೆನು. ನಾನು ಅಲ್ಪಳು. ಕ್ಷಮಿಸು. ಇಂಥ ಕಠೋರ ಮಾತು ನಾನು ಸಹಿಸಲಾರೆನು. ನಾನು ಪ್ರೀತಿಸುವುದು ಜ್ಯೋತಿಯನ್ನು! ಸೆಳೆಮಿಂಚನ್ನಲ್ಲ." ರಕ್ಷೆ ಅವನ ತೋಳಿಗೆ ಅಪ್ಪಿ ಅಂಗಲಾಚಿದಳು. ಸುಮ್ಮನೆ ಪ್ರತ್ಯುತ್ತರವಾಗಿ ಅವಳ ಮುಂದಲೆಯ ನೀವಿ ಅಪ್ಪಿಕೊಂಡು ನಡೆದನು. ಅವನ ಕಣ್ಣುಗಳಲ್ಲಿ ಪೂರ್ವಕಾಂತಿ ಮೂಡುವವರೆಗೆ ಅವಳು ಅಪ್ಪುಗೆಯಿಂದ ಹೊರಬರಲಿಲ್ಲ. ಒಂದು ಬಂಡೆಯನ್ನು ನಿಡಿದಾದ ಓರೆಯಲ್ಲಿ ಸುತ್ತುತ್ತಿದ್ದರು. ಒಂದು ಮಂಜುಳ ನಾದವು ಕೇಳಿಸಿತು. ಪ್ರಸಾದನು ನಿಂತು ಆಲಿಸಿದನು. ಅವಳೂ ಆಲಿಸಿದಳು. ನಗುತ್ತ ಮುಂದರಿದರು. 'ಕಿನ್ನರಿ ಬೊಮ್ಮಯ್ಯ' ನ ಹಳ್ಳವು ಬಂದಿತು. ಬದಿಯಲ್ಲಿಯೆ ಮುಂದರಿದು ಬಲಕ್ಕೆ ಪುಟದು ನೆಗೆದು ಒಂದು ಪ್ರಪಾತವಾಗಿ ಬೀಳುತ್ತಿತ್ತು.

" ರಕ್ಷಾ ! ಕೇಳಿದೆಯಾ ? ' ಜುಳು-ಜುಳು-ಮಂಜುಳು.' ಮನದಲ್ಲಿಯೂ ಸಹ ಆ ಶೀತಲ ಪ್ರವಾಹ ದನಿಗೂಡುವದಿಲ್ಲವೆ ? ನಿನ್ನ ನೃತ್ಯದಲ್ಲಿ ಭಾವ ಭಂಗಿಯಲ್ಲಿ ಪಾದನ್ಯಾಸಗಳಲ್ಲಿ ಅದನ್ನೂ ಮೂಡಿಸುವದು ಸಾಧ್ಯವೆ ? "
" ನೀನು ಹಾಡಿ ನಿನ್ನ ಮಿತ್ರರು ಪ್ರತಿ ನುಡಿದರೆ ನಾನು ನಟಿಸಲಿಕ್ಕಿಲ್ಲವೆ ? ಇದು ನೋಡು." ರಕ್ಷೆ ಮೈಕೈಗಳನ್ನೂ ಕಣ್ಣುಗಳನ್ನೂ ತೂಗಿ ತೋರಿಸಿದಳು. ಪ್ರಸಾದ ಅವಳ ಬಳುಕನ್ನೂ ಪಿಳಿಪಿಳಿಯನ್ನೂ ನೋಡಿ ತಲೆದೂಗಿದನು.
" ಬಾ. ನಿಮ್ಮೂರಿನಲ್ಲಿ ಒಂದು ವಸಂತಗೀತೆಯನ್ನು ಹಾಡಿ ನಿನ್ನ ನೃತ್ಯವನ್ನು ನಿಮ್ಮವರಿಗೆ ಪ್ರದರ್ಶಿಸಿ ನಲಿಯುವೆನು. ಈ ಹಾದಿಯಲ್ಲಿ ಹಿಂದು ಮುಂದೆ ಇರುವ ಯಾತ್ರಿಕರಿಗೆ ನಮ್ಮ ಆಟ ಹುಚ್ಚುಚ್ಚಾಟ."

ಸರಸರನೆ ಸಾಗಿ ಶಿವಪುರದ ಹಚ್ಚನ್ನ ಬಿಸಿಲು ಕಂಡ ಅವರಿಗೆ ಹೊಸ ಚೈತನ್ಯ ಬಂದಿತು. ಅಲ್ಲಿಂದ ' ರಕ್ಕಸಿಯ ಘಟ್ಟ'ದ ಪರಿಚಯ. ರಕ್ಕಸಿ ಚೆನ್ನಬಸವಣ್ಣನ ಬಳಗಕ್ಕಲ್ಲ, ಬೆನ್ನಟ್ಟಿ ಬಂದ ಮತ ಭ್ರಾಂತಿಗೆ ಇರಬಹುದೆಂದು ಯೋಚಿಸುತ್ತ ಅರ್ಧ ಘಟ್ಟವನ್ನೇರುವದರಲ್ಲಿಯೆ ರಕ್ಷೆ ದಣಿದುದನ್ನು ಕಂಡು ಪ್ರಸಾದನು ಒಂದು ದಿನ್ನೆಯನ್ನು ಆಶ್ರಯಿಸಿದನು. ಒಂದು ತಾಸುವಿಶ್ರಾಂತಿ. ಪುನಃ ಘಟ್ಟ. ಮಾತಿನಿಂದ ಅವಳ ಶ್ರಮವನ್ನು ಮರೆಮಾಡಲು ಬಯುಸಿದನು.

"ರಕ್ಷಾ! ನಾವು ಇಲ್ಲಿಯು ವರೆಗೆ ಬಂದಿರುವೆವು. ಚೆನ್ನಬಸವಣ್ಣನು ಬಯಲಾದ ಸ್ಥಳವನ್ನು ಊಹೆಯಿಂದ ಬಣ್ಣಿಸು ನೋಡುವಾ." "ನಿನಗೆ ಏನೋ ಸುಳಿವು ದೊರೆತಿದೆ. ನನಗೇಕೆ ಕೆಣಕುವುದು? ನೀನೇ ಹೇಳು." "ಕೆಣಕುವದಾದರೆ ಬೇಡ, ಬಾ." "ಇಲ್ಲವಪ್ಪ ಬಾ. ನಿನ್ನ ಸಿಡುಕು ನನ್ನ ಎದೆಯನ್ನೇ ಸೀಳುವದು. ಸುಮ್ಮನೆ ನನ್ನ ಕಲ್ಪನೆಯಲ್ಲಿ ಹೊತ್ತುಗಳೆದು, ನಿನ್ನ ಸುಂದರ ಭಾವನೆಯನ್ನು ತಡೆಯುವದು ಬೇಡೆಂದು ನಾನು ಹಾಗಂದೆನು." "ಹೂಂ! ಹೀಗೆ ಹಾದಿಗೆ ಬಾ.ನಿನ್ನ ಮುಂದೆ ನನ್ನ ಜಂಭ ಇರಲೇಬೇಕು. ಕೇಳು ಆ ಜನಗಳ ಘೋಷಣೆಯನ್ನು. ಸ್ವಲ್ಪ ಸುಧಾರಿಸಿ ನಾನೂ ಅನ್ನು ವೆನು ನೋಡು:

"ಅತ್ತಿ ಆಲದ ಮರ
ಸುತ್ತು ಬೆತ್ತದ ಹರ
ಉತ್ತತ್ತಿ ಬನದೊಳಗೆ ಬಯಲಾಗಿರುವ
ಉಳಿವಿ ಚೆನ್ನಬಸವಪ್ರಭು ಬಹು ಪರಾಕ್!"

"ಓಹೋ! ಶುದ್ಧ ಆರೇಮುಲ್ಲಾಪುರದವನು ನೀನು. ಚೆನ್ನಬಸವಣ್ಣನ ಹಿಂದೆ ಕಲಾದಿಗಿಯಿಂದ ಬಂದ ನಮ್ಮ ಕುಮಾರ ಪೈಕರಂತೆ ನೀನೂ ಸೇನಾನಿ ಯಾಗಲು ಯೋಗ್ಯನಿರುವೆ." "ಏನು? ಕುಮಾರ ಪೈಕರ ವಿಚಾರ. ನೀನೂ ನಮ್ಮವಳೆ?" "ಹಾಂ! ಚಿಕ್ಕಪ್ಪ ಆಧಾರಸಹಿತವಾಗಿ ಹೇಳುತ್ತಾರೆ. ಅದೊಂದು ಇತಿಹಾಸ. ಈಗ ಬೇಡ. ನನ್ನ ಕಾಲು ನನ್ನ ಮಾತಿಗೆ 'ಸೋ' ಎನ್ನುವದಿಲ್ಲ."

ಅಂತೂ ಕೊನೆಗೆ ಪ್ರಸಾದನ ಭುಜಬಲದಿಂದ ರಕ್ಷೆ ರಕ್ಕಸಿಯ ಗುಡಿಯ ಬಯಲಿಗೆ ಬಂದಳು. ಒಬ್ಬ ಪ್ರವಾಸಿಕ ಒಂದು ತೆಂಗಿನ ಕಾಯಿಯನ್ನು ನೇರ ವಾಗಿ ರಕ್ಕಸಿಯ ಮುಖಕ್ಕೆ ಬೀಸಿ ಹೊಡೆದನು. ಕಾಯಿ ಚಲ್ಲನೆ ಚೂರು ಚೂರಾಗಿ ಸಿಡಿಯಿತು. ಬಿಳಿಯ ಕೊಬ್ಬರಿ ಮಿಂಚಿನಂತೆ ಕಣ್ಣಿಗೆ ಸುಳಿದು ಆಯಾಸವನ್ನೆಲ್ಲ ಅಚ್ಚರಿಯಲ್ಲಿ ಮಾಯಮಾಡಿತು. ಪೂರ್ವಜರ ಮನಶ್ಶಾಸ್ತ್ರ ಪ್ರಾವೀಣ್ಯ. "ಇದಾವ ಗುಡಿ?" "ರಕ್ಕಸಿಯ ಗುಡಿ." ಪ್ರವಾಸಿ ಪ್ರಸಾದನಿಗೆ ತಿಳಿಸಿ ನಡೆದನು. "ರಕ್ಕಸಿ? ಸಾಧ್ಯವಿಲ್ಲ." ರಕ್ಷೆಯೊಡನೆ ಬಯಲಿನಲ್ಲಿ ಬಂದು ಕುಳಿತನು. "ರಕ್ಷಾ! ನಿನ್ನ ನಾಮಕರಣಕ್ಕೆ ಸಾಕ್ಷಿಯಾರು?" "ನಿನ್ನ ಊಹೆ ಸರಿ. ಚಿಕ್ಕಪ್ಪನೇ ಈ ಗುಡಿಯ ದೇವಿ ಸೂಚಿಸಿದ ನನ್ನ ಹೆಸರನ್ನು

ಬಳಕೆಯಲ್ಲಿ ತಂದಿರುವನು." "ಅತಿ ಯೋಗ್ಯ. ರಕ್ಷಣೆಯನ್ನಿತ್ತವಳು ರಕ್ಷಾ. ಇಲ್ಲಿಯ ಅಂದಿನ ಜನಗಳ ಮುಖ್ಯಸ್ಥಳೇ ಚೆನ್ನಬಸವಣ್ಣನ ಜನಗಳಿಗೆ ಆಶ್ರಯ ವನ್ನಿತ್ತವಳು. ರಾಣಿಬಿದನೂರಿನ ಚೆನ್ನಮ್ಮಾಜಿ ಶಿವಾಜಿಯ ಮಗನಿಗೆ ಆಶ್ರಯ ಕೊಟ್ಟಿರುವದು ಸತ್ಯವಾದಂತೆ ಇದೂ ಐತಿಹಾಸಿಕ. ನಂಜುಂಡಯ್ಯನವರು ಬಹಳ ಗುಪ್ತ ಕ್ರಾಂತಿಕಾರರು. ಅಂತೆಯೆ ನಿನ್ನನ್ನು ಆರಿಸಿ ಈ ಹೆಸರನ್ನಿಟ್ಟು ನನ್ನನ್ನು ಕಾಪಾಡಲು ಕಳಿಸಿರುವರು. ಆ ದೇವಿಗೆ ನಮಸ್ಕರಿಸುವ ಬದಲು ನಿನಗೇ ನಮಸ್ಕರಿಸಿ ನನ್ನ ಶೀಲವನ್ನು ಕಾಪಾಡಲು ಬೇಡುವೆನು.''

"ಆಗಲಿ. ಸದ್ಭಕ್ತ ಶಿರೋಮಣಿ. ಇಂದ್ರಾಣಿಯ ಬಿರಿನೋಟದಿಂದ ನಿನ್ನನ್ನು ರಕ್ಷಿಸುವೆನು." ಹಾಸ್ಯಕ್ಕೆ ಪ್ರತಿಹಾಸ್ಯ. ಇಬ್ಬರೂ ಗೊಳ್ಳೆಂದು ನಕ್ಕು ಕೂಗಳತೆಯಲ್ಲಿದ್ದ ಕ್ಷೇತ್ರದ ಹಾದಿ ಹಿಡಿದರು. ಉನ್ನತ ಶೃಂಗದ ತಪ್ಪಲ್ಲು ಭೂಮಿಯ ಮೇಲೆ ಅಂದು ಅವರು ಬೆಳ್ದಿಂಗಳಿನ ನೀಲಾಕಾಶದ ಅಡಿಯಲ್ಲಿ ಹುಲ್ಲಿನ ಹಾಸಿಗೆಯ ಮೇಲೆ ಒರಗಿದರು. ಬೆಳಗಿನ ತಂಪು ಗಾಳಿಗೆ ಎದ್ದು ಕನಸಿನ ಸಿರಿಯಂತಿದ್ದ ಹುಲ್ಲಿನ ಉರಿಯ ಮುಂದೆ ಕುಳಿತರು. ಅಂದು ಮುಂಜಾನೆ ಅಲ್ಪಾಹಾರದ ನಂತರ ಸುತ್ತುಮುತ್ತಿನ ಸಂದರ್ಶನೀಯ ಸ್ಥಳಗಳನ್ನು ನೋಡಿ ದರು. ರಥೋತ್ಸವದ ನಂತರ ಮೋಟಾರಿನಲ್ಲಿ ಹಳ್ಳಿಯಾಳಕ್ಕೆ ಹೋಗಿ ವಸತಿ ಮಾಡಿ, ಮರುದಿನ ಮುಂಜಾನೆ ಕಾರವಾರಕ್ಕೆ ಹೋದರು. ಅಂದು ಸಾಯಂಕಾಲ ಸಮುದ್ರ ತೀರದ ಮಳಲಿನಲ್ಲಿ ಕುಳಿತು ಕಾರವಾರದ ವೈಭವ ವನ್ನು ಮನವಾರೆ ಸವಿದರು.

ಬಂದರದ ಮುಖದಲ್ಲಿರುವ ದೇವಗಡದ ದೀಪಸ್ತಂಭ ಸೂರ್ಯಾಸ್ತವಾ ಗುತ್ತಲೇ ಚಕ್‌ಚಕ್ ಸುತ್ತುವದನ್ನು ಆರಂಭಿಸಿತು. ತೆರೆಗಳ ಮೇಲೆ ಹಾಯು ಬರುತ್ತಿದ್ದ ಆ ವಿದ್ಯುತ್ತಿನ ಸೆಳಕು, ತೆರೆಗಳ ಚಲ್ಲಾಟ, ಮುನ್ನೀರಿನ ಭೋರಾಟ, ಗಾಳಿಯ ಗಿಡಗಳ ಸುಳಿಸಿಳ್ಳು ಇವರನ್ನು ಮೂಕಪ್ರೇಕ್ಷಕರನ್ನಾಗಿ ಮಾಡಿದವು. ಕೂರ್ಮಗಡ ಮೊದಲಗಡಗಳ ಕಡೆಯಿಂದ ಸೂರ್ಯಾಸ್ತದ ಮುನ್ನವೇ ಹೊರಟು ಸೂರ್ಯಾಸ್ತದ ನಂತರ ದಂಡೆಯನ್ನು ಸೇರುತ್ತಿದ್ದ ಕಲಾಸಿಗಳು ದೋಣಿಗಳನ್ನು ಮಳಲಿಗೆ ಎಳತಂದು ತಮ್ಮ ಅಂದಿನ ಶ್ರಮವಿಭಾಗಕ್ಕೆ ಹೊರ ಟರು. ರಕ್ಷಾ ಪ್ರಸಾದರು ತಾವೂ ಎದ್ದು ಪೇಟೆಯೊಳಗೆ ಹೋಗಿ ಹಲವು ಹಣ್ಣುಹಂಪಲಗಳನ್ನೂ ಕೆಲವು ತಿನಿಸುಗಳನ್ನೂ ಕೊಂಡು ಕುದುರೆಯ ಗಾಡಿ

ಯಲ್ಲಿ ಕೋಡಿಬಾಗಕ್ಕೆ ಹೋದರು. ಅಲ್ಲಿಂದ ಮುಂದೆ ದೋಣಿಯಲ್ಲಿ ಪ್ರಯಾಣ ವನ್ನಾರಂಭಿಸುವದಿತ್ತು. ಸರಕಾರಿ ತೊಲೆಗಳ ಕೋಡೀಬಾಗದ ಆ ಕೋಠಿ ಮಿಣುಕು ದೀಪಗಳಿಂದ ಶಾಂತವಾಗಿತ್ತು. ತೆರೆಗಳು ದಂಡೆಗೆ ಪಳಪಳನೆ ತಟ್ಟು ತ್ತಿದ್ದವು.

ಹತ್ತು ಹದಿನೈದು ನಿಮಿಷಗಳಲ್ಲಿ ಪಯಣಿಗರು ದೋಣಿಯನ್ನೇರಿದರು. ರಕ್ಷಾ ಪ್ರಸಾದರು 'ಮೇಮ್-ಸಾಹೇಬ' ರಾದರು. ಹುಲ್ಲಿನ ಮೇಲೊಂದು ಚಾಪೆ ಯನ್ನು ಉರುಳಿಸಿ ದೋಣಿಯ ಕಲಾಸಿ ಇವರಿಗೆ ಮನ್ನಣೆಯಿತ್ತನು. ಭರತಿ ಯನ್ನು ನೋಡಿ ದೋಣಿ ಹಾಯ್ಗೂಡಕ್ಕೆ ಇಳಿಯಿತು. ಕಡಲು ಗಾಳಿ ಬೀಸಿತು. ಈರ್ವರೂ ಹಾಗೆಯೆ ಒರಗಿದರು. ಅಂಬಿಗ ಹಾಯ್ಬಿಟ್ಟು ಚುಕ್ಕಾಣಿ ಹಿಡಿದು ಕುಳಿತನು. ನದಿಯ ಬದಿಯಿಂದ ತೋಟದ ಮನೆಗಳಿಂದ ದೀಪಗಳ ಮಿಣುಕು ತೆಂಗುಗಳ ಸಂದಿನಿಂದ ಇಣಿಕಿ ನದಿಯಲ್ಲಿ ಬಿಂಬಿಸುತಿದೆ. ಜನರ ಉಲಿವೂ ಕೇಳಬರುತಿದೆ. ದೋಣಿಗೆ ತೆರೆಗಳು ಪಳಪಳ ತಟ್ಟುತಿವೆ. ತೆರೆತರಂಗಗಳಲ್ಲಿ ತಾರೆಗಳು ನೂರ್ಮಡಿಯಾಗಿ ನಲಿಯುತಿವೆ. ಎಲ್ಲಿಂದಲೋ ಒಂದು ಬಾಲ ಚಿಕ್ಕೆ ಜಾರಿತು. ದಿಗಂತದಲ್ಲಿ ಸೇರಿತು. ಸದ್ದಿಲ್ಲದೆ ಚಂದಿರ ಬಾನಿನಲಿ ಮೂಡಿ ನದಿಯ ನೀಲಿಯ ನೀರಿಗೆ ಹಾಲೆರೆಯುವನು. ದೋಣಿಯ ಮುನ್ನಡೆಗೆ ಇಬ್ಬದಿ ಯಾಗಿ ಪ್ರವಾಹ 'ಬನ್ನಿ' ಯೆಂದು ಬಾಗಿ ಪಯಣಿಗರಿಗೆ ಶರಣು ಶರಣೆನ್ನು ವದು. ಕಡಲಗಾಳಿ ಕಡಿಮೆಯಾಯಿತು. ಹಾಯಿಯನ್ನು ಸುತ್ತಿ ಅಂಬಿಗರು ಹುಟ್ಟು ಹಿಡಿದರು. ಚಪ-ಚಾಪಕ್ಕೆ ನಾವೆ ಹಾಯಾಗಿ ತೇಲುತಿದೆ. ಆಗಲೇ ನಮ್ಮವು ತೇಲುಗಣ್ಣು. ಪಯಣಿಗರು ಅದೆಲ್ಲಿಯೋ ನೀಲಾಂಬರದ ನಿರಾಲಂಬ ಪ್ರಯಾಣದ ಸುಖನಿದ್ರೆಯಲ್ಲಿರುವರು. ಹಸುಗೂಸಿನಂತೆ ಅವನ ಎದೆಗೆ ಒರಗಿರುವಳು ರಕ್ಷೆ. ಅವಳಿಗೆ ತನ್ನ ತೋಳಿನ ರಕ್ಷಣೆಯಿತ್ತು ದೋಣಿಗೆ ಒರಗಿ ಪ್ರಸಾದ ನಿದ್ರಿಸುತ್ತಿರುವನು. ಈ ಸವಿನೋಟವನ್ನು ಕಂಡು ಅಂಬಿಗರು ನಸು ನಗುವರು. ಸಾಗಿದೆ ದೋಣಿ. ಅರೆಗಣ್ಣಿನಲ್ಲಿದ್ದ ಅಂಬಿಗ ಬೆಳಗಿನ ಜಾವದ ಕೋಳಿಯ ಕೂಗು ಕಿವಿಗೆ ತೂರಿ ಬಂದಾಗ ಕಣ್ಣು ತೆರೆಯುವನು ನಿಚ್ಚಳವಾಗಿ. ಎದುರಿಗೆ ಬಾನಿನಲಿ ಬೆಳ್ಳಿ ಮೂಡಿದೆ. ಹುಟ್ಟಿನ ಚಪ-ಚಾಪ ತೀವ್ರವಾಗು ವದು. ಆಗಸದಲಿ ಎದುರಿಗೆ ಕೆಂಪಡರುವುದು. ಮುಗಿಲಿನ ಪರೆಗಳು ಸಾಸಿರ ಬಣ್ಣದಾಳಿದರೆ ನದಿಯ ನೀರು ದ್ವಿಗುಣಿಸಿ ಕುಣಿಯುವದು. ಈ ರಾಗ-ರಂಗ

ವಿಲಾಸದಲ್ಲಿರುವಾಗಲೇ ನಾವಿಗನು ದಂಡೆಗೆ ದೋಣಿಯನ್ನು ಅನಿಸಿ, ಪಯಣಿಗರನ್ನು ಎಚ್ಚರಿಸುವನು: ಅಚ್ಚರಿಯ ದೋಣಿಯ ಪಯಣವ ಕೊನೆಗಾಣಿಸಲು. ರಕ್ಷಾ-ಪ್ರಸಾದರು ಹುಡಿಗೆ ಅಡಿಯಿರಿಸಿದರು. ಕುಮಾರ ಪೈಕನು ಮಗಳನ್ನು ತಬ್ಬಿಬಿಟ್ಟು ಅತಿಥಿಯನ್ನು ಸ್ವಾಗತಿಸಿದನು.

ತಣ್ಣೆರಳಿನ ಮಂಚಿಕೆಯ ಮೇಲೆ ವಿರಾಮ, ಬಾಗಿದರೆ ಕೈಗೆ ನೀರು ನಿಲುಕುವ ಬಾವಿಯ ಸ್ನಾನ, ಹಣ್ಣು ಹಂಪಲ, ತಿಂಡಿ ತಿನಸು, ಬಾಳೆಯ ಗೊನೆ, ಎಳದೆಂಗಿನ ಸೀನೀರು, ಸಕ್ಕರೆ, ಬಿಸಿ ಹಾಲು ಇವುಗಳಿಂದ ಸಂತಸ ಹೊಂದಿ ಅತಿಥಿಯೂ ಅತಿಥಿಯೊಂದಿಗೆ ಅತಿಥಿಯಾದ ರಕ್ಷೆಯೂ ಆ ರಾತ್ರಿ ದೋಣಿ ಕಾರವಾರಕ್ಕೆ ಹೊರಡುವ ವರೆಗೆ ಕಿನ್ನರಜೀವಿಗಳಾಗಿದ್ದರು. ಫೆಬ್ರುವರಿ ೧೮ ಕ್ಕೆ ಅಗಲಿದವರು ೨೩ ನೆಯ ರಾತ್ರಿ ಧಾರವಾಡದ ಬಳಗವನ್ನು ಕೂಡಿದರು.

ಒಂದು ವಾರ ಇಂದ್ರಾಣಿ ಪ್ರಸಾದನ ಕಣ್ಣಿಗೆ ಬೀಳಲಿಲ್ಲ. ಮಾರ್ಚ ೨೨ ನೆಯ ರಾತ್ರಿ ಪ್ರಸಾದನು ಕಣ್ಣಿಗೆ ಕಣ್ಣು ಹಚ್ಚಲಿಲ್ಲ. ಮರುದಿನ ಇಂದ್ರಾಣಿಯನ್ನು ಕಾಣಲು ಆತುರನಾಗಿ ಹೋದನು. ಇಂದ್ರಾಣಿ ಇವನ ಸಮ್ಮುಖದಲ್ಲಿ ತನ್ನ ಬಿಗುವಿನ ಅನಾದರವನ್ನು ತೆರೆದಿಟ್ಟಳು. "ನಿನ್ನ ವಿವೇಕವನ್ನು ನಿನ್ನ ಬೆಂಕ ಹಿಂದಿರಿಸಿದೆ. ಒಂದು ದಿನ ನೀನು ಪಶ್ಚಾತ್ತಾಪಕ್ಕೆ ಗುರಿಯಾಗುವೆ. ಉಪಾಯವಿಲ್ಲ." ಪ್ರಸಾದನ ಈ ಹೃದಯಸ್ಪರ್ಶಿ ನುಡಿಗಳಿಗೂ ಅವಳ ಮೌನ ಮಿಡಿಯಲಿಲ್ಲ, ನುಡಿಯಲಿಲ್ಲ. ಪ್ರಸಾದ ಹಿಂದಿರುಗಿ ಬಂದು ತನ್ನ ಆಲಾಪಗಳಿಂದ ಚಂದ್ರಕಾಂತನ ಅಭ್ಯಾಸಕ್ಕೆ ಭಂಗ ತಂದನು. ಅವುಗಳಲ್ಲಿ ಆನಂದ ದುಃಖ ಯಾವ ಇಳಿಕೆ ಏರಿಕೆ ಇರಲಿಲ್ಲ. ಫಾಲ್ಗುನ ಮಾಸದ ಬರಿತನವಿತ್ತು. ಮಾರ್ಚ ೨೫ ಕ್ಕೆ ಡೆಹರಾಡೂನಿಗೆ ಒಂದು ಪತ್ರಬರೆದು, ಮನಸ್ಸಿನ ಸ್ತಿಮಿತವನ್ನು ಮರಳಿ ಪಡೆದು, ಅಭ್ಯಾಸವನ್ನು ಆರಂಭಿಸಿದನು. ತನ್ನ ಪರೀಕ್ಷೆಪ್ರವಾಸಗಳನ್ನು ಮುಗಿಸಿ ಪ್ರಸಾದನು ಮೇ ತಿಂಗಳಲ್ಲಿ ತನ್ನವರೊಡನೆ ಆರೇಮಲ್ಲಾಪುರದಲ್ಲಿದ್ದನು. ಪೂವತ್ತು ವರ್ಷಗಳ ಹಿಂದೆ ಠಾಕೂರರವರು ಬರೆದ "My wrestlings with the shadows are over" ಎಂಬ ವಾಕ್ಯವು ಅದೇ ತಿಂಗಳ ಅದೇ ದಿನ ನೆನಪಿಗೆ ಬಂದು ೧೯೪೩ ನೆಯ ಮೇ ೨೫ ಕ್ಕೆ ತನ್ನವರೆದುರು ಅತ್ಯಂತ ಅಲೌಕಿಕವಾದ ಉಲ್ಲಾಸವನ್ನು ತೆರೆದಿಟ್ಟು, ಅವರು ತಮ್ಮೊಳಗೆಯೇ ಬೆರಳು ಕಚ್ಚುವಂತೆ ಮಾಡಿದನು.

ಜೂನ್ ೧೭ ನೆಯ ಮಧ್ಯಾಹ್ನ ನಂದೀಮಠ ಅವರ ಮನೆಯಲ್ಲಿ ಕ. ಯು. ಸಂಘದ ಕಾರ್ಯದರ್ಶಿಯು ಕನ್ನಡ 'ಗೀತಾಂಜಲಿ'ಯ ಹಸ್ತಪ್ರತಿಯಿಂದ ರವೀಂದ್ರರ ಪದ್ಯವನ್ನು ಓದಿ ಮೂವರು ಜವ್ವನೆಯರನ್ನೂ ನಂಜುಂಡಯ್ಯ ನವರನ್ನೂ ಸೊಗಸುಗೊಳಿಸುತ್ತಿದ್ದನು. "ತಡೆದಿದೆ ಮಳೆ ಬಹುದಿನ" ಎಂದು ನಂಜುಂಡಯ್ಯನವರು ಮರುನುಡಿದು, "ಇಂದಾಗಲೀ ನಾಳೆ ಮುಂಜಾನೆ ಯಾಗಲೀ ಆದ್ರಾ ಮಳೆಯ ಪ್ರವೇಶವಿದೆ. ಕಾರ್ಯವಾರದಲ್ಲಿ ಇದೇ ದಿನಗಳಲ್ಲಿ ಅಲ್ಲವೆ 'ವೃಷ್ಟಿಯ ಕೃಪಾದೃಷ್ಟಿ' ಬೀಳುವದು, ರಕ್ಷಾ?" ಎಂದರು. ಮುಂದರಿ ಯುವವರಿದ್ದರು. ಆಳು ಬಂದು ಇದೀಗ ರಾಣಿಬಿದನೂರಿನವರು ಯಾರೋ ಬಂದು ರಕ್ಷಾದೇವಿಯವರಿಗೆ ಈ ಪತ್ರ ಮುಟ್ಟಿಸಲು ಹೇಳಿ ಹೋದರೆಂದು ಒಂದು ಪತ್ರವನ್ನು ತಂದಿರಿಸಿದನು. ವಿಳಾಸದ ಅಕ್ಷರ ಪ್ರಸಾದನವಲ್ಲವೆ? ರಕ್ಷೆಯ ಕೈಗಳು ಕಂಪಿಸಿದವು. ಪ್ರಸಾದನ ಪ್ರಥಮ ಪತ್ರ. ಪ್ರಮಾದವಿರ ಲಿಕ್ಕಿಲ್ಲವಷ್ಟೆ? ಇವಳ ಸ್ಥಿತಿಯನ್ನು ಕಂಡು ಎಲ್ಲರೂ ಮೂಕವಿಸ್ಮಿತರಾಗಿದ್ದರು.

ಚೇತರಿಸಿಕೊಂಡು ಪತ್ರವನ್ನೊಡೆದಳು. ಇಂದ್ರಾಣಿಯು ಬದಿಯಲ್ಲಿರಿ ಸಿದ ಪತ್ರದ ಕವಚವನ್ನು ತೆಗೆದುಕೊಂಡು ನೋಡಿ ನಂಜುಂಡಯ್ಯನವರಿಗೆ ಒಪ್ಪಿಸಿದಳು. ರಕ್ಷೆ ಓದಿ, ಎಷ್ಟೋ ಹೊತ್ತು ನಿದಾನಿಸಿ ಕೊನೆಗೆ ನಿರ್ಧಾರ ದಿಂದ ಪತ್ರವನ್ನು ಇಂದ್ರಾಣಿಯ ಕೈಗೆ ಇತ್ತು, ಸರಸರನೆ ಇಳಿದು ಚಂದ್ರ ಕಾಂತನಲ್ಲಿಗೆ ಓಡಿದಳು. ಇಂದ್ರಾಣಿ ಎರಡು ಮೂರು ಬಾರಿ ಪತ್ರವನ್ನು ಓದಿ ಕೊನೆಗೆ ಮುಗಿಸುತ್ತಿರುವಾಗ ರಕ್ಷಾ ಚಂದ್ರಕಾಂತರು ಮೇಲೆ ಬಂದರು. ಇಂದ್ರಾಣಿಯ ಕಣ್ಣುಗಳಲ್ಲಿ ಎರಡು ದೊಡ್ಡ ಮುತ್ತುಗಳು ತುದಿಕರಿಸಿ ನಿಂತಿ ದ್ದವು. "ರಕ್ಷಾ!" ಎಂದು ಅವಳ ಅಪ್ಪುಗೆಯಲ್ಲಿ ಅರೆ ಕ್ಷಣವಿದ್ದು ಸರಸರನೆ ಕೆಳಗೆ ಹೋದಳು. ನಂಜುಂಡಯ್ಯನವರು ಪತ್ರವನ್ನೋದಿ ಚಂದ್ರಕಾಂತನಿಗೆ ಒಪ್ಪಿಸಿದರು.

ಆರೇಮಲ್ಲಾಪುರ
೧೭—೬—೧೯೪೩

ಆತ್ಮೀಯ ರಕ್ಷಾದೇವಿಗೆ ಶಿವಪ್ರಸಾದನ ಹೃದ್ಗತಗಳು.

ಹೊಸ ಜೀವನದಲ್ಲಿ ಅಡಿಯಿಡುವ ಕಾಲ ಇಂದು ನನಗೆ ಒದಗಿದೆ. ಈ ಮುನ್ನ ನಿನಗೂ ಚಂದ್ರಕಾಂತನಿಗೂ ನಂಜುಂಡಯ್ಯನವರಿಗೂ ಈ ವಿಚಾರ

ವನ್ನು ತಿಳಿಸಿದರೆ ನನ್ನ ನಿರ್ಧಾರಕ್ಕೆ ಭಂಗಬರುವದೆಂಬ ಅಳ್ಳೆದೆಯಿಂದ ನಾನು ಮೌನದಿಂದಿದ್ದೆನು. ಅನ್ಯಥಾ ಭಾವಿಸದೆ ನಾಳೆ ಅವರೂ ನೀನೂ ನಿಲ್ದಾಣದಲ್ಲಿ ಕಾಯ್ದಿರುವಿರಾಗಿ ನಂಬಿದ್ದೇನೆ. ನಾನು ನಾಳೆ ಮುಂಜಾನೆ ಮೇಲಿನಿಂದ ಡೆಹರಾಡೂನಿಗೆ ಹೊರಡುವೆನು. ನನಗೆ ಅರಸರ ಅಧಿಕೃತ ಸೇನಾದಳ (King's Commission) ದ ನಿಣಾ೯ಯಕ ಆಯ್ಕೆಗೆ ಕರೆ ಬಂದಿದೆ. ನನ್ನ ಮುಗ್ಧ ಬಳಗವನ್ನು ನನ್ನ ಆಶಾಪೂರ್ಣವಾದ ಭವಿತವ್ಯದಿಂದ ಸಂತಯಿಸಿದ್ದೇನೆ. ಈ ವಿಚಾರವನ್ನು ಇಂದ್ರಾಣಿಗೆ ತಿಳಿಸುವ ಪ್ರಮಾದವನ್ನು ಮಾಡಬೇಡ. ಅವಳ ತಪ್ಪು ತಿಳುವಳಿಕೆಯ ಜಪಮಾಲೆಯಲ್ಲಿ ಈ ಪ್ರಸಂಗವೂ ಒಂದು ಮಣಿಯಾಗಿ, ನನ್ನ ಈ ಸಾಹಸ ಅವಳ ದೃಷ್ಟಿಯಲ್ಲಿ ನಿರಾಶೆಯ ಪರಿಣಾಮವೆಂದಾಗಲಿ ದುರಾಗ್ರಹದ ದೊಡ್ಡಸ್ತಿಕೆಯೆಂದಾಗಲಿ ಅಥವಾ ಇನ್ನಾವುದಾದರೂ ಅಸಹಜವಾದ ಬಣ್ಣದಲ್ಲಿಯಾಗಲಿ ಕಾಣಬಹುದು. ಅಂತೆಯೆ ನನ್ನ ಜೀವನದ ಘಟನೆಗಳು ಅವಳಿಂದ ದೂರ ದೂರ ನಡೆಯಲಿ. ನಾನು ಅವಳ ಜೀವನದಲ್ಲಿ ಯಾವುದೇ ಮಹತ್ವದ ಘಟಕನಾಗದಂತೆ ಇಲ್ಲಿಯ ವರೆಗೆ ಎಚ್ಚರದಿಂದ ಪಾರಾಗಿ ಬಂದಿದ್ದೇನೆ. ಕೇವಲ ಅವಳ ರೂಪದ ಬಿಂಕವನ್ನೊಂದೇ ಮುಂದೆ ಮಾಡಿಕೊಂಡು ಅವಳ ಮುಗ್ಧ ಮೃದು ಹೃದಯಕ್ಕೆ ಬರೆ ಕೊಡುವ ಇಚ್ಛೆ ನನಗೆ ಇದ್ದಿಲ್ಲ. ಅಂತೆಯೆ ಅಲಿಪ್ತನಾದೆನು. ರೂಪರಾಜ್ಞಿಯಾದ ಅವಳನ್ನು 'ದೇವಿ'ಯೆಂದು ಪೂಜಿಸುವ ತರುಣನೊಬ್ಬನು ಸಿಗದುಂಟೆ? ನನ್ನ ಮನಸ್ಸಿನ ವಿರುದ್ಧ ಅವಳನ್ನು ಬಿಂಕದಿಂದ ಮುಕ್ತ ಮಾಡಲು ನಾನು ಏಕೆ ಅನ್ಯಥಾ ಬಯಸಬೇಕು ? ಜಗತ್ತು ಸ್ತ್ರೀಯನ್ನು 'ಬಿಂಕದ ಸಿಂಗಾರಿ' ಯೆಂದು ಪೂಜಿಸಿ ಬದಿಗಿರಿಸಿ ಅವಳನ್ನು ಪ್ರಾಣಿಮಾತ್ರಳೆಂದು ಮೀಸಲಿರಿಸಲು ಇನ್ನೂ ಸಿದ್ಧವಿರುವಾಗ ನಾನೊಬ್ಬನೇಕೆ ಅವಳೊಬ್ಬಳನ್ನು ಪರಿವರ್ತಿಸಲು ಹವಣಿಸುವುದು ?

ನನ್ನ ನಿನ್ನ ವಾಸನಾರಹಿತ ಸ್ನೇಹವು ನನ್ನ ಮತ್ತು ಚಂದ್ರಕಾಂತನಲ್ಲಿರುವ ಶುದ್ಧ ಸರಳ ನಿಷ್ಕಪಟ ಪ್ರೇಮಪೂರ್ಣ ಸ್ನೇಹದಂತೆ ಬಳೆಯಲಿ. ಇದೇ ನನ್ನ ನಿತ್ಯ ಪ್ರಾರ್ಥನೆ. ಅಂತೆ ಎಂದಿಗೂ ನಿನ್ನದಾಗಲಿ. ಇಂದ್ರಾಣಿಯಂಥ ತಪ್ಪು ತಿಳುವಳಿಕೆಯುಳ್ಳ ಪ್ರೇಮಿಯು ನಿನಗೆ ದೊರೆಯದಿರಲಿ. ಇದು ನಿನಗೆ ನನ್ನ ಶುಭಾಶಯ. ನಾನು ಇಲ್ಲಿಗೆ ಬರುವಾಗ ನೀನು ನನ್ನ ಜೀವನದ ಸಂದೇ

ಶವನ್ನು ಬಯಸಿರಲಿಲ್ಲವೆ ? ಇದೀಗ ರೂಪುಗೊಂಡಿದೆ : ಇಗೋ ನಿನಗಾಗಿ :

"Life is a fine dream : Let us realise it."

ಜೀವನ ಒಂದು ಸುಂದರ ಕನಸು : ನಾವು ಸಾಧಿಸುವಾ.

ನಿನ್ನ ಆತ್ಮೀಯ
ಶಿವಪ್ರಸಾದ.

ರಕ್ಷೆ ಪತ್ರವನ್ನು ಪಡೆದು ಕವಚದಲ್ಲಿ ಮಡಿಚಿತ್ತು ತನ್ನ ವಕ್ಷಸ್ಥಳದಲ್ಲಿ ರಕ್ಷಣೆಯನ್ನಿತ್ತಳು. ಇಂದ್ರಾಣಿ ನಂಜುಂಡಯ್ಯನವರ ಮೇಲುಡುಪನ್ನು ತಂದು ಮುಂದಿರಿಸಿ "ಗಾಡಿ ಬಿಡಲು ಇನ್ನು ೧೫ ನಿಮಿಷ ಉಳಿದಿವೆ. ಕುದುರೆಯ ಗಾಡಿ ನಿಂತಿದೆ. ಬೇಗ ಬಾ, ಅಪ್ಪಯ್ಯ" ಎಂದು ಅವರನ್ನು ದಿಟ್ಟತನದಿಂದ ಸಣ್ಣ ಮಕ್ಕಳಂತೆ ಎಳೆದೊಯ್ದಳು. ಅಯ್ಯನವರು ಯಾಂತ್ರಿಕ ವಾಗಿ ಗಾಡಿಯನ್ನೇರಿದರು. ಇಂದ್ರಾಣಿಯ ಹುದುಗಿದ ಅಳಲ ಅಳವನ್ನರಿತ ಎಲ್ಲರೂ ಮೂಕರಾಗಿ ಬೀಳ್ಕೊಟ್ಟರು. ಇಂದ್ರಾಣಿಯ ಇಚ್ಛೆಗೆ ಎದುರಾಗುವ ಎದೆಗಾರಿಕೆ ಯಾರಿಗೂ ಬರಲಿಲ್ಲ. ಅವಳ ಈ ಸಾಹಸ ತಡವಾದುದೆಂದರಿತರೂ ನಂಜುಂಡಯ್ಯನವರು ಅವಳೊಂದಿಗೆ ಹುಬ್ಬಳ್ಳಿಯ ಮೇಲು ಹತ್ತಿ ರಾತ್ರಿ ರಾಣಿಬಿದನೂರಿನಲ್ಲಿಳಿದರು. ನಿಲ್ದಾಣದಲ್ಲಿದ್ದ ಸಾವಳಿಗಯ್ಯನವರನ್ನು ಕಂಡು ಇಂದ್ರಾಣಿ ತಾನೇ ಮುಂದಾಗಿ ಹೋಗಿ ತಾವೂ ಅವರೊಡನೆ ಬಂಡಿಯಲ್ಲಿ ಆರೇಮಲ್ಲಾಪುರಕ್ಕೆ ಬರುವದಾಗಿ ಹೇಳಿದಳು. ಪೂರ್ವಾಪರವನ್ನು ಗ್ರಹಿಸಿದ ಸಾವಳಿಗಯ್ಯನವರು "ನೀವು ಇಳಿದ ಗಾಡಿಯನ್ನೇ ಹತ್ತಿ ಪ್ರಸಾದನು ಹರಿ ಹರಕ್ಕೆ ಹೋದನು. ಅಲ್ಲಿಂದ ಅವನಿಗೆ ಪ್ರವಾಸ-ಸೌಕರ್ಯದ ವ್ಯವಸ್ಥೆ ಆಗುವದಿದೆ. ಅವನ ಮನಸ್ಸಿನ ನಿರ್ಧಾರವನ್ನು ಬದಲಿಸುವ ವ್ಯರ್ಥ ಹವ್ಯಾ ಸಕ್ಕೆ ಹೋಗದೆ ಈ ತಾಯಿ ನಾಳೆ ಅವನಿಗೆ ತನ್ನ ಪರಿವರ್ತನೆಯನ್ನು ತೋರಿ ದರಾಯಿತು. ನಾವೆಲ್ಲರೂ ಕರುಳಿನ ಮಿಡುಕನ್ನು ಬದಿಗಿರಿಸಿ ಅವನ ಕಲ್ಯಾಣ ವನ್ನೇ ಕೋರಿ ತಾಳ್ಮೆಯಿಂದ ಒಳಿತು ಬರುವನಕ ಕಾಯುವಂತೆ ಈ ತಾಯಿಗೆ ಸಾಧ್ಯವಾದರೆ ಕಾಯಲಿ. ಅದು ನಮಗೂ ನಿಮಗೂ ಅವನಿಗೂ ಹಿತ. ಅಂತೆಯೆ ನಾಳೆ ಮುಂಜಾನೆ ಇಲ್ಲಿಯೆ ಅವನೆದುರು ನಿಮ್ಮ ತಾಯಿ ತನ್ನ ಉಲ್ಲಾಸವನ್ನು ಪೂರ್ಣ ತೆರೆದಿಡಲಿ. ಪರಿಣಾಮವನ್ನು ತಕ್ಷಣ ಅವನ ಅಜ್ಜಂ ದಿರ ಎದುರು ಇಡಿರಿ. ಆ ಮೇಲೆ ಅವನು ಬಲ ಅವನ ಅಜ್ಜಂದಿರು ಬಲ.

ನಾಳೆ ಗಾಡಿ ಹೋದ ನಂತರ ನನ್ನೊಡನೆ ಅವನ ಅಜ್ಜಂದಿರನ್ನು ಕಾಣಲು ನೀವೂ ಬರುವದಾದರೆ ನಾನೂ ನಿಲ್ಲುವೆನು. ಹೇಗೆ ಮಾಡುವಿರಿ ?"

ಈರ್ವರೂ ಒಪ್ಪಿ ಸಾವಳಿಗಯ್ಯನವರನ್ನು ತಮ್ಮಲ್ಲಿಗೆ ಕರೆದೊಯ್ದರು. ರಾಣಿಬಿದನೂರಿನ ವಿಸ್ತರಣವು ಈ ಕಾರ್ಮೋಡದ ರಾತ್ರಿಯನ್ನು ಕಳೆದು ನಾಳೆಯಾದರೂ ಕಾರು ಹುಣ್ಣಿಮೆಯ ಪೂರ್ಣ ಚಂದಿರನನ್ನು ಕಾಣಬಹುದೋ ಹೇಗೆಂದು ತವಕಿಸುತ್ತಿತ್ತು. ಮರುದಿನ ಮುಂಜಾನೆ ರಾಣೆಬಿದನೂರಿನ ನಿಲ್ದಾಣದಲ್ಲಿ ತೆನೆಯಲ್ಲಿ ತುಸು ಅರಳಿದ ಮೂಗಿನ ಕನ್ನಿಕೆಯೋರ್ವಳ ಕೆಳದುಟಿಯ ರಂಗಭೂಮಿಯ ಮೇಲೆ ಮೇಲ್ದುಟಿಯ ಬಿಲ್ಲುಗಾರ್ತಿ ಹಲವು ನಾಟ್ಯ ಮಾಡುತ್ತಿದ್ದಳು. ಅವಳ ನೀರಲಗಣ್ಣುಗಳು ನೋಡುವವರು 'ಶರಬತೀ ಆಂಖೆ' ಎಂದೂ 'ಮದಿರಾಕ್ಷಿ' ಎಂದೂ ಬಣ್ಣಿಸುವಂತೆ ಆಶಾಭರಿತವಾಗಿದ್ದವು. ಒಂದೆಡೆಯಿಂದ ನಂಜುಂಡಯ್ಯನವರೂ ಮೇಲಿನಿಂದ ಕೆಳಗೆ ಸಾವಳಿಗಯ್ಯನವರೂ ಪ್ರಸಾದನನ್ನು ಅರಸುವ ವಿಚಾರದಿಂದ ಉತ್ಸುಕರಾಗಿ ನಿಂತಿದ್ದರು. ಗಾಡಿಯು ನಿಲ್ಲುವ ಅವಧಿ ಅತಿ ಸ್ವಲ್ಪ. ಹತ್ತುವ ಜನ ಬಹಳ. ಗಾಡಿ ನಿಲ್ದಾಣದಲ್ಲಿ ಬಂದು ನಿಂತಿತು. ಅತ್ತಿಂದ ಇತ್ತ ಮೂವರೂ ಓಡಾಡಿ ಹುಡುಕಿದರು. ಕಾಣಲಿಲ್ಲ. ಗಾಡಿ ಕೂಗಿತು. ಇವರು ತನಗಾಗಿ ಇಲ್ಲಿ ಬರಬಹುದೆಂದು ಕನಸು ಮನಸ್ಸಿನಲ್ಲಿಯೂ ಎಣಿಸದ ಪ್ರಸಾದನು ಗಾಡಿ ಕೂಗಿದಾಗ ಸಹಜವಾಗಿ ಹೊರಗೆ ಮುಖವಿಟ್ಟನು. "ಅಗೋ ! ಅಲ್ಲಿ" ಎಂದು ಸಾವಳಿಗಯ್ಯನವರೂ ಅವರ ಹಿಂದೆಯೇ ನಂಜುಂಡಯ್ಯನವರೂ ಧಾವಿಸಿದರು. ನಿರಾಶಳಾಗಿ ನಿಂತಿದ್ದ ಇಂದ್ರಾಣಿಯ ಮನಸ್ಸು ಎಲ್ಲಿಯೋ ಇದ್ದುದರಿಂದ ತತ್‌ಕ್ಷಣವೇ ಹಿಂದಿರುಗಲಿಲ್ಲ. ಗಾಡಿ ಸಾಗಿತು. "ಇನ್ನಿ !" ಎಂಬ ಎರಡಕ್ಕರಗಳ ಪರಿಚಿತ ವಾಣಿಯನ್ನು ಗಾಳಿ ತೂರಿ ತಂದಿತು. ಬೆಚ್ಚಿಬಿದ್ದು 'ಪ್ರಸಾದ !' ಎನ್ನುತ್ತ ಕಣ್ಣುಗಳು ಅರಸಿದವು. ಮೊದಲನೆಯ ವರ್ಗದಲ್ಲಿದ್ದ ಪ್ರಸಾದನು ಆಗಲೇ ಒಂದು ದೊಡ್ಡ ಕಾಗದದ ಚೀಲವನ್ನು ನಂಜುಂಡಯ್ಯನವರಿಗೆ ಒಪ್ಪಿಸಿ ಅವರಿಗೂ ಮಾವನಿಗೂ ನಮಸ್ಕರಿಸುತ್ತಿದ್ದನು. ಗಾಡಿ ಇವಳ ಬದಿಗೆ ಬರುತ್ತಲೇ ಅವಳ ಕೆಳದುಟಿಯ ಕೆಂಪು ನಾ ಮುಂದೆ ಎನ್ನಲು ಅದನ್ನೇ ಮುಂಬೆರಳುಗಳಿಂದ ಅಲುಗಿಸಿದನು. ಮುಂಗೈಗಳು ಕೂಡಿ ಜಾರಿದವು. ಗಾಡಿ ಸಾಗಿತು. ಕೊನೆಯ ಗಳಿಗೆಯ ತುಂಟ ನಗೆಯ ಮಹಾಪೂರ ಆತನ

ಮುಖದ ಮೇಲೆ ತುಂಬಿ ತುಳುಕುತ್ತಿತ್ತು. ಆನಂದಾರ್ಥಿಗಳು ಅವಳ ನೀರಲಗಣ್ಣುಗಳನ್ನು ನೀರಿನಿಂದ ತುಂಬಿದವು. ಸಾಗುವ ಗಾಡಿ ಅವಳ ಕಣ್ಣೀರ್ದೆರೆಗಳಲ್ಲಿ ಅಲುಗಿದಂತಾಗಲು ನಡುಗಿ "ಅಪ್ಪಯ್ಯ!" ಎಂದು ಚಿಕ್ಕಪ್ಪನವರ ಅಪ್ಪುಗೆಯಲ್ಲಿ ಮೊರೆಯಿಟ್ಟಳು. ಅವಳು ಬಯಸಿದುದೂ ತುಂಟ ಪ್ರೇಮವನ್ನಲ್ಲವೆ?

ಎರಡು ದಿನಗಳ ನಂತರ ರವಿವಾರ ಧಾರವಾಡದಲ್ಲಿ ಇಂದ್ರಾಣಿಯ ಸಾಂತ್ವನೆಗಾಗಿ ಕೂಡಿದ ಗೆಳೆಯ-ಗೆಳತಿಯರ ಗುಂಪಿನಲ್ಲಿ ಒಂದಾದ ಪ್ರಸಾದನ ಮಿತ್ರ ಕ. ಯು. ಸಂಘದ ಕಾರ್ಯದರ್ಶಿಯ ಮುಂದಿನ ಮಾತು ಅರ್ಥಗರ್ಭಿತವಾಗಿತ್ತು: "ಜೂನ್ ೧೮ ೧೯೪೩. ಅಂದು ಬ್ರಿಟಿಶ್ ಮುಕುಟವೂ ಸಹ ಹಿಂದುಸ್ತಾನದ ರಾಜ್ಯಕಾರಭಾರದ ನಿರ್ವಹಣಕ್ಕಾಗಿ ತನ್ನ ಪ್ರಧಾನ ಪ್ರತಿನಿಧಿಯಾಗಿರಲು ಕ್ಷಾತ್ರ ದಳಪತಿಯನ್ನೇ ಆರಿಸಿಲ್ಲವೆ? ಆದಕ್ಕೆ ಭಾರತೀಯ ತರುಣರು ಪ್ರತಿಯಾಗಿ ನುಡಿಯಬೇಕಲ್ಲವೆ?"

—: ಮುಂದುವರಿಯುವುದು :—

# ಒಪ್ಪೋಲೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೧೧ | ೪ | ಸರಿ, | ಸರಿ" |
| ,, | ೧೭ | ಅವರನ್ನು " | ಅವರನ್ನು " |
| ೧೨ | ೨ | ತಿಳಿಸಿ | ತಿಳಿಸ |
| ,, | ೬ | ಅದನ್ನು | ಅದನ್ನೇ |
| ,, | ೧೨ | ಎಂದು | ಎಂದನು. |
| ೧೩ | ೧೧ | ಎಂದು | ಎಂದನು |
| ,, | ೧೬ | " ಕಲಿತವರಪ್ಪಾ | ಕಲಿತವರಪ್ಪಾ |
| ೧೪ | ೧೮ | ಆನುಭವಿಕರನ್ನು | ಅನುಭವಿಕರನ್ನು |
| ,, | ೧೯ | ಪಡೆದ | ಪಡೆದನು. |
| ,, | ೨೧ | ಎಂದರು. | ಎಂದನು. |
| ೧೫ | ೧೫ | ಭ್ರಮೆಯಿಂದ ಅವಮಾನದೊಡಗೂಡಿದ .... | ....ಭ್ರಮೆಯಿಂದೊಡಗೂಡಿದ ಅವಮಾನ |
| ೧೫ | ೧೬ | ತನ್ನ ತನ | ತನ್ನತನ |
| ೧೬ | ೧೧ | ನಿಂತವನಿಗೆ | ನಿಂತವಳಿಗೆ |
| ,, | ೧೭ | ಬಿರುವಾ | ಬಿಗುವಾ |
| ,, | ೨೭ | ಹಿಂನಿನ | ಹಿಂದಿನ |
| ೫೭ | ೨೩ | ಅಲ್ಲಾಡಿದನು. | ತಲೆ ಅಲ್ಲಾಡಿದನು. |
| ೮೮ | ೧೦ | ಹಾಕಿದಳು. | ಹಾಕಿದನು. |
| ೧೦೧ | ೨೩ | Dharwar." | Dharwar. |
| ,, | ೨೪ | " Thank | Thank |

# ನಮ್ಮ ಈ ಮೊದಲಿನ ಪ್ರಕಟನೆಗಳು

| | | |
|---|---|---|
| ೧. | ಗೀತಾಂಜಲಿ<br>(ದಿ. ರವೀಂದ್ರನಾಥ ಠಾಕೂರ ಅವರ ಮಹಾ ಕಾವ್ಯ) | ರೂ. ೧—೪—೦ |
| ೨. | ಅಮೃತ ಜೀವನ<br>(ಪ್ರಬಂಧ ಸಂಗ್ರಹ) | ,, ೧—೮—೦ |
| ೩. | ದಿವ್ಯಸುಂದರಿ | ,, ೧—೦—೦ |
| ೪. | ಮನೋಹರಿ | ,, ೧—೮—೦ |
| ೫. | ವಿಚಿತ್ರಕಾರಸ್ಥಾನ | ,, ೦—೧೨ ೦ |

ಗ್ರಂಥಗಳು ದೊರೆಯುವ ಸ್ಥಳ :

**ಆದರ್ಶ ಜೀವನ ಗ್ರಂಥಮಾಲಾ**

P. O. ರಾಣಿಬೆನ್ನೂರು